ಮಂಗಳೂರು
ಬುಧವಾರ, 1 ಏಪ್ರಿಲ್ 2026
ಸಂಪುಟ 48, ಸಂಚಿಕೆ 13, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕೇರಳ ಬಿಜೆಪಿ ಪ್ರಣಾಳಿಕೆ ಬಿಡುಗಡೆ | ೦೭ | ಇನ್‌ಫ್ಲುಯೆನ್ಸರ್ಸ್ ಮೇಲೆ ಹದ್ದಿನ ಕಣ್ಣು | ೦೭ | ಟೆನಿಸ್ ದಂತಕಥೆ ಲಿಯಾಂಡರ್ ಬಿಜೆಪಿಗೆ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಉತ್ತರೆ

ದಿನದ ಮಾತು

ಪ್ರಪಂಚವು ಭಗವದಾನಂದ ಮತ್ತು ವಿಷಯ ಸುಖವೆಂಬ ಹಾಲು ನೀರುಗಳ ಬೆರಕೆ. ಹಂಸದಂತೆ ನೀರನ್ನು ತ್ಯಜಿಸಿ ಹಾಲನ್ನು ಮಾತ್ರ ಸೇವಿಸಬೇಕು.
▲ಶ್ರೀ ರಾಮಕೃಷ್ಣಪರಮಹಂಸ

ಸಿಲಿಂಡರ್ ನಿರ್ಭರದಿಂದ ಆತ್ಮನಿರ್ಭರವಾಗುವತ್ತ

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು

• ಪುಟ ೬

ಕಿರುಸುದ್ದಿ

ಜೈಶ್ ಮುಖ್ಯಸ್ಥ ಮಸೂದ್ ಅಜರ್ ಸಹೋದರ ಹತ್ಯೆ

• **ಹೊಸದಿಲ್ಲಿ:** ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಹಿರಿಯ ಸಹೋದರ, ಭಾರತಕ್ಕೆ ಮೋಸ್ಟ್ ವಾಂಟೆಂಡ್ ಆಗಿದ್ದ ಉಗ್ರ ಮೊಹಮ್ಮದ್ ತಾಹಿರ್ ಅನ್ವರ್ ಪಾಕಿಸ್ತಾನದಲ್ಲಿ ನಿಗೂಢವಾಗಿ ಮೃತಪಟ್ಟಿದ್ದಾನೆ.

• ಪುಟ ೭

ಕಾಲ್ತುಳಿತ: 9 ಭಕ್ತರ ಸಾವು

• ಪುಟ ೭

ಅಸ್ಸಾಂ ಬಿಜೆಪಿ ಪ್ರಣಾಳಿಕೆ: ಏನಾಸಂ ಜಾರಿ ಭರವಸೆ

• ಪುಟ ೭

ಪರಮಾಣುನಗರ ಇಸ್ಫಾಹಾನ್ ಮೇಲೆ ಅಮೆರಿಕ ಬಾಂಬ್ ದಾಳಿ
ಟ್ಯಾಂಕರ್ ನಾಶಗೈದ ಇರಾನ್ | 2ನೇ ತಿಂಗಳಿಗೆ ಕಾಲಿಟ್ಟ ಯುದ್ಧ

ಮತ್ತೆ ಯುದ್ಧೋನ್ಮಾದ

• **ದುಬೈ:** ಇರಾನ್‌ನ ಪ್ರಮುಖ ಪರಮಾಣು ಕೇಂದ್ರವಿರುವ ಇಸ್ಫಾಹಾನ್ ನಗರದ ಮೇಲೆ ಮಂಗಳವಾರ ಅಮೆರಿಕ ದಾಳಿ ನಡೆಸಿದ್ದು, ಇದಕ್ಕೆ ಪ್ರತಿಯಾಗಿ ಇರಾನ್ ಪರ್ಷಿಯನ್ ಕೊಲ್ಲಿಯಲ್ಲಿ ಕುವೈತ್‌ನ ತೈಲ ಟ್ಯಾಂಕರ್ ಮೇಲೆ ದಾಳಿ ಮಾಡಿದೆ.



ಅಮೆರಿಕದ ಪಡೆಗಳು ಇಸ್ಫಾಹಾನ್‌ನಲ್ಲಿರುವ ಮದ್ದುಗುಂಡು ಡಿಪೋವನ್ನು 2,000 ಪೌಂಡ್ (ಸುಮಾರು 907-ಕಿಲೋಗ್ರಾಂ) ಬಂಕರ್ ಬಸ್ಟರ್ ಬಾಂಬ್‌ಗಳೊಂದಿಗೆ ಸ್ಫೋಟಿಸಿವೆ ಎಂದು ಅಮೆರಿಕ ಹೇಳಿಕೊಂಡಿದ್ದು, ವಿಡಿಯೋವೊಂದನ್ನು ಸಹ ಬಿಡುಗಡೆ ಮಾಡಿದೆ. ದಾಳಿ ನಡೆಸಲು ಹೆಚ್ಚಿನ ಪ್ರಮಾಣದ ಪೆನೆಟ್ರೇಟರ್ ಮದ್ದುಗುಂಡುಗಳನ್ನು ಬಳಸಲಾಗಿದೆ ಎಂದು ಅಧಿಕಾರಿ ಹೇಳಿದರು. ಯುದ್ಧವು ಎರಡನೇ ತಿಂಗಳಿಗೆ ಕಾಲಿಡುತ್ತಿದ್ದಂತೆ, ಪಾಕಿಸ್ತಾನ, ಈಜಿಪ್ಟ್, ಸೌದಿ ಅರೇಬಿಯಾ ಮತ್ತು ಟರ್ಕಿ ಮಧ್ಯಸ್ಥಿಕೆ ವಹಿಸಲು ಪ್ರಯತ್ನಿಸುತ್ತಿರುವಾಗ, ಈ ದಾಳಿಯು ಭಯ ಹೆಚ್ಚಿಸಿದೆ.


ತೀವ್ರಗೊಂಡ ಸಂಘರ್ಷ: ಅಮೆರಿಕ ಮತ್ತು ಇಸ್ರೇಲ್ ಮೊದಲ ದಾಳಿ ನಡೆಸಿದ ಒಂದು ತಿಂಗಳ ನಂತರ ಈ ಬೆಳವಣಿಗೆ ನಡೆದಿದೆ. ಈ ಯುದ್ಧದಿಂದಾಗಿ ಇಲ್ಲಿಯವರೆಗೆ 3,000ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಜಾಗತಿಕ ತೈಲ ಹಾಗೂ ನೈಸರ್ಗಿಕ ಅನಿಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಮಂಗಳವಾರ ಅಮೆರಿಕದಲ್ಲಿ ಗ್ಯಾಸೋಲಿನ್ ಬೆಲೆ ಪ್ರತಿ ಗ್ಯಾಲನ್‌ಗೆ 4 ಡಾಲರ್ ದಾಟಿದೆ. ➡ಪುಟ ೪

ತೈಲ ಮಾರುಕಟ್ಟೆ ಮೇಲೆ ಪರಿಣಾಮ

ಹಾರ್ಮುಜ್ ಜಲಸಂಧಿ ಮೇಲೆ ಇರಾನ್ ನಿಯಂತ್ರಣ ಸಾಧಿಸಿರುವುದರಿಂದ ಜಾಗತಿಕ ತೈಲ ಬೆಲೆ ಏರಿಕೆಯಾಗಿದೆ.



ಫೆ.28ರಿಂದ ಬ್ರೆಂಟ್ ಕ್ರೂಡ್ ತೈಲದ ಬೆಲೆ ಶೇ.45ರಷ್ಟು ಹೆಚ್ಚಾಗಿದ್ದು, ಮಂಗಳವಾರ ಪ್ರತಿ ಬ್ಯಾರೆಲ್‌ಗೆ 106 ಡಾಲರ್ ತಲುಪಿದೆ. ಜಲಸಂಧಿಯನ್ನು ಮುಕ್ತಗೊಳಿಸದಿದ್ದರೆ ಖಾರ್ಗ್ ದ್ವೀಪದ ತೈಲ ರಫ್ತು ಕೇಂದ್ರದ ಮೇಲೆ ದಾಳಿ ನಡೆಸುವುದಾಗಿ ಟ್ರಂಪ್ ಎಚ್ಚರಿಸಿದ್ದಾರೆ.



ಯುದ್ಧ ವೆಚ್ಚ ಭರಿಸಲು ಗಲ್ಫ್‌ಗೆ ಟ್ರಂಪ್ ಮನವಿ ಸಾಧ್ಯತೆ

ಇರಾನ್ ಯುದ್ಧದ ವೆಚ್ಚ ಭರಿಸಲು 200 ಶತಕೋಟಿ ಡಾಲರ್ ನೀಡಲು ಅಮೆರಿಕ ಅಧ್ಯಕ್ಷ ಟ್ರಂಪ್ ಗಲ್ಫ್ ರಾಷ್ಟ್ರಗಳಿಗೆ ಮನವಿ ಮಾಡುವ ಸಾಧ್ಯತೆಯಿದೆ. ಸೋಮವಾರ ಶ್ವೇತಭವನದ ವಕ್ತಾರೆ ಕ್ಯಾರೊಲಿನ್ ಲೀವಿಟ್ ತಾವು ಅಧ್ಯಕ್ಷರಿಗೆ ಇಂತಹದ್ದೊಂದು ಸಲಹೆ ನೀಡಿರುವುದಾಗಿ ಹೇಳಿಕೊಂಡಿದ್ದಾರೆ. ಇರಾಕ್‌ನಿಂದ ಕುವೈತ್‌ಗೆ ವಿಮೋಚನೆ ನೀಡಿದ್ದಾಗ 34 ರಾಷ್ಟ್ರಗಳ ಒಕ್ಕೂಟವನ್ನು ಅಮೆರಿಕವೇ ನೇತೃತ್ವ ವಹಿಸಿತ್ತು. ಅಂದಿನ ಯುದ್ಧ ವೆಚ್ಚ 54 ಶತಕೋಟಿ ಡಾಲರ್‌ನಲ್ಲಿ ಬಹುತೇಕ ಹಣವನ್ನು ಯುಎಇ ಭರಿಸಿತ್ತು.

ಗಲ್ಫ್‌ನಲ್ಲಿ 57 ಸಾವಿರ ಸೈನಿಕರ ನಿಯೋಜನೆ!

ಕತಾರ್, ಕುವೈತ್, ಬಹ್ರೈನ್, ಯುಎಇ, ಸೌದಿ ಅರೇಬಿಯಾ, ಇರಾಕ್, ಜೋರ್ಡನ್, ಸಿರಿಯಾ ಮೊದಲಾದ ಗಲ್ಫ್ ರಾಷ್ಟ್ರಗಳಲ್ಲಿನ ಅಮೆರಿಕ ಸೇನಾ ನೆಲೆಗಳಲ್ಲಿ 57,000 ಸೈನಿಕರನ್ನು ನಿಯೋಜನೆ ಮಾಡಿಕೊಂಡಿದೆ. ➡ಪುಟ ೪

ಹಾರ್ಮುಜ್ ಮುಚ್ಚಿದ್ದರೂ ಯುದ್ಧ ನಿಲ್ಲಿಸ್ತಾರಾ ಟ್ರಂಪ್?

• **ವಾಷಿಂಗ್ಟನ್:** ಹಾರ್ಮುಜ್ ಜಲಸಂಧಿ ಬಹುತೇಕ ಮುಚ್ಚಿದ್ದರೂ ಸರಿ, ಇರಾನ್ ಯುದ್ಧವನ್ನು ನಿಲ್ಲಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿದ್ಧವಾಗಿದ್ದಾರೆಂದು ಅವರ ಆಪ್ತ ವಲಯಗಳು ತಿಳಿಸಿವೆಯೆಂದು ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ಸದ್ಯ ಇರಾನ್ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿ ಸಂಪೂರ್ಣ ತೆರೆಯುವುದಕ್ಕಾಗಿ ಕಾರ್ಯಾಚರಣೆ ಕೈಗೆತ್ತಿಕೊಂಡರೆ ಗುರಿ ಸಾಧಿಸಲು ಇನ್ನೂ ನಾಲ್ಕರಿಂದ ಆರು ವಾರಗಳವರೆಗೆ ಯುದ್ಧ ನಡೆಸುವ ಅಗತ್ಯವಿರುವುದನ್ನು ಟ್ರಂಪ್ ಮತ್ತವರ ಆಪ್ತ ವಲಯ ಮನಗಂಡಿದೆ ಎಂದು ವರದಿಯಾಗಿದೆ. • ವಿವರ ಪುಟ ೭



ಇಂಧನ ಬೇಕಿದ್ದರೆ ಜಲಸಂಧಿಗೆ ತೆರಳಿ!

ಇರಾನ್ ಯುದ್ಧದಲ್ಲಿ ಬೆಂಬಲಿಸದ ಮಿತ್ರರಾಷ್ಟ್ರಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಿಮಗೆ ಬೇಕಿರುವ ತೈಲ ನೀವೇ ಸಂಗ್ರಹಿಸಿಕೊಳ್ಳಿ ಎಂದು ಎಚ್ಚರಿಕೆ ನೀಡಿದ್ದಾರೆ. • ವಿವರ ಪುಟ ೭

ಗೂಗಲ್, ಮೈಕ್ರೋಸಾಫ್ಟ್‌ಗೆ ಇರಾನ್ ದಾಳಿ ಬೆದರಿಕೆ • ಪುಟ ೭

ತೆರಿಗೆ ಪಾವತಿಸದ ವಿಧಾನಸೌಧ, ವಿಕಾಸಸೌಧ

ಸರ್ಕಾರಿ ಕಟ್ಟಡ ಕರ ₹473 ಕೋಟಿ ಬಾಕಿ

• **ಬೆಂಗಳೂರು:** ಸಾಮಾನ್ಯ ಜನರ ಸಣ್ಣಪುಟ್ಟ ಆಸ್ತಿ ತೆರಿಗೆ ಬಾಕಿ ಇದೆ ಎಂದು ಆಸ್ತಿ ಹರಾಜು ಹಾಕಲು ಮುಂದಾಗುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ನಗರಪಾಲಿಕೆ ಅಧಿಕಾರಿಗಳು, ನೂರಾರು ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿರುವ ವಿಧಾನಸೌಧ, ವಿಕಾಸಸೌಧದಂತಹ ಸರ್ಕಾರಿ ಕಟ್ಟಡಗಳ ವಿರುದ್ಧ ಕ್ರಮ ಜರುಗಿಸಲು ಏಕೆ ಹಿಂದೇಟು ಹಾಕುತ್ತಿದ್ದಾರೆ ಎಂದು ಬಿಜೆಪಿ ನಾಯಕ ಎನ್. ಆರ್. ರಮೇಶ್ ಪ್ರಶ್ನಿಸಿದ್ದಾರೆ.



ಜಿಬಿಎ ಕೇಂದ್ರ ಕಚೇರಿಯಲ್ಲಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಸರ್ಕಾರಿ ಕಟ್ಟಗಳ ದಾಖಲೆ ಬಿಡುಗಡೆ ಮಾಡಿ, ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಗರದ ಪ್ರಮುಖ ಸರ್ಕಾರಿ ಕಟ್ಟಡಗಳು ಮತ್ತು ಇಲಾಖೆಗಳು ಬರೋಬ್ಬರಿ 472.66 ಕೋಟಿ ಮೊತ್ತದ ಸೇವಾ ತೆರಿಗೆಯನ್ನು (ಸರ್ವಿಸ್ ಟ್ಯಾಕ್ಸ್) ಬಾಕಿ ಉಳಿಸಿಕೊಂಡಿರುವ ಬಗ್ಗೆ ದಾಖಲೆ ಬಿಡುಗಡೆ ಮಾಡಲಾಗಿದೆ. ರಾಜ್ಯದ ಆಡಳಿತ ಶಕ್ತಿ ಕೇಂದ್ರಗಳಾದ ವಿಧಾನಸೌಧ ಮತ್ತು ವಿಕಾಸಸೌಧಗಳೇ ಪಾಲಿಕೆಗೆ ಕೋಟ್ಯಂತರ ರೂಪಾಯಿ ಬಾಕಿ ಇಟ್ಟಿವೆ.

ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡ, ಕುಮಾರಕೃಪಾ ಅತಿಥಿಗೃಹ ಮತ್ತು ರಾಜಭವನಗಳಿಂದ ಮಾತ್ರವೇ ಪಾಲಿಕೆಗಳಿಗೆ ಒಟ್ಟು 14.94 ಕೋಟಿ ರೂ.ಗಳಷ್ಟು ಬೃಹತ್ ಪ್ರಮಾಣದ ಸೇವಾ ತೆರಿಗೆ ಬಾಕಿ ಉಳಿಸಿಕೊಂಡಿದೆ. ➡ಪುಟ ೪

ಬೃಹತ್ ಬಾಕಿ ವಸೂಲಿ ಮಾಡಿ

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಪತ್ರ ಬರೆದು ಮನವಿ ಮಾಡಲಾಗಿದ್ದು, ಸಾಮಾನ್ಯ ಜನರಂತೆ ಸರ್ಕಾರಿ ಕಟ್ಟಡಗಳಿಗೂ ಒಂದೇ ಕಾನೂನು ಅನ್ವಯವಾಗಲಿ. 473 ಕೋಟಿ ಬಾಕಿ ಉಳಿಸಿಕೊಂಡಿರುವ ಇಲಾಖೆಗಳಿಗೆ ನೋಟಿಸ್ ನೀಡಿ, ತಕ್ಷಣವೇ ಕಟ್ಟಡಗಳನ್ನು ಜಪ್ತಿ ಮಾಡುವ ಧೈರ್ಯ ತೋರಲಿ. ➡ಪುಟ ೪

ದಾಖಲೆ ಬಿಡುಗಡೆ ಮಾಡಿದ ಬಿಜೆಪಿ ನಾಯಕ ರಮೇಶ್



ಪ್ರಮುಖ ಕಟ್ಟಡಗಳ ಬಾಕಿ ವಿವರ	
ವಿಕಾಸಸೌಧ	4.24 ಕೋಟಿ
ಬಹುಮಹಡಿ ಕಟ್ಟಡ	3.38 ಕೋಟಿ
ಕುಮಾರಕೃಪಾ ಅತಿಥಿಗೃಹ	3.01 ಕೋಟಿ
ವಿಧಾನಸೌಧ	2.15 ಕೋಟಿ
ರಾಜಭವನ	1.89 ಕೋಟಿ
ವಿಧಾನಸೌಧ ಕ್ಯಾಂಟೀನ್	7.40 ಲಕ್ಷ
ವಿಕಾಸಸೌಧದ ಕ್ಯಾಂಟೀನ್	17.65 ಲಕ್ಷ

ರೂ.ಗಳಲ್ಲಿ

ಜನಸಾಮಾನ್ಯರ ಮೇಲೆ ಪ್ರತಾಪ ತೋರಿಸುವುದನ್ನು ಬಿಟ್ಟು ಮೊದಲು ಸರ್ಕಾರದಿಂದ ಬರಬೇಕಾದ ಬೃಹತ್ ಬಾಕಿಯನ್ನು ಜಿಬಿಎ ವಸೂಲಿ ಮಾಡಲಿ.
■ ಎನ್.ಆರ್.ರಮೇಶ್, ಬಿಜೆಪಿ ನಾಯಕ

ಅಹಿಂಸಾ ತತ್ವ ಮರುಸ್ಥಾಪನೆ ಅತಿ ಅವಶ್ಯ



ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ ಲೋಕಾರ್ಪಣೆ ಮಾಡಿದ ನಮೋ

• **ಗಾಂಧಿನಗರ:** ಜಗತ್ತು ಅಸ್ಥಿರತೆ ಮತ್ತು ಅರಾಜಕತೆಯಲ್ಲಿ ತೊಳಲಾಡುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಶಾಂತಿ, ಅಹಿಂಸಾ ತತ್ವ ಮರುಸ್ಥಾಪನೆ ತೀರಾ ಅಗತ್ಯವೆಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಗುಜರಾತಿನಲ್ಲಿ ಮೈದಳೆದಿರುವ ನೂತನ ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ, ಪ್ರಸಕ್ತ ಹಿಂಸಾತ್ಮಕ ಜಾಗತಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿ ಶಾಂತಿ-ಅಹಿಂಸೆಗಳ ಅನಿವಾರ್ಯತೆಯ ಬಲಿಷ್ಠ ಸಂದೇಶ ಸಾರಿದೆ. ಈ ಸಂದೇಶವಿಂದು ಮಹತ್ವಪೂರ್ಣ ಕೂಡ ಎಂದು ಮೋದಿ ಹೇಳಿದರು. ಈಗಿನ ಜಾಗತಿಕ ಸನ್ನಿವೇಶ ಉಲ್ಲೇಖಿಸಿ, ಮ್ಯೂಸಿಯಂನ ದಂತಕಥೆ, ಸಂದೇಶಗಳು ಕೇವಲ ಭಾರತಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೆ ಮಹತ್ವಪೂರ್ಣವಾದದ್ದು. ➡ಪುಟ ೪

ಹಿಂದಿ ಮಾತು, ಕಲಿಕೆ ತಪ್ಪಲ್ಲ: ಬಿಎಸ್‌ವೈ

• **ಬೆಂಗಳೂರು:** ದೇಶದ ಉದ್ದಗಲಕ್ಕೆ ಹಿಂದಿ ಭಾಷೆ ಇಲ್ಲದಿದ್ದರೆ ಬೇರೆ ಭಾಷೆಯಲ್ಲಿ ಮಾತಾಡಲು ಬರುವುದಿಲ್ಲ. ಹಿಂದಿ ಮಾತಾಡುವುದು, ಕಲಿಯುವುದು ತಪ್ಪು ಅಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಪ್ರಾಯಪಟ್ಟಿದ್ದಾರೆ.



ರಾಜ್ಯ ಸರ್ಕಾರದ ತೀರ್ಮಾನಕ್ಕೆ ಮಾಜಿ ಸಿಎಂ ಬೇಸರ

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಶಿಕ್ಷಣದಲ್ಲಿ ಹಿಂದಿ ಭಾಷೆ ಕಡ್ಡಾಯವಲ್ಲ ಎಂಬ ಸರ್ಕಾರದ ತೀರ್ಮಾನವನ್ನು ಖಂಡಿಸಿದರು. ಕೆಲವರು ಹಿಂದಿ ಭಾಷೆಯ ಬಗ್ಗೆ ತಮ್ಮದೇ ಆದ ಮಾತು ಗಳನ್ನಾಡುತ್ತಾರೆ. ಇದು ಕನ್ನಡಕ್ಕೆ ಮಾಡುವ ದ್ರೋಹ ಅಲ್ಲ. ನಾನು ಅತ್ಯಂತ ವಿನಯದಿಂದ ಕನ್ನಡಿಗರಲ್ಲಿ ವಿನಂತಿ ಮಾಡುತ್ತೇನೆ. ಹಿಂದಿ ಭಾಷೆ ಕಲಿಯುವುದರಿಂದ ಕನ್ನಡ ಭಾಷೆಗೆ ಆಘಾತ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಈ ಬಗ್ಗೆ ಗೊಂದಲ ಉಂಟುಮಾಡಬಾರದು ಎಂದು ಹೇಳಿದರು. ➡ಪುಟ ೪



ನಕ್ಸಲ್ ಮುಕ್ತ ಭಾರತ

1967ರಿಂದ 2026ರವರೆಗಿನ ಆರು ದಶಕಗಳ ಸಮಗ್ರ ಅವಲೋಕನ

ಭಾರತದ ಆಂತರಿಕ ಭದ್ರತೆಗೆ ಆರು ದಶಕಗಳ ಕಾಲ ಅತಿ ದೊಡ್ಡ ಸವಾಲಾಗಿದ್ದ ನಕ್ಸಲ್ವಾದವು 2026ರ ಮಾರ್ಚ್ 31ರಂದು ಅಧಿಕೃತವಾಗಿ ಅಂತ್ಯ ಕಂಡಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾ.30ರಂದು ಲೋಕಸಭೆಯಲ್ಲಿ ಭಾರತವು ಸಂಪೂರ್ಣವಾಗಿ ನಕ್ಸಲ್ ಮುಕ್ತವಾಗಿದೆ ಎಂದು ಅಧಿಕೃತವಾಗಿ ಘೋಷಿಸಿದರು. ಮಾವೋವಾದಿ ಸಂಘಟನೆಯ ಕೇಂದ್ರ ಸಮಿತಿ, ಪಾಲಿಟ್ ಬ್ಯೂರೋ ಮತ್ತು ರಾಜ್ಯ ಸಮಿತಿಗಳ ಸಂಪೂರ್ಣ ರಚನೆಯನ್ನು ನಾಶಪಡಿಸಲಾಗಿದೆ ಎಂದು ಅವರು ಸಂಸತ್ತಿನಲ್ಲಿ ತಿಳಿಸಿದರು.

ನಕ್ಸಲ್‌ಬಾರಿ ದಂಗೆ (1967)

ನಕ್ಸಲ್‌ವಾದದ ಮೂಲವನ್ನು 1967ರ ಮೇ 25ರಂದು ಪಶ್ಚಿಮ ಬಂಗಾಳದ ದಾರ್ಜಿಲಿಂಗ್ ಜಿಲ್ಲೆಯ ನಕ್ಸಲ್ಬಾರಿ, ಖೋರಿಬಾರಿ ಮತ್ತು ಫಾನ್ಸಿಡೇವಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ರೈತ ದಂಗೆಗೆ ಗುರುತಿಸಬಹುದು. ಚಾರು ಮಜುಮ್ದಾರ್, ಕನು ಸನ್ಯಾಲ್ ಮತ್ತು ಜಂಗಲ್ ಸಂಥಾಲ್ ನೇತೃತ್ವದಲ್ಲಿ ಸಿಪಿಐ(ಎಂ) ಪಕ್ಷದ ಒಳಗಿನ ಬಂಡಾಯ ಗುಂಪು ಈ ದಂಗೆಯನ್ನು ನಡೆಸಿತು. 1967ರ ಮಾರ್ಚ್ 3ರಂದು ಸುಮಾರು 150 ಜನರ ಗುಂಪು ಬಿಲ್ಲು–ಈಟಿಗಳೊಂದಿಗೆ ಭೂಮಾಲೀಕರ ಅಕ್ಕಿ ಮತ್ತು ಭೂಮಿಯನ್ನು ವಶಪಡಿಸಿಕೊಂಡರು. ಜೂನ್ ತಿಂಗಳ ಹೊತ್ತಿಗೆ ರೈತ ಸಮಿತಿಗಳು ನಕ್ಸಲ್ಬಾರಿ ಪ್ರದೇಶದ ಮೇಲೆ ಹಿಡಿತ ಸಾಧಿಸಿದವು. ಮೇ 25ರಂದು ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಒಂಬತ್ತು ಮಹಿಳೆಯರು ಮತ್ತು ಒಂದು ಮಗು ಸಾವನ್ನಪ್ಪಿದರು. ಜುಲೈ 19ರಂದು ಸರ್ಕಾರ ಅರೆಸೈನಿಕ ಪಡೆಗಳನ್ನು ಕಳಿಸಿ ದಂಗೆಯನ್ನು ಹತ್ತಿಕ್ಕಿತು.

ಸಿಪಿಐ(ಮಾವೋವಾದಿ) ರಚನೆ

2004ರ ಸೆ.21ರಂದು ಪೀಪಲ್ಸ್ ವಾರ್ ಗ್ರೂಪ್ (ಪಿಡಬ್ಲ್ಯೂಜಿ) ಮತ್ತು ಮಾವೋವಾದಿ ಕಮ್ಯೂನಿಸ್ಟ್ ಸೆಂಟರ್ ಆಫ್ ಇಂಡಿಯಾ (ಎಂಸಿಸಿಐ) ವಿಲೀನಗೊಂಡು ಸಿಪಿಐ(ಮಾವೋವಾದಿ) ಎಂಬ ಏಕೀಕೃತ ಸಂಘಟನೆ ರಚನೆಯಾಯಿತು. ಈ ವಿಲೀನವು ನಕ್ಸಲ್ ಹಿಂಸಾಚಾರವನ್ನು ತೀವ್ರಗೊಳಿಸಿತು. ಅವರ ಸಶಸ್ತ್ರ ವಿಭಾಗ ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಕಾನೂನುಬಾಹಿರ ಚಟುವಟಿಕೆ (ತಡೆ) ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಉಗ್ರಗಾಮಿ ಸಂಘಟನೆಯೆಂದು ಘೋಷಿಸಲ್ಪಟ್ಟಿತು. ಸಿಪಿಐ(ಮಾವೋವಾದಿ) ಭಾರತೀಯ ರಾಜ್ಯವನ್ನು ಸಾಮ್ರಾಜ್ಯಶಾಹಿಗಳು, ದಲ್ಲಾಳಿ ಬೂರ್ಜ್ವಾಗಳು ಮತ್ತು ಊಳಿಗಮಾನ್ಯ ಅಧಿಪತಿಗಳ ಸಹಯೋಗದಿಂದ ನಡೆಸಲಾಗುತ್ತಿದೆ ಎಂದು ಪ್ರತಿಪಾದಿಸುತ್ತಿತ್ತು. ದೀರ್ಘಕಾಲೀನ ಸಶಸ್ತ್ರ ಹೋರಾಟದ ಮೂಲಕ ಅಧಿಕಾರವನ್ನು ವಶಪಡಿಸಿಕೊಳ್ಳುವುದು ಅವರ ಗುರಿಯಾಗಿತ್ತು. ಪಕ್ಷದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆ ಪೊಲಿಟ್‌ಬ್ಯೂರೋ ಆಗಿದ್ದು, ಅದರಲ್ಲಿ 13–14 ಸದಸ್ಯರಿದ್ದರು. ಪ್ರಾದೇಶಿಕ ಬ್ಯೂರೊಗಳು, ರಾಜ್ಯ ಸಮಿತಿಗಳು, ವಲಯ ಸಮಿತಿಗಳು, ಜಿಲ್ಲಾ ಸಮಿತಿಗಳು ಮತ್ತು ದಳಗಳು (ಸಶಸ್ತ್ರ ತಂಡಗಳು) ಎಂಬ ಶ್ರೇಣೀಕೃತ ರಚನೆ ಇತ್ತು. ಈ ಸಂಘಟನಾ ರಚನೆಯನ್ನು ಸಂಪೂರ್ಣವಾಗಿ ನಾಶಪಡಿಸಲಾಗಿದೆ ಎಂದು ಸರ್ಕಾರ ಹೇಳಿದೆ.

ಪ್ರಮುಖ ನಕ್ಸಲ್ ದಾಳಿಗಳು

ನಕ್ಸಲೀಯರು ನಡೆಸಿದ ಪ್ರಮುಖ ರಕ್ತಪಾತದ ಘಟನೆಗಳು ಈ ಕೆಳಗಿನಂತಿವೆ:

ವರ್ಷ	ಘಟನೆ	ಸಾವಿನ ಸಂಖ್ಯೆ
2010	ದಂತೆವಾಡ ದಾಳಿ (ಛತ್ತೀಸ್‌ಗಢ)	76 ಸಿಆರ್‌ಪಿಎಫ್ ಸಿಬ್ಬಂದಿ ಹತ್ಯೆ
2013	ಜೀರಮ್ ಘಾಟಿ ದಾಳಿ	ಕಾಂಗ್ರೆಸ್ ನಾಯಕ ಮಹೇಂದ್ರ ಕರ್ಮ ಸೇರಿ 29 ಹತ್ಯೆ
2017	ಬುರ್ಕಪಾಲ್ ದಾಳಿ (ಸುಕ್ಮಾ)	25 ಸಿಆರ್‌ಪಿಎಫ್ ಸಿಬ್ಬಂದಿ ಹತ್ಯೆ
2021	ಸುಕ್ಮಾ ದಾಳಿ	22 ಭದ್ರತಾ ಸಿಬ್ಬಂದಿ ಹತ್ಯೆ

ಸೌತ್ ಏಷ್ಯಾ ಟೆರರಿಸಮ್ ಪೋರ್ಟಲ್ ಪ್ರಕಾರ, 2000ರಿಂದ 2025ರ ನಡುವೆ ನಕ್ಸಲ್ ಹಿಂಸಾಚಾರದಲ್ಲಿ 4,134 ನಾಗರಿಕರು, 2,722 ಭದ್ರತಾ ಪಡೆ ಸಿಬ್ಬಂದಿ ಮತ್ತು 4,994 ನಕ್ಸಲೀಯರು ಸೇರಿ ಒಟ್ಟು 12,102 ಜನ ಮೃತಪಟ್ಟಿದ್ದಾರೆ.

ಪ್ರಮುಖ ಕಾರ್ಯಾಚರಣೆಗಳು

2025–26ರ ಅವಧಿಯಲ್ಲಿ ಅನೇಕ ಮಹತ್ವದ ಕಾರ್ಯಾಚರಣೆಗಳು ನಡೆದವು. 2025ರ ಜನವರಿಯಲ್ಲಿ ಒಡಿಶಾ–ಛತ್ತೀಸ್‌ಗಡ ಗಡಿಯಲ್ಲಿ ಕೇಂದ್ರ ಸಮಿತಿ ನಾಯಕ ರಾಮಚಂದ್ರ ರೆಡ್ಡಿ (ಚಳಪತಿ) ಹತನಾದ. ಈ 62 ವರ್ಷದ ನಾಯಕ 1 ಕೋಟಿ ರೂ. ಬಹುಮಾನ ಹೊಂದಿದ್ದ ಮತ್ತು 2018ರ ಮಾರಣಹೋಮ ದಾಳಿಗಳ ಸೂತ್ರಧಾರಿಯಾಗಿದ್ದ. ಸೆಪ್ಟೆಂಬರ್‌ನಲ್ಲಿ ಕೋಸಾ ಎಂಬ ಕೇಂದ್ರ ಸಮಿತಿ ಸದಸ್ಯ ಛತ್ತೀಸ್‌ಗಢದಲ್ಲಿ ಹತನಾದ. ಡಿಸೆಂಬರ್‌ನಲ್ಲಿ ಒಡಿಶಾದ ಕಂಧಮಾಲ ಅರಣ್ಯದಲ್ಲಿ 1.1 ಕೋಟಿ ರೂ. ಬಹುಮಾನದ ಗಣೇಶ್ ಉಬಕೆ ಹತನಾದ. 2026ರ ಜನವರಿಯಲ್ಲಿ ಝಾರ್ಖಂಡ್‌ನಲ್ಲಿ ಅನಲ್ ದಾ ಎಂಬ ಕೇಂದ್ರ ಸಮಿತಿ ಸದಸ್ಯ ಹತನಾದ. ವಿಶೇಷ ಕಾರ್ಯಾಚರಣೆಗಳಲ್ಲಿ ಕೆಲವು ಗಮನಾರ್ಹ ಸಂಗತಿಗಳು ಬೆಳಕಿಗೆ ಬಂದವು. ಬಸ್ತರ್ ಐಜಿಪಿ ಸುಂದರ್‌ರಾಜ್ ಅವರ ಪ್ರಕಾರ ಮಾವೋವಾದಿ ಸಂಘಟನೆಯು ಎಲ್ಟಿಟಿಇ (ಲಿಬರೇಶನ್ ಟೈಗರ್ಸ್ ಆಫ್ ತಮಿಳ್ ಈಳಂ) ಸೇರಿದಂತೆ ಇತರ ಉಗ್ರಗಾಮಿ ಸಂಘಟನೆಗಳಿಂದ ತರಬೇತಿ ಮತ್ತು ತಾಂತ್ರಿಕ ನೆರವು ಪಡೆದಿತ್ತು. ಪ್ರಧಾನ ಕಾರ್ಯದರ್ಶಿ ಬಸವರಾಜು ಹಿಂಸಾತ್ಮಕ ಕಾರ್ಯಾಚರಣೆಗಳನ್ನು ಯೋಜಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದ. ಗುಂಪು ವಿದೇಶಿ ಉಗ್ರಗಾಮಿ ಸಂಘಟನೆಗಳಿಂದ ತರಬೇತಿ ಪಡೆದಿತ್ತು ಎಂಬ ಬಹಿರಂಗ ಮಾಹಿತಿಯು ನಕ್ಸಲ್ ಸಮಸ್ಯೆಯ ಅಂತಾರಾಷ್ಟ್ರೀಯ ಆಯಾಮವನ್ನು ಬಿಚ್ಚಿಟ್ಟಿತು. 2025ರ ಮಾರ್ಚ್‌ನಲ್ಲಿ ಮಾತ್ರ ಎರಡು ಬೃಹತ್ ಕಾರ್ಯಾಚರಣೆಗಳಲ್ಲಿ ಛತ್ತೀಸ್‌ಗಢದ ಸುಕ್ಮಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಕನಿಷ್ಠ 46 ನಕ್ಸಲೀಯರನ್ನು ಹೊಡೆದುರುಳಿಸಲಾಯಿತು. ಮೊದಲ ಕಾರ್ಯಾಚರಣೆಯಲ್ಲಿ ಮಾರ್ಚ್ 20ರಂದು ಬಿಜಾಪುರದಲ್ಲಿ 30 ಮಾವೋವಾದಿಗಳನ್ನು ಹೊಡೆದುರುಳಿಸಲಾಯಿತು. ಕೆಲವು ದಿನಗಳ ನಂತರ ಸುಕ್ಮಾದಲ್ಲಿ ಇನ್ನೂ 16 ಜನರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಇವು ಯಾದೃಚ್ಛಿಕ ಹತ್ಯೆಗಳಾಗಿರಲಿಲ್ಲ – ನಕ್ಸಲೀಯರ ಕಾರ್ಯತಂತ್ರ ಸಭೆಗಳ ಸಮಯದಲ್ಲಿ ಯೋಜಿತ ಕಾರ್ಯಾಚರಣೆಗಳಾಗಿದ್ದವು. 2025ರ ಫೆಬ್ರವರಿಯಲ್ಲಿ ಒಂದೇ ದಿನ ಬಿಜಾಪುರದಲ್ಲಿ 31 ನಕ್ಸಲೀಯರನ್ನು ಹೊಡೆದುರುಳಿಸಿ ವಾತಾವರಣ ಸೃಷ್ಟಿಸಲಾಗಿತ್ತು.

ವರ್ಷವಾರು ಅಂಕಿಅಂಶಗಳು

ವರ್ಷ	ಎನ್‌ಕೌಂಟರ್‌ನಲ್ಲಿ ಹತರು	ಶರಣಾಗತಿ	ಬಂಧಿತರು
2019-2023	1,149 (ಒಟ್ಟು)	5,880	7,409
2024	290	928	1,090
2025	317+	2,337	800+
2026 (ಮಾರ್ಚ್ ವರೆಗೆ)	100+	630+	-

ಸಮಗ್ರ ಅಂಕಿಅಂಶಗಳು

2026ರ ಮಾರ್ಚ್ 30ರಂದು ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ನೀಡಿದ ಅಧಿಕೃತ ಅಂಕಿಅಂಶಗಳ ಪ್ರಕಾರ:

- ಎನ್ಕೌಂಟರ್‌ನಲ್ಲಿ ಹತರಾದ ನಕ್ಸಲೀಯರು – **706**
- ಬಂಧಿತರು / ಜೈಲುವಾಸ – **2,218**
- ಶರಣಾಗತಿ ಹೊಂದಿದ ನಕ್ಸಲೀಯರು– **4,839**
- ಒಟ್ಟು ನಿಷ್ಕ್ರಿಯಗೊಳಿಸಲಾದ ನಕ್ಸಲೀಯರು–**7,763**



ಹತರಾದ ಪ್ರಮುಖ ನಕ್ಸಲ್ ನಾಯಕರು

2014ರಿಂದ 2026ರ ನಡುವೆ ನಕ್ಸಲ್ ಸಂಘಟನೆಯ ಅಗ್ರ ನಾಯಕತ್ವವನ್ನು ಸಂಪೂರ್ಣವಾಗಿ ನಾಶಪಡಿಸಲಾಯಿತು. ಅಮಿತ್ ಶಾ ಅವರ ಪ್ರಕಾರ, ಅಗ್ರ ನಾಯಕತ್ವದಲ್ಲಿ 12 ಜನ ಹತರಾಗಿದ್ದಾರೆ ಮತ್ತು ಕೇವಲ ಒಬ್ಬ ಮಾತ್ರ ತಲೆಮರೆಸಿಕೊಂಡಿದ್ದಾನೆ.

ನಾಯಕ ಹುದ್ದೆ ಮತ್ತು ಹತ್ಯೆ/ಶರಣಾಗತಿ ವಿವರ

- ನಂಬಳ ಕೇಶವ ರಾವ್ (ಬಸವರಾಜು) ಪ್ರಧಾನ ಕಾರ್ಯದರ್ಶಿ: ಮೇ 2025 – ಛತ್ತೀಸ್‌ಗಢದಲ್ಲಿ ಹತ
- ಮಡ್ವಿ ಹಿಡ್ಮಾ: ಕೇಂದ್ರ ಮಿಲಿಟರಿ ಕಮಿಷನ್ ಮುಖ್ಯಸ್ಥ ನವೆಂಬರ್ 2025 – ಆಂಧ್ರಪ್ರದೇಶದಲ್ಲಿ ಹತ
- ರಾಮಚಂದ್ರ ರೆಡ್ಡಿ (ಚಳಪತಿ) ಕೇಂದ್ರ ಸಮಿತಿ ಸದಸ್ಯ ಜನವರಿ 2025 – ಒಡಿಶಾ ಗಡಿಯಲ್ಲಿ ಹತ
- ಗಣೇಶ್ ಉಬಕೆ:ಕೇಂದ್ರ ಸಮಿತಿ ಸದಸ್ಯ: ಡಿಸೆಂಬರ್ 2025 – ಒಡಿಶಾದಲ್ಲಿ ಹತ
- ಮಿಲಿಂದ ತೆಲ್ತುಂಬ್ಡೆಕೇಂದ್ರ ಸಮಿತಿ ಸದಸ್ಯ: ಗಡಚಿರೋಲಿ (ಮಹಾರಾಷ್ಟ್ರ) ಎನ್ಕೌಂಟರ್
- ವಿಕ್ರಮ ಗೌಡ: ಕರ್ನಾಟಕದ ಮೋಸ್ಟ್ ವಾಂಟೆಡ್ ನವೆಂಬರ್ 2024 – ಉಡುಪಿ ಬಳಿ ಹತ
- ಮಲ್ಲೋಜುಲ ವೇಣುಗೋಪಾಲ ರಾವ್ (ಭೂಪತಿ) ಪೊಲಿಟ್‌ಬ್ಯೂರೊ ಸದಸ್ಯ: ಅಕ್ಟೋಬರ್ 2025 – ಮಹಾರಾಷ್ಟ್ರದಲ್ಲಿ ಶರಣಾಗತಿ
- ಥಿಪ್ಪಿರಿ ತಿರುಪತಿ (ದೇವಜಿ)ಪ್ರಧಾನ ಕಾರ್ಯದರ್ಶಿ: ಫೆಬ್ರವರಿ 2026 – ತೆಲಂಗಾಣದಲ್ಲಿ ಶರಣಾಗತಿ
- ಮಲ್ಲ ರಾಜಿ ರೆಡ್ಡಿ: ಕೇಂದ್ರ ಸಮಿತಿ ಸದಸ್ಯ ಫೆಬ್ರವರಿ 2026 – ತೆಲಂಗಾಣದಲ್ಲಿ ಶರಣಾಗತಿ

ಕೇಂದ್ರ ಸರ್ಕಾರದ ಶರಣಾಗತಿ-ಸಹ-ಪುನರ್ವಸತಿ ಯೋಜನೆ

ಸೌಲಭ್ಯ	ವಿವರ
ಹಣಕಾಸು ನೆರವು (ಉನ್ನತ ಶ್ರೇಣಿ)	5 ಲಕ್ಷ ರೂ.
ಹಣಕಾಸು ನೆರವು (ಮಧ್ಯಮ/ಕೆಳ ಶ್ರೇಣಿ)	2.5 ಲಕ್ಷ ರೂ.
ಮಾಸಿಕ ವೇತನ (ವೃತ್ತಿ ತರಬೇತಿ ಅವಧಿ)	10,000 ರೂ. (36 ತಿಂಗಳು)
ವಸತಿ	ಸೂಕ್ತ ಮನೆ ನಿವೇಶನ ಹಂಚಿಕೆ
ಶಿಕ್ಷಣ	ಮಕ್ಕಳ ಶಿಕ್ಷಣಕ್ಕೆ ಉಚಿತ ಸೌಲಭ್ಯ
ಉದ್ಯೋಗ	ವೃತ್ತಿ ತರಬೇತಿ ಮತ್ತು ಕೆಲವು ಪ್ರಕರಣಗಳಲ್ಲಿ ಸರ್ಕಾರಿ ಉದ್ಯೋಗ
ಶಸ್ತ್ರ ಒಪ್ಪಿಸಿದ್ದಕ್ಕೆ ಪ್ರೋತ್ಸಾಹ	ಶಸ್ತ್ರ ಪ್ರಕಾರ ಹೆಚ್ಚುವರಿ ಬಹುಮಾನ
ಕಾನೂನು ನೆರವು	ಉಚಿತ ಕಾನೂನು ಸೇವೆ

ಕೇಂದ್ರ ಗೃಹ ಸಚಿವಾಲಯವು 2022ರ ಆಗಸ್ಟ್‌ನಲ್ಲಿ ಪರಿಷ್ಕರಿಸಿದ ಶರಣಾಗತಿ ಮತ್ತು ಪುನರ್ವಸತಿ ಮಾರ್ಗಸೂಚಿಗಳನ್ನು ಅಧಿಸೂಚಿಸಿತು. ಈ ಯೋಜನೆಯಡಿ ಶರಣಾಗತಿ ಹೊಂದಿದ ನಕ್ಸಲೀಯರಿಗೆ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುತ್ತದೆ



ಕೆಂಪು ಕಾರಿಡಾರ್‌ನ ಪರಿವರ್ತನೆ

ನಕ್ಸಲ್ ಪೀಡಿತ ಪ್ರದೇಶಗಳ ಅಭಿವೃದ್ಧಿಯು ಸರ್ಕಾರದ ಕಾರ್ಯತಂತ್ರದ ಎರಡನೇ ಪ್ರಮುಖ ಸ್ತಂಭವಾಗಿತ್ತು. 2014ರಿಂದ 2025ರ ನಡುವೆ 12,000 ಕಿ.ಮೀ.ಗೂ ಹೆಚ್ಚು ರಸ್ತೆಗಳನ್ನು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ. ಗಡಿ ರಸ್ತೆ ಸಂಸ್ಥೆ ಐದು ಪ್ರಮುಖ ರಸ್ತೆಗಳು ಮತ್ತು ಆರು ಸೇತುವೆಗಳನ್ನು ನಿರ್ಮಿಸಿದೆ.

ಈ ಅಭಿವೃದ್ಧಿ ಕಾರ್ಯಕ್ರಮಗಳು ನಕ್ಸಲ್ ವಾದದ ಸಾಮಾಜಿಕ–ಆರ್ಥಿಕ ಬೇರುಗಳನ್ನು ಕತ್ತರಿಸಿವೆ. ಹಿಂದೆ ಬಂದೂಕು ಹಿಡಿಯುತ್ತಿದ್ದ ಯುವಕರು ಈಗ ಶಿಕ್ಷಣ ಮತ್ತು ಉದ್ಯೋಗದ ಸಾಧನಗಳನ್ನು ಹಿಡಿದಿದ್ದಾರೆ ಎಂದು ಗೃಹ ಸಚಿವರು ಹೇಳಿದ್ದಾರೆ.

ಅಭಿವೃದ್ಧಿ ಅಂಶ	ಅಂಕಿಅಂಶ
ರಸ್ತೆ ನಿರ್ಮಾಣ	12,000+ ಕಿ.ಮೀ.
ಮೊಬೈಲ್ ಟವರ್‌ಗಳು	9,000 (2,343 – 4ಜಿಗೆ ಉನ್ನತೀಕರಣ)
ಹೊಸ ಬ್ಯಾಂಕ್ ಶಾಖೆಗಳು	1,000 +
ಎಟಿಎಂಗಳು	937
ಬ್ಯಾಂಕಿಂಗ್ ಪ್ರತಿನಿಧಿಗಳು	38,000
ಅಂಚೆ ಕಚೇರಿಗಳು	9,000
ಐಟಿಐಗಳು	48
ಕೌಶಲ್ಯ ಅಭಿವೃದ್ಧಿ ಕೇಂದ್ರಗಳು	61 (ರೂ.465 ಕೋಟಿ)
ಪಿಎಂ ಆವಾಸ್ ಯೋಜನೆ (ಮನೆಗಳು)	2,54,045
ಆಧಾರ್ ನೋಂದಣಿ	24..85 ಲಕ್ಷ
ಆಯುಷ್ಮಾನ್ ಕಾರ್ಡ್‌ಗಳು	21.44 ಲಕ್ಷ
ರೈಲ್ವೆ ಸಂಪರ್ಕ (ದಲ್ಲಿರಾಜ್ಹರಾ–ರಾವ್ಘಾಟ್)	65 ಕಿ.ಮೀ.

ಮೋದಿ ಸರ್ಕಾರದ ಶೂನ್ಯ ಸಹಿಷ್ಣುತೆ ನೀತಿ

2014ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರ್ಕಾರವು ನಕ್ಸಲ್ವಾದದ ವಿರುದ್ಧ ಬಹು–ಆಯಾಮಿ ಕಾರ್ಯತಂತ್ರವನ್ನು ರೂಪಿಸಿತು. 2015ರಲ್ಲಿ ಜಾರಿಗೊಳಿಸಲಾದ ರಾಷ್ಟ್ರೀಯ ನೀತಿ ಮತ್ತು ಕಾರ್ಯಯೋಜನೆಯು ಮೂರು ಪ್ರಮುಖ ಅಂಶಗಳನ್ನು ಒಳಗೊಂಡಿತ್ತು: ಭದ್ರತೆ, ಅಭಿವೃದ್ಧಿ ಮತ್ತು ಪುನರ್ವಸತಿ. ಹಿಂದಿನ ಸರ್ಕಾರಗಳ ಹರಡಿದ ವಿಧಾನವನ್ನು ಬದಲಿಸಿ, ಸಮಗ್ರ ಮತ್ತು ಸಮನ್ವಯಿತ ವಿಧಾನವನ್ನು ಅಳವಡಿಸಲಾಯಿತು. ಗೃಹ ಸಚಿವ ಅಮಿತ್ ಶಾ ಅವರು 2024ರ ಆಗಸ್ಟ್‌ನಲ್ಲಿ ಎಡಪಂಥೀಯ ಉಗ್ರವಾದ ಪರಿಸ್ಥಿತಿಯನ್ನು ಪರಿಶೀಲಿಸಿ, 2026ರ ಮಾರ್ಚ್ 31ರ ಒಳಗೆ ಮಾವೋವಾದವನ್ನು ದೇಶದಿಂದ ನಿರ್ಮೂಲನೆ ಮಾಡಲಾಗುವುದು ಎಂದು ಘೋಷಿಸಿದರು. ಈ ಗಡುವು ಭದ್ರತಾ ಪಡೆಗಳನ್ನು ಕಾರ್ಯಾಚರಣೆಗಳನ್ನು ತೀವ್ರಗೊಳಿಸಲು ಪ್ರೇರೇಪಿಸಿತು ಮತ್ತು ಕೇಂದ್ರ ಹಾಗೂ ರಾಜ್ಯ ಪಡೆಗಳ ನಡುವಿನ ಸಮನ್ವಯವನ್ನು ಬಲಪಡಿಸಿತು.

ಟ್ರೇಸ್–ಟಾರ್ಗೆಟ್–ನ್ಯೂಟ್ರಲೈಸ್ ಕಾರ್ಯತಂತ್ರ

ಭದ್ರತಾ ಕಾರ್ಯಾಚರಣೆಗಳನ್ನು ಟ್ರೇಸ್ (ಪತ್ತೆ), ಟಾರ್ಗೆಟ್ (ಗುರಿ) ಮತ್ತು ನ್ಯೂಟ್ರಲೈಸ್ (ನಿಷ್ಕ್ರಿಯಗೊಳಿಸು) ಎಂಬ ಕಾರ್ಯವಿಧಾನದ ಮೂಲಕ ನಡೆಸಲಾಯಿತು. ಸಿಆರ್‌ಪಿಎಫ್ ಮತ್ತು ಅದರ ಸಂಚಿಕೆ ಕೋಬ್ರಾ (ಕಮಾಂಡೋ ಬೆಟಾಲಿಯನ್ ಫಾರ್ ರೆಸೊಲ್ಯೂಟ್ ಆಕ್ಷನ್) ಘಟಕಗಳು, ಡಿಸ್ಟ್ರಿಕ್ಟ್ ರಿಸರ್ವ್ ಗಾರ್ಡ್ಸ್ (ಡಿಆರ್‌ಜಿ), ಬಸ್ತರ್ ಫೈಟರ್ಸ್ ಮತ್ತು ಸ್ಪೆಷಲ್ ಟಾಸ್ಕ್ ಫೋರ್ಸ್ (ಎಸ್ಟಿಎಫ್) ಸೇರಿದಂತೆ ಸುಮಾರು ಒಂದು ಲಕ್ಷ ಅರೆಸೈನಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಸ್ಥಳೀಯ ಭೂಪ್ರದೇಶ ಮತ್ತು ಭಾಷೆಯ ಮೇಲೆ ಹಿಡಿತ ಹೊಂದಿರುವ ಡಿಸ್ಟ್ರಿಕ್ಟ್ ರಿಸರ್ವ್ ಗಾರ್ಡ್ಸ್, ಅದರಲ್ಲೂ ಶರಣಾಗತಿ ಹೊಂದಿದ ಮಾಜಿ ನಕ್ಸಲೀಯರನ್ನು ಒಳಗೊಂಡ ಈ ಘಟಕಗಳು ಕಾರ್ಯಾಚರಣೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡಿದವು.

ಆಪರೇಷನ್ ಕಾಗರ್

2024ರ ಜನವರಿಯಲ್ಲಿ ಆರಂಭವಾದ ಆಪರೇಷನ್ ಕಾಗರ್ ನಕ್ಸಲ್ ಹೋರಾಟದ ಅಂತಿಮ ಹಂತವನ್ನು ಗುರುತಿಸಿತು. ಈ ಕಾರ್ಯಾಚರಣೆಗೆ ನಾಲ್ಕು ಪ್ರಮುಖ ಕಾರ್ಯತಂತ್ರ ಗುರಿಗಳಿದ್ದವು: ಬಸ್ತರ್‌ನಾ ದ್ಯಂತ ಸಿಆರ್‌ಪಿಎಫ್ ನೆಲೆಗಳ ಸ್ಥಾಪನೆ, ಡ್ರೋನ್ ಮತ್ತು ಉಪಗ್ರಹ ಗುಪ್ತಚರ ಸಂಗ್ರಹ, 612ಕ್ಕೂ ಹೆಚ್ಚು ಪೊಲೀಸ್ ಠಾಣೆಗಳ ಸ್ಥಾಪನೆ, ಮತ್ತು ಶರಣಾಗತಿ ನೀತಿಯ ಜಾರಿ.

ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ (ಕರ್ರೆಗುಟ್ಟಲು ಬೆಟ್ಟ ಕಾರ್ಯಾಚರಣೆ): 2025ರ ಏಪ್ರಿಲ್ 21ರಿಂದ ಮೇ 11ರವರೆಗೆ 21 ದಿನಗಳ ಕಾಲ ನಡೆದ ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ ಭಾರತದ ಅತಿ ದೊಡ್ಡ ನಕ್ಸಲ್ ವಿರೋಧಿ ಕಾರ್ಯಾಚರಣೆಯಾಗಿತ್ತು. ಛತ್ತೀಸ್‌ಗಡ–ತೆಲಂಗಾಣ ಗಡಿಯಲ್ಲಿರುವ ಕರ್ರೆಗುಟ್ಟಲು ಬೆಟ್ಟ ಪ್ರದೇಶದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ 31 ನಕ್ಸಲೀಯರನ್ನು ಹೊಡೆದುರುಳಿಸಲಾಯಿತು. ಈ ಪ್ರದೇಶವು ಪಿಎಲ್ಜಿಎ ಬೆಟಾಲಿಯನ್ 1, ಡಿಕೆಎಸ್ಜೆಡ್ಸಿ ಮತ್ತು ಟಿಎಸ್ಸಿ ಮುಂತಾದ ಪ್ರಮುಖ ನಕ್ಸಲ್ ಸಂಘಟನೆಗಳ ಏಕೀಕೃತ ಕೇಂದ್ರ ಕಚೇರಿಯಾಗಿತ್ತು. ಈ ಕಾರ್ಯಾಚರಣೆಯಲ್ಲಿ ಸಿಪಿಐ(ಮಾವೋವಾದಿ) ಪ್ರಧಾನ ಕಾರ್ಯದರ್ಶಿ ನಂಬಳ ಕೇಶವ ರಾವ್ (ಬಸವರಾಜು) ಸೇರಿದಂತೆ 27 ನಕ್ಸಲೀಯರನ್ನು ಮೇ 21ರಂದು ಹೊಡೆದುರುಳಿಸಲಾಯಿತು. ಭದ್ರತಾ ಪಡೆಗಳಲ್ಲಿ ಯಾವುದೇ ಸಾವು ಸಂಭವಿಸಲಿಲ್ಲ ಎಂಬುದು ವಿಶೇಷ.

ಭದ್ರತಾ ಮೂಲಸೌಕರ್ಯ ವಿಸ್ತರಣೆ

ಸರ್ಕಾರವು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಅಪಾರ ಭದ್ರತಾ ಮೂಲಸೌಕರ್ಯವನ್ನು ನಿರ್ಮಿಸಿದೆ. ನಕ್ಸಲ್ ಪೀಡಿತ ಪ್ರದೇಶಗಳ ಪೊಲೀಸ್ ಠಾಣೆಗಳ ಸಂಖ್ಯೆ 2014ರ 66ರಿಂದ 586ಕ್ಕೆ ಏರಿದೆ. 361 ಹೊಸ ಭದ್ರತಾ ಶಿಬಿರಗಳನ್ನು ಸ್ಥಾಪಿಸಲಾಗಿದೆ ಮತ್ತು 68 ರಾತ್ರಿ–ಲ್ಯಾಂಡ್ ಮಾಡಬಹುದಾದ ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗಿದೆ. ಡ್ರೋನ್ ಕಣ್ಗಾವಲು, ಉಪಗ್ರಹ ಚಿತ್ರಣ, ಕೃತಕ ಬುದ್ಧಿಮತ್ತೆ ಆಧಾರಿತ ವಿಶ್ಲೇಷಣೆ ಮತ್ತು ಮೊಬೈಲ್ ಡೇಟಾ ವಿಶ್ಲೇಷಣೆ ಮುಂತಾದ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಲಾಗಿದೆ.

ಅಂಶ	2014	2026
ನಕ್ಸಲ್ ಪೀಡಿತ ಜಿಲ್ಲೆಗಳು	126	7–8
ಅತಿ ಹೆಚ್ಚು ಪ್ರಭಾವಿತ ಜಿಲ್ಲೆಗಳು	35	3
ಪೊಲೀಸ್ ಠಾಣೆಗಳು	66	586
ನಕ್ಸಲ್ ಘಟನೆ ದಾಖಲಿಸಿದ ಪೊಲೀಸ್ ಠಾಣೆಗಳು	330 (76 ಜಿಲ್ಲೆ)	52 (22 ಜಿಲ್ಲೆ)
ಭದ್ರತಾ ಸಿಬ್ಬಂದಿ ಮರಣ (ವಾರ್ಷಿಕ)	88	19
ನಾಗರಿಕ ಮರಣ ಇಳಿಕೆ	–	70% ಕಡಿಮೆ
ಹಿಂಸಾಚಾರ ಘಟನೆಗಳು (ವಾರ್ಷಿಕ)	1,080	234

2014 ಮತ್ತು 2026 – ಹೋಲಿಕೆ

2014ಕ್ಕಿಂತ ಮೊದಲು ನಕ್ಸಲ್ ಸಮಸ್ಯೆಯನ್ನು ನಿರ್ವಹಿಸುವಲ್ಲಿ ಕೇಂದ್ರ– ರಾಜ್ಯ ಸರ್ಕಾರಗಳು ಅನೇಕ ಸವಾಲುಗಳನ್ನು ಎದುರಿಸಿದ್ದವು. ನಕ್ಸಲ್‌ವಾದವನ್ನು ರಾಜ್ಯಗಳ ಸಮಸ್ಯೆ ಎಂದು ಪರಿಗಣಿಸಲಾಗುತ್ತಿತ್ತು. ರಾಷ್ಟ್ರೀಯ ನೀತಿ ಇರಲಿಲ್ಲ. ಕೇಂದ್ರ ಮತ್ತು ರಾಜ್ಯ ಪಡೆಗಳ ನಡುವೆ ಸಮನ್ವಯ ಕೊರತೆ ಇತ್ತು. ಗುಪ್ತಚರ ಮಾಹಿತಿ ಹಂಚಿಕೆ ಸಮರ್ಪಕವಾಗಿರಲಿಲ್ಲ. ಸೇನಾ ಕಾರ್ಯಾಚರಣೆ ಮತ್ತು ಅಭಿವೃದ್ಧಿ ಕೆಲಸಗಳ ನಡುವೆ ಸಮತೋಲನ ಇರಲಿಲ್ಲ. 2004ರಿಂದ 2014ರ ನಡುವೆ 19,135 ನಕ್ಸಲ್ ಸಂಬಂಧಿತ ಹಿಂಸಾಚಾರ ಘಟನೆಗಳು ನಡೆದಿದ್ದರೆ, 2015ರ ಜೂನ್ ನಿಂದ 2025ರ ಮೇ ವರೆಗೆ ಈ ಸಂಖ್ಯೆ 56% ಕಡಿಮೆಯಾಗಿ 7,134ಕ್ಕೆ ಇಳಿದಿದೆ. 2010ರಲ್ಲಿ 1,936 ಘಟನೆಗಳು ನಡೆದಿದ್ದರೆ, 2024ರಲ್ಲಿ ಕೇವಲ 374 ಮತ್ತು 2025ರಲ್ಲಿ ಸುಮಾರು 234 ಘಟನೆಗಳು ನಡೆದಿವೆ. 2010ರಲ್ಲಿ 465 ಪೊಲೀಸ್ ಠಾಣೆಗಳಲ್ಲಿ ನಕ್ಸಲ್ ಹಿಂಸಾಚಾರ ವರದಿಯಾಗಿದ್ದರೆ, 2025ರಲ್ಲಿ ಕೇವಲ 119 ಠಾಣೆಗಳಲ್ಲಿ ಮಾತ್ರ ವರದಿಯಾಗಿದೆ. ನಾಗರಿಕ ಮತ್ತು ಭದ್ರತಾ ಪಡೆ ಸಾವುಗಳೂ ಗಮನಾರ್ಹವಾಗಿ ಕಡಿಮೆಯಾಗಿವೆ. 2010ರಲ್ಲಿ 1,005 ಜನ ಹತರಾಗಿದ್ದರೆ, 2024ರಲ್ಲಿ ಸುಮಾರು 150 ಮತ್ತು 2025ರಲ್ಲಿ ಸುಮಾರು 95–100 ಜನ ಮಾತ್ರ ಹತರಾಗಿದ್ದಾರೆ. ಇದು 85–91 % ಕಡಿಮೆ. ಭದ್ರತಾ ಸಿಬ್ಬಂದಿ ಸಾವಿನ ಸಂಖ್ಯೆ 73% ಕಡಿಮೆಯಾಗಿದೆ ಮತ್ತು ನಾಗರಿಕ ಸಾವಿನ ಸಂಖ್ಯೆ 70% ಕಡಿಮೆಯಾಗಿದೆ.

ಹಿಡ್ಮಾ ಹತ್ಯೆ

2025ರ ನವೆಂಬರ್ 18ರಂದು ಮಡ್ವಿ ಹಿಡ್ಮಾ ಎಂಬ ಸಿಪಿಐ(ಮಾವೋವಾದಿ) ಕೇಂದ್ರ ಸಮಿತಿ ಸದಸ್ಯ, ಕೇಂದ್ರ ಮಿಲಿಟರಿ ಕಮಿಷನ್ ಮುಖ್ಯಸ್ಥ ಮತ್ತು ಪಿಎಲ್‌ಜಿಎ ಬೆಟಾಲಿಯನ್ 1ರ ಕಮಾಂಡರ್ ಆಗಿದ್ದ ಹಿಡ್ಮಾ ಆಂಧ್ರಪ್ರದೇಶದ ಅಲ್ಲೂರಿ ಸೀತಾರಾಮರಾಜು ಜಿಲ್ಲೆಯ ಮಾರೆಡುಮಿಲ್ಲಿ ಅರಣ್ಯ ಪ್ರದೇಶದಲ್ಲಿ ಗ್ರೇಹೌಂಡ್ಸ್ ಪಡೆಯ ಎನ್ಕೌಂಟರ್‌ನಲ್ಲಿ ಹತನಾದ. ಅವನ ಪತ್ನಿ ಮದಕಂ ರಾಜೆ ಮತ್ತು ನಾಲ್ಕು ಅಂಗರಕ್ಷಕರಾದ ಲಕ್ಮಲ್, ಕಮ್ಲು, ಮಲ್ಲ ಮತ್ತು ದೇವೆ ಸಹ ಹತರಾದರು. ಹಿಡ್ಮಾ ಮಾವೋವಾದಿ ಕೇಂದ್ರ ಸಮಿತಿಯ ಏಕೈಕ ಬುಡಕಟ್ಟು ಸದಸ್ಯನಾಗಿದ್ದ. ಅವನು ಕನಿಷ್ಠ 26 ಪ್ರಮುಖ ದಾಳಿಗಳಿಗೆ ನೇರ ಹೊಣೆಗಾರನಾಗಿದ್ದ ಮತ್ತು 172 ಭದ್ರತಾ ಸಿಬ್ಬಂದಿಯ ಹತ್ಯೆಗೆ ಕಾರಣನಾಗಿದ್ದ. ಅವನ ತಲೆಗೆ 50 ಲಕ್ಷ ರೂ. ಬಹುಮಾನ ಇತ್ತು. 2010ರ ದಂತೆವಾಡ ದಾಳಿ, 2013ರ ಜೀರಮ್ ಘಾಟಿ ದಾಳಿ, 2017ರ ಬುರ್ಕಪಾಲ್ ದಾಳಿ ಮತ್ತು 2021ರ ತೆಕುಲಗುಡೇಮ್ ದಾಳಿಗಳ ಹಿಂದಿನ ಪ್ರಮುಖ ಸೂತ್ರಧಾರನಾಗಿದ್ದ.



ನಗರ ನಕ್ಸಲೀಯರು

ನಗರ ನಕ್ಸಲೀಯರು ಎಂಬ ಪರಿಕಲ್ಪನೆ ಇತ್ತೀಚಿನ ವರ್ಷಗಳಲ್ಲಿ ಪ್ರಮುಖ ಚರ್ಚಾ ವಿಷಯವಾಗಿತ್ತು. ಅಮಿತ್ ಶಾ ಅವರ ಪ್ರಕಾರ, ನಗರ ನಕ್ಸಲೀಯರು ಸಶಸ್ತ್ರ ಮಾವೋವಾದಿಗಳೊಂದಿಗೆ ಮಾತುಕತೆ ನಡೆಸಬೇಕೆಂದು ಒತ್ತಾಯಿಸಿದರು, ಆದರೆ ನಕ್ಸಲ್ ಹಿಂಸಾಚಾರದ ಸಾಮಾನ್ಯ ನಾಗರಿಕ ಬಲಿಪಶುಗಳ ಬಗ್ಗೆ ಕಾಳಜಿ ತೋರಲಿಲ್ಲ. ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) 40 ಕೋಟಿ ರೂ. ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿದರೆ, ಜಾರಿ ನಿರ್ದೇಶನಾಲಯ 12 ಕೋಟಿ ರೂ. ಮುಟ್ಟುಗೋಲು ಹಾಕಿ ನಕ್ಸಲ್‌ವಾದಕ್ಕೆ ಹಣಕಾಸು ಒದಗಿಸುತ್ತಿದ್ದ ಜಾಲಗಳನ್ನು ಛಿದ್ರಗೊಳಿಸಿದೆ.

ಕಿರುಸುದ್ದಿ

ಬಪ್ಪನಾಡು: ಇಂದಿನಿಂದ ವಾರ್ಷಿಕ ಉತ್ಸವ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ವರ್ಷಾವಧಿ ಉತ್ಸವ ಏ.1ರಿಂದ 9 ರವರೆಗೆ ನಡೆಯಲಿದೆ. ಜಾತ್ರಾ ಮಹೋತ್ಸವದ ಅಂಗವಾಗಿ ಮಾ. 31ರಂದು ಅಂಕುರಾ ರೋಹಣ, ಏ. 1ರಂದು ಧ್ವಜಾರೋಹಣ, ಸಸಿಹಿತ್ಲು ಶ್ರೀ ಭಗವತಿಯರ ಪರಿವಾರದೊಂದಿಗೆ ಭೇಟಿ, ರಾತ್ರಿ ಉತ್ಸವ ಬಲಿ, 2ರಂದು ಉತ್ಸವ ಬಲಿ, ಏ.3ರಂದು ಪೇಟೆ ಸವಾರಿ, ಏ.4ರಂದು ಕೊಪ್ಪಲ ಸವಾರಿ, ಎ.5ರಂದು ಬಾಕಿಮಾರು ದೀಪೋತ್ಸವ, ಏ.6ರಂದು ಕೆರೆ ದೀಪ, ಏಧ.7ರಂದು ಹಗಲು ರಥೋತ್ಸವ, ಮಹಾ ಅನ್ನಸಂತರ್ಪಣೆ, ಸಂಜೆ ದೇವರ ಶಯನೋತ್ಸವ, ಉತ್ಸವ ಬಲಿ, ಉತ್ಸವ, ಭೂತ ಬಲಿ ನಡೆಯಲಿದೆ. ಏ 8ರಂದು ಬೆಳಗ್ಗೆ ಕವಾಟೋದ್ಘಾಟನೆ, ತುಲಾಭಾರ ಸೇವೆ, ಸಂಜೆ ಓಕುಳಿ, ಬಲಿ ಉತ್ಸವ, ಭಗವತಿಯರ ಭೇಟಿ, ಬ್ರಹ್ಮರಥೋತ್ಸವ ನಡೆಯಲಿದೆ ಎಂದು ಕ್ಷೇತ್ರದ ಆನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತರು ಹಾಗೂ ಕಾರ್ಯನಿರ್ವಹಣಾಧಿಕಾರಿ ಶ್ವೇತಾಪಳ್ಳಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಏ. 9ರಂದು ಊರಪರವೂರ ಭಕ್ತರಿಂದ ಹಣ್ಣುಕಾಯಿ ಸಮರ್ಪಣೆ, ಏ. 10ಕ್ಕೆ ಸಂಪ್ರೋಕ್ಷಣೆ, ಮಹಾ ಮಂತ್ರಾಕ್ಷತೆ, ಏ. 12ರಂದು ಶ್ರೀ ದೇವಸ್ಥಾನದ ಆಡಳಿತಕ್ಕೆ ಒಳಪಟ್ಟ ಕೊಳಚಿಕಂಬಳ ಶ್ರೀ ಜಾರಾಂದಾಯ ದೈವದ ನೇಮ ನಡೆಯಲಿದೆ.

ಅಂಬಿಕಾ ವಿದ್ಯಾಲಯದ ವಿದ್ಯಾರ್ಥಿನಿ ಅನನ್ಯಾಗೆ ಇನ್ಸ್‌ಪಯರ್ ಪ್ರಶಸ್ತಿ



ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರಾಯೋಜಿತ ಬಪ್ಪಳಿಗೆಯ ಅಂಬಿಕಾ ವಿದ್ಯಾಲಯ ಸಿ.ಬಿ.ಎಸ್.ಇ. ಸಂಸ್ಥೆಯ 7ನೇ ತರಗತಿಯ ವಿದ್ಯಾರ್ಥಿನಿ ಅನನ್ಯ ಬಿ. ಅವರು ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯವು ಪ್ರತಿ ವರ್ಷ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಸಂಶೋಧನೆಗಾಗಿ ಕೊಡಮಾಡುವ 'ಇನ್ಸ್‌ಪಯರ್ ಅವಾರ್ಡ್ ಮಾನಕ್' 2025–26ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಅನನ್ಯಾ ರಚಿಸಿದ 'ಸ್ಮಾರ್ಟ್ ಹೆಲ್ಮೆಟ್ ವಿದ್ ಕ್ರಾಶ್ ಸೆನ್ಸಾರ್' ಎಂಬ ವಿಷಯದ ಕುರಿತ ವಿಜ್ಞಾನ ಮಾದರಿಗೆ ಈ ಪ್ರಶಸ್ತಿ ದೊರೆತಿದೆ. ಅವರಿಗೆ ಶಾಲೆಯ ವಿಜ್ಞಾನ ಶಿಕ್ಷಕಿ ರಮ್ಯಾಲಕ್ಷ್ಮ ಮಾರ್ಗದರ್ಶನವನ್ನು ನೀಡಿದ್ದಾರೆ. ಅವರು ಬಲ್ನಾಡು ನಿವಾಸಿಗಳಾದ ರಾಮಕೃಷ್ಣ ರಾವ್ ಹಾಗೂ ಬಿಂದು ಇ.ಪಿ. ಅವರ ಪುತ್ರಿ.

ಪಣೋಲಿಬೈಲು: ಅಗೇಲು, ಕೋಲ ಸೇವೆ ವಿವರ

ಬಂಟ್ವಾಳ: ತಾಲೂಕಿನ ಕಾರಣಿಕದ ಕ್ಷೇತ್ರ ಪಣೋಲಿಬೈಲು ಶ್ರೀ ಕಲ್ಲುರ್ಟಿ ದೈವಸ್ಥಾನದಲ್ಲಿ ಏಪ್ರಿಲ್ 5, 7, 19, 24, 26 ರಂದು ಅಗೇಲು ಸೇವೆ ಮತ್ತು 1, 3, 5, 19, 22, 23ರಂದು ಹರಕೆ ಕೋಲ ಸೇವೆ ನಡೆಯಲಿದೆ. ಉಳಿದ ದಿನದಲ್ಲಿ ಅಗೇಲು ಮತ್ತು ಕೋಲ ಸೇವೆ ಇರುವುದಿಲ್ಲ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.



ಸಂಚರಿಸುತ್ತಿದ್ದ ಸರ್ಕಾರಿ ಬಸ್ ಬಾಗಿಲು ಏಕಾಏಕಿ ತೆರೆಯಲ್ಪಟ್ಟು ಸಹೋದರಿಯರಿಬ್ಬರು ರಸ್ತೆಗೆ ಬಿದ್ದು ಗಾಯಗೊಂಡ ಘಟನೆ ಬೆಳ್ತಂಗಡಿ ತಾಲೂಕಿನ ಗೇರುಕಟ್ಟೆ ಸಮೀಪದ ರೇಷ್ಮೆ ರೋಡ್‌ನಲ್ಲಿ ನಡೆದಿದೆ. ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಚರಿಷ್ಮಾ, ಪಿ.ಯು.ಸಿ. ವಿದ್ಯಾರ್ಥಿನಿ ಚಿದ್ರಿಕಾ ಗಾಯಗೊಂಡವರು. ಗೇರುಕಟ್ಟೆಯಿಂದ ಬೆಳ್ತಂಗಡಿ ಕಡೆಗೆ ಬಸ್ ಸಂಚರಿಸುತ್ತಿತ್ತು. ಚರಿಷ್ಮಾ ಪಬ್ಲಿಕ್ ಪರೀಕ್ಷೆ ಬರೆಯಲು ಎಕ್ಸಾಂ ಸೆಂಟರ್‌ಗೆ ಹೋಗುತ್ತಿದ್ದಳು, ರಸ್ತೆಗೆ ಬಿದ್ದ ಇಬ್ಬರಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ತಕ್ಷಣ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಆಕೆ ಪರೀಕ್ಷೆ ಬರೆಯಲು ತೆರಳಿದ್ದಾಳೆ ಎನ್ನಲಾಗಿದೆ.

ಕಲ್ಲಡ್ಕ ಕಲಾನಿಕೇತನ ಡ್ಯಾನ್ಸ್ ಫೌಂಡೇಶನ್ ಭರತನಾಟ್ಯ ಸಂಸ್ಥೆಯ ವಿದ್ಯಾರ್ಥಿನಿ ಆತ್ರಿ ಶೆಟ್ಟಿ

ಏ.4: 'ರಂಗ ಪ್ರವೇಶ' ಕಾರ್ಯಕ್ರಮ



ಬಂಟ್ವಾಳ: ತಾಲೂಕಿನ ಕಲ್ಲಡ್ಕ ಕಲಾನಿಕೇತನ ಡ್ಯಾನ್ಸ್ ಫೌಂಡೇಶನ್ ಭರತನಾಟ್ಯ ಸಂಸ್ಥೆಯ ವಿದ್ಯಾರ್ಥಿನಿ ಆತ್ರಿ ಶೆಟ್ಟಿ ಅವರ ಭರತನಾಟ್ಯ 'ರಂಗ ಪ್ರವೇಶ' ಕಾರ್ಯಕ್ರಮವು ಏ. 4 ರಂದು ಸಂಜೆ 5.15 ಕ್ಕೆ ಬಿ.ಸಿ.ರೋಡಿನ ಸ್ಪರ್ಶ ಕಲಾಮಂದಿರದಲ್ಲಿ ನಡೆಯಲಿದೆ ಎಂದು ಸಂಸ್ಥೆಯ ನಿರ್ದೇಶಕಿ, ನೃತ್ಯಗುರು ವಿದುಷಿ ವಿದ್ಯಾಮನೋಜ್ ತಿಳಿಸಿದ್ದಾರೆ.

ಬಿ.ಸಿ.ರೋಡಿನ ಪ್ರೆಸ್ ಕ್ಲಬ್‌ನಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆತ್ರಿ ಶೆಟ್ಟಿ 12 ವರ್ಷಗಳಿಂದ ತನ್ನ ಬಳಿ ಭರತನಾಟ್ಯ ಅಭ್ಯಾಸವನ್ನು ಮಾಡುತ್ತಿದ್ದು ವಿದ್ವತ್ ಅಂತಿಮ ಪರೀಕ್ಷೆಯ ತಯಾರಿಯಲ್ಲಿದ್ದಾರೆ. ಹಲವು ಪ್ರತಿಷ್ಠಿತ ವೇದಿಕೆಗಳಲ್ಲಿ ಕಾರ್ಯಕ್ರಮಗಳನ್ನು ನೀಡುವ ಮೂಲಕ ಜನಮನ್ನಣೆಯನ್ನು ಗಳಿಸಿರುವಂತಹ ಉದಯೋನ್ಮುಖಿ ಕಲಾವಿದೆಯಾಗಿದ್ದಾರೆ ಎಂದರು.

ರಂಗಪ್ರವೇಶ ಕಾರ್ಯಕ್ರಮದಲ್ಲಿ ನೃತ್ಯಗುರು ಶಾಂತಲಾ ಪ್ರಶಸ್ತಿ ಪುರಸ್ಕೃತರಾದ ಉಳ್ಳಾಲ ಮೋಹನ್ ಕುಮಾರ್, ಪುತ್ತೂರು ವಿಶ್ವಕಲಾನಿಕೇತನ ಸಂಸ್ಥೆಯ ನಿರ್ದೇಶಕಿ ಗುರು ವಿದುಷಿ ನಯನ ಪಿ. ರೈ, ನೃತ್ಯಗಿರಿ ಮೈಸೂರು ಭರತನಾಟ್ಯ ಸಂಸ್ಥೆಯ ನಿರ್ದೇಶಕರಾದ ಡಾ. ಕೃಪಾ ಪಡ್ಕೆ, ಯಕ್ಷಧ್ರುವ ಪಟ್ಲ ಫೌಂಡೇಶನ್ ನ ಪಟ್ಲ ಸತೀಶ್ ಶೆಟ್ಟಿ, ಉದ್ಯಮಿ ಚಂದ್ರಹಾಸ ಡಿ. ಶೆಟ್ಟಿ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಹಿಮ್ಮೇಳ ಕಲಾವಿದರಾಗಿ ನಟುವಾಂಗದಲ್ಲಿ ಗುರು ವಿದುಷಿ ವಿದ್ಯಾ ಮನೋಜ್, ಹಾಡುಗಾರಿಕೆಯಲ್ಲಿ ವಿದ್ವಾನ್ ನಂದಕುಮಾರ್ ಉನ್ನಿಕೃಷ್ಣನ್ ಬೆಂಗಳೂರು, ಮೃದಂಗ ವಾದನದಲ್ಲಿ ವಿದ್ವಾನ್ ಕಾರ್ತಿಕ್ ವೈದಾತ್ರಿ ಬೆಂಗಳೂರು, ಕೊಳಲು ವಾದನದಲ್ಲಿ ವಿದ್ವಾನ್ ನಿತೀಶ್ ಅಮ್ಮಣ್ಣಾಯ ಬೆಂಗಳೂರು, ವೀಣಾ ವಾದನದಲ್ಲಿ ವಿದ್ವಾನ್ ಗೋಪಾಲ್ ವೆಂಕಟರಮಣ ಬೆಂಗಳೂರು ಸಹಕರಿಸಲಿದ್ದಾರೆ ಎಂದು ಅವರು ವಿವರಿಸಿದರು.

ಭರತನಾಟ್ಯ ವಿದ್ಯಾರ್ಥಿನಿ ಆತ್ರಿಶೆಟ್ಟಿ ಮಾತನಾಡಿ, ಭರತನಾಟ್ಯದ ರಂಗಪ್ರವೇಶ ನನ್ನ ಹೆತ್ತವರ ಕನಸಾಗಿದೆ, ಗುರುಗಳ ಪ್ರೋತ್ಸಾಹ ಮತ್ತು ಪ್ರೇರಣೆಯಿಂದ ರಂಗಪ್ರವೇಶಕ್ಕೆ ಅಣಿಯಾಗಿದ್ದೇನೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಉದಯ ಕುಮಾರ್ ಶೆಟ್ಟಿ, ಶಾಲಿನಿ ಶೆಟ್ಟಿ, ಸಂತೋಷ್ ಶೆಟ್ಟಿ ಉಪಸ್ಥಿತರಿದ್ದರು.

ಭಾಷಾ ಮಸೂದೆಗೆ ಕಾಸರಗೋಡು ಕನ್ನಡಿಗರ ಅಸಮಾಧಾನ

ಮರು ಅನುಷ್ಠಾನಕ್ಕೆ ಬಿಗಿಪಟ್ಟು

ಕಾಸರಗೋಡು: ಕೇರಳ ಸರಕಾರವು ಮಲಯಾಳ ಭಾಷಾ ಮಸೂದೆಯಲ್ಲಿ ಕನ್ನಡ ಭಾಷಾ ಅಲ್ಪಸಂಖ್ಯಾತರನ್ನು ಹೊರತುಪಡಿಸಲು ಆಗ್ರಹಿಸಿ ಮುಂದಿನ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಚುನಾಯಿತರಾದ ನೂತನ ಮುಖ್ಯಮಂತ್ರಿಗಳು, ಸಚಿವರು, ಶಾಸಕರು ಒಮ್ಮತದಿಂದ ಈ ಮಸೂದೆಯನ್ನು ಮರು ಪರಿಶೀಲಿಸಿ ಸೂಕ್ತ ತಿದ್ದುಪಡಿಯೊಂದಿಗೆ ಪುನಃ ಅನುಷ್ಠಾನಗೊಳಿಸಬೇಕೆಂದು ಆಗ್ರಹಿಸಿ ಕಾಸರಗೋಡು ಪ್ರದೇಶದ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಪ್ರತಿನಿಧಿಗಳು, ಮಾಧ್ಯಮದವರು ಒಗ್ಗೂಡಿ ಕಾಸರಗೋಡು ಕನ್ನಡಿಗರ ದುಂಡು ಮೇಜಿನ ಪರಿಷತು ಕೈಗೊಳ್ಳಲು ತೀರ್ಮಾನಿಸಲಾಯಿತು.

ಕಾಸರಗೋಡು ಕನ್ನಡ ಗ್ರಾಮದಲ್ಲಿ ನಡೆದ ಪ್ರಥಮ ಕಾಸರಗೋಡು ಕನ್ನಡಿಗರ ದುಂಡು ಮೇಜಿನ ಪರಿಷತ್ತು ಗಣ್ಯರ ಸಭೆಯ ಅಧ್ಯಕ್ಷತೆಯನ್ನು ಕಾಸರಗೋಡು ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ಕೇರಳ ರಾಜ್ಯ ಘಟಕ, ಕಾಸರಗೋಡು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವರಾಮ ಕಾಸರಗೋಡು ವಹಿಸಿದ್ದರು.

ಈ ಕಾಸರಗೋಡು ಕನ್ನಡಿಗರ ದುಂಡು ಮೇಜಿನ ಪರಿಷತ್ತು ಸಭೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಎ.ಆರ್.ಸುಬ್ಬಯ್ಯಕಟ್ಟೆ, ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಪು, ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಅಧ್ಯಕ್ಷ ಸುಕೇಶ್ ಎ., ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ಧಾರವಾಡ ಜಿಲ್ಲೆ, ಕರ್ನಾಟಕ ಸಂಗ್ರಾಮ ಸೇನೆ ರಾಜ್ಯಾಧ್ಯಕ್ಷ ಸಂಜೀವ ದುಮಕನಾಳ ಧಾರವಾಡ, ಜಯಾನಂದ ಕುಮಾರ್ ಹೊಸದುರ್ಗ, ವೆಂಕಟ್ ಭಟ್ ಎಡನೀರು, ಕರ್ನಾಟಕ ಸಮಿತಿ ಕಾರ್ಯದರ್ಶಿ, ವಕೀಲ ಕೆ.ಸತ್ಯನಾರಾಯಣ ತಂತ್ರಿ, ಹರೀಶ್ ಸುಲಾಯ ಒಡ್ಡಂಬೆಟ್ಟು, ಕರ್ನಾಟಕ ಗಮಕ ಕಲಾ ಪರಿಷತ್ತು ಕೇರಳ ಗಡಿನಾಡ ಘಟಕದ ಅಧ್ಯಕ್ಷ ಟಿ.ಶಂಕರನಾರಾಯಣ ಭಟ್, ಪತ್ರಕರ್ತ ವಿರಾಜ್ ಅಡೂರು, ಪುರುಷೋತ್ತಮ ಪೆರ್ಲ, ಪುರುಷೋತ್ತಮ ಭಟ್, ಪ್ರದೀಪ್ ಬೇಕಲ್, ಮಾಜಿ ಕೌನ್ಸಿಲರ್ ಕೆ.ವರಪ್ರಸಾದ್ ಕೋಟೆಕಣಿ, ಕೆ.ಗುರುಪ್ರಸಾದ್ ಕೋಟೆಕಣಿ, ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘದ ಪ್ರಧಾನ ಕಾರ್ಯದರ್ಶಿ ವಿಶಾಲಾಕ್ಷ ಪುತ್ರಕಳ, ಗಡಿನಾಡ ಕಲಾವಿದರು ಸಂಸ್ಥೆಯ ಉಪಾಧ್ಯಕ್ಷ ದಿವಾಕರ ಪಿ. ಅಶೋಕನಗರ, ವಕೀಲೆ ಪರಿಮಳ ರಾವ್ ಕೆ. ಮಂಗಳೂರು, ಡಾ.ವಾಣಿಶ್ರೀ ಕಾಸರಗೋಡು, ಶ್ರೀಕಾಂತ ಕಾಸರಗೋಡು ಸಲಹೆ, ಮಾರ್ಗದರ್ಶನಗಳನ್ನು ನೀಡಿದರು.

ಮಾಜಿ ಕೌನ್ಸಿಲರ್ ಶಂಕರ ಕೆ. ಸ್ವಾಗತಿಸಿದರು. ಕಾಸರಗೋಡು ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಕೆ.ಜಗದೀಶ್ ಕೂಡ್ಲು ಕಾರ್ಯಕ್ರಮ ನಿರೂಪಿಸಿದರು. ದಿವ್ಯಾಗಟ್ಟಿ ಪರಕ್ಕಿಲ ಸಮನ್ವಯಕಾರಕರಾಗಿ ಸಹಕರಿಸಿದರು.



ವ್ಯಾಪಕ ವಿರೋಧ

ಕೇರಳ ಸರಕಾರದ ಮಲಯಾಳ ಭಾಷಾ ಮಸೂದೆ ವಿರುದ್ಧ ಗಡಿನಾಡ ಕನ್ನಡಿಗರ ಆಕ್ರೋಶ ದಿನೇ ದಿನೇ ಹೆಚ್ಚುತ್ತಿದ್ದು, ಪ್ರತಿಭಟನಾ ಸಭೆಗಳು ನಡೆಯುತ್ತಿದೆ.

ಕಟೀಲು ರಕ್ತೇಶ್ವರೀ ಗುಡಿಯಲ್ಲಿ ತೋರಣ ಮುಹೂರ್ತ, ನಾಳೆ ಬ್ರಹ್ಮಕಲಶಾಭಿಷೇಕ

ಕಟೀಲು : ಶ್ರೀ ದುರ್ಗಾಪರಮೇಶ್ವರೀ ದೇವರ ಪರಿವಾರ ದೇವತೆಯಾದ ಶ್ರೀ ರಕ್ತೇಶ್ವರೀ ಗುಡಿಯನ್ನು ಬರೋಡ ಶಶಿಧರ ಶೆಟ್ಟಿ ಸೇವಾರೂಪದಲ್ಲಿ ಸುಮಾರು ರೂ.90ಲಕ್ಷ ವೆಚ್ಚದಲ್ಲಿ ನವೀಕರಿಸಿ ನೀಡಿದ್ದು, ಇಲ್ಲಿ ಶ್ರೀ ದೇವರ ಪುನರ್ ಪ್ರತಿಷ್ಠೆ ಹಾಗೂ ಅಷ್ಟೋತ್ತರ ಕಲಶಾಭಿಷೇಕ ಏಪ್ರಿಲ್ 2ರಂದು ನಡೆಯಲಿದೆ.

ಈ ಹಿನ್ನಲೆಯಲ್ಲಿ ಮಂಗಳವಾರ ತೋರಣ ಮುಹೂರ್ತ, ವಾಸ್ತುಪೂಜೆ, ವಾಸ್ತುಹೋಮಾದಿಗಳು ನಡೆದವು. ದೇಗುಲದ ತಂತ್ರಿಗಳಾದ ವೇದವ್ಯಾಸ ತಂತ್ರಿ, ಅರ್ಚಕರಾದ ಅನಂತಪದ್ಮನಾಭ ಆಸ್ರಣ್ಣ, ಲಕ್ಷ್ಮೀನಾರಾಯಣ ಆಸ್ರಣ್ಣ, ಶ್ರೀಹರಿನಾರಾಯಣದಾಸ ಆಸ್ರಣ್ಣ ದಾನಿಗಳಾದ ಬರೋಡ ಶಶಿಧರ ಶೆಟ್ಟಿ ದಂಪತಿ, ಪ್ರದ್ಯುಮ್ನ ರಾವ್ ಶಿಬರೂರು ಮುಂತಾದವರಿದ್ದರು.

ಇಂದು ಪ್ರಾಯಶ್ಚಿತ್ತ ಹೋಮಾದಿಗಳು, ರಕ್ತೇಶ್ವರಿಯ ಅಧಿವಾಸಹೋಮ, ಶಕ್ತಿದಂಡಕ ಮಂಡಲ ಪೂಜೆ, ಏ. 2ರ ಬೆಳಿಗ್ಗೆ ಕಲಶಾಧಿವಾಸ, ದುರ್ಗಾಹೋಮ, ರಕ್ತೇಶ್ವರೀ ದೇವಿಯ ಪ್ರತಿಷ್ಠೆ, ಬೆಳಿಗ್ಗೆ ಗಂಟೆ 11ಕ್ಕೆ ಬ್ರಹ್ಮಕಲಶಾಭಿಷೇಕ ನಡೆಯಲಿದೆ.

ಸಭಾ ಕಾರ್ಯಕ್ರಮ

ಬಳಿಕ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಎಂಆರ್‌ಜಿ ಸಮೂಹ ಸಂಸ್ಥೆಗಳ ಡಾ.ಕೆ.ಪ್ರಕಾಶ್ ಶೆಟ್ಟಿ, ಡಾ. ಮೋಹನ ಆಳ್ವ, ಪುಣೆಯ ಸಂತೋಷ್ ಕುಮಾರ್ ಶೆಟ್ಟಿ, ಕಾರ್ಕಳ ಡಾ.ಸುಧಾಕರ ಶೆಟ್ಟಿ, ಶಾಸಕರಾದ ಉಮಾನಾಥ ಕೋಟ್ಯಾನ್, ಗುರ್ಮೆ ಸುರೇಶ್ ಶೆಟ್ಟಿ, ಹರೀಶ್ ಪೂಂಜ, ಮಾಜಿ ಸಂಸದ ನಳಿನ್ ಕುಮಾರ್, ಮಾಜಿ ಸಚಿವ ಅಭಯಚಂದ್ರ ಮುಂತಾದವರು ಭಾಗವಹಿಸಲಿದ್ದಾರೆ.



ಎಲ್ಲ ಮುತ್ತೈದೆಯರಿಗೆ ಸೀರೆ

ಈ ಸಂದರ್ಭ ಬಂದಂತಹ ಎಲ್ಲ ಮುತ್ತೈದೆ ಯವರಿಗೆ ಸುಹಾಸಿನಿ ಪೂಜೆಯೆಂಬ ಸಂಕಲ್ಪದಲ್ಲಿ ಸೀರೆಯನ್ನು ನೀಡಲಾಗುವುದು ಎಂದು ದೇಗುಲದ ಪ್ರಕಟಣೆ ತಿಳಿಸಿದೆ.

ಮೂಡುಬಿದಿರೆಯ ಕನ್ನಡ ಭವನದಲ್ಲಿ ಅಭಿನಯ ಪ್ರಧಾನ ಶಿಬಿರ

ಏ.12–19:'ಆಳ್ವಾಸ್ ಚಿಣ್ಣರಮೇಳ'

ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಏಪ್ರಿಲ್ 12 ರಿಂದ 19ರ ವರೆಗೆ ಮೂಡುಬಿದಿರೆಯ ಸ್ಕೌಟ್ ಗೈಡ್ಸ್ ಕನ್ನಡ ಭವನದಲ್ಲಿ ಅಭಿನಯ ಪ್ರಧಾನ ಚಿಣ್ಣರಮೇಳ 2026 ರಾಜ್ಯಮಟ್ಟದ ಮಕ್ಕಳಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿದೆ. ಪ್ರತಿದಿನ ಪೂ.9 ರಿಂದ ಸಂಜೆ 4.30ರ ವರೆಗೆ ನಡೆಯಲಿರುವ ಈ ಶಿಬಿರವು ಮಕ್ಕಳ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಹತ್ತು ಹಲವು ಚಟುವಟಿಕೆಗಳನ್ನು ಒಳಗೊಂಡಿರುತ್ತದೆ.

ರಂಗನಿರ್ದೇಶಕ ಡಾ. ಜೀವನ್ ರಾಂ ಸುಳ್ಯ ಇವರ ರಂಗ ಬದುಕಿನ 35ನೇ ವರ್ಷದ ಶಿಬಿರ ಇದಾಗಿದ್ದು ಮಕ್ಕಳ ಮಾನಸಿಕ ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಚಟುವಟಿಕೆಗಳಿಂದ ಕೂಡಿರುತ್ತದೆ. ಈ ಶಿಬಿರದಲ್ಲಿ ವಯೋಮಿತಿ 7 ರಿಂದ 15 ವರ್ಷದೊಳಗಿನ ಮಕ್ಕಳು ಭಾಗವಹಿಸಬಹುದಾಗಿದೆ. ಸಂಪನ್ಮೂಲ ವ್ಯಕ್ತಿಗಳಾಗಿ ಪ್ರತಿಭಾನ್ವಿತ ನೀನಾಸಂ ಮತ್ತು ರಂಗಾಯಣದ ರಂಗ ಪದವೀಧರರು ಭಾಗವಹಿಸಲಿದ್ದಾರೆ.

ಊಟ, ಉಪಹಾರ ಹಾಗೂ ಅಗತ್ಯ ಇರುವ ಮಕ್ಕಳಿಗೆ ವಸತಿ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

ಆಸಕ್ತರು ಕೂಡಲೇ 9448989382 (ವಿದುಷಿ ಸುಮನಾ ಪ್ರಸಾದ್), 9448215946 (ಡಾ। ಜೀವನ್ ರಾಂ ಸುಳ್ಯ), 9108238937 (ಗೀತಾಕುಮಾರಿ ಸುಳ್ಯ) ಈ ನಂಬರಿಗೆ ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಸಂಸ್ಥೆಯ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ತಿಳಿಸಿದ್ದಾರೆ.



> **ಇದು ಅಭಿನಯ ಪ್ರಧಾನ ಚಿಣ್ಣರ ಮೇಳ. ಪ್ರತಿಯೊಬ್ಬರಿಗೂ ಬದುಕಿನ ಸಂವಹನಕ್ಕೆ ಅಗತ್ಯವಾಗಿ ಅಭಿನಯ ಕಲೆ ಬೇಕೇ ಬೇಕು. ಆ ಮೂಲಕ ಮಾತಾಡದವರು ಮಾತಾಡುವಂತೆ, ಕುಣಿಯುವಂತೆ, ಬರೆಯುವಂತೆ, ಆತ್ಮಸ್ಥೈರ್ಯದಿಂದ ನಾಟಕದಲ್ಲಿ ಅಭಿನಯಿಸುವಂತೆ ಮತ್ತು ಜೀವನ ಪಾಠ, ಶಿಸ್ತನ್ನು ಕಲಿಸುವ ಶಿಬಿರ ಇದಾಗಿದ್ದು ಭಾಗವಹಿಸುವ ಪ್ರತಿಯೊಬ್ಬ ಮಗುವಿನ ಪ್ರತಿಭೆಗೂ ವೇದಿಕೆಯಾಗಲಿದೆ?**
>
> ■ ಡಾ। ಜೀವನ್ ರಾಂ ಸುಳ್ಯ

ಟೆಡ್ ಎಕ್ಸ್ ಟಾಕ್: ಜಾದೂ ಪ್ರದರ್ಶಿಸಿ ವಿಚಾರ ಮಂಡಿಸಿದ ಕುದ್ರೋಳಿ ಗಣೇಶ್



ಮಂಗಳೂರು: ತಜ್ಞರಿಂದ ಜ್ಞಾನವನ್ನು ಪಡೆದುಕೊಳ್ಳುವ ವಿನೂತನ ಜಾಗತಿಕ ಕಾರ್ಯಕ್ರಮವಾದ ಟೆಡ್ ಎಕ್ಸ್ ಒಡಿಶಾದ ಭುವನೇಶ್ವರದಲ್ಲಿರುವ ಪ್ರತಿಷ್ಠಿತ ಕಳಿಂಗ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ಜರುಗಿತು. ಇದರಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಜಾದೂಗಾರ ಕುದ್ರೋಳಿ ಗಣೇಶ್ ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆ ನೀಡಿದರು. ಮನುಷ್ಯನ ಮನಸ್ಸಿಗೆ ಹಾಗೂ ಪಂಚೇಂದ್ರಿಯಗಳಿಗೆ ಇರುವ ಇತಿಮಿತಿಗಳನ್ನು ಬಳಸಿಕೊಂಡು ಜಾದೂಗಾರರು ಅಚ್ಚರಿಯನ್ನು ಹೇಗೆ ಸೃಷ್ಟಿ ಮಾಡುತ್ತಾರೆ ಎನ್ನುವ ವಿಚಾರದ ಬಗ್ಗೆ ಮಾತನಾಡಿದ ಕುದ್ರೋಳಿ ಗಣೇಶ್, ವಿವಿಧ ಜಾದೂ ತಂತ್ರಗಳನ್ನು ಪ್ರದರ್ಶಿಸಿ ವಿಚಾರ ಮಂಡಿಸಿದರು.

ಇದೇ ಸಂದರ್ಭದಲ್ಲಿ ಕಳಿಂಗ ಮಹಾವಿದ್ಯಾಲಯದ ಉಪ ಕುಲಪತಿ ಪ್ರೊ.ಸರನ್ಜಿತ್ ಸಿಂಗ್ ಅವರು ಕುದ್ರೋಳಿ ಗಣೇಶ್ ರವರನ್ನು ಸನ್ಮಾನಿಸಿದರು. ವಿಶ್ವ ವಿದ್ಯಾಲಯದ ಉನ್ನತ ಅಧಿಕಾರಿಗಳು ಹಾಗೂ ಸಂಘಟನಾ ಸಮಿತಿಯವರು ಉಪಸ್ಥಿತರಿದ್ದರು. ದೇಶದ ವಿವಿಧೆಡೆಯಿಂದ ಆಗಮಿಸಿದ ವಿವಿಧ ಕ್ಷೇತ್ರಗಳ ಒಟ್ಟು 10 ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ನಡೆದ ಟೆಡ್ ಎಕ್ಸ್ ವಿಚಾರ ಸಂಕಿರಣದಲ್ಲಿ ಕೆಐಐಟಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನೀರು ಸರಬರಾಜು ಅವಧಿ ಕಡಿತದಿಂದ ಸಮಸ್ಯೆ । ಅಗತ್ಯ ಇರುವಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ

ಇಲ್ಲಿ, ಎರಡು ದಿನಕ್ಕೊಮ್ಮೆ ಬರುತ್ತಿದೆ ನೀರು!

▸ ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಮನಪಾ ದೇರೆಬೈಲು ನೈರುತ್ಯ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಇದ್ದು, ಅಗತ್ಯ ಇರುವ ಕಡೆಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ.

ಉರ್ವ ಮಾರ್ಕೆಟ್ ಜಂಕ್ಷನ್‌ನಿಂದ ಮಾರಿಗುಡಿ ಸುತ್ತಲಿನ ಪ್ರದೇಶ, ಲೇಡಿಹಿಲ್, ಚಿಲಿಂಬಿ ಸಾಯಿ ಮಂದಿರ, ಉರ್ವಸ್ಟೋರ್ ಜಂಕ್ಷನ್, ಅಶೋಕನಗರ, ಹೊಯಿಗೆಬೈಲು, ವೆಲ್ಸ್‌ಪೇಟೆ ಮುಂತಾದ ಸ್ಥಳಗಳನ್ನು ಒಳಗೊಂಡಿರುವ ದೇರೆಬೈಲು ನೈರುತ್ಯ ವಾರ್ಡ್‌ನ ಕೆಲವೆಡೆ ನೀರು ಸರಬರಾಜಿನಲ್ಲಿ ವ್ಯತ್ಯಯ ಆಗುತ್ತಿದೆ.

ವೆಲ್ಸ್‌ಪೇಟೆ, ಉರ್ವ ಮಾರ್ಕೆಟ್ ಸುತ್ತಲಿನ ಪ್ರದೇಶ, ಉರ್ವ ಮಾರಿಗುಡಿ, ಮಾರಿಗುಡಿ ಕ್ರಾಸ್ ರೋಡ್, ಯಶಸ್ವಿನಗರ, ಮಲರಾಯ ಲೇಔಟ್, ಸಿಕ್ವೇರ ಲೇನ್, ಸುವರ್ಣ ಲೇನ್ ಮುಂತಾದ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಕಾಡುತ್ತಿದೆ.

ಈ ವಾರ್ಡ್‌ನಲ್ಲಿ ಬಹುತೇಕ ಸ್ಥಳಗಳಲ್ಲಿ ಜಲಸಿರಿ ಯೋಜನೆ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿದ್ದು, ನೀರಿನ ಸಂಪರ್ಕ ನೀಡಲಾಗಿದೆ. ಪಾಲಿಕೆಯಿಂದ ಪೂರೈಕೆಯಾಗುವ ನೀರನ್ನು ಪಾಲಿಕೆಯ ಹಳೆಯ ಪೈಪ್‌ಲೈನ್ ಹಾಗೂ ಜಲಸಿರಿ ಪೈಪ್‌ಲೈನ್‌ನಲ್ಲಿ ಏಕಕಾಲಕ್ಕೆ ಸರಬರಾಜು ಮಾಡುವ ಕಾರಣ ಪ್ರೆಶರ್ ಕಡಿಮೆಯಾಗಿ ಎತ್ತರದ ಸ್ಥಳಗಳಿಗೆ, ಎಂಡ್ ಪಾಯಿಂಟ್‌ಗಳಿಗೆ ನೀರು ತಲುಪುತ್ತಿಲ್ಲ. ಈ ಹಿಂದೆ ಬೆಳಗ್ಗೆ 7ರಿಂದ 11.30ರವರೆಗೆ ನೀರು ಬಿಡಲಾಗುತ್ತಿತ್ತು. ಈಗ ಕೆಲವೊಮ್ಮೆ ಬೆಳಗ್ಗೆ 9.30ಕ್ಕೆ ನೀರು ಪೂರೈಕೆ ಬಂದ್ ಮಾಡಲಾಗುತ್ತದೆ. ಎರಡು ಪೈಪ್‌ಲೈನ್‌ನಲ್ಲಿ ನೀರು ಪೂರೈಸುವಾಗ ಅವಧಿ ಕಡಿತಗೊಂಡರೆ ಎತ್ತರದ ಪ್ರದೇಶ, ಕೊನೆಯ ಸ್ಥಳಗಳಿಗೆ ನೀರು ತಲುಪುವುದಿಲ್ಲ ಎನ್ನುವುದು ಇಲ್ಲಿನ ಜನರ ದೂರು. ಕನಿಷ್ಠ ಬೆಳಗ್ಗೆ 7ರಿಂದ 11 ಗಂಟೆವರೆಗೂ ನೀರು ನೀಡಿದರೂ ಸಮಸ್ಯೆ ಕಾಣಿಸದು. ಬೆಳಗ್ಗೆ 11.30ರವರೆಗೆ ನೀರು ಪೂರೈಕೆಗೆ ಮನಪಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂಬುದು ಇಲ್ಲಿನವರ ಒತ್ತಾಯ.

ಈ ಹಿಂದೆ ಇಲ್ಲಿ ರಾತ್ರಿ 8ರಿಂದ 12ರ ಅವಧಿಯಲ್ಲಿ ಟ್ಯಾಂಕ್ ಭರ್ತಿಯಾದಾಗ ನೀರು ಬಿಡಲಾಗುತ್ತಿತ್ತು. ಈಗ ಕೆಲವು ತಿಂಗಳುಗಳಿಂದ ಬೆಳಗ್ಗಿನ ವೇಳೆಯೇ ಟ್ಯಾಂಕ್ ಭರ್ತಿಯಾಗುತ್ತಿಲ್ಲ. ಇನ್ನು ರಾತ್ರಿ ವೇಳೆ ನೀರು ಬಿಡುವುದು ಕನಸಾಗಿದೆ. ತುಂಬೆಯಿಂದ ಸರಬರಾಜು ಆಗುವ ನೀರಿನ ಪ್ರಮಾಣ ಕಡಿಮೆಯಾದ ಕಾರಣ ರಾತ್ರಿ ನೀರು ಪೂರೈಕೆ ನಿಂತಿದೆ. ರಾತ್ರಿ ನೀರು ಪೂರೈಕೆ ಮಾಡಿದರೆ ಇಲ್ಲಿ ನೀರಿನ ಕೊರತೆ ಉಂಟಾಗದು ಎಂಬುದು ಸ್ಥಳೀಯರ ಅಭಿಪ್ರಾಯ.



ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್

ಸುವರ್ಣ ಲೇನ್ ಬಳಿ ನೀರಿನ ಪೈಪ್ ಒಡೆದಿದ್ದು, ಮಂಗಳವಾರ ದುರಸ್ತಿ ಕಾರ್ಯ ನಡೆಸಲಾಯಿತು.

ಟ್ಯಾಂಕರ್ ನೀರು

ನೀರಿನ ಕೊರತೆ ಉಂಟಾಗುವ ಪ್ರದೇಶಗಳಿಗೆ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ. ದಿನಕ್ಕೆ ನಾಲ್ಕು ಟ್ರಿಪ್ ಟ್ಯಾಂಕರ್ ನೀರು ಬರುತ್ತಿದ್ದು, ಅಗತ್ಯ ಇರುವ ಮನೆಗಳ ನೀರಿನ ತೊಟ್ಟಿಗೆ ಟ್ಯಾಂಕರ್‌ನಿಂದ ನೀರು ತುಂಬಿಸಲಾಗುತ್ತಿದೆ. ಸುವರ್ಣಲೇನ್, ಜಾಯ್‌ಲೇನ್ ಸಹಿತ ವಿವಿಧ ಪ್ರದೇಶಗಳಿಗೆ ಟ್ಯಾಂಕರ್ ನೀರು ಒದಗಿಸಲಾಗುತ್ತಿದೆ. ಫ್ಲ್ಯಾಟ್‌ನವರು ಖಾಸಗಿ ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳುತ್ತಿದ್ದಾರೆ. ಉರ್ವಸ್ಟೋರ್ ಬಳಿ, ದೈವಜ್ಞ ಹಾಲ್ ಬಳಿ ಸಹಿತ ಒಟ್ಟು ನಾಲ್ಕು ಕಡೆ ಬೋರ್‌ವೆಲ್ ಇದ್ದರೂ, ನೀರು ಬಳಕೆ ಸಾಧ್ಯವಾಗಿಲ್ಲ.

ದೇರೆಬೈಲು ನೈರುತ್ಯ ವಾರ್ಡ್‌ನಲ್ಲಿ ನಾಲ್ಕು ಸರಕಾರಿ ಬಾವಿಗಳಿವೆ. ವೆಲ್ಸ್‌ಪೇಟೆ, ಪಾಂಚಜನ್ಯ ರಸ್ತೆ, ಚಿಲಿಂಬಿ ಮುಂತಾದೆಡೆ ಬಾವಿಗಳಿದ್ದರೂ, ಒಳಚರಂಡಿ ಸಮಸ್ಯೆಯಿಂದ ನೀರು ಕಲುಷಿತ ವಾಗಿದೆ. ಬಾವಿ ಶುಚಿಗೊಳಿಸಿದರೂ ನೀರನ್ನು ಕುಡಿಯಲು ಬಳಸುವುದು ಸಾಧ್ಯವಿಲ್ಲ. ಈ ವಾರ್ಡ್‌ನಲ್ಲಿ ಜಲಸಿರಿ ಪೈಪ್‌ಲೈನ್ ಕಾಮಗಾರಿ ಶೇ.75ರಷ್ಟು ಪೂರ್ಣಗೊಂಡಿದೆ. ಮುಖ್ಯ ಪೈಪ್‌ಲೈನ್ ಆಗಬೇಕಿದೆ. ಕೋಡಿಕಲ್‌ನಲ್ಲಿ 40 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್ ನಿರ್ಮಾಣಗೊಂಡಿದೆ.

15 ಮನೆಗಳಿಗೆ ಒಳಚರಂಡಿ ವ್ಯವಸ್ಥೆ ಇಲ್ಲ!



ದೇರೆಬೈಲು ನೈರುತ್ಯ ವಾರ್ಡ್ ನಗರದ ಮಧ್ಯೆ ಇದ್ದರೂ ಈ ವಾರ್ಡ್‌ನ ಬ್ಯಾರಿಕಂಡ ಎಂಬಲ್ಲಿ 15 ಮನೆಗಳಿಗೆ ಇದುವರೆಗೆ ಒಳಚರಂಡಿ ಸಂಪರ್ಕ ಆಗಿಲ್ಲ. ಇದು ತಗ್ಗುಪ್ರದೇಶ ಎಂದು ಹೇಳಿ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಇದುವರೆಗೆ ಇಲ್ಲಿನ ಮನೆಗಳಿಗೆ ಡ್ರೈನೇಜ್ ಸಂಪರ್ಕ ಕಲ್ಪಿಸಿಲ್ಲ. ಈ ಬಗ್ಗೆ ಮಂಗಳೂರು ಮಹಾನಗರ ಪಾಲಿಕೆ ಗಮನಕ್ಕೆ ತಂದರೂ ಪ್ರಯೋಜನ ಆಗಿಲ್ಲ. ಇಲ್ಲಿನ ನಿವಾಸಿಗಳ ಸತತ ಪ್ರಯತ್ನ ಹಾಗೂ ಫಾಲೋಅಪ್‌ನಿಂದ ಶಾಸಕ ವೇದವ್ಯಾಸ ಕಾಮತ್ ಅವರ ಮೂಲಕ ಒಳಚರಂಡಿ ವ್ಯವಸ್ಥೆ ಕಲ್ಪಿಸಲು 20 ಲಕ್ಷ ರೂ. ಅನುದಾನವನ್ನೂ ಮೀಸಲಿರಿಸಲಾಗಿತ್ತು. ಆದರೆ, ಕಾಮಗಾರಿ ಮಾತ್ರ ಇನ್ನೂ ಅನುಷ್ಠಾನಗೊಂಡಿಲ್ಲ. ಇದರಿಂದಾಗಿ ಸ್ಥಳೀಯರು ಶೌಚಗುಂಡಿ ಸ್ವಚ್ಛಗೊಳಿಸಲು ಪ್ರತಿ ಆರು ತಿಂಗಳಿಗೊಮ್ಮೆ ಹಣ ಖರ್ಚು ಮಾಡಬೇಕಿದೆ. ಇಂದಿನ ತಾಂತ್ರಿಕ ಯುಗದಲ್ಲಿ ಡ್ರೈನೇಜ್ ವ್ಯವಸ್ಥೆ ಕಲ್ಪಿಸುವುದು ಕಷ್ಟವೇನಲ್ಲ. ಈ ಬಗ್ಗೆ ಮನಪಾ ಅಧಿಕಾರಿಗಳು ಮನಸ್ಸು ಮಾಡಬೇಕು ಎಂದು ಸ್ಥಳೀಯರಾದ ಜಯವಂತ್ ಕೆ. ಒತ್ತಾಯಿಸಿದ್ದಾರೆ.



> **ದೇರೆಬೈಲು ನೈರುತ್ಯ ವಾರ್ಡ್‌ನಲ್ಲಿ ಎರಡು ದಿನಕ್ಕೊಮ್ಮೆ ಮಾತ್ರ ನೀರು ಬಿಡಲಾಗುತ್ತಿದೆ. ವಾರ್ಡ್‌ನ ಕೆಲವೆಡೆ ನೀರಿನ ಸಮಸ್ಯೆಯಿದ್ದು, ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದರೆ ಟ್ಯಾಂಕರ್ ಮೂಲಕ ನೀರು ಒದಗಿಸುತ್ತಿದ್ದಾರೆ. ವಾರ್ಡ್‌ನಲ್ಲಿ ಈ ಹಿಂದಿನಂತೆ ಬೆಳಗ್ಗೆ 11ಗಂಟೆವರೆಗೆ ನಿರಂತರ ನೀರು ಪೂರೈಸಿದರೆ ನೀರಿನ ಸಮಸ್ಯೆ ಉಂಟಾಗದು. ಬ್ಯಾರಿಕಂಡ ಪ್ರದೇಶದಲ್ಲಿ ಡ್ರೈನೇಜ್ ಸಂಪರ್ಕ ಆಗಿಲ್ಲ. ಈ ಪ್ರದೇಶ 10 ಅಡಿಗಳಷ್ಟು ತಗ್ಗು ಪ್ರದೇಶವಾಗಿರುವ ಕಾರಣ ಅಲ್ಲಿಂದ ಎತ್ತರದಲ್ಲಿರುವ ಸುವರ್ಣ ಲೇನ್‌ನಲ್ಲಿ ಒಳಚರಂಡಿ ಜಾಲಕ್ಕೆ ಸಂಪರ್ಕ ಕಲ್ಪಿಸಲು ಸಾಧ್ಯವಾಗುತ್ತಿಲ್ಲ. ಹೊಯಿಗೆ ಬೈಲ್ ಡ್ರೈನೇಜ್‌ಗೆ ಸಂಪರ್ಕ ಕಲ್ಪಿಸಲು ಸ್ಥಳೀಯರು ಜಾಗ ಬಿಡುತ್ತಿಲ್ಲ. ಪಕ್ಕದ ಫ್ಲ್ಯಾಟ್‌ನವರೂ ಒಳಚರಂಡಿ ಪೈಪ್‌ಲೈನ್‌ಗೆ ಜಾಗ ನೀಡಲು ನಿರಾಕರಿಸುತ್ತಿದ್ದಾರೆ. ಈ ಎಲ್ಲ ಕಾರಣದಿಂದ ಶಾಸಕರು ಅನುದಾನ ಮೀಸಲಿಟ್ಟರೂ, ಕಾಮಗಾರಿ ಅನುಷ್ಠಾನ ಸಾಧ್ಯವಾಗಿಲ್ಲ.**
>
> ■ ಗಣೇಶ್ ಕುಲಾಲ್, ದೇರೆಬೈಲು ನೈರುತ್ಯ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್



> **ನಮ್ಮ ವಾರ್ಡ್‌ನಲ್ಲಿ ಈ ಹಿಂದೆ ಬೆಳಗ್ಗೆ 7ರಿಂದ 11ರವರೆಗೆ ನೀರು ಬರುತ್ತಿತ್ತು. ಈಗ 9.30ರ ವೇಳೆಗೇ ನೀರು ಬಂದ್ ಆಗುತ್ತಿದೆ. ಸಂಜೆಯೂ ನೀರು ಬರುತ್ತಿಲ್ಲ. ಇದರಿಂದಾಗಿ ವಾರ್ಡ್‌ನ ಅಲ್ಲಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಂಡಿದೆ. ಮನಪಾ ವತಿಯಿಂದ ಈ ಹಿಂದಿನಂತೆಯೇ ನೀರು ಪೂರೈಸಬೇಕಿದೆ.**
>
> ■ ಶೇಖರ್ ಉರ್ವ, ಸ್ಥಳೀಯ ನಿವಾಸಿ

ನಾಳೆ ವಾರ್ಡ್ -27
ಬೋಳೂರು ಪರಿಸರದ ಸ್ಥಿತಿಗತಿ

ಮತ್ತೆ ಯುದ್ಧೋನ್ಮಾದ

ಪುಟ 0 ➡ **ಇಸ್ಫಾಹಾನ್ ಮೇಲಿನ ದಾಳಿ:** ಅಧ್ಯಕ್ಷ ಡೊನಾಲ್ಡ್ ಟ್ರಂಪ್ 'ಇಸ್ಫಾಹಾನ್ ಮೇಲಿನ ದಾಳಿಯ ದೃಶ್ಯಗಳನ್ನು ಹಂಚಿಕೊಂಡಿದ್ದಾರೆ. ಈ ನಗರ, ಇರಾನ್‌ನ ಮೂರು ಪ್ರಮುಖ ಪರಮಾಣು ಪುಷ್ಟೀಕರಣ ಕೇಂದ್ರಗಳಲ್ಲಿ ಒಂದನ್ನು ಹೊಂದಿದ್ದು, ಅಲ್ಲಿ ಹೆಚ್ಚಿನ ಪ್ರಮಾಣದ ಯುರೇನಿಯಂ ಸಂಗ್ರಹಿಸಲಾಗಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಉಪಗ್ರಹ ದೃಶ್ಯಗಳ ಪ್ರಕಾರ, ನಗರದ ದಕ್ಷಿಣ ಭಾಗದ ಪರ್ವತ ಪ್ರದೇಶದಲ್ಲಿ ಸ್ಫೋಟಗಳು ಸಂಭವಿಸಿವೆ. ಜೂನ್‌ನಲ್ಲಿ ಇರಾನ್ ಶೇ.60ರಷ್ಟು ಶುದ್ಧೀಕರಿಸಿದ ಯುರೇನಿಯಂ ಹೊಂದಿದ್ದ 18 ಕಂಟೈನರ್‌ಗಳನ್ನು ಈ ಪ್ರದೇಶದ ಸಮೀಪವಿರುವ ಕೇಂದ್ರಕ್ಕೆ ಸ್ಥಳಾಂತರಿಸಿತ್ತು ಎಂದು ತಿಳಿದುಬಂದಿದೆ.

ಗಲ್ಫ್‌ನಲ್ಲಿ 57 ಸಾವಿರ ಸೈನಿಕರ ನಿಯೋಜನೆ!

ಪುಟ 0 ➡ ಮಧ್ಯಪ್ರಾಚ್ಯದಲ್ಲಿ ಯುಎಸ್ಎಸ್ ಟ್ರಿಪೋಲಿ ಯುದ್ಧನೌಕೆಯಲ್ಲಿ 3,500+ ಮತ್ತು ವಾಯುಪಡೆಯ ಸಾವಿರ ಸೈನಿಕರಿದ್ದಾರೆ. ಅಮೆರಿಕ ಸೈನಿಕರು ನುಗ್ಗಿದರೆ ಪ್ರಖರ ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿದೆ. ಅಮೆರಿಕ ಸೈನಿಕರು ಯಾವಾಗ ಬರುತ್ತಾರೆಂದು ನಮ್ಮವರು ಕಾಯುತ್ತಿದ್ದಾರೆ. ಅವರನ್ನು ಮತ್ತವರ ಮಿತ್ರರಾಷ್ಟ್ರಗಳನ್ನು ಒಂದೇ ಬಾರಿಗೆ ಮುಗಿಸುತ್ತೇವೆ ಎಂದಿದೆ.

ಡ್ರೋನ್, ಕ್ಷಿಪಣಿ ದಾಳಿ

ದುಬೈ ಕರಾವಳಿಯಲ್ಲಿ ಕುವೈತ್ ತೈಲ ಟ್ಯಾಂಕರ್ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ್ದರಿಂದ ಬೆಂಕಿ ಕಾಣಿಸಿಕೊಂಡಿದ್ದರೂ, ಯಾವುದೇ ತೈಲ ಸೋರಿಕೆಯಾಗಿಲ್ಲ. ಡ್ರೋನ್ ಪತನಗೊಂಡ ಪರಿಣಾಮ ನಾಲ್ವರು ಗಾಯಗೊಂಡಿದ್ದಾರೆ. ಸೌದಿ ಅರೇಬಿಯಾ ತನ್ನ ರಾಜಧಾನಿಯತ್ತ ಬಂದ ಮೂರು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹೊಡೆದುರುಳಿಸಿದೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ತಮಗೆ ಕೇವಲ ಅಮೆರಿಕ ಸೇನೆಯೇ ಗುರಿ ಎಂದು ಹೇಳಿದ್ದಾರೆ.


ಲೆಬನಾನ್, ಇರಾನ್‌ನಲ್ಲಿ ಸಾವು-ನೋವು

ದಕ್ಷಿಣ ಲೆಬನಾನ್‌ನಲ್ಲಿ ಮೂವರು ಶಾಂತಿ ಪಾಲಕರು ಮೃತಪಟ್ಟ ನಂತರ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ತುರ್ತುಸಭೆ ಕರೆದಿದೆ. ಲೆಬನಾನ್‌ನಲ್ಲಿ 1,200 ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ಇರಾನ್‌ನಲ್ಲಿ 1,900, ಇಸ್ರೇಲ್‌ನಲ್ಲಿ 19 ಮತ್ತು ಅಮೆರಿಕದ 13 ಸೈನಿಕರು ಮೃತಪಟ್ಟಿದ್ದಾರೆ.

ಷೇರು ಮಾರುಕಟ್ಟೆ ತಲ್ಲಣ

ಇಸ್ಫಾಹಾನ್ ಮತ್ತು ತೈಲ ಟ್ಯಾಂಕರ್‌ಗಳ ಮೇಲಿನ ಹೊಸ ದಾಳಿಗಳಿಂದಾಗಿ ಬ್ರೆಂಟ್ ಕಚ್ಚಾತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 107116 ಅಮೆರಿಕ ಡಾಲರ್‌ಗೆ ಏರಿಕೆಯಾಗಿದ್ದು, ಇದು ಭಾರತದ ಮೇಲೂ ಪರಿಣಾಮ ಬೀರಿದೆ. ರೂಪಾಯಿ ಮೌಲ್ಯ ದಾಖಲೆ ಮಟ್ಟಕ್ಕೆ ಕುಸಿದಿದೆ. ಭಾರತೀಯ ಷೇರು ಮಾರುಕಟ್ಟೆಯ ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳು ತೀವ್ರ ಕುಸಿತ ಕಂಡಿವೆ.

ರಾಮ ಬಾಣ



ಬಿಸಿಲಿನ ತಾಪಮಾನ: ಕಚೇರಿ ವೇಳಾಪಟ್ಟಿ ಬದಲಾವಣೆ

• **ಬೆಂಗಳೂರು:** ಬಿಸಿಲಿನ ತಾಪಮಾನದ ಹಿನ್ನೆಲೆಯಲ್ಲಿ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಹಾಗೂ ಕಲಬುರಗಿ ವಿಭಾಗದ ಎಲ್ಲ ಜಿಲ್ಲೆಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಕಚೇರಿಗಳ ವೇಳಾಪಟ್ಟಿಯ ಬದಲಾಗಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 1.30 ಗಂಟೆ ವರೆಗೆ ಬದಲಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶಿಸಿದೆ. ಈ ಎಲ್ಲಾ ಜಿಲ್ಲೆಗಳಲ್ಲಿನ ಸರ್ಕಾರಿ ನೌಕರರು ಬದಲಾದ ಸಮಯದಲ್ಲಿ ಎಂದಿನಂತೆ ಯಾವುದೇ ಲೋಪ, ಅಡೆತಡೆಯಿಲ್ಲದೆ ಕರ್ತವ್ಯವನ್ನು ನಿರ್ವಹಿಸಬೇಕು, ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆ ಆಗದಂತೆ ಮತ್ತು ಡಿಸಿ, ಜಿಲ್ಲಾ ಪಂಚಾಯ್ತಿ ಸಿಇಒ ಸೇರಿದಂತೆ ಹೊರೊಯ ಅಧಿಕಾರಿಗಳು ತುರ್ತು ಸಂದರ್ಭದಲ್ಲಿ ಯಾವುದೇ ಕಾರ್ಯನಿರ್ವಹಿಸಲು ನಿರ್ದೇಶಿಸಿದಲ್ಲಿ ಸಮಯದ ಪರಿಮಿತಿಯಿಲ್ಲದೆ ಕರ್ತವ್ಯ ನಿರ್ವಹಿಸಬೇಕೆಂದು ತಿಳಿಸಲಾಗಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ರಸ್ತೆ ಸ್ವಚ್ಛಗೊಳಿಸುವವನು ತನ್ನ ಕೆಲಸವನ್ನು ಶ್ರದ್ಧೆಯಿಂದ ಮಾಡಿದಾಗ ಊರು ಸ್ವಚ್ಛವಾಗುತ್ತೆ, ಶಿಕ್ಷಕನು ತನ್ನ ಸೇವೆಯನ್ನು ಜ್ಞಾನ ಸೇವೆ ಎಂಬ ಭಾವದಿಂದ ಮಾಡಿದಾಗ ವಿದ್ಯಾರ್ಥಿಗಳ ಭವಿಷ್ಯ ರೂಪುಗೊಳ್ಳುತ್ತೆ, ಇಂಜಿನಿಯರ್ ತನ್ನ ಹೊಣೆಗಾರಿಕೆಯನ್ನು ಸೇವಾಭಾವದಿಂದ ನಿರ್ವಹಿಸಿದಾಗ ಸೇತುವೆಗಳು ಸುರಕ್ಷಿತವಾಗಿರುತ್ತವೆ

– ಡಾ/ವೀರೇಂದ್ರ ಹೆಗ್ಗಡೆ

– ಇಷ್ಟು ಸುಲಭವಾಗಿ ಹೇಳುವುದಾದರೆ ನಮ್ಮ ಪಾಲಿಗೆ ಬಂದ ಕೆಲಸವನ್ನು ಶ್ರದ್ಧೆಯಿಂದ ಮಾಡುವುದೇ ಕರ್ಮಯೋಗ, ಅದೇ ನಿಜವಾದ ದೇವರ ಪೂಜೆ!

ದಿನ ಭವಿಷ್ಯ

ಮೇಷ
ಶೀಘ್ರ ಪ್ರಗತಿ ಸಾಧಿಸಬೇಕು ಎನ್ನುವುದು ನಿಮ್ಮ ಆಸೆ. ತಾಳ್ಮೆ ಬೆಳೆಸಿಕೊಳ್ಳಿ. ದುಡುಕು ಹಾನಿ ತಂದೀತು. ಕೌಟುಂಬಿಕ ಸಹಕಾರ.

ವೃಷಭ
ಕೆಲಸದಲ್ಲಿ ಪ್ರಗತಿ. ಹಿರಿಯರ ಮೆಚ್ಚುಗೆ. ಮನೆಯಲ್ಲಿ ಕೆಲವು ಬದಲಾವಣೆ ಆದೀತು. ಆರೋಗ್ಯ ಸಮಸ್ಯೆ ನಿವಾರಣೆ, ನಿರಾಳತೆ.

ಮಿಥುನ
ಕಾರ್ಯ ಪೂರೈಸಲು ಹೆಚ್ಚು ಪರಿಶ್ರಮ ಬೇಕು. ಅರ್ಥಕ್ಕೆ ಕೈ ಬಿಡಬೇಡಿ. ವಿವಾಹ ಪ್ರಸ್ತಾಪ ಸಫಲ ಆಗಲಿದೆ. ಆರೋಗ್ಯ ಸಮಸ್ಯೆ ಸಂಭವ.

ಕಟಕ
ಈ ದಿನ ನಿಮಗೆ ಪ್ರತಿಕೂಲ. ಪ್ರಮುಖ ಕಾರ್ಯ ಇಂದು ಬೇಡ. ಸಂಗಾತಿ ಜತೆ ಸಂಘರ್ಷ ಸಂಭವ. ತಾಳ್ಮೆಯ ವ್ಯವಹಾರ ಅಗತ್ಯ.

ಸಿಂಹ
ಎಲ್ಲ ಸುಸೂತ್ರವಾಗಿ ನಡೆದರೂ ಮನಸ್ಸಿಗೆ ಸಮಾಧಾನವಿರದು. ಏನೋ ಅತೃಪ್ತಿ. ಕೆಲವರ ವರ್ತನೆಗೆ ಅಸಹನೆ. ಧ್ಯಾನ, ಅಧ್ಯಾತ್ಮ ಸಹಕಾರಿ.

ಕನ್ಯಾ
ಆಪ್ತರ ಜತೆಗಿನ ಭಿನ್ನಮತ ಪರಿಹರಿಸಿ. ಪ್ರೀತಿಗೆ ಸಂಬಂಧಿಸಿದ ಬಿಕ್ಕಟ್ಟು ನಿವಾರಿಸಿ. ವೃತ್ತಿಯಲ್ಲಿ ವಾಗ್ವಾದ, ಸಂಘರ್ಷ ನಡೆದೀತು.

ತುಲಾ
ಕೆಲ ಕೌಟುಂಬಿಕ ವಿಚಾರ ಇತ್ಯರ್ಥಕ್ಕೆ ದಿನ ಮೀಸಲು. ಉತ್ಸಾಹ ಹೆಚ್ಚುವ ಬೆಳವಣಿಗೆ. ಕಾರ್ಯ ಪ್ರಗತಿ. ಆರ್ಥಿಕ ಸ್ಥಿತಿಯಲ್ಲಿ ಪ್ರಗತಿ.

ವೃಶ್ಚಿಕ
ನಿಮ್ಮ ಸುತ್ತಮುತ್ತ ಹರ್ಷದ ವಾತಾವರಣ. ಇತರರ ಉತ್ಸಾಹದಲ್ಲಿ ಭಾಗಿ. ಸಣ್ಣ ವಿಷಯಕ್ಕೆ ವಾಗ್ವಾದ ನಡೆಸಲು ಹೋಗದಿರಿ. ಖರ್ಚು ನಿಯಂತ್ರಣ.

ಧನು
ನಿಮ್ಮ ಕಾರ್ಯಕ್ಕೆ ಸಹೋದ್ಯೋಗಿ ಬೆಂಬಲ. ಖರೀದಿ ಹುಮ್ಮಸ್ಸಿನಿಂದ ಖರ್ಚು ಹೆಚ್ಚಬಹುದು. ಆಸ್ತಿ ಖರೀದಿಗೆ ಕಾಲ ಸದ್ಯ ಕೂಡಿಬರದು.

ಮಕರ
ಪ್ರಮುಖ ಕಾರ್ಯ ಇಂದು ಸಾಧಿಸುವಿರಿ. ವೃತ್ತಿಯಲ್ಲಿ ಯಶಸ್ಸು. ಸ್ವಂತ ಉದ್ಯೋಗಿಗಳಿಗೆ ಆರ್ಥಿಕ ಉನ್ನತಿ. ಕೌಟುಂಬಿಕ ಪರಿಸ್ಥಿತಿ ಸಮಾಧಾನಕರ.

ಕುಂಭ
ಯುವಜನರು ಹೆತ್ತವರ ಜತೆ ಸಂಘರ್ಷ ನಡೆಸಿಯಾರು. ಉದ್ದಿಮೆಯಲ್ಲಿ ಧನಹಾನಿ. ಇತರರ ಮನಸ್ಸಿಗೆ ಘಾಸಿ ಎಸಗದಿರಿ. ವಿನಯವಿರಲಿ.

ಮೀನ
ಕಾರ್ಯ ಸರಾಗ. ಅಡ್ಡಿಗಳ ನಿವಾರಣೆ. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಸಣ್ಣ ಸಮಸ್ಯೆಯೊಂದು ನೆಮ್ಮದಿ ಕೆಡಿಸುವುದು.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 4,0,5,1

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿ.ವೈ.ವಿಜಯೇಂದ್ರ ಪ್ರಚಾರ

ಕಾಂಗ್ರೆಸ್ ಹಣ ಕೆಲಸ ಮಾಡಲ್ಲ



ಬಾಗಲಕೋಟೆಯಲ್ಲಿ ಸೋಲುವ ಭಯದಿಂದ ಮುಖ್ಯಮಂತ್ರಿಗಳು 10-15 ಮಂತ್ರಿಗಳ ಜೊತೆ ಸೂಟ್ ಕೇಸ್ ಸಮೇತ ಠಿಕಾಣಿ ಹೂಡಿದ್ದಾರೆ. ದಾವಣಗೆರೆ, ಬಾಗಲಕೋಟೆಯಲ್ಲಿ ಸೋಲಿನ ಭಯದಲ್ಲಿ ದುಡ್ಡು ಹಾಕಿಕೊಂಡು ಕೂತಿದ್ದಾರೆ. ಎರಡೂ ಕಡೆಗಳಲ್ಲಿ ಬಿಜೆಪಿ ಗೆಲುವು ನಿಶ್ಚಿತ.
■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

• **ಬಾಗಲಕೋಟೆ:** ವಿಶೇಷ ಕ್ಯಾಬಿನೆಟ್ ಮಾಡಿ ಮುಳುಗಡೆ ಪ್ರದೇಶದ ರೈತರಿಗೆ ಪರಿಹಾರ ಕೊಡುತ್ತೇವೆ ಎಂದು ಪೊಳ್ಳು ಭರವಸೆ ನೀಡಿ ಇಲ್ಲಿವರೆಗೆ ಎಷ್ಟು ಸಾವಿರ ಕೋಟಿ ಬಿಡುಗಡೆ ಮಾಡಿದ್ದೀರಿ. ನಮ್ಮ ನಡೆ ಕೃಷ್ಣೆ ಕಡೆ ಎಲ್ಲಿ ಹೋಯ್ತು ಎಂದು ಜನರಿಗೆ ಉತ್ತರ ಕೊಡಿ. ಗ್ಯಾರಂಟಿ ಬಗ್ಗೆ ವಿಶ್ವಾಸ ಇದ್ದರೆ ಸೂಟ್‌ಕೇಸ್ ಸಮೇತ ಏಕೆ ಠಿಕಾಣಿ ಹೂಡಿದ್ದೀರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮುಖ್ಯಮಂತ್ರಿಗಳ ವಿರುದ್ಧ ಪ್ರಶ್ನೆಯ ಸುರಿಮಳೆಗೈದರು.

ಉಪಚುನಾವಣೆ ನಿಮಿತ್ತ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ನವನಗರದಲ್ಲಿ ಮನೆ ಮನೆಗೆ ತೆರಳಿ ಪ್ರಚಾರ ನಡೆಸಿ ಮಾತನಾಡಿದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆ ಅನುದಾನ ವಿಚಾರಕ್ಕೆ ಸಿಎಂಗೆ ತಿರುಗೇಟು ನೀಡಿ ಬೊಗಳೆ ಹೊಡೆದುಕೊಂಡು 3 ವರ್ಷ ಆಡಳಿತ ನಡೆಸಿದ್ದಾರೆ ಎಂದರು. ನಾಲ್ಕು ತಿಂಗಳ ಹಿಂದೆ ವಿಶೇಷ ಕ್ಯಾಬಿನೆಟ್ ಮಾಡಿ ಮುಳುಗಡೆ ಪ್ರದೇಶ ರೈತರಿಗೆ ಒಂದು ಎಕರೆ ನೀರಾವರಿ ಭೂಮಿಗೆ 40 ಲಕ್ಷ ರೂ., ಖುಷ್ಕಿ ಜಮೀನಿಗೆ 30ಲಕ್ಷ ರೂ.ಅಂತೆ ಎಷ್ಟು ಬಿಡುಗಡೆಯಾಗಿದೆ ಉತ್ತರ ಕೊಡಿ. 2010ರಲ್ಲಿ ಸುಪ್ರೀಂಕೋರ್ಟ್ ಆದೇಶ ಹೊರತಾಗಿಯೂ ಆಂಧ್ರ, ತೆಲಂಗಾಣ ಡಿಸ್ಪ್ಯೂಟ್ ಆಯ್ತು ಅಂತ ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಾಗ ನಾಲ್ಕು ವರ್ಷ ಮುಂದೆ ಹೋಗಲು ಬಿಡದೇ ಕೇಂದ್ರದ ಮೇಲೆ ಗೂಬೆ ಕೂಡಿಸಿಕೊಂಡು ತಮ್ಮ ವೈಫಲ್ಯ ಮುಚ್ಚಿಕೊಳ್ಳುವ ಕುತಂತ್ರ. ಷಡ್ಯಂತ್ರ ಮಾಡುವಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ ಎಂದು ಕಿಡಿಕಾರಿದರು.

ಸರ್ಕಾರಕ್ಕೆ ರೈತರ ಬಗ್ಗೆ, ಉತ್ತರ ಕರ್ನಾಟಕ ಬಗ್ಗೆ ಕಾಳಜಿ ಇಲ್ಲ. ನೀರಾವರಿ ಯೋಜನೆಗೆ ಹಣ ಒದಗಿಸಲು ಸಮಯವಿಲ್ಲ. ಹಣವಂತೂ ಮೊದಲೇ ಇಲ್ಲ. ಬಿಜೆಪಿ ಮೇಲೆ ಭ್ರಷ್ಟಾಚಾರದ ಸುಳ್ಳು ಆರೋಪ ಹೊರಿಸಿ ಅಧಿಕಾರಕ್ಕೆ ಬಂದು ಹಗರಣಗಳ ಆಗರವಾಗಿ ನಿಂತಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ, ಅಭಿವೃದ್ಧಿಯನ್ನು ಸಹಿಸದ ಕಾಂಗ್ರೆಸ್ ಗೂಬೆ ಕೂರಿಸಿ ಅಧಿಕಾರಕ್ಕೆ ಬರುವ ನೀಚ ಬುದ್ಧಿಯನ್ನು ಮೈಗೂಡಿಸಿಕೊಂಡಿದ್ದು ಬಾಗಲಕೋಟೆಯ ಬುಡಾ, ಆರ್‌ಟಿಒ ಡ್ರೈವಿಂಗ್ ಟ್ರ್ಯಾಕ್, ಮೇಲ್ದರ್ಜೆಗೆ ಏರಿಸಿದ ನಗರಸಭೆ, ಜಿಲ್ಲಾಡಳಿತ ಭವನದ ನವೀಕರಣ ಸೇರಿದಂತೆ ಸಾಲು ಸಾಲು ಬಿಜೆಪಿ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಕಣ್ತುಂಬಿಕೊಳ್ಳಲಿ. ಸುಳ್ಳು ಹರಡುವುದನ್ನು ಬಿಟ್ಟು ಇನ್ನಾದರೂ ಪಾಠ ಕಲಿಯಲಿ. ವೀರಣ್ಣ ಚರಂತಿಮಠರ ಗೆಲುವನ್ನು ತಡೆಯಲು ಸಾಧ್ಯವಿಲ್ಲ ಎಂದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮನ



• **ಬೆಂಗಳೂರು:** ತುಮಕೂರಿನ ಸಿದ್ದಗಂಗಾ ಮಠದಲ್ಲಿ ಬುಧವಾರ (ಏ.1) ಆಯೋಜಿಸಲಾಗಿರುವ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳ 119ನೇ ಜಯಂತೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ರಾತ್ರಿ ಭಾರತೀಯ ವಾಯುಸೇನೆಯ ವಿಶೇಷ ವಿಮಾನದ ಮೂಲಕ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದರು.

ರಾಷ್ಟ್ರಪತಿಗಳನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವ ವಿ. ಸೋಮಣ್ಣ ಸಚಿವ ರಾಮಲಿಂಗರೆಡ್ಡಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಕರ್ನಾಟಕ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ ಸಲೀಮ್, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಜಿ, ಸೇರಿದಂತೆ ಹಿರಿಯ ಅಧಿಕಾರಿಗಳು, ಗಣ್ಯರು ರಾಷ್ಟ್ರಪತಿ ಅವರನ್ನು ಸ್ವಾಗತಿಸಿದರು.

ಸರ್ಕಾರಿ ಕಟ್ಟಡ ಕರ ₹473 ಕೋಟಿ ಬಾಕಿ

ಪುಟ 0 ➡ ಜಿಬಿಎ ವ್ಯಾಪ್ತಿಯಲ್ಲಿರುವ ಎಲ್ಲ ಸರ್ಕಾರಿ ಕಟ್ಟಡಗಳಿಂದ ಪಾಲಿಕೆಗಳಿಗೆ ಒಟ್ಟು 472 ಕೋಟಿ ಸೇವಾ ತೆರಿಗೆ ಬಾಕಿ ಉಳಿಸಿಕೊಂಡಿವೆ ಎಂದು ಆರೋಪಿಸಿದರು.

ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬೇಡ: ಕೇವಲ 50 ಸಾವಿರದಿಂದ 5 ಲಕ್ಷದವರೆಗೆ ತೆರಿಗೆ ಬಾಕಿ ಇರುವ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರ ಆಸ್ತಿಗಳನ್ನು ಹರಾಜು ಹಾಕಲು ಮುಂದಾಗಿರುವ ಪಾಲಿಕೆ ಅಧಿಕಾರಿಗಳ ಧೋರಣೆ ಸರಿಯಲ್ಲ. ಬೃಹತ್ ಟೆಕ್ ಪಾರ್ಕ್‌ಗಳು, ಮಾಲ್‌ಗಳು ಮತ್ತು ಶಿಕ್ಷಣ ಸಂಸ್ಥೆಗಳಿಂದ ತೆರಿಗೆ ವಸೂಲಿ ಮಾಡದ ಅಧಿಕಾರಿಗಳು ಸಾಮಾನ್ಯ ಜನರ ಮೇಲೆ ದರ್ಪ ತೋರುತ್ತಿದ್ದಾರೆ ಎಂದು ರಮೇಶ್ ಕಿಡಿಕಾರಿದರು.

ಬೃಹತ್ ಬಾಕಿ ವಸೂಲಿ ಮಾಡಿ



ಪುಟ 0 ➡ **18 ವರ್ಷಗಳಿಂದ ತೆರಿಗೆ ಕಟ್ಟದ ವಿಧಾನಸೌಧ, ವಿಕಾಸಸೌಧಗಳಿಗೆ ಕನಿಷ್ಠ ಒಂದು ದಿನವಾದರೂ ಬೀಗ ಜಡಿಯುವ ಮೂಲಕ ಕಾನೂನು ಎಲ್ಲರಿಗೂ ಒಂದೇ ಎಂಬುದನ್ನು ಸಾರಿ ಹೇಳಲಿ. ಜಿಬಿಎ ಮುಖ್ಯ ಆಯುಕ್ತರು ಮತ್ತು ಕಂದಾಯ ಇಲಾಖೆಯ ವಿಶೇಷ ಆಯುಕ್ತರು ಈ ಕೂಡಲೇ ಸೇವಾ ತೆರಿಗೆ ಬಾಕಿ ಉಳಿಸಿಕೊಂಡ ಸರ್ಕಾರಿ ಇಲಾಖೆಗಳ ಮುಖ್ಯಸ್ಥರಿಗೆ ಡಿಮ್ಯಾಂಡ್ ನೋಟಿಸ್ ಜಾರಿಗೊಳಿಸಬೇಕು ಎಂದು ಎನ್.ಆರ್. ರಮೇಶ್ ಆಗ್ರಹಿಸಿದರು.**

ಹಿಂದಿನ ಬಿಬಿಎಂಪಿ ಎಂಟು ವಲಯಗಳಲ್ಲಿರುವ ಸರ್ಕಾರಿ ಕಟ್ಟಡಗಳು 2025 ರ ಆರ್ಥಿಕ ವರ್ಷದವರೆಗೆ ಬಾಕಿ ಉಳಿಸಿಕೊಂಡಿರುವ ಸೇವಾ ತೆರಿಗೆಯ ವಲಯವಾರು ವಿವರ

ವಲಯದ ಹೆಸರು	ಬಾಕಿ ಮೊತ್ತ (ಕೋಟಿ ರೂ.ಗಳಲ್ಲಿ)
ಪೂರ್ವ ವಲಯ	246
ಯಲಹಂಕ	67.48
ರಾಜರಾಜೇಶ್ವರಿ ನಗರ	57.52
ಮಹದೇವಪುರ	39.13
ದಕ್ಷಿಣ ವಲಯ	33.70
ಬೊಮ್ಮನಹಳ್ಳಿ	05.68
ದಾಸರಹಳ್ಳಿ	04.17
ಪಶ್ಚಿಮ ವಲಯ	03.61
ದಾಸರಹಳ್ಳಿ	04.17
ಪಶ್ಚಿಮ ವಲಯ	03.61

ಹಿಂದಿ ಮಾತು, ಕಲಿಕೆ ತಪ್ಪಲ್ಲ: ಬಿಎಸ್‌ವೈ

ಪುಟ 0 ➡ **ಬಿಜೆಪಿ ಅಭ್ಯರ್ಥಿಗಳ ಗೆಲುವು ನಿಶ್ಚಿತ:** ಉಪ ಚುನಾವಣೆ ಪ್ರಚಾರಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ಮಂಗಳವಾರ ಮತ್ತು ಬುಧವಾರ ದಾವಣಗೆರೆಯಲ್ಲಿ ಪ್ರಚಾರ ಮಾಡುತ್ತೇನೆ, ಏಪ್ರಿಲ್ 5 ಮತ್ತು 6ರಂದು ಬಾಗಲಕೋಟೆಯಲ್ಲಿ ಚರಂತಿಮಠ ಪರವಾಗಿ ಪ್ರಚಾರಕ್ಕೆ ಹೋಗುತ್ತೇನೆ. ಎರಡೂ ಕಡೆ ದೊಡ್ಡ ಅಂತರದಲ್ಲಿ ನಮ್ಮ ಅಭ್ಯರ್ಥಿಗಳು ಗೆಲ್ಲುತ್ತಾರೆ. ನನಗೆ ನೂರಕ್ಕೆ ನೂರು ವಿಶ್ವಾಸವಿದೆ ಎಂದು ಭವಿಷ್ಯ ನುಡಿದರು.

ಇಡೀ ಸರ್ಕಾರವೇ ಉಪಚುನಾವಣೆ ಪ್ರಚಾರದಲ್ಲಿದೆ. ಸ್ವತಃ ಮುಖ್ಯಮಂತ್ರಿಗಳೇ ನಾಲ್ಕೈದು ದಿನ ಅಲ್ಲಿ ಹೋಗಿ ಕುಳಿತಿದ್ದಾರೆ. ಅದರರ್ಥ ಚುನಾವಣಾ ಸೋಲಿನ ಭಯ ಅವರಿಗೆ ಕಾಡುತ್ತಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಜನ ಕಾಂಗ್ರೆಸ್‌ನವರಿಗೆ ತಕ್ಕ ಪಾಠ ಕಲಿಸಲಿ ಎಂದು ಹೇಳಿದರು.

ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನಹಿತ ಮರೆತು ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಅಜೀರ್ಣವಾಗುವಷ್ಟು ಬಹುಮತ ಕಾಂಗ್ರೆಸ್‌ಗೆ ಈಗಾಗಲೇ ಇದೆ, ಮತ್ತೊಮ್ಮೆ ಚುನಾವಣೆ ಗೆದ್ದರೆ ಅಧಿಕಾರ ಮದದಿಂದ ಇನ್ನೂ ಹೆಚ್ಚು ಭ್ರಷ್ಟಾಚಾರಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಆದ್ದರಿಂದ ಎರಡೂ ಕ್ಷೇತ್ರಗಳ ಮತದಾರರು ಈ ಬಾರಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಬೇಕು. ಬಿಜೆಪಿಯ ಇಬ್ಬರು ಅಭ್ಯರ್ಥಿಗಳನ್ನು ಮತದಾರರು ಗೆಲ್ಲಿಸಿಕೊಡಲಿ ಎಂದು ಮನವಿ ಮಾಡಿದರು.

ಬಿಜೆಪಿ ಪರ ಪ್ರಚಾರಕ್ಕೆ ಹಸಿರು ನಿಶಾನೆ

ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪ್ರಚಾರ ನಡೆಸಲಿರುವ ಹಿನ್ನೆಲೆಯಲ್ಲಿ ಅವರ ಪ್ರಚಾರಕ್ಕೆ ಬಿ.ಎಸ್. ಯಡಿಯೂರಪ್ಪ ಹಸಿರು ನಿಶಾನೆ ತೋರಿದ್ದಾರೆ. ಯಾರೇ ಬಂದರೂ ಪ್ರಚಾರ ನಡೆಸಲು ಅವಕಾಶವಿದೆ. ಅವರು ಪ್ರಚಾರಕ್ಕೆ ಬರಲಿ, ಸ್ವಾಗತ ಮಾಡುತ್ತೇನೆ ಎಂದು ಯಡಿಯೂರಪ್ಪ ಹೇಳಿದರು.

ಸಿಂದಗಿಯಲ್ಲಿ ಬೈಕ್ ಸವಾರ ಸಜೀವ ದಹನ

• **ಸಿಂದಗಿ:** ಸಾರಿಗೆ ಬಸ್ ಹಾಗೂ ಬೈಕ್ ಮುಖಾಮುಖಿ ಡಿಕ್ಕಿಯಾಗಿ ಸ್ಥಳದಲ್ಲಿಯೇ ಸಾರಿಗೆ ಬಸ್ ಧಗಧಗ ಹೊತ್ತಿ ಉರಿದಿದ್ದು, ಬೈಕ್ ಸವಾರ ಸಜೀವ ದಹನಗೊಂಡಿರುವ ಹೃದಯ ವಿದ್ರಾವಕ ಘಟನೆ ಸಿಂದಗಿ ತಾಲೂಕಿನ ಕನ್ನೊಳ್ಳಿ ಟೋಲ್‌ಗೇಟ್ ಬಳಿ ನಡೆದಿದೆ. ಮೃತಪಟ್ಟವನನ್ನು ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಮುಳಸಾವಳಗಿ ಗ್ರಾಮದ ಅಭಿಷೇಕ ಸಾಯಬಗೌಡ ನಾಗರಾಳ ಎಂದು ಗುರುತಿಸಲಾಗಿದೆ. ಸಾರಿಗೆ ಬಸ್ ಹಾಗೂ ಬೈಕ್ ಡಿಕ್ಕಿಯ ರಭಸಕ್ಕೆ ಬೈಕ್ ಟ್ಯಾಂಕಿನ ಪೆಟ್ರೋಲ್ ಚೆಲ್ಲಿ, ಬಸ್‌ಗೆ ಬೆಂಕಿ ತಗುಲಿಕೊಂಡಿದ್ದು, ಬೆಂಕಿ ಬಸ್‌ಗೆ ಆವರಿಸಿಕೊಂಡಿದೆ. ಅದೃಷ್ಟವಶಾತ್ ಪ್ರಯಾಣಿಕರು ಬಚಾವ್ ಆಗಿದ್ದು, ಬಸ್ ಅಡಿ ಸಿಲುಕಿದ್ದ ಬೈಕ್ ಸವಾರ ಸಜೀವ ದಹನಗೊಂಡಿದ್ದಾನೆ. ಸ್ಥಳಕ್ಕೆ ಸಿಂದಗಿ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿ ಬೆಂಕಿ ನಂದಿಸಲು ಯತ್ನಿಸಿದ್ದು, ಸ್ಥಳಕ್ಕೆ ಪೊಲೀಸ್‌ರು ಭೇಟಿ ನೀಡಿ ಪರಿಶೀಲಿಸಿದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು. ಸಿಂದಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.



ಬೆದರಿಸಿ 25 ಲಕ್ಷ ರೂ.ವಂಚನೆ

• **ರಾಮನಗರ:** ಐವರು ಮಹಿಳೆಯರ ಗುಂಪೊಂದು ಚಿತ್ರಮಂದಿರದ ಮಾಲೀಕ ನನ್ನು ಬೆದರಿಸಿ ಬರೋಬ್ಬರಿ 25 ಲಕ್ಷ ರೂಪಾಯಿಯನ್ನು ದೋಚಿರುವ ಘಟನೆ ನಗರದಲ್ಲಿ ಬೆಳಕಿಗೆ ಬಂದಿದೆ. ಲೇಡಿ ಗ್ಯಾಂಗ್ ನಿಂದ ಸುಲಿಗೆಗೆ ಒಳಗಾದ ಅಗ್ರಹಾರ ಬಡಾವಣೆಯ ನಿವಾಸಿಯಾಗಿರುವ 52 ವರ್ಷದ ವ್ಯಕ್ತಿ ಪೊಲೀಸರಿಗೆ ದೂರು ನೀಡಿದ್ದಾರೆ. ಸಂತ್ರಸ್ತ ವ್ಯಕ್ತಿ ನೀಡಿರುವ ದೂರಿನ ಪ್ರಕಾರ, ಆರೇಳು ತಿಂಗಳ ಹಿಂದೆ ರಾಮನಗರದ ಕೋತ್ತೀಪುರದ ಬಳಿ ವಾಸವಿದ್ದ ಆರೋಪಿ ಮಹಿಳೆಯೋರ್ವಳು ಸಿನಿಮಾ ನೋಡುವ ನೆಪದಲ್ಲಿ ತನ್ನ ಥಿಯೇಟರ್‌ಗೆ ಬಂದಿದ್ದಳು. ಬಳಿಕ ತನ್ನನ್ನು ಪರಿಚಯಿಸಿಕೊಂಡು ಮದುವೆಯಾಗಲು ಇಚ್ಛೆ ಇದೆ ಎಂದು ಹೇಳಿದ್ದಳು. ಆದರೆ ತಾನದನ್ನು ನಿರಾಕರಿಸಿದ ನಂತರ, ಆಕೆ ಮತ್ತಿಬ್ಬರು ಮಹಿಳೆಯರೊಂದಿಗೆ ಇನ್ನೊಮ್ಮೆ ಭೇಟಿ ನೀಡಿದ್ದಳು. ಬಳಿಕ ಮಹಿಳೆಯರೆಲ್ಲರೂ ಸೇರಿ ಒಂದಲ್ಲ ಒಂದು ನೆಪದಲ್ಲಿ ತನ್ನನ್ನು ಬೆದರಿಸಿ ಹಣ ಹಾಗೂ ಚಿನ್ನಾಭರಣಗಳನ್ನು ಸುಲಿಗೆ ಮಾಡಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಈ ಸಂಬಂಧ ಐಜೂರು ಠಾಣೆಯಲ್ಲಿ ದೂರು ದಾಖಲಾಗಿದೆ.

ಚಲಿಸುತ್ತಿದ್ದ ಕಾರಿಗೆ ಬೆಂಕಿ

• **ದೇವನಹಳ್ಳಿ:** ಚಲಿಸುತ್ತಿದ್ದ ಕಾರಿನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿರುವ ಪರಿಣಾಮ, ಕಾರು ಸಂಪೂರ್ಣವಾಗಿ ಸುಟ್ಟುಹೋಗಿರುವ ಘಟನೆ ಹೊಸಕೋಟೆ-ದಾಬಸ್‌ಪೇಟೆ ಹೆದ್ದಾರಿಯಲ್ಲಿ ನಡೆದಿದೆ. ನಗರದ ಹೊರವಲಯದಲ್ಲಿರುವ ದಾಬಸ್‌ಪೇಟೆ ಹೆದ್ದಾರಿಯಲ್ಲಿ ಕಾರಿನ ಇಂಜಿನ್‌ನಲ್ಲಿ ಬೆಂಕಿಕಾಣಿಸಿಕೊಂಡಿದೆ. ಸಂಪೂರ್ಣ ಕಾರಿಗೆ ಆವರಿಸಿಕೊಂಡಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ, ಮಾಲೀಕ ಕಾರಿನಿಂದ ಕೆಳಗೆ ಇಳಿದು ಕಾರಿನಲ್ಲಿದ್ದವರನ್ನು ಕೆಳಗೆ ಇಳಿಸಿದ್ದರಿಂದ ಪ್ರಾಣಾಪಾಯ ತಪ್ಪಿಸಿಕೊಂಡಿದ್ದಾರೆ.

ತೃತೀಯಲಿಂಗಿ ಮೇಲೆ ಹಲ್ಲೆ

• **ಮೈಸೂರು:** ವೈಯಕ್ತಿಕ ಖರ್ಚಿಗೆ ಹಣ ನೀಡಲು ನಿರಾಕರಿಸಿದ ಕಾರಣಕ್ಕೆ ತೃತೀಯಲಿಂಗಿಯ ಮೇಲೆ ಯುವಕರ ತಂಡವೊಂದು ತಲ್ವಾರ್ ಮತ್ತು ಚಾಕುವಿನಿಂದ ಭೀಕರವಾಗಿ ಹಲ್ಲೆ ನಡೆಸಿರುವ ಆಘಾತಕಾರಿ ಘಟನೆ ಮೈಸೂರಿನ ಸಾತಗಳ್ಳಿ ಸಮೀಪದ ಅಮೃತ ಬಡಾವಣೆಯಲ್ಲಿ ನಡೆದಿದೆ. ಅಮೃತ ಬಡಾವಣೆ ನಿವಾಸಿಯಾದ ಅನಮ್ ಎಂಬ ತೃತೀಯಲಿಂಗಿಯ ಬಳಿ ಕೆಲವು ಯುವಕರು ತಮ್ಮ ವೈಯಕ್ತಿಕ ಖರ್ಚಿಗೆ ಹಣ ನೀಡುವಂತೆ ಒತ್ತಾಯಿಸಿದ್ದಾರೆ. ಅನಮ್ ಹಣ ನೀಡಲು ನಿರಾಕರಿಸಿದಾಗ ಯುವಕರು ಗಲಾಟೆ ಆರಂಭಿಸಿದ್ದಾರೆ. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಕಂಡು ಅನಮ್ ತನ್ನ ಸ್ನೇಹಿತೆ ಪಾರಿ ಎಂಬಾಕೆಗೆ ದೂರವಾಣಿ ಕರೆ ಮಾಡಿ, ಸ್ಥಳಕ್ಕೆ ಬರಲು ತಿಳಿಸಿದ್ದಾಳೆ. ಗೌಸಿಯಾನಗರದ ನಿವಾಸಿಯಾದ ಪಾರಿ ಸ್ಥಳಕ್ಕೆ ಬರುತ್ತಿದ್ದಂತೆಯೇ, ಆಕ್ರೋಶಗೊಂಡಿದ್ದ ಯುವಕರು ತಲ್ವಾರ್ ಮತ್ತು ಚಾಕುವಿನಿಂದ ಹಲ್ಲೆ ನಡೆಸಿದ್ದಾರೆ. ಈ ವೇಳೆ ಪಾರಿ ಅವರ ಮುಖಕ್ಕೆ ಚಾಕುವಿನಿಂದ ಇರಿದು ತೀವ್ರವಾಗಿ ಗಾಯಗೊಳಿಸಲಾಗಿದೆ. ರಕ್ಷಣೆ ಬಂದ ಪಾರಿಗೂ ಗಂಭೀರವಾಗಿ ಗಾಯವಾಗಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇಬ್ಬರೂ ತೃತೀಯಲಿಂಗಿಯರು ಅಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ.

ಅಹಿಂಸಾ ತತ್ವ ಮರು ಸ್ಥಾಪನೆ ಅತಿ ಅವಶ್ಯ

ಪುಟ 0 ➡ ಪ್ರಾಚೀನ ಮೌಲ್ಯಯುತ ಹಸ್ತಪ್ರತಿಗಳನ್ನು ಸಂರಕ್ಷಿಸಲು ವಿಫಲವಾಗಿರುವ ಹಿಂದಿನ ಸರಕಾರಗಳ ಲೋಪಗಳನ್ನು ನಾವು ಸರಿಪಡಿಸುತ್ತಿದ್ದೇವೆ ಎಂದು ಹೇಳಿದರು.

ಭಾರತದಲ್ಲಿ ಮಾತ್ರ ಕಾರ್ಯಸಾಧ್ಯ: ವೇದಗಳು, ಪುರಾಣಗಳು, ಆಯುರ್ವೇದ, ಯೋಗ ಮತ್ತಿತರ ಸೈದ್ಧಾಂತಿಕ ವಿಚಾರಧಾರೆಸಹಿತ ಪರಂಪರೆ, ಸಂಪ್ರದಾಯಗಳನ್ನು ಒಗ್ಗೂಡಿಸಿರುವ ಮ್ಯೂಸಿಯಂ, ಭಾರತದ ವೈವಿಧ್ಯತೆ ಮತ್ತು ಏಕತೆಗಳ ಅತ್ಯುಚ್ಚ ಬಲವನ್ನು ಪ್ರತಿಫಲಿಸಿದೆ. ಸಾಮ್ರಾಟ್ ಸಂಪ್ರತಿ ಸಿದ್ಧಾಂತ ಮತ್ತು ಆಡಳಿತ ನಡುವಣ ಸಂಬಂಧವನ್ನು ಪ್ರತಿನಿಧಿಸಿದ್ದಾರೆ. ಸಾಮ್ರಾಟ್ ಸಂಪ್ರತಿ ಚಾರಿತ್ರಿಕ ದೊರೆಯ ಹೆಸರಷ್ಟೇ ಅಲ್ಲ, ಭಾರತದ ಸಿದ್ಧಾಂತವನ್ನು ಅದರ ಅನುಷ್ಠಾನದೊಂದಿಗೆ ಜೋಡಿಸುವ ಸೇತುವಾಗಿದ್ದಾರೆಂದು ಪ್ರಧಾನಿ ಮೋದಿ ಬಣ್ಣಿಸಿದರು.

ವಿದೇಶಿ ದಾಳಿಕೋರರಿಂದ ಜ್ಞಾನ ಭಂಡಾರ ನಾಶ: ಸಂಪ್ರತಿ ಮಹಾರಾಜರ ದಂತಕಥೆಯನ್ನು ಈ ಮ್ಯೂಸಿಯಂ ಸಂರಕ್ಷಿಸುವುದು ಮಾತ್ರವಲ್ಲ, ಹೆಜ್ಜೆ ಹೆಜ್ಜೆಗೂ ಭಾರತದ ಅಸ್ಮಿತೆಯನ್ನು ಎತ್ತಿಹಿಡಿಯಲಿದೆ. ಮ್ಯೂಸಿಯಂನ ಏಳು ಗ್ಯಾಲರಿಗಳು ಭಾರತದ ವೈವಿಧ್ಯತೆ ಮತ್ತು ಸಾಂಸ್ಕೃತಿಕ ಸಂಪನ್ನತೆಯನ್ನು ಎತ್ತಿಹಿಡಿಯಲಿವೆ ಎಂದು ಸಾರಿದ ಪ್ರಧಾನಿ, ತಕ್ಷಶಿಲೆ ಮತ್ತು ನಳಂದಾದಂತಹ ನಮ್ಮ ಅದೆಷ್ಟೋ ಪ್ರಾಚೀನ ಜ್ಞಾನ ಭಂಡಾರ ಕೇಂದ್ರಗಳನ್ನು ಗತಕಾಲದಲ್ಲಿ ವಿದೇಶಿ ದಾಳಿಕೋರರು ನಾಶಪಡಿಸಿದ ಪರಿಣಾಮ, ಭಾರತಕ್ಕೆ ಅಪಾರ ಅಮೂಲ್ಯ ಜ್ಞಾನ ಸಂಪತ್ತು ನಷ್ಟವಾಗಿದೆ. ದಾಳಿಕೋರರು ಅಮೂಲ್ಯ ಹಸ್ತಪ್ರತಿಗಳನ್ನು ಸುಟ್ಟುಹಾಕಿದ್ದರಿಂದ ಮಾನವೀಯತೆಯ ಯಥೇಚ್ಛ ಪರಂಪರೆ ಕೈತಪ್ಪಿಹೋಗಿದೆ ಎಂದು ಬೇಗುದಿ ವ್ಯಕ್ತಪಡಿಸಿದರು.

ರಾಷ್ಟ್ರೀಯ ಪ್ರಾಧಾನ್ಯತೆ ನೀಡದ ಕಾಂಗ್ರೆಸ್ ಸರಕಾರ: ನಂತರದ ವರ್ಷಗಳಲ್ಲಿ , ಅಳಿದುಳಿದ ಹಸ್ತಪ್ರತಿಗಳನ್ನು ಜನರು ಒಂದು ತಲೆಮಾರಿನಿಂದ ಇನ್ನೊಂದಕ್ಕೆ ತಲುಪಿಸುವ ಮುಖೇನ ಇವುಗಳನ್ನು ಸಂರಕ್ಷಿಸಿದರು. ಸ್ವಾತಂತ್ರ್ಯಾನಂತರದಲ್ಲಿ ಹಿಂದಿನ ಸರಕಾರಗಳು ಜ್ಞಾನಭಂಡಾರಯುಕ್ತ ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಿಸಲು ಮುಂದಾಗಲಿಲ್ಲ. ಸ್ವಾತಂತ್ರ್ಯಾನಂತರದಲ್ಲಿ ಇವಕ್ಕೆ ರಾಷ್ಟ್ರೀಯ ಪ್ರಾಧಾನ್ಯತೆ ಕೊಡಬೇಕಿತ್ತು. ದುರದೃಷ್ಟವಶಾತ್ ವಸಾಹತುಶಾಹಿ ಚಿಂತನೆಯಿಂದಾಗಿ ಈ ಮಹತ್ವದ ವಿಚಾರಕ್ಕೆ ಪ್ರಾಧಾನ್ಯತೆ ಸಿಗಲೇ ಇಲ್ಲ ಎಂದು ಪ್ರಧಾನಿ 2014ರ ಮುನ್ನ ದೇಶವಾಳಿದ್ದ ಕಾಂಗ್ರೆಸ್ ನೇತೃತ್ವದ ಸರಕಾರಗಳನ್ನು ತರಾಟೆಗೆತ್ತಿಕೊಂಡರು.

ಸೆಮಿಕಂಡಕ್ಟರ್ ಜೋಡಣಾ ಸೌಲಭ್ಯ ಉದ್ಘಾಟನೆ: ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಸನಂದ್‌ನಲ್ಲಿ ಕೇನ್ಸ್ ಸೆಮಿಕಾನ್‌ನ ಹೊರಗುತ್ತಿಗೆ ಸೆಮಿಕಂಡಕ್ಟರ್ ಜೋಡಣೆ ಮತ್ತು ಪರೀಕ್ಷಾ ಸೌಲಭ್ಯವನ್ನು ಉದ್ಘಾಟಿಸಿದರು. ಜಾಗತಿಕ ಮಾರುಕಟ್ಟೆಯಲ್ಲಿ ವಿಶ್ವಾಸಾರ್ಹ ಸೆಮಿಕಂಡಕ್ಟರ್ ಪೂರೈಕೆದಾರನಾಗಿ ಭಾರತವು ತನ್ನ ಪಾತ್ರವನ್ನು ಬಲಪಡಿಸುತ್ತಿದೆ ಎಂದು ಹೇಳಿದರು. ಈ ಸೌಲಭ್ಯದ ಉದ್ಘಾಟನೆಯು ಸ್ವಾವಲಂಬನೆ ಕಡೆಗೆ ಭಾರತದ ಪ್ರಯತ್ನವನ್ನು ಬಲಪಡಿಸುತ್ತದೆ.

ಇದು ದೃಢವಾದ ಅರೆವಾಹಕ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ಒಂದು ಹೆಗ್ಗುರುತು ಹೆಜ್ಜೆಯಾಗಿದೆ ಎಂದು ಮೋದಿ ಹೇಳಿದರು. ಪ್ಯಾಕ್ಸ್ ಸಿಲಿಕಾ ಯೋಜನೆಗೆ ಸೇರುವ ಭಾರತದ ನಿರ್ಧಾರವು ನಿರ್ಣಾಯಕ ಖನಿಜಗಳ ಪೂರೈಕೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ ಎಂದು ಮೋದಿ ಹೇಳಿದರು.



ಕನ್ನಡದ ಸಾಹಿತಿ ಅಮರೇಶ ನುಗಡೋಣಿ ಅವರ ದಡ ಸೇರಿಸು ತಂದೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದ್ದು, ಮಂಗಳವಾರ ಹೊಸದಿಲ್ಲಿಯ ಕಮಾನಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ವೀಕರಿಸಿದರು.

ಜನರಿಂದ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಪಾಠ: ಯಡಿಯೂರಪ್ಪ

ದಾವಣಗೆರೆ: ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮತ್ತು ಆಡಳಿತ ವೈಫಲ್ಯಗಳಿಂದ ಬೇಸತ್ತಿರುವ ಜನರು ಉಪಚುನಾವಣೆಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಅಭಿವೃದ್ಧಿ ಬಗ್ಗೆ ಗಮನವಿಲ್ಲ. ಲೂಟಿ ಹೊಡೆಯುವುದೇ ಸರ್ಕಾರದ ಸಾಧನೆ ಆಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಸಾವಿರಾರು ಕೋಟಿ ರೂಪಾಯಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗಿದೆ. ಇದರಿಂದ ದಲಿತ ಸಮುದಾಯಕ್ಕೆ ಅನ್ಯಾಯವಾಗಿದೆ. ಬಿಜೆಪಿ ಜಾರಿಗೆ ತಂದಿದ್ದ ಕಿಸಾನ್ ಸಮ್ಮಾನ್ ಯೋಜನೆಯನ್ನು ಸ್ಥಗಿತಗೊಳಿಸುವ ಮೂಲಕ ರೈತರಿಗೂ ದ್ರೋಹ ಎಸಗಿದೆ ಎಂದು ದೂರಿದರು. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭಾರಿ ಹಗರಣ ನಡೆದಿದ್ದು, ಹಣವನ್ನು ಬೇರೆ ರಾಜ್ಯದ ಚುನಾವಣೆಗೆ ಬಳಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವರೊಬ್ಬರು ರಾಜೀನಾಮೆ ಕೂಡ ನೀಡಿದ್ದಾರೆ. ಇದೆಲ್ಲದರ ಹಿನ್ನೆಲೆಯಲ್ಲಿ ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಲಿದ್ದಾರೆ ಎಂದರು.

ದಲಿತ ಸಮುದಾಯಕ್ಕೆ ಕಾಂಗ್ರೆಸ್ ಸರ್ಕಾರ ಅನ್ಯಾಯ: 2000 ರೂಪಾಯಿ ಗೃಹಲಕ್ಷ್ಮೀ ಹಣ ಹಾಕಿ, ಸಿಕ್ಕ ಸಿಕ್ಕ ವಸ್ತುಗಳ ದರ ಏರಿಕೆ ಮಾಡಲಾಗಿದೆ. 39 ಸಾವಿರ ಕೋಟಿ ಎಸ್‌ಸಿಪಿ ಟಿಎಸ್‌ಪಿ ಹಣ ಗ್ಯಾರಂಟಿ ಯೋಜನೆಗೆ ಅಕ್ರಮವಾಗಿ ವರ್ಗಾವಣೆ ಅಂತ ಬಿಎಸ್‌ವೈ ಆರೋಪಿಸಿದ್ರು. ದಲಿತ ಸಮುದಾಯಕ್ಕೆ ಕಾಂಗ್ರೆಸ್ ಸರ್ಕಾರ ದೊಡ್ಡ ಅನ್ಯಾಯ ಮಾಡಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ತೆಲಂಗಾಣ ಚುನಾವಣೆಗೆ ಬಳಕೆ ಮಾಡಿದೆ ಅಂತ ಇದೇ ಸಂದರ್ಭದಲ್ಲಿ ಬಿಎಸ್‌ವೈ ಆರೋಪಿಸಿದರು.



ಬೇಲೂರು ಶ್ರೀ ಚನ್ನಕೇಶವ ಸ್ವಾಮಿಯವರ ಬ್ರಹ್ಮ ರಥೋತ್ಸವವು ಮಂಗಳವಾರ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಲೋಕಾಯುಕ್ತ ನ್ಯಾಯಾಲಯ ಮಹತ್ವದ ತೀರ್ಪು

ಮಾಜಿ ಎಂಡಿ ಎ. ಮುನಿಯಪ್ಪ ದೋಷಿ: ಮೂರು ವರ್ಷ ಶಿಕ್ಷೆ

ಬೆಂಗಳೂರು: ಆದಾಯಕ್ಕೂ ಮೀರಿದ ಆಸ್ತಿಗಳಿಕೆ ಪ್ರಕರಣದಲ್ಲಿ ಕರ್ನಾಟಕ ತಾಂತ್ರಿಕ ಶಿಕ್ಷಣ ಪರಿಷತ್‌ನ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಎ. ಮುನಿಯಪ್ಪ ಅವರು ದೋಷಿ ಎಂದು ಕರ್ನಾಟಕ ಲೋಕಾಯುಕ್ತ ನ್ಯಾಯಾಲಯವು ಮಹತ್ವದ ತೀರ್ಪು ನೀಡಿದೆ.



ಸುಮಾರು 12 ವರ್ಷಗಳ ಸುದೀರ್ಘ ಕಾನೂನು ಹೋರಾಟದ ನಂತರ ಈ ಶಿಕ್ಷೆ ಪ್ರಕಟವಾಗಿದ್ದು, ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಇದೊಂದು ಪ್ರಮುಖ ಮೈಲಿಗಲ್ಲಾಗಿದೆ. ಸದ್ಯ ಬೆಂಗಳೂರಿನ ಬಸವ ಭವನದ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಎ. ಮುನಿಯಪ್ಪ ವಿರುದ್ಧ 2014ರಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮ ಆಸ್ತಿ ಗಳಿಕೆಯ ಆರೋಪದ ಮೇಲೆ ಪ್ರಕರಣ ದಾಖಲಾಗಿತ್ತು.

ಲೋಕಾಯುಕ್ತ ಪೊಲೀಸರು ನಡೆಸಿದ ತನಿಖೆಯಲ್ಲಿ, ಮುನಿಯಪ್ಪ ಅವರು ತಮ್ಮ ಅಧಿಕೃತ ಆದಾಯದ ಮೂಲಗಳಿಗಿಂತ ಕೋಟ್ಯಾಂತರ ರೂ. ಮೌಲ್ಯದ ಅಕ್ರಮ ಆಸ್ತಿಯನ್ನು ಸಂಪಾದಿಸಿರುವುದು ಸಾಕ್ಷ್ಯಾಧಾರಗಳ ಸಮೇತ ಸಾಬೀತಾಗಿತ್ತು. ಪ್ರಕರಣದ ಸಮಗ್ರ ವಿಚಾರಣೆ ನಡೆಸಿದ ನ್ಯಾಯಾಲಯವು ಆರೋಪಿಗೆ 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 4.5 ಕೋಟಿ ರೂ.ಗಳ ಬೃಹತ್ ದಂಡವನ್ನು ವಿಧಿಸಿದೆ. ಒಂದು ವೇಳೆ ಈ ದಂಡದ ಮೊತ್ತವನ್ನು ಪಾವತಿಸಲು ವಿಫಲವಾದರೆ, ಆರೋಪಿಯು ಹೆಚ್ಚುವರಿಯಾಗಿ ಆರು ತಿಂಗಳ ಕಾಲ ಜೈಲು ಶಿಕ್ಷೆ ಅನುಭವಿಸಬೇಕೆಂದು ನ್ಯಾಯಾಧೀಶರು ತೀರ್ಪಿನಲ್ಲಿ ಸ್ಪಷ್ಟಪಡಿಸಿದ್ದಾರೆ. 2014ರಲ್ಲಿ ಆರಂಭವಾದ ಈ ಕಾನೂನು ಪ್ರಕ್ರಿಯೆಯು 2026ರಲ್ಲಿ ಅಂತಿಮವಾಗಿ ಶಿಕ್ಷೆಯ ಮುದ್ರೆಯೊಂದಿಗೆ ಅಂತ್ಯಗೊಂಡಿದೆ.

ಕಿರುಸುದ್ದಿ

ಪತ್ರಕರ್ತೆ ನವ್ಯಜ್ಯೋತಿಗೆ ಕೆಯುಡಬ್ಲ್ಯೂಜೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಹೊಸದಿಗಂತ ಪತ್ರಿಕೆಯ ವಿಶೇಷ ಪ್ರತಿನಿಧಿ ನೆಲ್ಲಿಗೆ ನವ್ಯಜ್ಯೋತಿ ಅವರು, ಪತ್ರಕರ್ತ ದಿ. ಗುರುಲಿಂಗಸ್ವಾಮಿ ಹೊಳಿಮಠ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೀದರ್‌ನಲ್ಲಿ ಏ.11 ಮತ್ತು 12 ರಂದು ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಜನರ ಮೇಲೆ ಸಾಲದ ಹೊರೆ ಏರಿಸಿದ ಸರ್ಕಾರ

ದಾವಣಗೆರೆ: ರಾಜ್ಯದಲ್ಲಿರುವುದು ಕಾಂಗ್ರೆಸ್ಸಿನ ಫೋನ್ ಪೇ ಲಂಚದ ಸರ್ಕಾರ. ರಾಜ್ಯದ ಜನರ ಮೇಲೆ ಸಾಲದ ಹೊರೆ ಏರಿಸುವ ಮೂಲಕ ಸಿಎಂ ಸಿದ್ದರಾಮಯ್ಯನವರು ಸಾಲರಾಮಯ್ಯ ಆಗಿದ್ದಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದರು. ಮಂಗಳವಾರ ನಗರದ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಪ್ರಮುಖರ ಜೊತೆಗೂಡಿ ಮಾತನಾಡಿದ ಅವರು, ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಭಿವೃದ್ಧಿಯನ್ನು ಮರೆತು ಕೇವಲ ಲಂಚ ಪಡೆಯುವುದರಲ್ಲಿ ಮಗ್ನವಾಗಿದೆ. ಲಂಚದ ಹಣವನ್ನು ಫೋನ್ ಪೇ ಮೂಲಕವೇ ಹಾಕಿಸಿಕೊಳ್ಳುತ್ತಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದ ಈ ಮೂರು ವರ್ಷಗಳ ಅವಧಿಯಲ್ಲಿ ವಿಪರೀತ ಸಾಲ ಮಾಡುವ ಮೂಲಕ ಆರ್ಥಿಕ ಶಿಸ್ತನ್ನು ಉಲ್ಲಂಘಿಸಿದೆ. ಪ್ರತಿಯೊಬ್ಬ ನಾಗರಿಕರ ಮೇಲೆ 1.12 ಲಕ್ಷ ರೂ. ಸಾಲ ಹೊರಿಸಿದೆ ಎಂದರು. ಹಿಂದಿ ಹೇರಿಕೆ ಬಗ್ಗೆ ಮಾತನಾಡುವ ಕಾಂಗ್ರೆಸ್ ನಾಯಕರು ಇತಿಹಾಸ ನೆನಪಿಸಿಕೊಳ್ಳಬೇಕು. ದೇಶದಲ್ಲಿ ತ್ರಿಭಾಷಾ ಸೂತ್ರ ತಂದವರು ಮಹಾತ್ಮ ಗಾಂಧೀಜಿ, ನೆಹರು ಮತ್ತು ಇಂದಿರಾ ಗಾಂಧಿ. ದೇಶದ ಎಲ್ಲಾ ಜಿಲ್ಲೆ ಮತ್ತು ನಗರಗಳಲ್ಲಿ ಹಿಂದಿಯನ್ನು ತಲುಪಿಸಿದವರು ಕಾಂಗ್ರೆಸ್ಸಿಗರೇ ಹೊರತು ಬಿಜೆಪಿಯಲ್ಲ ಎಂದು ಅವರು ವಾಗ್ದಾಳಿ ನಡೆಸಿದರು.

ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿ: ಸುನೀಲ್ ಕುಮಾರ್

ದಾವಣಗೆರೆ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗಳು ರಾಜ್ಯ ರಾಜಕೀಯದಲ್ಲಿ ಮಹತ್ವದ ತಿರುವು ತರಲಿದ್ದು, ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಮುಂಬರುವ ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದು ಶಾಸಕ ವಿ.ಸುನೀಲ್ ಕುಮಾರ್ ಹೇಳಿದರು.



ನಗರದಲ್ಲಿ ಮಂಗಳವಾರ ನಡೆದ ಪಕ್ಷದ ಪ್ರಮುಖರು ಮತ್ತು ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಉಪಚುನಾವಣೆಗಳು ಕೇವಲ ಕ್ಷೇತ್ರ ಮಟ್ಟಕ್ಕೆ ಸೀಮಿತವಾಗಿಲ್ಲ. ರಾಜ್ಯದ ರಾಜಕೀಯ ಭವಿಷ್ಯವನ್ನು ನಿರ್ಧರಿಸುವಂತಿವೆ. ಉಪಚುನಾವಣೆಯ ಕಾವು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಕಾರ್ಯಕರ್ತರು ನಿರ್ಮಿಸಿರುವ ಉತ್ಸಾಹಭರಿತ ವಾತಾವರಣವು ಬಿಜೆಪಿ ಗೆಲುವಿನ ಸೂಚಕವಾಗಿದೆ. ರಾಜ್ಯದ ಎಲ್ಲೆಡೆಯಿಂದ ಕಾರ್ಯಕರ್ತರು ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಬೇಕು ಎಂಬ ದೃಢ ಸಂಕಲ್ಪದೊಂದಿಗೆ ಕೆಲಸ ಮಾಡುತ್ತಿದ್ದಾರೆ ಎಂದರು.

ಪ್ರಚಾರದಲ್ಲಿ ಒಳಮೀಸಲಾತಿ ವಿಚಾರ | ಸಿಎಂ ಸಿದ್ದರಾಮಯ್ಯ ಹೇಳಿಕೆ

ಯಾರಿಗೂ ಅನ್ಯಾಯ ಮಾಡಲ್ಲ

ಬಾಗಲಕೋಟೆ: ಒಳ ಮೀಸಲಾತಿ ವಿಚಾರದಲ್ಲಿ ಬಂಜಾರ ಸಮುದಾಯವಾಗಲಿ, ಎಡಗೈ ಮತ್ತು ಬಲಗೈ ಸಮುದಾಯ ಸೇರಿದಂತೆ ಸಣ್ಣ ಸಮುದಾಯಕ್ಕೂ ಕೂಡ ಯಾವುದೇ ಅನ್ಯಾಯ ಮಾಡುವುದಿಲ್ಲ. ಕಾಂಗ್ರೆಸ್ ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟ ಪಕ್ಷವಾಗಿದೆ. ಯಾರೂ ಕೂಡ ಒಳಮೀಸಲಾತಿ ವಿಚಾರದಲ್ಲಿ ಆತಂಕ ಪಡುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಬಾಗಲಕೋಟೆ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ ಪ್ರಚಾರ ನಡೆಸಿ, ನೀಲಾನಗರದಲ್ಲಿ ಬಹಿರಂಗ ಪ್ರಚಾರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಬಂಜಾರ ಸಮುದಾಯವನ್ನು ಎಸ್ಸಿ ವರ್ಗಕ್ಕೆ ಸೇರಿಸಿದ್ದು ಕಾಂಗ್ರೆಸ್. ಹೀಗಾಗಿ ಒಳಮೀಸಲಾತಿ ವಿಚಾರದಲ್ಲಿಯೂ ಕೂಡ ಅನ್ಯಾಯವಾಗದ ರೀತಿ ಸರ್ಕಾರ ನಡೆದುಕೊಳ್ಳುತ್ತದೆ ಎಂದು ಭರವಸೆ ನೀಡಿದರು.

ನಮ್ಮದು ಪ್ರಾತಿನಿಧಿತ್ವವಾದ ಅಭಿವೃದ್ಧಿಪರ ಸರ್ಕಾರವಾಗಿದೆ. ಬಿಜೆಪಿಯವರು ಗ್ಯಾರಂಟಿ ಯೋಜನೆಯನ್ನು ವಿರೋಧಿಸಿದ್ದಾರೆ. ಬಡವರು, ಮಹಿಳೆಯರು ಬಗ್ಗೆ ಬಿಜೆಪಿಯವರಿಗೆ ಕಾಳಜಿ ಇಲ್ಲ ಎಂದು ಹೇಳಿದರು. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ಮಹಾತ್ಮ ಗಾಂಧಿಜಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಪ್ರಮುಖ ಪಾತ್ರ ವಹಿಸಿದೆ. ಸ್ವಾತಂತ್ರ್ಯ ತಂದುಕೊಟ್ಟದ್ದೇ ಕಾಂಗ್ರೆಸ್ ಪಕ್ಷ. ಬ್ರಿಟಿಷರ ಜತೆಗೆ ಬಿಜೆಪಿಯವರು ಸೇರಿಕೊಂಡಿದ್ದರು. ಬಿಜೆಪಿಯವರಿಗೆ ಬಡವರ, ಮಹಿಳೆಯರ ಕಷ್ಟ ಗೊತ್ತಿಲ್ಲ. ಅದಕ್ಕೆ ಅವರು ಅಧಿಕಾರದಲ್ಲಿದ್ದಾಗ ಅಭಿವೃದ್ಧಿ ಕಾರ್ಯ ಮಾಡಲಿಲ್ಲ. ದಲಿತರಿಗೆ ಮೀಸಲಾತಿ ತಂದವರು ನಾವು. ಬಿಜೆಪಿ ತರಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದು ಕಾಂಗ್ರೆಸ್ ಪಕ್ಷ. ಬ್ರಿಟಿಷರ ಜೊತೆ ಸೇರಿದ್ದ ಬಿಜೆಪಿಯವರು ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಭಾಗಿಯಾಗಲೇ ಇಲ್ಲ. 1925ರಲ್ಲೇ ಆರ್‌ಎಸ್‌ಎಸ್ ಸ್ಥಾಪನೆ ಆಗಿದ್ದರೂ ಬ್ರಿಟಿಷರ ವಿರುದ್ಧ ಆರ್‌ಎಸ್‌ಎಸ್ ಧ್ವನಿ ಎತ್ತಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ. ಇದು ಕಾಂಗ್ರೆಸ್‌ನ ಹೋರಾಟದ ಪರಂಪರೆ ಮತ್ತು ಕಾಂಗ್ರೆಸ್ ಪಕ್ಷದ ಇತಿಹಾಸ ಎಂದರು.

ಜನರಿಗೆ ಸ್ಪಂದಿಸದೆ, ಈಗ ನಮ್ಮ ಗ್ಯಾರಂಟಿಗಳ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಮತ ಕೇಳುವ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದ ಅವರು, ಎಚ್.ವೈ.ಮೇಟಿ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಉಮೇಶ ಮೇಟಿ ಅವರನ್ನು ಗೆಲ್ಲಿಸಲೇಬೇಕು ಎಂದು ಕರೆ ನೀಡಿದರು. ಸಚಿವ ಶಿವಾನಂದ ಪಾಟೀಲ, ಆರ್.ಬಿ.ತಿಮ್ಮಾಪುರ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಸಂಯುಕ್ತ ಪಾಟೀಲ, ಮಾಜಿ ಸಚಿವ ಎಸ್.ಆರ್.ಪಾಟೀಲ, ಅಜಯಕುಮಾರ ಸರನಾಯಕ ಇದ್ದರು.

ಬಿಜೆಪಿಯವರಿಗೆ ಸೋಲಿನ ಭೀತಿ: ಸಿಎಂ

ಬಾಗಲಕೋಟೆ: ಬಿಜೆಪಿಯವರು ಸೋಲಿನ ಭೀತಿಯಿಂದ ನಮ್ಮ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ. ನಿಧನ ಹೊಂದಿದ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡುವುದು ಕಾಂಗ್ರೆಸ್ ಪಕ್ಷದ ಪ್ರತೀತಿಯಾಗಿದ್ದು, ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ನಿಧನ ಹೊಂದಿದ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸಿಎಂ ಸ್ಥಾನದ ಬಗ್ಗೆ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿಯವರು ನೀಡಿರುವ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿ, ಪಕ್ಷದ ಹೈಕಮಾಂಡ್‌ನ ನಿರ್ಧಾರಗಳಿಗೆ ಬದ್ಧನಾಗಿರುತ್ತೇನೆ. ಬಿಜೆಪಿಯವರ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನವರೇ ಆಗಿದ್ದ ಹೈಲ್ಯಾನ್ ಸಾದಿಕ್ ಅವರ ಮನವೊಲಿಸಿ ಕಣದಿಂದ ಹಿಂದೆ ಸರಿಯುವಂತೆ ಮಾಡಲಾಗಿದೆ. ಸಚಿವ ಜಮೀರ್ ಅಹ್ಮದ್ ಅವರು ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಜನರ ಮೇಲೆ ಬೆಲೆ ಏರಿಕೆ ಯುದ್ಧ: ಡಿಕೆಶಿ

ಬೆಂಗಳೂರು: ಸಾಮಾನ್ಯ ಜನರ ಮೇಲೆ ಕೇಂದ್ರ ಸರ್ಕಾರ ಬೆಲೆ ಏರಿಕೆ ಯುದ್ಧ ಮಾಡುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಟೀಕಿಸಿದ್ದಾರೆ.



ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಯುದ್ಧಗಳ ನೆಪ, ಕೇಂದ್ರದ ತಪ್ಪು ನಿರ್ಧಾರ, ನೀತಿಗಳಿಂದಾಗಿ ಇಂದು ದೇಶದ ಜನ ಬೆಲೆ ಏರಿಕೆಯಿಂದ ನರಳುತ್ತಿದ್ದಾರೆ ಎಂದರು. ಪಂಚರಾಜ್ಯ ಚುನಾವಣೆ ನಡೆಯುತ್ತಿದೆ. ಜನರು ಪರದಾಡುತ್ತಿದ್ದು, ಹೋಟೆಲ್‌ಗಳು ಬಂದ್ ಆಗುತ್ತಿವೆ. ಜನ ವಿದ್ಯುತ್ ಒಲೆ ಬಳಸುವ ಅನಿವಾರ್ಯತೆ ಎದುರಾಗಿದೆ. ಕೆಲ ಹದಿನೈದು ದಿನಗಳಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಶೇ.10ರಷ್ಟು ಏರಿಕೆಯಾಗಿದೆ. ಕೇಂದ್ರ ಸರ್ಕಾರ ಜನರಿಗೆ ಸೌದೆ ಭಾಗ್ಯ ನೀಡಿದೆ ಎಂದು ಲೇವಡಿ ಮಾಡಿದರು.

ಕೇಂದ್ರ ಬಿಜೆಪಿ ಸರ್ಕಾರ ಜನರಿಗೆ ಉಜ್ವಲ ಯೋಜನೆ ಬದಲಾಗಿ ಸೌದೆ ಒಲೆ ಯೋಜನೆ ನೀಡಿದೆ. ಅಚ್ಛೇದಿನ ಬಂದಿದೆಯಾ? ಈಗ ಇರುವುದನ್ನು ಕಚ್ಚಾ ದಿನ ಎಂದು ಹೇಳಬೇಕಾ? ಎಂದು ಬಿಜೆಪಿ ನಾಯಕರನ್ನು ಕೇಳಬಯಸುತ್ತೇನೆ ಎಂದು ವ್ಯಂಗ್ಯ ನುಡಿದರು. ಆಟೋ ಅನಿಲ, ಸಿಲಿಂಡರ್ ಬೆಲೆ ಏರಿಕೆ ಮಾತ್ರವಲ್ಲ, ಟೋಲ್ ಶುಲ್ಕ, ರೈಲ್ವೆ ಟಿಕೆಟ್ ದರ ಎಲ್ಲವೂ ಹೆಚ್ಚಾಗಿದೆ. ಕೆಲವು ಅನಿವಾರ್ಯ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಬೆಲೆ ಏರಿಕೆ ತೀರ್ಮಾನ ಮಾಡಿದಾಗ ಯಾವ ರೀತಿ ಟೀಕೆ ಟಿಪ್ಪಣಿ ಬಂದಿವೆ ಎಂದು ಎಲ್ಲರಿಗೂ ಗೊತ್ತಿದೆ ಎಂದರು.

> ಇಂದಿನಿಂದ ಕೇಂದ್ರ ಬಿಜೆಪಿ ಸರ್ಕಾರ ಕನ್ನಡಿಗರು ಹಾಗೂ ದೇಶದ ಜನರ ಮೇಲೆ ಬೆಲೆ ಏರಿಕೆ ದಾಳಿ ಮಾಡಲಿದೆ. ಬೆಲೆ ಏರಿಕೆಯು ಜನರ ಪರಿಶ್ರಮದ ಹಣವನ್ನು ವಂಚಿಸಿ, ಲೂಟಿ ಮಾಡಿ, ದೋಚುವ ಸಾಧನವಾಗಿದೆ.
>
> ■ **ರಣದೀಪ್ ಸಿಂಗ್ ಸುರ್ಜೇವಾಲಾ,** ಎಐಸಿಸಿ ಪ್ರಧಾನ ಕಾರ್ಯದರ್ಶಿ

ಜನತೆಗೆ ನೆರವಾಗಲಿ

ನಾವು ಗ್ಯಾರಂಟಿ ನೀಡಿದ ಕಾರಣಕ್ಕೆ ಜನ ಸ್ವಲ್ಪ ಉಸಿರಾಡುತ್ತಿದ್ದಾರೆ. ಇದೇ ರೀತಿ ಕೇಂದ್ರ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಬೇಕು. ಜನಸಾಮಾನ್ಯರ ಬವಣೆಯ ಜೊತೆ ಕೇಂದ್ರ ನಿಲ್ಲುತ್ತಿಲ್ಲ. ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನರಿಗೆ ಕೇಂದ್ರ ಸರ್ಕಾರ ನೆರವಾಗಬೇಕು ಎಂದು ಆಗ್ರಹಿಸುತ್ತೇವೆ ಎಂದರು.

ಆಂಧ್ರ ಪ್ರದೇಶದ ಹಣಕಾಸು ಸಚಿವ ಪಾಯವುಲ ಕೇಶವ ವಿಶ್ವಾಸ

ಟಿಬಿ ಡ್ಯಾಂನಲ್ಲಿ ನೂತನ ಕ್ರಸ್ಟ್‌ಗೇಟ್

ವಿಜಯನಗರ: ತುಂಗಭದ್ರಾ ಜಲಾಶಯದ ಎಲ್ಲ 32 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಮೇ ಅಂತ್ಯದೊಳಗೆ ಮುಕ್ತಾಯವಾಗಿದ್ದು, ಮುಂದಿನ 50 ವರ್ಷಗಳ ವರೆಗೆ ಅಬಾಧಿತ ಎಂದು ಆಂಧ್ರ ಪ್ರದೇಶದ ಹಣಕಾಸು ಸಚಿವ ಪಾಯವುಲ ಕೇಶವ ವಿಶ್ವಾಸ ವ್ಯಕ್ತಪಡಿಸಿದರು.

ಹೊಸಪೇಟೆ ಸಮೀಪದ ತುಂಗಭದ್ರಾ ಅಣೆಕಟ್ಟೆಗೆ ಭೇಟಿ ನೀಡಿದ ಅವರು, ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯವನ್ನು ಪರಿಶೀಲಿಸಿದರು. ಇದೇ ವೇಳೆ ಜಲಾಶಯದಲ್ಲಿ ನಡೆಯುವ ಕ್ರಸ್ಟ್ ಗೇಟ್‌ಗಳ ಅವಳಡಿಕೆ ಹಾಗೂ ದುರಸ್ತಿ ಕಾರ್ಯಗಳ ಬಗ್ಗೆ ತುಂಗಭದ್ರಾ ಬೋರ್ಡ್‌ನ ತಾಂತ್ರಿಕ ತಜ್ಞರು ಸಚಿವರಿಗೆ ಮಾಹಿತಿ ಒದಗಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಪಾಯವುಲ ಕೇಶವ ಅವರು, ತುಂಗಭದ್ರಾ ಜಲಾಶಯ ನಿರ್ಮಾಣಗೊಂಡು ಹಲವು ದಶಕಗಳು ಕಳೆದಿವೆ. 19ನೇ ಕ್ರಸ್ಟ್ ಗೇಟ್ ಕಳಚಿ ಬಿದ್ದ ಬಳಿಕ ಜಲಾಶಯ ಸುರಕ್ಷತಾ ಪ್ರಾಧಿಕಾರದ ತಜ್ಞರ ಸಲಹೆ ಮೇರೆಗೆ ಎಲ್ಲ ಗೇಟ್‌ಗಳನ್ನು ಹೊಸದಾಗಿ ಅಳವಡಿಸಲಾಗುತ್ತಿದೆ. ಮೇ ತಿಂಗಳ ಒಳಗಾಗಿ ಎಲ್ಲ ಕ್ರಸ್ಟ್ ಗೇಟ್‌ಗಳು ಅಳವಡಿಕೆಯಾಗಲಿದೆ. ಅಷ್ಟರೊಳಗೆ ಮುಂಗಾರು ಮಳೆ ಚುರುಕುಗೊಳ್ಳುವ ಬಗ್ಗೆ ಹವಾಮಾನ ಇಲಾಖೆಯೂ ಮುನ್ಸೂಚನೆ ನೀಡಿದ್ದರಿಂದ ಈ ಬಾರಿ ಮುಂಗಾರು ಹಂಗಾಮು ರೈತರಿಗೆ ವರವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಟಿಬಿ ಡ್ಯಾಂ ಮೂರು ರಾಜ್ಯಗಳಿಗೆ ಸಂಬಂಧಿಸಿದ್ದರಿಂದ ಎಲ್ಲ ರಾಜ್ಯಗಳು ತಮ್ಮ ಪಾಲಿನ ಅನುದಾನವನ್ನು ಈಗಾಗಲೇ ಒದಗಿಸಿದೆ. ಮುಂದಿನ ದಿನಗಳಲ್ಲಿ ಅಗತ್ಯವಾದರೆ, ಮತ್ತಷ್ಟು ಅನುದಾನ ನೀಡಲು ಆಂಧ್ರಪ್ರದೇಶ ಸರ್ಕಾರ ಸಿದ್ಧವಾಗಿದೆ. ಅನುದಾನ ವಿನಿಯೋಗ ಹಾಗೂ ತಾಂತ್ರಿಕ ವಿಚಾರಗಳನ್ನು ಟಿಬಿ ಬೋರ್ಡ್ ನಿರ್ಧರಿಸಲಿದೆ. ಇದರಲ್ಲಿ ಯಾವುದೇ ಸರ್ಕಾರದ ಹಸ್ತಕ್ಷೇಪವಿಲ್ಲ. ಈಗ ನಡೆದಿರುವ ನೂತನ ಕ್ರಸ್ಟ್ ಗೇಟ್‌ಗಳ ಅವಳಡಿಕೆ ಹಾಗೂ ಇತರೆ ದುರಸ್ತಿ ಕಾರ್ಯಗಳಿಂದಾಗಿ ಜಲಾಶಯಧ ಆಯಸ್ಸು 50 ವರ್ಷಗಳಷ್ಟು ಹೆಚ್ಚಲಿದೆ ಎಂದು ಅಭಿಪ್ರಾಯಪಟ್ಟರು. ಆಂಧ್ರಪ್ರದೇಶ ಸರ್ಕಾರದ ಮುಖ್ಯ ಸಚೇತಕ ಕಲವಾ ಶ್ರೀನಿವಾಸಲು, ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಓ.ಆರ್.ಕೆರೆಡ್ಡಿ, ಅಧೀಕ್ಷಕ ಅಭಿಯಂತರ ನಾರಾಯಣ ನಾಯಕ್, ಶಾಖಾಧಿಕಾರಿ ಕಿರಣ್ ಇದ್ದರು.

ವಿಪಕ್ಷ ನಾಯಕರ ಹೇಳಿಕೆ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

ಆಯವ್ಯಯ ಪತ್ರವೇ ಸರ್ಕಾರದ ಶ್ವೇತ ಪತ್ರ

ಬೆಂಗಳೂರು: ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿರುವುದು ಆರ್ಥಿಕ ಕ್ಷೇತ್ರದ ಬಗೆಗಿನ ಅವರ ಅಜ್ಞಾನ, ಆಡಳಿತದ ಅನುಭವದ ಕೊರತೆ ಮತ್ತು ರಾಜಕೀಯ ಹತಾಶೆಯನ್ನು ತೋರಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ಕಳೆದ ತಿಂಗಳಷ್ಟೇ ಈ ಆರ್ಥಿಕ ವರ್ಷದ ಆಯವ್ಯಯ ಪತ್ರವನ್ನು ನಾನು ಮಂಡಿಸಿದ್ದೇನೆ, ಅದು ಅಂಕಿ ಅಂಶಗಳ ಕಾಗದದ ಕಂತೆ ಅಲ್ಲ, ರಾಜ್ಯದ 7 ಕೋಟಿ ಕನ್ನಡಿಗರಿಗೆ ಒಪ್ಪಿಸಿರುವ ಪ್ರಾಮಾಣಿಕ ಲೆಕ್ಕ ಪತ್ರ. ಆ ಆಯವ್ಯಯವನ್ನು ವಿಧಾನಮಂಡಲದ ಉಭಯ ಸದನಗಳು ಒಪ್ಪಿಕೊಂಡು ಅಂಗೀಕರಿಸಿವೆ. ಇದೇ ನಮ್ಮ ಶ್ವೇತಪತ್ರ ಎಂದು ಸ್ಪಷ್ಟಪಡಿಸಿದ್ದಾರೆ. ಆಯವ್ಯಯದ ಬಗ್ಗೆ ವಿಧಾನಮಂಡಲದ ಉಭಯ ಸದನಗಳಲ್ಲಿ ಕೂಲಂಕಷವಾಗಿ ಚರ್ಚೆ ನಡೆದಿದೆ. ಇದರ ಬಗ್ಗೆ ಇನ್ನೂ ನಿಮಗೆ ಅನುಮಾನಗಳಿದ್ದರೆ ವಿವರಣೆ ಕೊಡಲು ನಾನು ಸಿದ್ಧನಿದ್ದೇನೆ. ಚುನಾವಣೆಯ ಅಖಾಡದಲ್ಲಿಯೇ ನಿಮ್ಮ ಜೊತೆ ಬಹಿರಂಗ ಚರ್ಚೆಗೂ ನಾನು ಸಿದ್ಧನಿದ್ದೇನೆ. ದಯವಿಟ್ಟು ಕೇವಲ ರಾಜಕೀಯ ಮಾತನಾಡಬೇಕೆಂಬ ಬಾಯಿ ಚಪಲಕ್ಕಾಗಿ ಆಯವ್ಯಯ ಪತ್ರದ ಪಾವಿತ್ರ್ಯವನ್ನು ಹಾಳು ಮಾಡಲು ಹೋಗಬೇಡಿ ಎಂದು ಕುಟುಕಿದ್ದಾರೆ.

ರಾಜ್ಯ ದಿವಾಳಿ ಸ್ಥಿತಿಯಲ್ಲಿದೆ ಎಂಬ ಆರೋಪದ ಹಿಂದೆ ನಮ್ಮ ಸರ್ಕಾರವನ್ನು ರಾಜಕೀಯವಾಗಿ ಎದುರಿಸಲಾಗದ ಬಿಜೆಪಿ ನಾಯಕರ ಅಸಹಾಯಕತೆ, ಹತಾಶೆ ಮತ್ತು ಅಸೂಯೆ ಇದೆ. ಯಾವ ಇಲಾಖೆಯೂ ನೌಕರರಿಗೆ ಸಂಬಳ ನೀಡಲಾಗದ ದಿವಾಳಿ ಸ್ಥಿತಿಯಲ್ಲಿಲ್ಲ. ನಮ್ಮ ಸರ್ಕಾರ ಆರ್ಥಿಕವಾಗಿ ಮಾತ್ರವಲ್ಲ ರಾಜಕೀಯವಾಗಿಯೂ ಸುಭದ್ರವಾಗಿದೆ. ರಾಜ್ಯದ ಜನತೆ ನೆಮ್ಮದಿಯಿಂದ ಇದ್ದಾರೆ ಎಂದಿದ್ದಾರೆ. 2025–26 ರಲ್ಲಿ ದೇಶದ ಜಿಡಿಪಿಯ ಬೆಳವಣಿಗೆ ಶೇ.7.4 ರಷ್ಟಿದ್ದರೆ, ರಾಜ್ಯದ ಜಿಎಸ್‌ಡಿಪಿ ಶೇ.8.1 ರಷ್ಟು ಬೆಳವಣಿಗೆ ದಾಖಲಿಸಿದೆ. ಕರ್ನಾಟಕದ ಜಿಎಸ್‌ಡಿಪಿ ದೇಶದ ಜಿಡಿಪಿ ಬೆಳವಣಿಗೆಗಿಂತ ಹೆಚ್ಚಿರುವುದು ನಮ್ಮ ಸರ್ಕಾರದ ಆರ್ಥಿಕ ಸುಭದ್ರತೆಗೆ ಸಾಕ್ಷಿಯಾಗಿದೆ. ಈ ವರ್ಷ ನಮ್ಮ ಜಿಎಸ್‌ಡಿಪಿ ರೂ.33,05,500 ಕೋಟಿಯಷ್ಟಿದೆ ಎಂದು ವಿವರಿಸಿದ್ದಾರೆ.

ಸರ್ಕಾರದಿಂದ ವಿತ್ತೀಯ ಶಿಸ್ತು

ನಾನು ಮಂಡಿಸಿರುವ 17 ಬಜೆಟ್‌ಗಳಲ್ಲಿಯೂ ವಿತ್ತೀಯ ಶಿಸ್ತನ್ನು ಕಾಪಾಡಿಕೊಂಡು ಬಂದಿದ್ದೇನೆ. ಆರ್ಥಿಕ ಹೊಣೆಗಾರಿಕೆ ಅಧಿನಿಯಮಕ್ಕೆ ಅನುಗುಣವಾಗಿ ನಮ್ಮ ಒಟ್ಟು ಹೊಣೆಗಾರಿಕೆಗಳು ಜಿಎಸ್‌ಡಿಪಿಯ ಶೇ.25 ರೊಳಗೆ ಇರಬೇಕು, ನಮ್ಮದು ಶೇ.24.94 ರಷ್ಟಿದೆ. ಕೇಂದ್ರ ಸರ್ಕಾರದ ಹೊಣೆಗಾರಿಕೆಗಳು ಜಿಡಿಪಿಯ ಶೇ.40 ರೊಳಗೆ ಇರಬೇಕಾಗುತ್ತದೆ. ಅದು ಶೇ.55.6 ರಷ್ಟಿದೆ. ದಿವಾಳಿಯಾಗಿರುವುದು ಯಾವ ಸರ್ಕಾರ ಎಂದು ಪ್ರಶ್ನಿಸಿದ್ದು, 16ನೇ ಹಣಕಾಸು ಆಯೋಗದ ಮಾರ್ಗಸೂಚಿ ಅನುಸಾರ ವಿತ್ತೀಯ ಕೊರತೆ ರಾಜ್ಯಗಳಲ್ಲಿ ಜಿಎಸ್‌ಡಿಪಿಯ ಶೇ.3 ರೊಳಗೆ ಹಾಗೂ ಕೇಂದ್ರ ಸರ್ಕಾರ ಜಿಡಿಪಿಯ ಶೇ.4.2 ರೊಳಗೆ ಇರಬೇಕು. ನಮ್ಮ ವಿತ್ತೀಯ ಕೊರತೆಯು ಜಿಎಸ್‌ಡಿಪಿಯ ಶೇ.3 ರ ಒಳಗೆ ಇದೆ. ಆದರೆ ಕೇಂದ್ರದ ವಿತ್ತೀಯ ಕೊರತೆ ಜಿಡಿಪಿಯ ಶೇ.4.3 ರಷ್ಟಿದೆ ಎಂದು ವಿವರಿಸಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆ ವರ್ಗೀಕರಣ ರದ್ದುಗೊಳಿಸಲು ಸಂಸದ ಬಿ.ವೈ.ರಾಘವೇಂದ್ರ ಆಗ್ರಹ

ಅಡಿಕೆಗೆ ಕ್ಯಾನ್ಸರ್‌ಕಾರಕ ಹಣೆಪಟ್ಟಿ ಸರಿಯಲ್ಲ

ಹೊಸದಿಲ್ಲಿ: ವಿಶ್ವ ಆರೋಗ್ಯ ಸಂಸ್ಥೆ ಅಡಿಕೆಗೆ ಅಂಟಿಸಿರುವ ಕ್ಯಾನ್ಸರ್ ಕಾರಕ ಹಣೆಪಟ್ಟಿ ವೈಜ್ಞಾನಿಕವಾಗಿ ಸರಿಯಲ್ಲ. ಈ ಕುರಿತು ಭಾರತ ಸರ್ಕಾರ ಮಧ್ಯಪ್ರವೇಶಿಸಿ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಅಡಿಕೆ ಬೆಳೆಗಾರರ ಪರ ಪ್ರಬಲವಾಗಿ ವಾದ ಮಂಡಿಸಬೇಕು ಎಂದು ಸಂಸದ ಬಿ.ವೈ.ರಾಘವೇಂದ್ರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಹೊಸದಿಲ್ಲಿಯಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿರುವ ಬಿ.ವೈ.ರಾಘವೇಂದ್ರ, ಅಡಿಕೆ ಬೆಳೆಗಾರರ ಹಿತ ರಕ್ಷಣೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.ದೇಶದ ಒಟ್ಟು ಅಡಿಕೆ ಉತ್ಪಾದನೆಯ ಸುಮಾರು ಶೇ.65ರಷ್ಟನ್ನು ಒದಗಿಸುವ ಮಲೆನಾಡಿನ ಅಡಿಕೆ ಬೆಳೆ ಗಾರರು ತೀವ್ರ ಆತಂಕ ಮತ್ತು ಸಂಕಷ್ಟದಲ್ಲಿದ್ದಾರೆ. ಸುಮಾರು 1 ಲಕ್ಷ ಕೋಟಿ ರೂ. ಆರ್ಥಿಕತೆ ಹೊಂದಿರುವ ಮತ್ತು 11 ರಾಜ್ಯಗಳ 2 ಕೋಟಿಗೂ ಅಧಿಕ ಜನರ ಜೀವನಾಧಾರ ವಾಗಿರುವ ಅಡಿಕೆ ಬೆಳೆಯ ರಕ್ಷಣೆ ಇಂದು ಆದ್ಯತೆಯ ವಿಷಯವಾಗಬೇಕಿದೆ ಎಂದು ಪ್ರತಿಪಾದಿಸಿದ್ದಾರೆ.



ವಿಶ್ವ ಆರೋಗ್ಯ ಸಂಸ್ಥೆಯ ಅಂಗಸಂಸ್ಥೆ IARC, ಅಡಿಕೆಯನ್ನು Group&I Carcinogen ಎಂದು ವರ್ಗೀಕರಿಸಿರುವುದು ವೈಜ್ಞಾನಿಕವಾಗಿ ದೋಷಪೂರ್ಣ, ಪಕ್ಷಪಾತತನದಿಂದ ಕೂಡಿದೆ. ಭಾರತದ ಐಸಿಎಆರ್ ಸಿಪಿಸಿಆರ್‌ಐ(ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರೀಸರ್ಚ್-ಸೆಂಟ್ರಲ್ ಪ್ಲಾಂಟೇಶನ್ ಕ್ರಾಪ್ಸ್ ರೀಸರ್ಚ್ ಇನ್ಸ್ಟಿಟ್ಯೂಟ್) ನಡೆಸಿ ರುವ ಸಂಶೋಧನೆಗಳ ಪ್ರಕಾರ, ಐಸಿಎಆರ್ ಉಲ್ಲೇಖಿಸಿರುವ ಬಹಳಷ್ಟು ಅಧ್ಯಯನಗಳು, ತಂಬಾಕು ಮಿಶ್ರಿತ ಉತ್ಪನ್ನಗಳನ್ನು ಶುದ್ಧ ಅಡಿಕೆಯೊಂದಿಗೆ ತಾಳೆ ಮಾಡಿ ತಪ್ಪು ತೀರ್ಮಾನಕ್ಕೆ ಬಂದಿವೆ.

ಅಡಿಕೆಯ ಮುಖ್ಯ ಘಟಕ ಅರೆಕೋಲಿನ್ Group &2Bಯಲ್ಲಿದ್ದರೂ ಅಡಿಕೆಯನ್ನೇ Group&I ಎಂದು ವರ್ಗೀಕರಿಸಿರುವ ಆಂತರಿಕ ವಿರೋಧವೂ ಇದೆ. ಜನವರಿ 2026ರಲ್ಲಿ ಡಬ್ಲ್ಯುಹೆಚ್‌ಒ ವೆಬಿನಾರ್ ನಿರ್ಬಂಧಾತ್ಮಕ ನೀತಿಗಳ ಸಂಕೇತ ನೀಡಿರುವ ಹಿನ್ನೆಲೆಯಲ್ಲಿ ಭಾರತ ಕೂಡಲೇ ಮಧ್ಯ ಪ್ರವೇಶಿಸಿ, ಅಡಿಕೆ ಬೆಳೆಗಾರರ ಹಿತ ಕಾಯಬೇಕು ಎಂದರು.

ಮೇ 2025ರಲ್ಲಿ ಅಮೇರಿಕಾ ವಿಷಕಾರಿ ಕ್ಷಾರ ವಲಸೆ ಎಂಬ ಕಾರಣ ನೀಡಿ ಅಡಿಕೆ ಹಾಳೆ ತಟ್ಟೆಗಳ ಮೇಲೆ ನಿಷೇಧ ಹೇರಿರುವುದು ನಮ್ಮ ಗ್ರಾಮೀಣ ಕೈಗಾರಿಕೆಗಳಿಗೆ ಗಂಭೀರ ಪೆಟ್ಟು ಕೊಟ್ಟಿದೆ. ಮೇಕ್ ಇನ್ ಇಂಡಿಯಾ ಯೋಜನೆಯಡಿ ಪರಿಸರ ಸ್ನೇಹಿ ಆಶಯಗಳಿಗೆ ತದ್ವಿರುದ್ಧವಾಗಿರುವ ಈ ನಿಷೇಧವನ್ನು ವೈಜ್ಞಾನಿಕವಾಗಿ ಮತ್ತು ರಾಜತಾಂತ್ರಿಕತೆ ಮೂಲಕ ಪ್ರಶ್ನಿಸಬೇಕೆಂದು ರಾಘವೇಂದ್ರ ಕೋರಿದ್ದಾರೆ.

ಕೇಂದ್ರ ಸಚಿವರ ಭರವಸೆ

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಖುದ್ದು ಭೇಟಿ ಮಾಡಿ ಸಂಸದ ಬಿ.ವೈ. ರಾಘವೇಂದ್ರ ಮನವಿ ಸಲ್ಲಿಸಿದರು. ಸಚಿವರು ಈ ವಿಷಯದಲ್ಲಿ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ. ಸಿಪಿಸಿಆರ್‌ಐ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದೇಶದ 11 ಪ್ರಮುಖ ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು ಈಗಾಗಲೇ ಅಡಿಕೆ ಕುರಿತು ಸಂಶೋಧನೆ ನಡೆಸುತ್ತಿವೆ. ಶೀಘ್ರದಲ್ಲೇ ಒಂದು ಸಮಗ್ರ ವರದಿ ಸಿದ್ಧವಾಗಲಿದೆ. ಈ ವರದಿಯನ್ನು ಸಿಪಿಸಿಆರ್‌ಐ ಐಸಿಎಆರ್‌ಗೆ ಸಲ್ಲಿಸಲಿದ್ದು, ಅಂತಿಮ ವರದಿ ಕೇಂದ್ರ ಸರ್ಕಾರಕ್ಕೆ ಲಭಿಸಿದ ತಕ್ಷಣ, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಅಡಿಕೆ ಬೆಳೆಗಾರರ ಹಿತ ರಕ್ಷಣೆಗೆ ಮೋದಿ ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದ್ದಾರೆ.

ಕಾಂಗ್ರೆಸ್‌ಗೆ ಸೋಲಿನ ಭೀತಿ: ಛಲವಾದಿ

ಬಾಗಲಕೋಟೆ: ರಾಜ್ಯದ ಎರಡು ಉಪ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದು ನಿಶ್ಚಿತವಾಗಿದೆ. ಇದರಿಂದ ಗಾಬರಿ ಬಿದ್ದಿರುವ ಕಾಂಗ್ರೆಸ್ ಸರ್ಕಾರ ಮತದಾರರಿಗೆ ಗ್ಯಾರಂಟಿ ನಿಲ್ಲಿಸುತ್ತೇವೆ ಎಂದು ಭಯದ ವಾತಾವರಣ ಸೃಷ್ಟಿ ಮಾಡಿ ಧಮ್ಕಿ ಹಾಕುತ್ತಿದ್ದಾರೆ. ಕಾಂಗ್ರೆಸ್ ಸೋತರೆ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುತ್ತಾರಾ? ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.



ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿ, ನೈತಿಕತೆಯಿಂದ ಉಪ ಚುನಾವಣೆ ಎದುರಿಸುತ್ತಿಲ್ಲ. ಸೋಲಿನ ಭೀತಿ ಕಾಂಗ್ರೆಸ್‌ನಲ್ಲಿ ಮನೆ ಮಾಡಿದೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಐದು ದಿನ ಬಾಗಲಕೋಟೆ ಪ್ರಚಾರಕ್ಕೆ ಠಿಕಾಣಿ ಹೂಡಿದ್ದಾರೆ. ಸಿಎಂ ಸ್ಥಾನ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ ಎಂದು ಆರೋಪಿಸಿದರು.

ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೆ ತಂದಿದೆ. ಆ ಬಳಿಕ ಪ್ರಣಾಳಿಕೆಯಲ್ಲಿ ನೀಡಿದ್ದ ಯಾವುದೇ ಭರವಸೆ ಈಡೇರಿಸಿಲ್ಲ. ಬೋಗಸ್ ಹೇಳಿದ್ದಾರೆ. ಅನೇಕ ನಿಗಮಗಳಿಗೆ ಅನುದಾನ ನೀಡಿಲ್ಲ. ಸದನದಲ್ಲಿ ಕೇಳಿದರೇ ಶಾಸಕರು ಬಳಸಿಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆ ಎಂದರು.

ಧಮ್ಕಿ ಹಾಕಿ ಮತ ಪಡೆಯಲು ಯತ್ನ

ಕಾಂಗ್ರೆಸ್‌ನವರು ಧಮ್ಕಿ ಹಾಕಿ ಮತ ಪಡೆಯಲು ಹೊರಟಿದ್ದಾರೆ. ಬಾಗಲಕೋಟೆಯ ಜನ ಅದಕ್ಕೆ ಹೆದರುವುದಿಲ್ಲ. ಇಪ್ಪತ್ತು ವರ್ಷಗಳ ಹಿಂದಿನ ಬಾಗಲಕೋಟೆಗೂ ಇಂದಿನ ಬಾಗಲಕೋಟೆಗೂ ಇರುವ ಅಭಿವೃದ್ಧಿ ಬದಲಾವಣೆಯ ಕಾರಣಕರ್ತರನ್ನು ಹುಡುಕಿದರೆ ಸಿಗುವುದು ಚರಂತಿಮಠರು ಮಾತ್ರ. ರಾಜಧಾನಿ ಬೆಂಗಳೂರಿನಲ್ಲಿಯೂ ಈ ಮಾದರಿಯ ಸುಸಜ್ಜಿತ ರಸ್ತೆಗಳಿಲ್ಲ. ರಾಜ್ಯದ ಯಾವ ಜಿಲ್ಲೆಯೂ ಬಾಗಲಕೋಟೆಯಷ್ಟು ವಿಶಾಲವಾಗಿ ಬೆಳೆದಿಲ್ಲ. ಇದೆಲ್ಲವನ್ನು ನೋಡಿದ ಜನ ಯಾರು ಗೆಲ್ಲಬೇಕೆಂದು ತೀರ್ಮಾನ ಮಾಡುತ್ತಾರೆ ಎಂದರು.

ಸಂಪಾದಕೀಯ

ಇಂಥ ಆಸೆ ಪ್ರಜಾಪ್ರಭುತ್ವ ವಿರೋಧಿ

ಐಪಿಎಲ್ ಆರಂಭವಾಗಿದೆ. ರಾಜ್ಯ ವಿಧಾನಸಭಾ ಅಧಿವೇಶನ ಮುಗಿದಿದೆ. ಇವೆರಡರ ತುಲನೆಯಿಂದ ಯಾವ ವಿಷಯವನ್ನು ಹೇಳಲಾರಂಭಿಸಬಹುದು ಎಂಬುದು ಕೂಡ ಈಗ ರಾಜ್ಯಕ್ಕೆ ತಿಳಿದಿದೆ! ಕೆಲವು ಶಾಸಕರು ತಮಗೆ ಐಪಿಎಲ್ ಟಿಕೇಟುಗಳನ್ನು ಉಚಿತವಾಗಿ ನೀಡಬೇಕೆಂದು ಇಟ್ಟ ಬೇಡಿಕೆಯನ್ನು ಸರ್ಕಾರ ಈಡೇರಿಸಿದೆ. ಒರ್ವ ಶಾಸಕರಂತೂ ಸರದಿ ಸಾಲಿನಲ್ಲಿ ನಿಂತು ಟಿಕೇಟ್ ಖರೀದಿಸಲು ನಾವೇನು ಸಾಮಾನ್ಯರೇ ಎಂಬ ಪ್ರಶ್ನೆಯನ್ನೇ ಹಾಕಿದ್ದರು. ಅದನ್ನು ಸಂಬಂಧಪಟ್ಟವರು ಪುರಸ್ಕರಿಸಿ ಇದೀಗ ಅಧಿಕಾರದಲ್ಲಿರುವ ರಾಜಕಾರಣಿಗಳೆಲ್ಲರೂ ಸಾಮಾನ್ಯರಲ್ಲ ಎಂದು ಷರಾ ಬರೆದಿದೆ. ಕಳೆದ ಕೆಲ ದಿನಗಳಿಂದ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಇದು ಚರ್ಚೆಯಾಗುತ್ತಿರುವ ಸಂಗತಿ.

ಹಲವು ಆಯಾಮಗಳ ಮೂಲಕ ಈ ಪ್ರಕರಣವನ್ನು ಅವಲೋಕಿಸಬೇಕಾಗಿದೆ. ಏಕೆಂದರೆ ಐಪಿಎಲ್ ಎಂದರೆ ಇಂದು ಕೇವಲ ಕ್ರಿಕೇಟ್ ಆಗಿ ಉಳಿದಿಲ್ಲ. ಶ್ರೀಮಂತಿಕೆ ಮತ್ತು ಮನರಂಜನೆಗಳನ್ನು ಬಿಟ್ಟರೆ ಅದರಲ್ಲಿ ಉಳಿದಿದ್ದೇನೂ ಇಲ್ಲ. ಕ್ರೀಡೆಯೊಂದರಲ್ಲಿ ಇನ್ನು ಇರಬೇಕಾದುದು ತಾನೇ ಏನು ಪ್ರಶ್ನೆ ಇಲ್ಲಿ ಹುಟ್ಟಬಹುದು.



ಕ್ರೀಡೆಯನ್ನು ಮನರಂಜನಾ ಕ್ಷೇತ್ರವಾಗಿ ಪರಿವರ್ತಿಸಿದ ಮೇಲೆ ಅಲ್ಲಿ ಕ್ರೀಡಾ ಮೌಲ್ಯಗಳು ಉಳಿದಿರುತ್ತವೆಯೇ ಎಂಬ ಉತ್ತರ ಅನೇಕರಿಗೆ ಹಿಡಿಸದಿರಬಹುದು. ಕ್ರೀಡೆಯಲ್ಲೂ ಮೌಲ್ಯಗಳೇ ಎಂದು ಕೂಡ ಪ್ರಶ್ನಿಸಬಹುದು. ಅದಕ್ಕೂ ಉತ್ತರ ರಾಜ್ಯ ವಿಧಾನಮಂಡಲದಲ್ಲಿ ಚರ್ಚೆಯಾದ ಟಿಕೇಟ್ ಪ್ರಕರಣ ಮತ್ತು ಶಾಸಕರಿಗೆ ಮಂಜೂರಾಗುವ ಉಚಿತ ಟಿಕೇಟ್! ಈ ಪ್ರಕರಣವನ್ನು ನೋಡಬೇಕಾದ ಮತ್ತೊಂದು ಕೋನವೆಂದರೆ ಇಂಥ ಕ್ರೀಡಾಕೂಟಕ್ಕೆ ಉಚಿತ ಟಿಕೇಟುಗಳನ್ನು ಕೇಳುವುದೆಷ್ಟು ಸರಿ ಎನ್ನುವುದು. ಐಪಿಎಲ್ ಎಂದರೆ ಶಾಸಕರೆಲ್ಲರೂ ಕಡ್ಡಾಯವಾಗಿ ನೋಡಬೇಕಾದುದಲ್ಲ. ಆದರೆ ಶಾಸಕರು ಕೂಡ ಮನುಷ್ಯರೆ. ಸಮಾಜಕ್ಕೆ ಐಪಿಎಲ್‌ನ ಹುಚ್ಚು ಇರುವಂತೆ ಶಾಸಕರಿಗೆ ಇರಬಾರದು ಎಂದೇನಿಲ್ಲ. ಆದರೆ ಶಾಸಕರಾದ ಒಂದೇ ಕಾರಣಕ್ಕೆ ಟಿಕೇಟ್ ಅಥವಾ ಪಾಸ್ ಅನ್ನು ಕ್ರಿಕೇಟ್ ಸಂಸ್ಥೆಗಳು ಉಚಿತವಾಗಿ ನೀಡಬೇಕೇ ಎನ್ನುವುದು ಎನ್ನುವುದು ಪ್ರಶ್ನೆ. ಶಾಸಕರೇ ಆಸೆಪಟ್ಟ ಮೇಲೆ ಕೊಡಬಾರದೇ ಎನ್ನುವುದು ಸಂಸ್ಥೆಗಳ ಉತ್ತರವಾಗಬಹುದು. ಅಂತಿಮವಾಗಿ ಅದು ಮುಟ್ಟುವುದು ಶಾಸಕರ ಮನಸ್ಥಿತಿಯೆಡೆಗೆ. ಒಂದೆಡೆ ಸಂವಿಧಾನದ ಸಮಾನತೆಯ ಹಕ್ಕುಗಳನ್ನು ಪುಂಖಾನುಪುಂಖವಾಗಿ ಉದುರಿಸುತ್ತಾ ರಾಜಕಾರಣಕ್ಕೆ ಬರುವ ಮಂದಿಯ ಗುಣಮಟ್ಟ ಈ ಹಂತಕ್ಕೆ ಇಳಿಯಿತೇ ಎನ್ನುವಲ್ಲಿಯವರೆಗೆ ಪ್ರಕರಣವನ್ನು ವ್ಯಾಖ್ಯಾನಿಸಬಹುದು. ಆದರಲ್ಲೂ ಸರದಿ ಸಾಲಿನಲ್ಲಿ ನಿಲ್ಲಲು ನಾವೇನು ಜನಸಾಮಾನ್ಯರೇ ಎನ್ನುವ ಹೇಳಿಕೆ ನೇರವಾಗಿ ಪ್ರಜಾಪ್ರಭುತ್ವ ವಿರೋಧಿ. ಪ್ರಜೆಗಳೇ ಪ್ರಭುಗಳು ಎನ್ನುವುದು ಪ್ರಜಾಪ್ರಭುತ್ವದ ಆಶಯ. ಆದರೆ ಇಂದಿನ ರಾಜಕಾರಣದಲ್ಲಿ ಶಾಸಕರೇ ತಾವು ಜನಸಾಮಾನ್ಯರಿಗಿಂತ ಭಿನ್ನ ಎಂದು ಸದನದಲ್ಲೇ ಹೇಳಿಕೊಳ್ಳುತ್ತಾರೆಂದರೆ ಅವರ ಮಾನಸಿಕತೆ ಹೇಗಿರಬಹುದು? ರಾಜಕಾರಣದ ಮೌಲ್ಯಗಳು ಎಷ್ಟು ಉಳಿದಿರಬಹುದು? ಆಶ್ಚರ್ಯವೆಂದರೆ ಇಂಥ ಮಾನಸಿಕತೆ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ವ್ಯಾಪಿಸಿರುವುದು. ರಾಜಕಾರಣಕ್ಕೆ ಬರುವಾಗಲೇ ಸಂವೇದನೆಯನ್ನು, ಬುದ್ಧಿಮಟ್ಟವನ್ನು ಗಂಟುಕಟ್ಟಿ ಇಟ್ಟುಬರಬೇಕು ಎಂಬ ಮಾತಿಗೆ ಇಂಥ ಪ್ರಕರಣಗಳು ಬಲನೀಡುತ್ತವೆ. ಏನೇ ಆದರೂ ಇಂಥ ಮನಸ್ಥಿತಿಯನ್ನು ಎಲ್ಲಾ ಪಕ್ಷಗಳು ಶಿಸ್ತಿನ ಕ್ರಮದ ಮೂಲಕ ಹತ್ತಿಕ್ಕಬೇಕಾಗಿದೆ.

ಸಿಲಿಂಡರ್ ನಿರ್ಭರದಿಂದ ಆತ್ಮನಿರ್ಭರವಾಗುವತ್ತ

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
vakradanta@gmail.com



> ರಾಜ್ಯದಲ್ಲಿ ಅಥವಾ ದೇಶದಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಈ ರೀತಿಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಅಳವಡಿಸಿಕೊಂಡರೆ, ನಾವೆಲ್ಲ ಗ್ಯಾಸ್ ಸಿಲಿಂಡರ್ ಬಳಕೆಯನ್ನು ಕನಿಷ್ಠ ಅರ್ಧದಷ್ಟು ಕಡಿಮೆ ಮಾಡಲು ಸಾಧ್ಯವಿದೆ.

ಮೊದಲು ಸರ್ಕಾರದ ಯೋಜನೆಯೂ ಇತ್ತು. ಅದರ ಜತೆಗೆ ಗ್ರಾಮೀಣ ಪ್ರದೇಶದ ಜನರೂ ಬೇರೆ ಉರುವಲುಗಿಂತ ಗ್ಯಾಸ್ ಉತ್ತಮ ಎಂದು ಗೋಬರ್ ಗ್ಯಾಸ್ ತಯಾರಿಸಿಕೊಳ್ಳುವ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಮನೆಗಳಲ್ಲೇ ಹೊಂದಿದ್ದರು. ಆಗ ಯಾರೂ ಈಗಿನ ರೀತಿ ಗ್ಯಾಸ್ ಸಿಲಿಂಡರ್ ಮೇಲೆ ಅವಲಂಬಿತರಾಗಿರಲಿಲ್ಲ. ಕಟ್ಟಿಗೆ ಒಲೆ ಇತ್ತು. ಆದರ ನಂತರ ಕಟ್ಟಿಗೆ ಆಧಾರಿತ, ಆದರೆ ಸುಧಾರಿತ ಅಸ್ತ್ರ ಒಲೆ ಬಂತು. ಅದರಿಂದ ಹೊಗೆಯ ಸಮಸ್ಯೆಯೂ ಅಷ್ಟು ಇಲ್ಲವಾಗಿತ್ತು. ಇನ್ನೂ ಕೆಲವು ಹೊಸ ಮಾದರಿಯ ಒಲೆಗಳು ಬರುತ್ತಿದ್ದವು.

ಆದರೆ ನಮ್ಮದೇ ಸರ್ಕಾರಗಳು ಜನರು ಗ್ಯಾಸ್ ಸಿಲಿಂಡರ್ ಮೇಲೆ ಅವಲಂಬಿತವಾಗುವಂತೆ ಮಾಡಿದವು. ಪರಿಸರಕ್ಕೆ ಹಾನಿ, ಇನ್ನೊಂದು ಮತ್ತೊಂದು ಕಾರಣಕ್ಕೆ ಕಟ್ಟಿಗೆ ಬೇಡ, ಹೊಗೆ ಆರೋಗ್ಯಕ್ಕೆ ಹಾನಿಕರ ಎಂದೆಲ್ಲ ಹೇಳಿ ಸರ್ಕಾರಗಳೇ ನಮ್ಮ ಪಾರಂಪರಿಕ ಇಂಧನ ಪದ್ಧತಿ ಬಿಡುವಂತೆ ಮಾಡಿದವು. ಕಟ್ಟಿಗೆ ಒಲೆ ಬಳಸುವುದು ಅಂದರೆ ಹಿಂದುಳಿದಿರುವುದರ ಸಂಕೇತ, ಗ್ಯಾಸ್ ಬಳಸಿದರೆ ಅದು ಆಧುನಿಕತೆಯ, ಅಭಿವೃದ್ಧಿಯ ಸಂಕೇತ ಎಂದು ಬಿಂಬಿಸಿದವು.



ಮನೆಗೆ ಮೊದಲು ಒಂದು ಸಿಲಿಂಡರ್ ಇತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಗ್ಯಾಸ್ ಸಿಲಿಂಡರ್ ಸಿಗುವುದೇ ಕಷ್ಟವಿತ್ತು. ಸಿಕ್ಕರೂ ದರ ಜಾಸ್ತಿ, ಅದನ್ನು ಪೇಟೆಯಿಂದ ತರುವುದು ಕಷ್ಟ ಅಥವಾ ತಂದವನಿಗೂ ಹೆಚ್ಚುವರಿ ಹಣ ನೀಡಬೇಕು ಎಂಬೆಲ್ಲ ಸಮಸ್ಯೆ ಇತ್ತು. ಒಂದು ಸಿಲಿಂಡರ್ ಇದ್ದಾಗ ಮತ್ತು ಸಿಗುವುದು ಕಷ್ಟ ಇದ್ದಾಗ ಜನ ಗೋಬರ್ ಗ್ಯಾಸ್ ಮತ್ತು ಇತರ ಇಂಧನ ಮೂಲಗಳನ್ನು ಸಂಪೂರ್ಣ ಬಿಟ್ಟಿರಲಿಲ್ಲ. ಯಾಕೆಂದರೆ ಸಿಲಿಂಡರ್ ಖಾಲಿಯಾದರೆ, ಬದಲಿ ವ್ಯವಸ್ಥೆ ಇರಲೇಬೇಕಿತ್ತು. ಬಹುಶಃ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಇರಬೇಕು, ಮನೆಗೆ ಎರಡು ಗ್ಯಾಸ್ ಸಿಲಿಂಡರ್ ಕೊಟ್ಟರು. ಸಿಲಿಂಡರ್ ಪೂರೈಕೆ ಕೂಡ ಭಾರೀ ಪ್ರಮಾಣದಲ್ಲಿ ಹೆಚ್ಚಿತು. ಯಾರಿಗೆ ಯಾವಾಗ ಕೇಳಿದರೂ ಸಿಲಿಂಡರ್ ಸಿಗುತ್ತಿತ್ತು. ನೀವು ಖಾಲಿಯಾದ ಸಿಲಿಂಡರ್ ಕೊಟ್ಟು, ತುಂಬಿದ ಸಿಲಿಂಡರ್ ತರುವಷ್ಟು ಸುಲಭವಾಗಿ ಸಿಲಿಂಡರ್ ಸಿಗಲಾರಂಭಿಸಿತು. ಆಗ ಜನರಿಗೆ ಬೆಳಗ್ಗೆದ್ದು ಸೆಗಣಿ ಕರಡಿ, ಆಮೇಲೆ ಅದರ ಸ್ಲರಿ ತೆಗೆದು ತೋಟಕ್ಕೋ, ಇನ್ನೆಲ್ಲೋ ಹಾಕುವ ಕೆಲಸಕ್ಕಿಂತ ಸೀದಾ ಅಂಗಡಿಯಿಂದ ಸಿಲಿಂಡರ್ ತರುವುದೇ ಸುಲಭ ಅನ್ನಿಸಲಾರಂಭಿಸಿತು. ಸರ್ಕಾರ ಸಿಲಿಂಡರ್‌ಗೆ ಸಬ್ಸಿಡಿಯನ್ನೂ ನೀಡುತ್ತಿತ್ತು. ಅಷ್ಟು ಸುಲಭವಾಗಿ ಸಿಕ್ಕರೆ ಯಾರಿಗೆ ಬೇಡ. ಜನರೆಲ್ಲ ಸಿಲಿಂಡರ್ ಮೊರೆ ಹೋದರು.

ಹಾಗೆ ನೋಡಿದರೆ ಆಗ ಗ್ರಾಮೀಣ ಭಾರತ ನಿಜವಾಗಿ ಆತ್ಮನಿರ್ಭರವಾಗಿತ್ತು. ಹಾಗಿದ್ದವರನ್ನು ಸಿಲಿಂಡರ್ ಅವಲಂಬಿಯಾಗಿ ಮಾಡಿದ್ದೇ ನಮ್ಮ ವ್ಯವಸ್ಥೆ. ಈಗ ಬಹುತೇಕ ಜನ ಸಿಲಿಂಡರ್ ದಾಸರಾಗಿಯಾಗಿದೆ. ಬಹುಶಃ ಇದ್ದವರು ಕೂಡ ಗೋಬರ್ ಗ್ಯಾಸ್ ಬಳಸುವುದು ಬಿಟ್ಟು ದಶಮಾನಗಳೇ ಕಳೆದಿವೆ. ಹಾಗಾಗಿ ಗೋಬರ್ ಗ್ಯಾಸ್ ಪ್ಲ್ಯಾಂಟ್ ಹಾಳಾಗಿದೆ. ಒಲೆ ಅಳಿಸಿಹಾಕಿಯಾಗಿದೆ. ಈಗಿನ ತಲೆಮಾರಿನವರಿಗೆ ಸೀಮೆಎಣ್ಣೆ ಇಲ್ಲದೆ ಬೆಂಕಿ ಹಚ್ಚಲೇ ಬರವುದಿಲ್ಲ. ಒಲೆ ಊದಿ ಬೆಂಕಿ ಹೊತ್ತಿಸಬೇಕೆಂದರೆ ಅತ್ಯಂತ ಕಷ್ಟದ ಕೆಲಸ ಅದಕ್ಕಿಂತ ಸ್ವಿಗ್ಗಿ– ಜೊಮೆಟೊನೆ ಸುಲಭ ಅನ್ನಿಸಿಬಿಡುತ್ತದೆ.

ಈಗ ಅಮೆರಿಕ–ಇರಾನ್ ಯುದ್ಧದಿಂದಾಗಿ ದಿಢೀರನೆ ಸಿಲಿಂಡರ್ ಗ್ಯಾಸ್ ಸಮಸ್ಯೆ ಆರಂಭವಾಗಿದೆ. ನಾವೆಷ್ಟೇ ಆತ್ಮನಿರ್ಭರ ಅಂದರೂ, ನಾವೆಷ್ಟು ಅವಲಂಬಿತರಾಗಿದ್ದೇವೆ ಎಂಬುದರ ಅರಿವಾಗಿದೆ. ಈಗ ಸಿಲಿಂಡರ್ ಗ್ಯಾಸ್ ಇಲ್ಲವೆಂದರೆ ನಮಗೆ ಜೀವನವೇ ನಡೆಯುವುದು ಕಷ್ಟವೇನೊ ಎಂಬ ರೀತಿಯಲ್ಲಿ ನಾವು ಆತಂಕಪಡುತ್ತಿದ್ದೇವೆ. ನಾವು ಬೇಕಾಬಿಟ್ಟಿಯಾಗಿ ಗ್ಯಾಸ್ ಬಳಸುವುದನ್ನು ರೂಢಿಸಿಕೊಂಡು, ಮನೆಯಲ್ಲಿ ಸದಾ ಇನ್ನೊಂದು ತುಂಬಿದ ಸಿಲಿಂಡರ್ ಇಟ್ಟುಕೊಂಡು ರೂಢಿಯಾಗಿರುವುದರಿಂದ ಒಂದು ಸಿಲಿಂಡರ್ ಖಾಲಿಯಾಗಿ ನಾಲ್ಕು ದಿನಕ್ಕೆ ನಮಗೆ ಆತಂಕ ಕಾಡಲಾರಂಭಿಸುತ್ತದೆ.

ಈಗ ಯುದ್ಧದಿಂದ ಕಷ್ಟವಾಗುತ್ತಿದ್ದರೂ, ಇದು ನಮಗೆ ಹೊಸ ಆತ್ಮನಿರ್ಭರದ ದಾರಿ ತೋರಿಸಲು ಕಾರಣವಾಗಬಹುದೇ ಎಂಬ ಯೋಚನೆ ಬರುತ್ತಿದೆ. ಕೊರೋನಾ ಕಾಲದಲ್ಲಿ ನಾವು ಸಾಕಷ್ಟು ಹೊಸ ಸಂಗತಿಗಳನ್ನು ರೂಢಿಸಿಕೊಂಡಿದ್ದೇವೆ. ಏನೇನೊ ಹೊಸ ಮಾರ್ಗ ಕಂಡುಕೊಂಡಿದ್ದೇವೆ. ಈಗ ಅಡುಗೆ ಅನಿಲಕ್ಕಾಗಿ ಹೊಸ ಹೊಸ ಆವಿಷ್ಕಾರಗಳನ್ನು ಬಳಸಿಕೊಳ್ಳುವ ಮೂಲಕ ನಾವು ಆತ್ಮನಿರ್ಭರ ಮನೆಯಾಗುವತ್ತ ಗಮನಹರಿಸಲು ಸಕಾಲವೇನೊ.

ಹತ್ತಿಪ್ಪತ್ತು–ಮೂವತ್ತು ವರ್ಷ ಹಿಂದಿನ ತಂತ್ರಜ್ಞಾನಕ್ಕೆ ಹೋಲಿಸಿದರೆ ಈಗ ತುಂಬಾ ಬದಲಾವಣೆಗಳಾಗಿವೆ. ಆಗ ಗೋಬರ್ ಗ್ಯಾಸ್ ಪ್ಲ್ಯಾಂಟ್ ಮಾಡಬೇಕೆಂದರೆ ತುಂಬಾ ಜಾಗ ಬೇಕಿತ್ತು. ಕೆಲಸವೂ ಅಷ್ಟೇ ಇತ್ತು. ಆದರೆ ಈಗ ಬದಲಾದ ತಂತ್ರಜ್ಞಾನದ ಸಹಾಯದಿಂದ ಸಣ್ಣ ಸಣ್ಣ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಮಾಡಲು ಸಾಧ್ಯವಿದೆ. ಗೋಬರ್ ಗ್ಯಾಸ್ ಅಷ್ಟೇ ಅಲ್ಲ, ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ನಾವೇ ನಮ್ಮ ಮನೆಗಳಲ್ಲಿ ನಿರ್ಮಿಸಿಕೊಳ್ಳಲು ಸಾಧ್ಯವಿದೆ. ನಗರ ಪ್ರದೇಶದಲ್ಲಿ ದಿನವೂ ಸಾವಿರಾರು ಟನ್ ಕಸ ಸೃಷ್ಟಿಯಾಗುತ್ತದೆ. ನಾವೇ ನಮ್ಮ ಮನೆಗಳಲ್ಲಿ ದಿನವೂ ಒಣಕಸ ಮತ್ತು ಹಸಿ ಕಸ ಬೇರ್ಪಡಿಸಿ, ಸ್ಥಳೀಯ ಸಂಸ್ಥೆಯ ಕಸ ಸಂಗ್ರಾಹಕರಿಗೆ ನೀಡುತ್ತೇವೆ. ಅಷ್ಟೆಲ್ಲ ಕಸವನ್ನು ಇಟ್ಟುಕೊಂಡು ಸ್ಥಳೀಯ ಸಂಸ್ಥೆಗಳೇ ಬಯೋ ಗ್ಯಾಸ್ ಪ್ಲ್ಯಾಂಟ್ ತಯಾರಿಸಿ, ಅದನ್ನು ಅಗತ್ಯ ಇರುವ ಹೊಟೆಲ್‌ಗಳಿಗೆ ಅಥವಾ ಸಮೀಪದ ಮನೆಗಳಿಗೆ ಪೈಪ್ ಮೂಲಕ ಪೂರೈಕೆ ಮಾಡಬಹುದೇನೊ, ಅದು ದೊಡ್ಡ ಯೋಜನೆಗಳಾದವು. ಈಗ ಕನಿಷ್ಠ 20,000 ರೂಪಾಯಿಯಿಂದ ಒಂದು ಲಕ್ಷದ ಒಳಗೆ ಮನೆ, ತೋಟದ ಮನೆಗಳಿಗೆ ಅಗತ್ಯವಿರುವಷ್ಟು ಗಾತ್ರದ ಸಿದ್ಧವಿರುವ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳು ಲಭ್ಯವಿದೆ. ಅಮೆಜಾನ್‌ನಂತಹ ತಾಣಗಳಲ್ಲೂ ಸಿಗುತ್ತಿವೆ. ಇವುಗಳನ್ನು ಬಳಸಿ ನಮ್ಮ ನಮ್ಮ ಮನೆಯ ಹಸಿ ಕಸ ಜತೆಗೆ ಇದಕ್ಕೆ ಬಳಕೆಯಾಗಬಲ್ಲ ಒಣಕಸವನ್ನು ಬಳಸಿ, ನಾವೇ ನಮ್ಮ ಮನೆಗೆ ಬೇಕಾಗುವಷ್ಟು ಬಯೋ ಗ್ಯಾಸ್ ತಯಾರಿಸಿಕೊಳ್ಳಲು ಸಾಧ್ಯವಿದೆ. ಅದಕ್ಕೆ ಗುಂಡಿ ತೋಡಿ ಮುಚ್ಚಬೇಕಾದ ಅಗತ್ಯ ಕೂಡ ಈಗ ಇಲ್ಲ. ಕಸದಬುಟ್ಟಿ ಇಟ್ಟಂತೆ ಇಟ್ಟು ಬಯೋ ಗ್ಯಾಸ್ ತಯಾರಿಸಿಕೊಳ್ಳುವ ಟ್ಯಾಂಕ್‌ಗಳು ಕೂಡ ಬಂದಿವೆ.

ಯಾವ್ಯಾವುದನ್ನೋ ಉಚಿತವಾಗಿ ಕೊಡುವ ಸರ್ಕಾರ, ಗ್ಯಾಸ್ ಸಿಲಿಂಡರಿಗೆ ಸಬ್ಸಿಡಿ ಕೊಡುವ ಸರ್ಕಾರ, ಈ ರೀತಿಯ ಸಣ್ಣ ಸಣ್ಣ ಮನೆ ಬಳಕೆಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಹಾಕಿಕೊಳ್ಳಲು ಜನರಿಗೆ ಪ್ರೋತ್ಸಾಹ ನೀಡಬಹುದು. ಈಗ ಗ್ಯಾಸ್ ಸಿಗುತ್ತಿಲ್ಲ ಎಂದು ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತ, ಅದರಲ್ಲಿ ಹೇಗೆ ಲಾಭ ಮಾಡಿಕೊಳ್ಳಬಹುದು ಎಂದು ಪ್ರಯತ್ನಿಸುವ ಬದಲು, ನಮ್ಮ ರಾಜ್ಯದಲ್ಲಿ ಇನ್ನು ಮುಂದೆ ಯಾವುದೇ ಕಾರಣಕ್ಕೂ ಗ್ಯಾಸ್ ಕೊರತೆ ಆಗದ ಹಾಗೆ ನಾವೇನು ಮಾಡಬಹುದು ಎಂದು ಯಾಕೆ ಯೋಚಿಸಬಾರದು?

ವಿಶೇಷವಾಗಿ ನಗರದಿಂದ ಹೊರಗೆ ಇರುವ ಹೊಟೆಲ್‌ಗಳಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಬಯೋ ಗ್ಯಾಸ್ ಪ್ಲ್ಯಾಂಟ್ ಹಾಕಿಕೊಳ್ಳಬಹುದು. ಹೊಟೆಲ್‌ಗಳಲ್ಲಂತೂ ಹಸಿ ಕಸ, ಆಹಾರ ತ್ಯಾಜ್ಯ ವಿಪರೀತವಾಗಿರುತ್ತದೆ. ಅದನ್ನು ವಿಲೇವಾರಿ ಮಾಡುವ ವ್ಯವಸ್ಥೆಗೆ ದುಡ್ಡು ಕೊಡುವ ಬದಲು, ಅದೇ ಹಣದಲ್ಲಿ ಬಯೋಗ್ಯಾಸ್ ಪ್ಲ್ಯಾಂಟ್ ನಿರ್ಮಿಸಿಕೊಂಡು, ಆ ಮೂಲಕ ಗ್ಯಾಸ್ ಕರ್ಚನ್ನು ಉಳಿಸಲು ಸಾಧ್ಯವಿದೆ. ಅಂತಹ ಕೆಲಸಕ್ಕೆ ಸರ್ಕಾರವೂ ಪ್ರೋತ್ಸಾಹ ನೀಡಿದರೆ, ಆಗ ಸಹಜವಾಗಿ ಉದ್ಯಮಿಗಳು ಅದನ್ನು ಬೇಗ ಅಳವಡಿಸಿಕೊಳ್ಳುತ್ತಾರೆ.

ರಾಜ್ಯದಲ್ಲಿ ಅಥವಾ ದೇಶದಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಈ ರೀತಿಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಅಳವಡಿಸಿಕೊಂಡರೆ, ನಾವೆಲ್ಲ ಗ್ಯಾಸ್ ಸಿಲಿಂಡರ್ ಬಳಕೆಯನ್ನು ಕನಿಷ್ಠ ಅರ್ಧದಷ್ಟು ಕಡಿಮೆ ಮಾಡಲು ಸಾಧ್ಯವಿದೆ. ಸಂಪೂರ್ಣ ಬಯೋ ಗ್ಯಾಸ್‌ನಿಂದಲೇ ನಮ್ಮ ಜೀವನ ನಡೆಯದೇ ಇರಬಹುದು. ಆದರೆ ಸಿಲಿಂಡರ್ ಮೇಲಿನ ಅವಲಂಬನೆಯನ್ನು ಅರ್ಧದಷ್ಟು ಕಡಿಮೆ ಮಾಡಲು ಖಂಡಿತ ಸಾಧ್ಯವಿದೆ. ದೇಶಾದ್ಯಂತ ಅರ್ಧದಷ್ಟು ಸಿಲಿಂಡರ್ ಬಳಕೆ ಕಡಿಮೆಯಾದರೆ ನಾವು–ನಮ್ಮ ದೇಶ ಅದೆಷ್ಟು ಆತ್ಮನಿರ್ಭರವಾಗಬಹುದು ನೀವೇ ಯೋಚಿಸಿ.

ಭಾಷೆ–ಅಂಕಗಳ ತೂಗುಯ್ಯಾಲೆ

▸ ಡಾ. ಮೈತ್ರಿ ಭಟ್, ವಿಟ್ಲ



> ಭಾಷಾ ವೈವಿಧ್ಯತೆಯೇ ಜಗತ್ತಿನ ಸೌಂದರ್ಯ. ಭಾಷಾ ಕಲಿಕೆಯ ಮನೋಭಾವವನ್ನು ಬೆಳೆಸುವುದೇ ಭಾಷೆಯ ಉಳಿವಿಗೆ ಭದ್ರ ಬುನಾದಿ.

ಒಂದು ದೇಶ ಅಥವಾ ರಾಜ್ಯದ ಅಭಿವೃದ್ಧಿಯ ಸೂಚಕವಾಗಿ ರಸ್ತೆ, ಆರೋಗ್ಯ, ನೀರಾವರಿ, ಮೂಲಸೌಕರ್ಯ ಸೇರಿದಂತೆ ವಿವಿಧ ಅಂಶಗಳಿದ್ದರೂ ಭವಿಷ್ಯವನ್ನು ನಿರ್ಧರಿಸುವುದು ಶಿಕ್ಷಣ ಕ್ಷೇತ್ರವೇ ಆಗಿದೆ. ಈ ಶಿಕ್ಷಣದ ತಳಹದಿ ಭಾಷೆಯೇ ಆಗಿದೆ. ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದು ವಿದ್ಯಾರ್ಥಿಗಳಿಗೆ ಕಲಿಕೆಗೆ ಸಹಕಾರಿ ಎಂದೂ ಹೇಳಲಾಗಿದೆ. ಮಾತ್ರವಲ್ಲ, ಯಾವ ಸರಕಾರವು ಶಿಕ್ಷಣಕ್ಕೆ ಒತ್ತು ನೀಡುವುದೋ ಆಗ ಆ ಪ್ರದೇಶದ ಭವಿಷ್ಯ ಉಜ್ವಲವಾಗಿರುತ್ತದೆ ಎಂದೇ ಭಾವಿಸಲಾಗಿದೆ. ಹೀಗಿರುವಾಗ ಶಿಕ್ಷಣ ಕ್ಷೇತ್ರದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಭವಿಷ್ಯ ನಿರ್ಧಾರಕಗಳು ಆಗಿರುವುದನ್ನು ಮನಗಂಡು ಯಾರೇ ಆಗಲಿ, ಯಾವ ಸರಕಾರವೇ ಆಗಲಿ ಯಾವುದೇ ಬದಲಾವಣೆ ಮಾಡುವ ಮೊದಲು ವಿವಿಧ ಮಗ್ಗುಲುಗಳಲ್ಲಿ, ಹತ್ತಾರು ಆಯಾಮದಲ್ಲಿ ಆಲೋಚಿಸದೇ ಮುಂದುವರಿಯುವುದು ಸರಿಯಲ್ಲ. ಆದರೆ ಅದೇಕೋ ನಮ್ಮ ಕರ್ನಾಟಕದಲ್ಲಿ ಶಿಕ್ಷಣ ಇಲಾಖೆಯು ತರಾತುರಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭವಾದ ಮೇಲೆ ಎಂಬಂತೆ ತೆಗೆದುಕೊಂಡ ತೀರ್ಮಾನವೊಂದು ವಿದ್ಯಾರ್ಥಿಗಳನ್ನಷ್ಟೇ ಅಲ್ಲದೇ ಇಡೀ ರಾಜ್ಯವನ್ನೇ ಗೊಂದಲಕ್ಕೀಡು ಮಾಡಿದೆ. ಇಲ್ಲಿ ಅಧ್ಯಾಪಕರ ಆತಂಕ ಒಂದು ಬಗೆಯದಾದರೆ, ವಿದ್ಯಾರ್ಥಿಗಳ ಆತಂಕ ಮತ್ತೊಂದು ಬಗೆಯದು.

ಈಗಾಗಲೇ ಶಿಕ್ಷಣ ಇಲಾಖೆಯು ಮಕ್ಕಳನ್ನು ಒಂದನೇ ತರಗತಿಗೆ ಸೇರಿಸಲು ಮಗುವಿಗೆ ಕಡ್ಡಾಯವಾಗಿ ಆರು ವರ್ಷವಾಗಿರಬೇಕು ಎನ್ನುವ ನಿಯಮದ ಬದಲು 60 ದಿನಗಳ ವಿನಾಯಿತಿಯನ್ನು ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಸೀಮಿತಗೊಳಿಸಿ ತೀರ್ಮಾನಿಸಿದ್ದು, ಮುಂದಿನ ಶೈಕ್ಷಣಿಕ ವರ್ಷದ ವೇಳೆಗೆ ಅದಕ್ಕೆ ಪರಿಹಾರ ಕಂಡುಕೊಳ್ಳುವುದಾಗಿ ಹೇಳಿಕೆ ನೀಡಿದ ಕುರಿತ ಪರ–ವಿರೋಧದ ಚರ್ಚೆ ಮುಗಿಯುವ ಮೊದಲೇ, ತರಾತುರಿಯಲ್ಲಿ ಎಂಬಂತೆ ತುರ್ತು ಸುದ್ದಿಗೋಷ್ಠಿ ಕರೆದ ಶಿಕ್ಷಣ ಸಚಿವರು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ತೃತೀಯ ಭಾಷೆಗೆ ಅಂಕವನ್ನು ನೀಡುವ ಬದಲು ಗ್ರೇಡಿಂಗ್ ನೀಡಲಾಗುವುದು ಎಂದು ಹೇಳಿದರು. ವಿದ್ಯಾರ್ಥಿಗಳ ಮೇಲಿನ ಒತ್ತಡದ ಹೊರೆಯನ್ನು ತಗ್ಗಿಸುವ ಹಾಗೂ ಕರ್ನಾಟಕದಲ್ಲಿ ಹಿಂದಿ ಹೇರಿಕೆಯನ್ನು ತಡೆಯುವ ಉದ್ದೇಶದಿಂದ ಎಂಬಂತೆ ಅವರು ನೀಡಿದ ಈ ಹೇಳಿಕೆ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಚಡಪಡಿಕೆ ಉಂಟುಮಾಡಿದೆ.

ನಮ್ಮ ಸರಕಾರ ಮತ್ತು ಶಿಕ್ಷಣ ಇಲಾಖೆ ಅದೇಕೆ ಇಂತಹ ಆತುರದ ನಿರ್ಧಾರ ತೆಗೆದುಕೊಳ್ಳಲು ಮುಂದಾಗುವುದೋ ಅರ್ಥವಾಗದ್ದು. ವಿದ್ಯಾರ್ಥಿಗಳ ಭವಿಷ್ಯ, ಶಿಕ್ಷಣ ಎರಡೂ ಮುಖ್ಯ. ಅದನ್ನೇ ಅಡಕತ್ತರಿಯಲ್ಲಿ ಇಟ್ಟಂತೆ ಮಾಡುವುದು ತರವಲ್ಲ. ಅಷ್ಟಕ್ಕೂ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿ ಏನಾದರೂ ನಿರ್ಧಾರ ತೆಗೆದುಕೊಳ್ಳಲೇಬೇಕು ಎಂದಿದ್ದರೆ ಆ ನಿರ್ಧಾರಗಳನ್ನು ಆಯಾ ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ತೆಗೆದುಕೊಳ್ಳುವುದು ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸೂಕ್ತವಾದುದು.

ಭಾಷೆ ಎಂಬುದು ನಮ್ಮ ಅಸ್ತಿತ್ವದ ಮೂಲ. ಭಾಷೆ ಕೇವಲ ಪದಗಳ ಸಮೂಹವಲ್ಲ; ಅದು ಆತ್ಮಗೌರವದ ಸಂಕೇತ. ಭಾಷಾ ವೈವಿಧ್ಯತೆಯೇ ಜಗತ್ತಿನ ಸೌಂದರ್ಯ. ಒಂದು ಹೂವಿನ ತೋಟವನ್ನು ಹೇಗೆ ನಾನಾ ಬಣ್ಣದ ಹೂವುಗಳು ಸುಂದರಗೊಳಿಸುತ್ತವೆಯೋ ಹಾಗೆಯೇ ನಾನಾ ಭಾಷೆಗಳು ಜಗತ್ತನ್ನು ಸುಂದರಗೊಳಿಸುತ್ತವೆ. ನಾವು ಎಷ್ಟೇ ಭಾಷೆ ಕಲಿತರೂ ಮೂಲ ಯೋಚನೆಗಳೆಲ್ಲ ರೂಪುಗೊಳ್ಳುವುದು, ಭಾವನೆಗಳು ಹುಟ್ಟಿ ಅವು ಮಾತಿನ ಅನುಭೂತಿಗೆ ನಿಲುಕುವುದೆಲ್ಲ ಮಾತೃಭಾಷೆಯಲ್ಲಿಯೇ. ಕಲಿಯುವಿಕೆ ಮತ್ತು ಕಲಿಸುವಿಕೆಯ ಮೂಲಕ ಭಾಷೆಯು ಸಂಸ್ಕೃತಿಯಾಗಿ ಪಸರಿಸುತ್ತದೆ. ಮನೆಯಲ್ಲಿ ಪೋಷಕರ ಮೂಲಕ ತಮ್ಮ ಭಾವನೆಗಳನ್ನು, ಬಯಕೆಗಳನ್ನು ಮೂಲ ಅವಶ್ಯಕತೆಯ ಹಂಚಿಕೆಯ ಕಾರಣಕ್ಕಾಗಿ ಮಕ್ಕಳು ಭಾಷೆಯನ್ನು ಕಲಿತರೆ, ಶಾಲೆಯಲ್ಲಿ ಅದು ಔಪಚಾರಿಕ ಶಿಕ್ಷಣದ ರೂಪದಲ್ಲಿ ತೆರೆದುಕೊಳ್ಳುತ್ತದೆ.

ಹೀಗಿರುವಾಗ ಸರಕಾರದ ನಿರ್ಧಾರದ ಜೊತೆಗೆ ಕನ್ನಡಪರ ಸಂಘಟನೆಗಳೂ ಕೂಡಾ 'ಹಿಂದಿ ಹೇರಿಕೆ ಸಲ್ಲದು' ಎನ್ನುತ್ತಿದ್ದಾರೆ. ಜೊತೆಗೆ ಇದು ವಿದ್ಯಾರ್ಥಿಗಳ ಮೇಲಿನ ಹೆಚ್ಚುವರಿ ಹೊರೆಯನ್ನು ತಗ್ಗಿಸಲಿದೆ ಎನ್ನುತ್ತಿದ್ದಾರೆ. ಒಂದೆಡೆ ಸರಕಾರದ ನಿಲುವಿನ ಬಗೆಗೆ ಚರ್ಚೆಗಳಾಗುತ್ತಿದ್ದರೆ ಮತ್ತೊಂದೆಡೆ ಈ ನಿರ್ಧಾರ ತೆಗೆದುಕೊಂಡ ಸಮಯದ ಬಗೆಗೂ ಮಾತುಗಳು ಕೇಳಿ ಬರುತ್ತಿವೆ. ಶೈಕ್ಷಣಿಕ ವರ್ಷದ ಆರಂಭದಲ್ಲಿ ಅಥವಾ ಪರೀಕ್ಷಾ ವೇಳಾಪಟ್ಟಿ ಘೋಷಣೆಗೂ ಮುನ್ನ ನಿರ್ಧಾರ ತೆಗೆದುಕೊಳ್ಳದೆ ಈ ತುರ್ತಿನ ನಿರ್ಧಾರ ಏಕೆ ಎಂಬುದು ನಿಜಕ್ಕೂ ಎಲ್ಲರನ್ನೂ ಕಾಡುತ್ತಿರುವ ಪ್ರಶ್ನೆ.

ಆಸಕ್ತಿ ಇದ್ದವರಿಗೆ ಭಾಷೆ ಕಲಿಯುವುದು ಕಷ್ಟವೇನಲ್ಲ. ಅವರು ಹೇಗಾದರೂ ಕಲಿಯುತ್ತಾರೆ. ಅದಕ್ಕೆ ಶಾಲಾ ಶಿಕ್ಷಣದ ಚೌಕಟ್ಟು ಬೇಕಿಲ್ಲ. ಏನೇ ಆದರೂ ಸರಕಾರ ಇನ್ನು ಹದಿನೈದು ದಿನ ಕಾದಿದ್ದರೆ ಪರೀಕ್ಷೆ ಮುಗಿದು ಹೋಗುತ್ತಿತ್ತು. ಈ ಸಲದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹೇಗಿದ್ದರೂ ಈಗಾಗಲೇ ಪರೀಕ್ಷಾ ತಯಾರಿ ನಡೆಸಿ ಆಗಿತ್ತು. ಆದುದರಿಂದ ಈ ಶೈಕ್ಷಣಿಕ ವರ್ಷದ ಬಳಿಕ ತೀರ್ಮಾನ ತೆಗೆದುಕೊಂಡರೂ ಸಾಕಿತ್ತು.

ಇದರ ನಡುವೆ ಸರಕಾರ ಹಾಗೂ ಕನ್ನಡಪರ ಹೋರಾಟಗಾರರು ಯೋಚಿಸದೇ ಬಿಟ್ಟಿರುವ ಆಯಾಮವೊಂದಿದೆ. ಕರ್ನಾಟಕದಲ್ಲಿ ಸಾವಿರಾರು ವಿದ್ಯಾರ್ಥಿಗಳು ತೃತೀಯ ಭಾಷೆಯಾಗಿ ಕನ್ನಡವನ್ನೂ ಕಲಿಯುತ್ತಿದ್ದಾರೆ! ಹಾಗಾಗಿ ಈ ನಿರ್ಧಾರವು ಇದು ಕನ್ನಡದ ಬೆಳವಣಿಗೆಗೂ ಕೊಡಲಿ ಏಟು ಕೊಟ್ಟಂತೆ ಅಲ್ಲವೇ?

ಆರೋಗ್ಯ ಹಾಗೂ ಶಿಕ್ಷಣವು ದೇಶದ ಆಧಾರ ಸ್ತಂಭಗಳಿದ್ದಂತೆ. ಈ ಕ್ಷೇತ್ರಗಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಎಷ್ಟು ಎಚ್ಚರ ತೆಗೆದುಕೊಂಡರೂ ಸಾಲದು. ಹೀಗಿರುವಾಗ ಸಂಪುಟ ಸಭೆಯಲ್ಲಿ ಚರ್ಚಿಸಿ, ತಜ್ಞರ ಅಭಿಪ್ರಾಯ ಪಡೆದು, ಸರಿಯಾಗಿ ವಿಮರ್ಶೆ–ವಿಶ್ಲೇಷಣೆ ನಡೆಸಿ, ಅಧ್ಯಯನಗಳ ಆಧಾರದಲ್ಲಿ ತೆಗೆದುಕೊಳ್ಳಬೇಕಾಗಿದ್ದ ತೀರ್ಮಾನ ಹೀಗೆ ಗೊಂದಲದ ಗೂಡಂತೆ ಹೊರಬರಬೇಕಿತ್ತೇ?

ಈಗಾಗಲೇ ಬಿಜೆಪಿ ಸರಕಾರ ಜಾರಿಗೊಳಿಸಿದ ರಾಷ್ಟ್ರೀಯ ಶಿಕ್ಷಣ ನೀತಿ ಬೇಡ ಎಂದು ರಾಜ್ಯ ಶಿಕ್ಷಣ ನೀತಿ ಅನುಸರಿಸಲಾಗುತ್ತಿದೆ. ಒಂದನೇ ತರಗತಿಗೆ ಸೇರ್ಪಡೆಗೆ 6 ವರ್ಷಗಳಾಗಿರಬೇಕು ಎಂಬ ನೀತಿಯಲ್ಲಿ ಈ ವರ್ಷ ಮತ್ತೆ ಸಡಿಲಿಕೆ ಮಾಡಲಾಗಿದೆ. ಎತ್ತ ಸಾಗುತ್ತಿದೆ ನಮ್ಮ ಮಕ್ಕಳ, ವಿದ್ಯಾರ್ಥಿಗಳ ಭವಿಷ್ಯ? ಅಧಿಕಾರಕ್ಕೆ ಬಂದ ಪಕ್ಷಕ್ಕೆ ಸ್ವಪ್ರತಿಷ್ಠೆ ಮುಖ್ಯವೇ ಅಥವಾ ದೇಶದ ಯುವ ಸಂಪತ್ತಿನ ಭವಿಷ್ಯ ಮುಖ್ಯವೇ?

ಒಟ್ಟಿನಲ್ಲಿ ಸರಕಾರ ಅಂಕಗಳಿಗೆ ಸಂಬಂಧಿಸಿ ನಿರ್ಧಾರ ತೆಗೆದುಕೊಂಡರೂ ಭಾಷೆಯ ಕುರಿತಾಗಿ ನಾವೂ ಯೋಚಿಸಬೇಕಿದೆ. ಭಾಷೆ ಯಾವುದೇ ಇರಲಿ, ಅದರ ಪ್ರಭಾವಶಾಲಿ ಚಲನೆ ಸಾಧ್ಯವಾಗುವುದು ಮಾಧ್ಯಮಗಳು ಹಾಗೂ ಶಿಕ್ಷಣದಲ್ಲಿ. ಹೀಗಿರುವಾಗ ಈ ಹೊಸ ಆತುರದ ನಿರ್ಧಾರ ಭಾಷೆಯ ಬಗೆಗೆ ಹೊಸ ಗೊಂದಲವೊಂದನ್ನು ಹುಟ್ಟುಹಾಕಿದೆ. ಈ ವಿಚಾರವನ್ನು ಪರಿಹರಿಸುವ ಸಂದರ್ಭದಲ್ಲಿ ನಮ್ಮನ್ನು ನಾವು ವಿಮರ್ಶೆಗೊಳಪಡಿಸಬೇಕಾಗಿದೆ. ನಮಗೆ ಮಾದರಿಯಾಗಬೇಕಾಗಿರುವುದು ಯಾರು ಎಂಬುದನ್ನು ಯೋಚಿಸಬೇಕಾಗಿದೆ.

ಮಕ್ಕಳಲ್ಲಿ ಕನ್ನಡ ಭಾಷಾ ಅಭಿಮಾನ, ಪ್ರೀತಿ ಬೆಳೆಸುವಲ್ಲಿ ನಾವು ಸೋತಿದ್ದೇವೆ. ಹಾಗಿದ್ದರೆ ಈಗ ನಾವು ಮಾಡಬೇಕಾಗಿರುವುದಾದರೂ ಏನು? ಮೊದಲಿಗೆ ನಮ್ಮ ಮಕ್ಕಳಿಗೆ ನಾವು ಕನ್ನಡವನ್ನು ಕಲಿಸೋಣ. ಮಕ್ಕಳಲ್ಲಿ, ಹೆತ್ತವರಲ್ಲಿ ನಮ್ಮ ಭಾಷೆ, ಸಂಸ್ಕೃತಿಯ ಬಗ್ಗೆ ಅಭಿಮಾನ, ಒಲವು, ಗೌರವವನ್ನು ಮೂಡಿಸೋಣ. ಆ ಮೂಲಕ ಯಾರೇ ಆಗಲಿ ಕನ್ನಡವನ್ನು ಮನದುಂಬಿ ಕಲಿಯುವಂತೆ ಮಾಡೋಣ. ಅವರವರನ್ನು ಅವರವರದೇ ಭಾಷೆಯಲ್ಲಿ ಮಾತನಾಡಿಸುವ ನಮ್ಮ ಉದಾರತೆಯನ್ನು ಇನ್ನಾದರೂ ತೊರೆಯೋಣ. ಆ ಮೂಲಕ ಕನ್ನಡ ಭಾಷೆ ಬೆಳೆಸೋಣ. ನಮ್ಮ ನಾಡು–ನುಡಿಯ ಬಗೆಗಿನ ಗೌರವವನ್ನು ವ್ಯಕ್ತಪಡಿಸುವುದು ಹೇಗೆ ಎಂಬುದನ್ನು ಅರಿಯೋಣ. ಏಕೆಂದರೆ ಬೇರೆಯವರು ನಮ್ಮ ನಾಡು–ನುಡಿಯ ಬಗ್ಗೆ ಗೌರವವನ್ನು ಸೂಚಿಸುತ್ತಿಲ್ಲ ಎಂದಾದಲ್ಲಿ ಅದರ ಹಿಂದಿನ ಕಾರಣೀಭೂತರೂ ನಾವೇ ಆಗಿದ್ದೇವೆ. ಹಾಗೆಂದು ಕಡ್ಡಾಯಗೊಳಿಸುವ ಮೂಲಕ ಕಲಿಸುತ್ತೇವೆ ಅಂದುಕೊಂಡರೆ ಅದು ನಮ್ಮ ಮೂರ್ಖತನವಾದೀತು. ಅಲ್ಲಿ ಭಾಷೆಯ ಬಗೆಗೆ ಯಾವುದೇ ರೀತಿಯ ಅಭಿಮಾನವಾಗಲೀ ಪ್ರೀತಿಯಾಗಲೀ ಇರಲಾರದು.

ಭಾಷಾ ಕಲಿಕೆಯ ಮನೋಭಾವವನ್ನು ಬೆಳೆಸುವುದೇ ಭಾಷೆಯ ಉಳಿವಿಗೆ ಭದ್ರ ಬುನಾದಿ. ಬಲವಂತದ ಹೇರಿಕೆ ಎಂದಿದ್ದರೂ ಅಪಾಯಕಾರಿಯೇ. ಒಂದು ಪ್ರದೇಶದಲ್ಲಿ ವಿವಿಧ ಭಾಷೆಗಳನ್ನಾಡುವ ಜನರು ಜೊತೆಗಿದ್ದಾಗ ಸೌಹಾರ್ದಯುತ ಜೀವನವನ್ನು ನಡೆಸಲು ಸ್ಥಳೀಯ ಭಾಷೆಯನ್ನು ಕಲಿಯುವುದು ಅನುಕೂಲಕರ. ಆದರೆ ಕಲಿಯಬೇಕೇ ಬೇಡವೇ ಅನ್ನುವುದು ವೈಯಕ್ತಿಕ ವಿಚಾರ.

ನಾವಿಂದು ಯೋಚಿಸಬೇಕಾಗಿರುವುದು ಕೇವಲ ಸರಕಾರದ ನೀತಿ ನಿರ್ಧಾರಗಳ ಬಗೆಗೆ ಮಾತ್ರವಲ್ಲ, ನಮ್ಮ ಭಾಷೆಯ ಬಗೆಗೂ ಆಗಿದೆ. ವ್ಯಕ್ತಿ ಬಹುಭಾಷೆ ಕಲಿಯುವುದು ಭವಿಷ್ಯಕ್ಕೆ ಪೂರಕ. ಅಂತಾರಾಷ್ಟ್ರೀಯ ಭಾಷೆ ಎಂದು ಇಂಗ್ಲಿಷ್ ಅನ್ನು ಪುರಸ್ಕರಿಸುವ ನಮಗೆ ಉಳಿದ ಭಾಷೆಗಳು ಮಾತ್ರ ಕಿರಿಕಿರಿ ಉಂಟು ಮಾಡುತ್ತಿರುವುದು ಆಭಾಸಕರ. 'ಇಂಗ್ಲಿಷ್ ಬಲ್ಲವ ಮಾತ್ರ ಜಾಣ' ಎಂಬ ಭಾವ ಮನದೊಳಗಿದೆ. ಕಾರಣ– ನಮ್ಮ ನಾಡು–ನುಡಿಯ ಹಿರಿಮೆಯನ್ನು ತೋರಿಸುವ ಪ್ರಜ್ಞೆ, ಕೌಶಲ್ಯ, ಕ್ಷಮತೆಯ ಕೊರತೆಯು ನಮ್ಮಲ್ಲಿದೆ. ಅಂದರೆ ಸೃಜನಶೀಲ ನಿರ್ವಹಣೆಯ ಕೊರತೆ ನಮ್ಮದು. ಅದನ್ನು ಕೊನೆಗಾಣಿಸಿ ನಮ್ಮ ಸಂಸ್ಕೃತಿಯ ವಿಶಿಷ್ಟತೆಯನ್ನು ಮನಗಾಣಿಸಬೇಕಿದೆ; ಸಾಹಿತ್ಯದ ಬಗ್ಗೆ ಪ್ರೇರೇಪಿಸಿ, ಅಭಿಮಾನ ಬೆಳೆಸಬೇಕಿದೆ. ನಮ್ಮ ಸಂಸ್ಕೃತಿಯನ್ನು ನಾವೇ ಸರಿಯಾಗಿ ಬಿಂಬಿಸದೆ ಇತರರು ಆದರಿಸುತ್ತಿಲ್ಲ, ಗೌರವಿಸುತ್ತಿಲ್ಲ ಎಂದು ಅತ್ತರೇನು ಫಲವಿಲ್ಲ. ಆದುದರಿಂದ ಪ್ರತಿಭಟನೆ, ಕಡ್ಡಾಯಗೊಳಿಸುವಿಕೆಗಳ ಬದಲಾಗಿ ನಮ್ಮ ಸಂಸ್ಕೃತಿ, ಭಾಷೆಯನ್ನು ಉತ್ತಮವಾಗಿ ಬಿಂಬಿಸುವ ಸಕಾರಾತ್ಮಕ ಕಾರ್ಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವ ಮೂಲಕ ಭಾಷೆಯನ್ನು ಉಳಿಸಿ ಬೆಳೆಸಬೇಕಾಗಿದೆ.

ಭಜನ, ಯುವಜನ ಮತ್ತು ಸಮಾಜ ಪ್ರಬೋಧನ

ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



> ಕಾಲ ಬದಲಾದರೂ ಭಜನೆಯ ಮಹತ್ವ ಕಡಿಮೆಯಾಗಿಲ್ಲ. ಬದಲಿಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥

ಎಂಬ ಭಾಗವತದ ಉಕ್ತಿಯಂತೆ ಒಂಬತ್ತು ವಿಧದ ಭಕ್ತಿಗಳಲ್ಲಿ ಕೀರ್ತನೆಯೂ ಕೂಡ ಒಂದು. ಕೀರ್ತನವೆಂದರೆ ನಾಮಸ್ಮರಣೆ ಅಥವಾ ಭಗವಂತನ ಮಾಹಾತ್ಮ್ಯದ ವರ್ಣನೆ. ಇದು ಭಜನ, ಕೀರ್ತನ, ನಾಮಸ್ಮರಣೆ, ಜಪ, ಸ್ತೋತ್ರ ಮೊದಲಾದ ಆಯಾಮಗಳಲ್ಲಿ ಪ್ರಕಟವಾಗುತ್ತದೆ. ಭಜನವು ಅತ್ಯಂತ ಪ್ರಾಚೀನಕಾಲದಿಂದಲೂ ಭಗವದ್ಭಕ್ತಿಯ ಅಭಿವ್ಯಕ್ತಿಯ ಸಾಧನವಾಗಿದೆ. ಭಜನದ ಮೂಲಕ ಮನಸ್ಸು ಪರಮಾತ್ಮನಲ್ಲಿ ನೆಲೆಯಾಗಲು ಸಹಾಯಕವಾಗಿದೆ. ಭಜ ಸೇವಾಯಾಂ ಎಂಬ ಧಾತುವಿನಿಂದ ನಿಷ್ಪನ್ನಗೊಂಡ ಭಜನವೆಂಬ ಶಬ್ದವು ಸೇವೆಯೆಂಬ ಅರ್ಥವನ್ನು ಹೊಂದಿದೆ. ಪರಮಾತ್ಮನ ಮಾನಸವಾದ ಸೇವೆಯ ರೂಪದಲ್ಲಿ ಭಜನೆಯು ನಮ್ಮ ಮತ್ತು ಪರಮಾತ್ಮನ ನಡುವಿನ ಸೇತುವೆಯೇ ಆಗಿದೆ. ಭಜನೆಗೆ ಪ್ರಾಚೀನ ಕಾಲದ ಇತಿಹಾಸವಿದೆ. ಉಪನಿಷತ್ತಿನಲ್ಲಿಯೇ ನಾಮಸ್ಮರಣೆಯ ಬಗ್ಗೆ ಉಲ್ಲೇಖವಿದೆ. ಕಲಿಸಂತರಣೋಪನಿಷತ್ ಮೊದಲಾದವುಗಳಲ್ಲಿ ನಾಮಜಪದ ಬಗೆಗೆ ಉಲ್ಲೇಖಗಳಿವೆ. ನಾಮಸ್ಮರಣೆಯನ್ನು ಗಾಯನದ ಮೂಲಕ ಮಾಡಿದಾಗ ಅದು ಭಜನೆ ಎನಿಸಿಕೊಳ್ಳುತ್ತದೆ. ಇದು ಭಗವದ್ಭಕ್ತಿಯ ಅಭಿವ್ಯಕ್ತಿಗೆ ಅತ್ಯುತ್ತಮವಾದ ಸಾಧನವಾಗಿದೆ.

ಭಜನೆಯಲ್ಲಿ ಭಗವಂತನ ರೂಪದ, ಆತನ ಐಶ್ವರ್ಯದ ಮತ್ತು ಚರಿತೆಯ ವರ್ಣನೆಯನ್ನು ಮತ್ತು ಸ್ತುತಿಯನ್ನು ಮಾಡಲಾಗುತ್ತದೆ. ಆ ಮೂಲಕ ದೀರ್ಘಕಾಲ ಮನಸ್ಸು ಒಂದೇ ವಿಷಯದಲ್ಲಿ ನಿಲ್ಲುವಂತೆ ಮಾಡುತ್ತದೆ. ರಾಮಾಯಣದಲ್ಲಿ ಲವಕುಶರು ಶ್ರೀರಾಮನ ಚರಿತ್ರೆಯನ್ನು ಹಾಡುತ್ತಾ ಅಯೋಧ್ಯೆಗೆ ಬರುವ ಪ್ರಸಂಗವಿದೆ. ಈ ರೀತಿಯಲ್ಲಿ ಭಗವಂತನ ವಿಭೂತಿಯನ್ನು ಸ್ಮರಿಸಿಕೊಳ್ಳುತ್ತಾ, ತನ್ನ ಚಿತ್ತವನ್ನು ಶುದ್ಧಗೊಳಿಸಿಕೊಳ್ಳುವುದಕ್ಕೆ ಇದೊಂದು ಸಮರ್ಥವಾದ ಮಾಧ್ಯಮವಾಗಿದೆ. ಒಂದೇ ನಾಮವನ್ನು ಅಥವಾ ವಾಕ್ಯವನ್ನು ಮತ್ತೆ ಮತ್ತೆ ಉಚ್ಚರಿಸುವುದರಿಂದ ಸಮಾನವಿಷಯಕವಾದ ಮನೋವೃತ್ತಿಯುಂಟಾಗುತ್ತದೆ. ಇದು ಮನಸ್ಸಿನಲ್ಲಿ ಉಂಟಾಗುವ ಉಳಿದೆಲ್ಲ ಆಲೋಚನಾತ್ಮಕವಾದ ವೃತ್ತಿಗಳನ್ನು ನಿರೋಧಿಸುವ ಮೂಲಕ ಧ್ಯಾನಸ್ಥಿತಿಗೆ ಕೊಂಡೊಯ್ಯುತ್ತದೆ. ಹಾಗಾಗಿ ಸಾಮಾನ್ಯರಿಂದ ಸಾಧಕರವರೆಗೆ ಮನಸ್ಸಿನ ನಿಗ್ರಹದ ಜೊತೆಗೆ ಅದರ ಏಕಾಗ್ರತೆಯನ್ನು ಸಾಧಿಸಲು ಪ್ರಭಾವಕಾರಿಯಾದ ಸಾಧನವಾಗಿದೆ. ಭಜನೆಯು ಮನಸ್ಸಿನಲ್ಲಿ ಸಕಾರಾತ್ಮಕವಾದ ತರಂಗವನ್ನು ಉಂಟುಮಾಡುವ ಮೂಲಕ ಶಾಂತಿಯನ್ನೂ, ಹೊಸ ಉತ್ಸಾಹವನ್ನೂ, ಪ್ರೇರಣೆಯನ್ನೂ ಒದಗಿಸುತ್ತದೆ.

ನಾವು ಸಣ್ಣ ವಯಸ್ಸಿನಲ್ಲಿದ್ದಾಗ ಅವಿಭಕ್ತಕುಟುಂಬದ ಎಲ್ಲ ಹಿರಿಯರು ಕಿರಿಯರೊಂದಿಗೆ ಸಾಯಂಕಾಲದಲ್ಲಿ ದೇವರ ಎದುರು ಕೂತು ಭಜನೆಯನ್ನು ಮಾಡುವ ಸಂಪ್ರದಾಯವಿತ್ತು. ಆಗ ದೂರದರ್ಶನವಾಗಲೀ, ಮೊಬೈಲ್ ಆಗಲೀ ಇಲ್ಲದ ಕಾರಣ ಎಲ್ಲರೂ ಭಜನೆಯನ್ನು ಮಾಡುತ್ತಾ ಭಗವದ್ಭಕ್ತಿಯಲ್ಲಿ ಮುಳುಗುತ್ತಿದ್ದರು. ಈ ಮೂಲಕ ಕುಟುಂಬದ ಎಲ್ಲ ಸದಸ್ಯರೂ ತಮ್ಮ ಹಗಲಿನ ಶ್ರಮವನ್ನೆಲ್ಲ ಮರೆಯುತ್ತಿದ್ದರು. ಜೊತೆಗೆ ಕುಟುಂಬದ ಎಲ್ಲ ಸದಸ್ಯರ ಜೊತೆಗೆ ಸೌಮನಸ್ಯವನ್ನು ಕಾಪಾಡಿಕೊಳ್ಳುವಲ್ಲಿ ಭಜನೆಯು ನೆರವಾಗುತ್ತಿತ್ತು. ಗಣೇಶ ಚತುರ್ಥಿ ಮೊದಲಾದ ಹಬ್ಬಗಳ ಸಂದರ್ಭದಲ್ಲಿಯಂತೂ ಊರವರೆಲ್ಲ ಸೇರಿ ಸಾಮೂಹಿಕ ಭಜನೆಯನ್ನು ಮಾಡುತ್ತಿದ್ದರು. ಆ ಮೂಲಕ ಭಜನೆಯು ಊರಿನ ಎಲ್ಲರನ್ನೂ ಒಂದುಗೂಡಿಸುತ್ತಿತ್ತು. ಇಲ್ಲಿ ಎಲ್ಲರೂ ಒಂದೇ ಎಂಬ ಏಕತೆಯ ಭಾವವನ್ನು ಅದು ಉಂಟುಮಾಡುತ್ತಿತ್ತು. ಎಲ್ಲೆಡೆಯೂ ಭಜನಾಮಂಡಳಿಗಳು ಇರುತ್ತಿದ್ದವು. ಹೀಗೆ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ನಮ್ಮ ಪರಂಪರೆಯನ್ನು, ಸಂಸ್ಕೃತಿಯನ್ನು ತಲುಪಿಸುವ ಮಾಧ್ಯಮವಾಗಿಯೂ, ಕುಟುಂಬದ ಸದಸ್ಯರ ಜೊತೆಗೆ ಇಡೀ ಊರಿನ ಸದಸ್ಯರನ್ನೆಲ್ಲರನ್ನೂ ಒಂದಾಗಿಸುವ ಮತ್ತು ಏಕತೆಯನ್ನು, ಸೌಹಾರ್ದವನ್ನು ಬೆಳೆಸುವ ಮಾಧ್ಯಮವೂ ಆಗಿತ್ತು.

ಇಂದಿನ ವೇಗದ ಜೀವನದಲ್ಲಿ ನಾವೆಲ್ಲ ತಂತ್ರಜ್ಞಾನ ಮತ್ತು ಮಾಹಿತಿಯ ಪ್ರವಾಹದ ನಡುವೆ ಸಿಕ್ಕಿಹಾಕಿಕೊಂಡಿದ್ದೇವೆ. ಸಾಮಾಜಿಕ ಜಾಲತಾಣಗಳು, ನಿರಂತರ ಸ್ಪರ್ಧೆ, ಜೀವನದ ಒತ್ತಡಗಳು–ಇವುಗಳ ಪರಿಣಾಮವಾಗಿ ಮನಸ್ಸಿನ ಶಾಂತಿ ಕುಂದುತ್ತಿದೆ. ಇಂದಿನ ಯುವಸಮುದಾಯ ಅತಿ ಹೆಚ್ಚು ಶಾಂತಿಯನ್ನು ಅರಸುತ್ತಿದೆ. ಚಿಕ್ಕ ವಯಸ್ಸಿನಲ್ಲಿಯೇ ಯುವಕರು ಅನೇಕ ವಿಧದ ಮಾನಸಿಕ ಒತ್ತಡಗಳಿಗೆ ಸಿಲುಕುತ್ತಿದ್ದಾರೆ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನಿರ್ಧರಿಸುವಲ್ಲಿ ಹೆಚ್ಚು ಎಡವುತ್ತಿದ್ದಾರೆ. ಅದಕ್ಕೆ ಕಾರಣ ಲೋಕದ ಆಕರ್ಷಣೆಯೇ ಆಗಿದೆ. ಉದ್ಯೋಗವನ್ನು ಹಿಡಿದು ಹಣದ ಸಂಪಾದನೆಯನ್ನು ಮಾಡಿ, ಅದನ್ನು ನಾನಾವಿಧದಲ್ಲಿ ವ್ಯಯಿಸುವುದೇ ಆನಂದದ ಮೂಲ



ಎಂಬ ಭ್ರಾಂತಿಗೆ ಎಲ್ಲರೂ ಒಳಗಾಗಿದ್ದಾರೆ. ಹಾಗಾಗಿ ಹೆಚ್ಚು ಹೆಚ್ಚು ಸಂಪಾದಿಸುವುದೇ ಮುಖ್ಯ ಎಂಬಂತಾಗಿದೆ. ಈ ನಡುವೆ ಅಗಾಧವಾದ ಒತ್ತಡ ಹಾಗೂ ಮಾನಸಿಕ ಅಶಾಂತಿಗೆ ಎಲ್ಲರೂ ಈಡಾಗುತ್ತಿದ್ದಾರೆ. ಎರಡು ನಿಮಿಷ ಕೂತು ಸುಧಾರಿಸಿಕೊಳ್ಳುವಷ್ಟು ಕೂಡ ಯಾರಿಗೂ ವ್ಯವಧಾನವಿಲ್ಲ. ತಾಳ್ಮೆಯನ್ನು ಅಕ್ಷರಮಟ್ಟಿಗೆ ಕೆಡಿಸಿಕೊಂಡಿದ್ದೇವೆ. ಇಂಥ ಕಾಲಘಟ್ಟದಲ್ಲಿ ಭಜನೆಯ ಮಹತ್ವ ಇನ್ನಷ್ಟು ಹೆಚ್ಚುತ್ತಿದೆ. ನಿಧಾನವಾಗಿ ಭಜನೆಗಳು ಮತ್ತೆ ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತಿವೆ. ಈ ಮೂಲಕ ಭಾರತೀಯ ಜೀವನ ಪದ್ಧತಿಯು ಎಲ್ಲ ಕಾಲಕ್ಕೂ ಸೂಕ್ತವಾದುದು ಎಂಬುದು ಸಮಾಜ ಅರಿವಿಗೆ ಮತ್ತೊಮ್ಮೆ ಬರುತ್ತಿದೆ. ನಮ್ಮ ಹಿರಿಯರ ಜೀವನ ಪದ್ಧತಿಯನ್ನು ಅನುಸರಿಸುವುದೇ ಎಲ್ಲ ಆಧುನಿಕ ಸಮಸ್ಯೆಗಳಿಗೂ ಪರಿಹಾರವೆಂಬ ಎಚ್ಚರ ಮೂಡುತ್ತಿರುವುದು ಒಳ್ಳೆಯ ಬೆಳವಣಿಗೆಯೇ ಹೌದು.

ಕಾಲ ಬದಲಾದರೂ ಭಜನೆಯ ಮಹತ್ವ ಕಡಿಮೆಯಾಗಿಲ್ಲ. ಬದಲಿಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಯಾವ ಸಾಮಾಜಿಕ ಜಾಲತಾಣಗಳು ಅತ್ಯಧಿಕ ಮಾನಸಿಕ ವಿಕ್ಷೇಪವನ್ನು ಉಂಟುಮಾಡಲು ಕಾರಣವಾಗಿವೆಯೋ, ಅವುಗಳೇ ಮತ್ತೊಮ್ಮೆ ಹೊಸ ಹೊಸ ರೂಪದಲ್ಲಿ ಭಜನೆಗಳನ್ನು ಯುವಸಮುದಾಯಕ್ಕೆ ತಲುಪಿಸುತ್ತಾ, ಭಜನೆಯತ್ತ ಆಕರ್ಷಿಸುವ ಮಾಧ್ಯಮವೂ ಆಗಿವೆ. ಇವತ್ತು ಉಳಿದೆಲ್ಲ ಸಂಗೀತದ ಕಾರ್ಯಕ್ರಮಗಳಂತೆ, ಆಧುನಿಕ ಪರಿಕರಗಳೊಂದಿಗೆ ನಡೆಸಲಾಗುವ ಭಜನೆ, ಕೀರ್ತನೆಗಳ ಕಾರ್ಯಕ್ರಮಗಳೂ ಜನಪ್ರಿಯವಾಗುತ್ತಿವೆ. ಈ ಕಾರಣಕ್ಕಾಗಿ ಜೆನ್–ಝೀ ಇನ್ನಿಲ್ಲದಷ್ಟು ಭಜನೆಗಳತ್ತ ಆಕರ್ಷಿತರಾಗುತ್ತಿದ್ದಾರೆ. ಯೂಟ್ಯೂಬ್, ಇನ್ಸ್ಟಾಗಳಲ್ಲಿ ಭಜನೆಗಳನ್ನು ಆಧರಿಸಿದ ಕಲಾವಿದರಿಗೆ ಹೆಚ್ಚೆಚ್ಚು ದೃಶ್ಯಾಂಕಗಳು ದೊರೆಯುತ್ತಿವೆ. ಸಂಗೀತದ ಮೂಲಕ ಇದನ್ನು ಮೊದಲು ಆರಂಭಿಸಿದವರು ಕುಲದೀಪ ಪೈ ಅಂಥವರು. ಅವರು ತಮ್ಮ ಯೂಟ್ಯೂಬ್ ಚಾನೆಲ್ ಮೂಲಕ ಬಾಲಪ್ರತಿಭೆಗಳ ಸಂಗೀತವನ್ನು ಪ್ರಸ್ತುತಪಡಿಸುತ್ತಾ ಸೂರ್ಯಗಾಯತ್ರಿಯಂಥ ಅನೇಕ ಪ್ರತಿಭೆಗಳನ್ನು ಲೋಕಕ್ಕೆ ಪರಿಚಯಿಸಿದರು. ಈಗ ಸೂರ್ಯಗಾಯತ್ರಿ, ರಾಹುಲ ವೆಳ್ಳಾಲ ಮೊದಲಾದವರು ದೇವರ ನಾಮವನ್ನು ಸಂಗೀತದ ಮೂಲಕ ಪ್ರಸ್ತುತಪಡಿಸುತ್ತಾ ಲಕ್ಷಾಂತರ ಜನರನ್ನು ಸೆಳೆಯುತ್ತಿದ್ದಾರೆ. ಮೈಥಿಲಿ ಠಾಕೂರ್, ರಾಧಿಕಾ ದಾಸ್ ಮೊದಲಾದವರು ಭಜನೆಗಳಿಗೆ ಹೊಸ ಶ್ರೋತೃವರ್ಗವನ್ನು ಸೃಷ್ಟಿಸಿದ್ದಾರೆ. ಭಜನೆಗಳಿಗೆ ಹೊಸ ಆಯಾಮವನ್ನೂ ಒದಗಿಸಿದ್ದಾರೆ.

ಇಂದು ಭಜನೆಯೆಂಬುದು ಹೊಸ ರೂಪದೊಂದಿಗೆ ಮತ್ತೆ ಪ್ರಸಿದ್ಧ ವಾಗುತ್ತಿದೆ. ಶಂಕರರು ನಿರ್ಮಿಸಿದ ಸ್ತೋತ್ರಗಳಿಂದ ಹಿಡಿದು, ದಾಸರ ಪದ, ಮರಾಠಿ ಅಭಂಗಗಳವರೆಗೆ ಎಲ್ಲ ಪ್ರಾಚೀನ ಕೃತಿಗಳು ಹೊಸ ರೂಪದೊಂದಿಗೆ ಮತ್ತೆ ಎಲ್ಲರ ಬಾಯಲ್ಲಿ ನಲಿಯುತ್ತಿವೆ. ಶಂಕರಾಚಾರ್ಯರು ಸಾವಿರಾರು ವರ್ಷಗಳ ಹಿಂದೆಯೇ ಸ್ತೋತ್ರಸಾಹಿತ್ಯದ ಮೂಲಕ ಕೇವಲ ಭಗವದ್ಭಕ್ತಿಯ ಜಾಗರಣೆ ಯನ್ನು ಮೂಡಿಸಿದ್ದಷ್ಟೇ ಅಲ್ಲ, ಉಪನಿಷತ್ತುಗಳ, ಶಾಸ್ತ್ರಗಳ ಸಾರವನ್ನು ನಿತ್ಯವೂ ಸಾಮಾನ್ಯನ ಬಾಯಲ್ಲಿ ನಲಿಯುವಂತೆ ಮಾಡಲು ಕಾರಣರಾಗಿದ್ದರು. ಇವತ್ತು ಮತ್ತೆ ಅಂಥ ಕೃತಿಗಳು ಸಮಾಜದಲ್ಲಿ ಅನುರಣನಗೊಳ್ಳುತ್ತಿವೆ. ಸ್ತೋತ್ರ, ಭಜನೆಗಳು ಮತ್ತೆ ಮುನ್ನೆಲೆಗೆ ಬರುತ್ತಿರುವ ಈ ಹೊತ್ತಿನಲ್ಲಿ ಇದಕ್ಕೆ ಇನ್ನಷ್ಟು ವೇಗವನ್ನು ಕೊಡುವ ಉದ್ದೇಶದಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘವು ಕೂಡ ಪಂಚ ಪರಿವರ್ತನೆಗಳಲ್ಲಿ ಭಜನೆಯನ್ನೂ ಸೇರಿಸಿಕೊಂಡಿದೆ. ಯಾಕೆಂದರೆ ಭಜನೆಯು ವ್ಯಕ್ತಿತ್ವದ ನಿರ್ಮಾಣದಲ್ಲಿಯೂ ಕೂಡ ಮಹತ್ವದ ಪಾತ್ರವನ್ನು ವಹಿಸುತ್ತದೆ. ಜೊತೆಗೆ ಸಾಮಾಜಿಕ ಸಮರಸತೆಗೆ ಸೇತುವೂ ಆಗಿದೆ.


ಮಠಗಳು ಭಜನೆ ಮತ್ತು ಕೀರ್ತನೆಗಳ ವ್ಯಾಪಕ ಪ್ರಚಾರವನ್ನು ಮಾಡುತ್ತಿವೆ. ಏಕಸ್ವರದಲ್ಲಿ ಲಕ್ಷಕಂಠದ ಸ್ತೋತ್ರಪಾರಾಯಣದ ಸಮರ್ಪಣೆಯಂಥ ಕಾರ್ಯಕ್ರಮಗಳು ಮಹಾನಗರಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿವೆ. ಇತ್ತೀಚೆಗೆ ಭಜನೆಗೆ ಪರಿಸರ ಸಂರಕ್ಷಣೆಯ ಹೊಸ ಮುಖವೊಂದನ್ನು ಸ್ವರ್ಣವಲ್ಲಿಯ ಶ್ರೀ ಶ್ರೀ ಮದ್ಗಂಗಾಧರೇಂದ್ರ ಸ್ವಾಮಿಗಳು ಕೊಟ್ಟಿದ್ದಾರೆ. ಉತ್ತರ ಕನ್ನಡದ ನದಿಗಳ ತಿರುವು ಯೋಜನೆಯ ವಿರುದ್ಧದ ಜನರ ಧ್ವನಿಯಾಗಿರುವ ಸ್ವರ್ಣವಲ್ಲೀ ಸ್ವಾಮಿಗಳು ಶಿರಸಿ, ಬೆಂಗಳೂರು ಮುಂತಾದ ಕಡೆಗಳಲ್ಲಿ ಸಮಾವೇಶಗಳನ್ನು ನಡೆಸಿದ್ದಷ್ಟೇ ಅಲ್ಲ, ಈ ಬಗ್ಗೆ ವ್ಯಾಪಕವಾದ ಜನಜಾಗರಣದ ದೃಷ್ಟಿಯಿಂದ ಮತ್ತು ಪರಿಸರ ಸಂರಕ್ಷಣೆಯ ಅಭಿಯಾನಕ್ಕೆ ಆಧ್ಯಾತ್ಮಿಕ ಹಿನ್ನೆಲೆಯನ್ನೂ ಜೋಡಿಸುವ ಉದ್ದೇಶದಿಂದ ತಮ್ಮೆಲ್ಲ ಶಿಷ್ಯವಲಯಕ್ಕೆ ನಿರಂತರವಾಗಿ ಭಜನೆಗಳನ್ನು ಮಾಡುವ ಅಭಿಯಾನಕ್ಕೆ ಕರೆ ಕೊಟ್ಟಿದ್ದಾರೆ. ಆಯಾ ಊರಿನ ಎಲ್ಲರೂ ಒಂದು ದೇವಾಲಯದಲ್ಲಿ ಸೇರಿ ನಿತ್ಯವೂ ಒಂದು ಘಂಟೆಯ ಕಾಲ ಭಜನೆಯನ್ನು ಮಾಡಬೇಕೆಂಬ ಶ್ರೀಗಳ ಅಪ್ಪಣೆಯಂತೆ ಉತ್ತರಕನ್ನಡದ ಎಲ್ಲ ಊರುಗಳಲ್ಲಿಯೂ ಯಶಸ್ವಿಯಾಗಿ ಭಜನೆಯನ್ನು ನಡೆಸಲಾಗುತ್ತಿದೆ.

ಹೀಗೆ ಭಜನೆಯು ವ್ಯಕ್ತಿತ್ವನಿರ್ಮಾಣದ, ಆಧ್ಯಾತ್ಮಿಕ ಸಾಧನೆಯ, ಸಾಮಾಜಿಕ ಸಮರಸತೆಯ, ಪರಂಪರೆಯ ಸಂರಕ್ಷಣೆಯ ಅನೇಕ ಮಜಲುಗಳಲ್ಲಿ ಒಂದು ಪ್ರಖರ ಮಾಧ್ಯಮವಾಗಿದ್ದು ಮತ್ತೊಮ್ಮೆ ಸಮಾಜದಲ್ಲಿ ಮುನ್ನಲೆಗೆ ಬರುತ್ತಿರುವುದು ಅತ್ಯಂತ ಸಂತಸದ ವಿಷಯ. ನಮ್ಮ ಮನೆಗಳಲ್ಲೂ ಭಜನೆಯು ನಿರಂತರ ನಡೆಯುವಂತೆ ಪ್ರಯತ್ನಿಸಿದಲ್ಲಿ ಸುಖ,ಶಾಂತಿ, ಸಮೃದ್ಧಿಗಳು ಉಂಟಾಗುವುದರಲ್ಲಿ ಸಂದೇಹವಿಲ್ಲ.

ಜಲಸಂಧಿ ಬಹುತೇಕ ಮುಚ್ಚಿದ್ದರೂ ಯುದ್ಧ ನಿಲ್ಲಿಸಲು ಟ್ರಂಪ್ ಒಲವು

ಹಾರ್ಮುಜ್ ಮುಚ್ಚಿದ್ದರೂ ಯುದ್ಧ ನಿಲ್ಲಿಸ್ತಾರಾ ಟ್ರಂಪ್?

- ಇರಾನ್ ನೌಕಾಪಡೆ ದುರ್ಬಲಗೊಳಿಸುವುದೇ ಗುರಿ
- ಜಲಸಂಧಿ ಅಮೆರಿಕಕ್ಕಿಂತ ಇತರ ರಾಷ್ಟ್ರಗಳಿಗೆ ಬಹು ಮುಖ್ಯ: ಡೊನಾಲ್ಡ್ ಟ್ರಂಪ್



ವಾಷಿಂಗ್ಟನ್: ಹಾರ್ಮುಜ್ ಜಲಸಂಧಿಯನ್ನು ಬಹುತೇಕ ಮುಚ್ಚಿದ್ದರೂ ಸರಿ, ಇರಾನ್ ಯುದ್ಧವನ್ನು ನಿಲ್ಲಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿದ್ಧವಾಗಿದ್ದಾರೆಂದು ಅವರ ಆಪ್ತ ವಲಯಗಳು ತಿಳಿಸಿವೆಯೆಂದು ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ.

ಸದ್ಯ ಇರಾನ್ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿ ಸಂಪೂರ್ಣ ತೆರೆಯುವುದಕ್ಕಾಗಿ ಕಾರ್ಯಾಚರಣೆ ಕೈಗೆತ್ತಿಕೊಂಡರೆ ಗುರಿ ಸಾಧಿಸಲು ಇನ್ನೂ ನಾಲ್ಕರಿಂದ ಆರು ವಾರಗಳವರೆಗೆ ಯುದ್ಧ ನಡೆಸುವ ಅಗತ್ಯವಿರುವುದನ್ನು ಟ್ರಂಪ್ ಮತ್ತವರ ಆಪ್ತ ವಲಯ ಮನಗಂಡಿದೆ ಎಂದು ವರದಿಯಾಗಿದೆ.



ಇದರಿಂದಾಗಿ ಅಮೆರಿಕ ಸದ್ಯ ಹಾರ್ಮುಜ್ ವಶಪಡಿಸುವ ಕಾರ್ಯಾಚರಣೆ ಯೋಜನೆಯನ್ನು ಕೈಬಿಟ್ಟಿದೆ. ಹಾರ್ಮುಜ್ ವಶಪಡಿಸುವ ಬದಲಿಗೆ ಇರಾನ್ ಮೇಲಿನ ಸೇನಾ ಕಾರ್ಯಾಚರಣೆಯಲ್ಲಿ ಗುರಿ ಸಾಧಿಸುವುದರ ಬಗ್ಗೆ ಹೆಚ್ಚಿನ ಗಮನಹರಿಸುತ್ತಿದೆ. ಇರಾನ್ ನೌಕಾಪಡೆಯನ್ನು ದುರ್ಬಲಗೊಳಿಸುವುದು, ಇರಾನ್ ಕ್ಷಿಪಣಿ ಸಂಗ್ರಹಾಗಾರಗಳ ನಾಶ ಮತ್ತು ರಾಜತಾಂತ್ರಿಕ ಮಾತುಕತೆ ಮೂಲಕ ಒತ್ತಡ ಹಾಕುವುದರ ಮೇಲೆ ಅಮೆರಿಕ ಗಮನ ಹರಿಸಲಿದೆ ಎಂದು ವರದಿಯಾಗಿದೆ.

ಜಾಗತಿಕ ತೈಲ ಮತ್ತು ಅನಿಲ ಪೂರೈಕೆಯಲ್ಲಿ ಹಾರ್ಮುಜ್ ಜಲಸಂಧಿ ಎಷ್ಟೊಂದು ಪ್ರಮುಖ ಪಾತ್ರವಹಿಸುತ್ತದೆ ಎಂಬ ಸಂದೇಶವನ್ನು ಸಾಮಾನ್ಯ ಜನರಿಗೆ ಈಗಾಗಲೇ ಅಧ್ಯಕ್ಷ ಟ್ರಂಪ್ ರವಾನಿಸಿದ್ದಾರೆ. ಜಲಸಂಧಿಯನ್ನು ತೆರೆಯದಿದ್ದರೆ ಇರಾನ್ ಇಂಧನ ಮೂಲಸೌಕರ್ಯಗಳ ಮೇಲೆ ಬಾಂಬ್ ದಾಳಿ ನಡೆಸುವುದಾಗಿ ಬೆದರಿಕೆಯೊಡ್ಡುವ ಮೂಲಕ ಜಲಸಂಧಿಯ ಪ್ರಾಮುಖ್ಯತೆ ಕುರಿತು ಅರಿವು ಮೂಡಿಸಿದ್ದಾರೆ. ಇದಲ್ಲದೆ, ಜಲಸಂಧಿಯು ಅಮೆರಿಕಕ್ಕಿಂತ ಹೆಚ್ಚು ಇತರ ರಾಷ್ಟ್ರಗಳ ಸಾಗರೋತ್ತರ ವ್ಯವಹಾರಕ್ಕೆ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದೂ ಟ್ರಂಪ್ ಬೊಟ್ಟು ಮಾಡಿದ್ದಾರೆ.

ಹಾರ್ಮುಜ್ ಬಂದ್: ವ್ಯಾಪಾರ ಅನಿಶ್ಚಿತತೆ

ಜಾಗತಿಕ ತೈಲ ಪೂರೈಕೆಯ ಶೇ.20ರಷ್ಟು ಭಾಗ ಹಾರ್ಮುಜ್ ಜಲಸಂಧಿಯನ್ನು ದಾಟಿ ಹೋಗಬೇಕಾಗುತ್ತದೆ. ಹೀಗಾಗಿ ಇರಾನ್ ಮೇಲಿನ ಯುದ್ಧದಿಂದ ಜಲಸಂಧಿ ಮುಚ್ಚಿರುವುದರಿಂದ ಶೇ.20ರಷ್ಟು ತೈಲ ಪೂರೈಕೆ ವ್ಯತ್ಯಯ ಸೃಷ್ಟಿಸಿದೆ. ಇದಲ್ಲದೆ ವಿಶ್ವದ ದೊಡ್ಡ ದೊಡ್ಡ ತೈಲ ಮಾರುಕಟ್ಟೆಗಳ ಮೇಲೆ ಹಾರ್ಮುಜ್ ನೇರ ಪರಿಣಾಮವನ್ನು ಬೀರುತ್ತದೆ. ಈ ಹಿಂದೆ ಜಲಸಂಧಿಯನ್ನು ಯಾವುದೇ ಅಡೆತಡೆಗಳಿಲ್ಲದೆ ದಾಟುತ್ತಿದ್ದ ರಾಷ್ಟ್ರಗಳನ್ನೂ ಯುದ್ಧ ಪರಿಸ್ಥಿತಿ ಬಾಧಿಸಿದೆ. ಜಾಗತಿಕ ಮಟ್ಟದಲ್ಲಿ ತೈಲ ಅಥವಾ ಅನಿಲ ಪೂರೈಕೆಯಷ್ಟೇ ಅಲ್ಲದೆ, ರಸಗೊಬ್ಬರ, ಹೀಲಿಯಂ, ಸೆಮಿಕಂಡಕ್ಟರ್, ಗ್ಲಾಸ್ ಬಾಟಲ್ ಉತ್ಪಾದನೆ ಇತ್ಯಾದಿ ಉದ್ಯಮಗಳನ್ನೂ ಬಾಧಿಸಿದೆ. ಜಾಗತಿಕವಾಗಿ ಒಂದು ಬ್ಯಾರೆಲ್ ತೈಲ ಬೆಲೆಯು 100 ಡಾಲರ್ ಹೆಚ್ಚಾಗಿದೆ.

ಅಮೆರಿಕದ ಸಿಗೋನೆಲ್ಲಾ ವಾಯುನೆಲೆ ಬಳಸಲು ಅನುಮತಿಸದ ಇಟಲಿ!

ರೋಮ್: ಸಿಸಿಲಿಯಲ್ಲಿರುವ ಸಿಗೋನೆಲ್ಲಾ ಮಿಲಿಟರಿ ವಾಯುನೆಲೆಯನ್ನು ಸಾಮಾನ್ಯೇತರ ಕಾರ್ಯಾಚರಣೆಗಳಿಗಾಗಿ ಬಳಸಲು ಅಮೆರಿಕಕ್ಕೆ ಇಟಲಿ ಅನುಮತಿ ನಿರಾಕರಿಸಿದೆ. ಈ ಮೂಲಕ ಮತ್ತೊಮ್ಮೆ ಟ್ರಂಪ್‌ಗೆ ಭಾರೀ ಮುಖಭಂಗವಾಗಿದೆ. ಮಧ್ಯಪ್ರಾಚ್ಯದತ್ತ ತೆರಳುತ್ತಿದ್ದ ಅಮೆರಿಕದ ಬಾಂಬರ್ ವಿಮಾನಗಳ ಹಾರಾಟ ಯೋಜನೆಯನ್ನು ಗಮನಿಸಿದ ರಕ್ಷಣಾ ಸಚಿವ ಗೈಡೋ ಕ್ರೊಸೆಟ್ಟೊ ಈ ನಿರ್ಧಾರ ಕೈಗೊಂಡಿದ್ದಾರೆ. ವಿಮಾನಗಳು ಈಗಾಗಲೇ ಟೇಕ್-ಆಫ್ ಆದ ನಂತರವಷ್ಟೇ ಇಟಲಿ ಅಧಿಕಾರಿಗಳಿಗೆ ಈ ಮಿಷನ್ ಬಗ್ಗೆ ಮಾಹಿತಿ ಸಿಕ್ಕಿತ್ತು. ಪ್ರಾಥಮಿಕ ತಪಾಸಣೆಯ ನಂತರ, ಈ ಹಾರಾಟಗಳು ಕೇವಲ ಲಾಜಿಸ್ಟಿಕಲ್ ಉದ್ದೇಶದ್ದಲ್ಲ ಮತ್ತು ಅಸ್ತಿತ್ವದಲ್ಲಿರುವ ದ್ವಿಪಕ್ಷೀಯ ಒಪ್ಪಂದಗಳ ವ್ಯಾಪ್ತಿಗೆ ಬರುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲಾಯಿತು. ಇಂತಹ ಕಾರ್ಯಾಚರಣೆಗಳಿಗೆ ಪೂರ್ವಭಾವಿ ರಾಜಕೀಯ ಮತ್ತು ಮಿಲಿಟರಿ ಸಮಾಲೋಚನೆಗಳ ಅಗತ್ಯವಿರುತ್ತದೆ. ಸಾಮಾನ್ಯ ಕಾರ್ಯಾಚರಣೆಗಳ ಹೊರತಾದ ಯಾವುದೇ ಚಟುವಟಿಕೆಗಳಿಗೆ ಸಂಸತ್ತಿನ ಅನುಮೋದನೆ ಅಗತ್ಯ ಎಂದು ಪ್ರಧಾನಿ ಜಾರ್ಜಿಯಾ ಮೆಲೋನಿ ಈ ಹಿಂದೆ ತಿಳಿಸಿದ್ದರು. ಸಿಗೋನೆಲ್ಲಾ ನೆಲೆಯು ಅಮೆರಿಕ ಸೇನೆಗೆ ಮೆಡಿಟರೇನಿಯನ್ ಪ್ರದೇಶದಲ್ಲಿ ಆಯಕಟ್ಟಿನ ಕೇಂದ್ರವಾಗಿದೆ. ಇರಾನ್ ವಿರುದ್ಧದ ಸಂಘರ್ಷಕ್ಕೆ ಸ್ಪೇನ್ ತನ್ನ ವಾಯುಪ್ರದೇಶವನ್ನು ಮುಚ್ಚಿದ ಬೆನ್ನಲ್ಲೇ ಇಟಲಿಯೂ ಈ ನಿರ್ಧಾರ ತೆಗೆದುಕೊಂಡಿದೆ.

ಇಂಧನ ಬೇಕಿದ್ದರೆ, ಜಲಸಂಧಿಗೆ ತೆರಳಿ!

ಇರಾನ್ ಯುದ್ಧದಲ್ಲಿ ಬೆಂಬಲಿಸದ ಮಿತ್ರರಾಷ್ಟ್ರಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಿಮಗೆ ಬೇಕಿರುವ ತೈಲ ನೀವೇ ಸಂಗ್ರಹಿಸಿಕೊಳ್ಳಿ ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ವಶಪಡಿಸಲು ಯುದ್ಧ ನೌಕೆಗಳನ್ನು ಕಳುಹಿಸಲು ಅಮೆರಿಕ ಮನವಿಯನ್ನು ತಿರಸ್ಕರಿಸಿದ್ದ ಮಿತ್ರ ರಾಷ್ಟ್ರಗಳು ತಮಗೆ ತೈಲ ಬೇಕಾಗಿದ್ದರೆ ಅಮೆರಿಕದಿಂದ ಖರೀದಿಸಲಿ ಅಥವಾ ಹಾರ್ಮುಜ್‌ಗೆ ಹೋಗಿ ಅಲ್ಲಿಂದ ನೇರ ಸಂಗ್ರಹಿಸಿಕೊಳ್ಳಲಿ ಎಂದು ಟ್ರಂಪ್ ಕುಹಕವಾಡಿದ್ದಾರೆ. ಬ್ರಿಟನ್ ಸೇರಿದಂತೆ ಎಲ್ಲಾ ಮಿತ್ರರಾಷ್ಟ್ರಗಳು ಹಾರ್ಮುಜ್ ಮೂಲಕ ತೈಲ ಆಮದು ಮಾಡಿಕೊಳ್ಳುತ್ತವೆ. ಇಂತಹ ರಾಷ್ಟ್ರಗಳ ಮುಂದೆ ಎರಡು ಆಯ್ಕೆಗಳಿವೆ. ಅಮೆರಿಕದಿಂದ ತೈಲ ಖರೀದಿಸುವುದು ಅವರಿಗಿರುವ ಮೊದಲ ಆಯ್ಕೆ. ಸ್ವಲ್ಪ ತಡವಾದರೂ ಧೈರ್ಯ ಮಾಡಿಕೊಂಡು ಹಾರ್ಮುಜ್ ಜಲಸಂಧಿಗೆ ನೇರ ಹೋಗಿ ತೈಲ ಸಂಗ್ರಹಿಸುವುದು ಎರಡನೇ ಆಯ್ಕೆ ಎಂದು ಟ್ರಂಪ್ ಟ್ರುಥ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ. ನಿಮಗೋಸ್ಕರ ಹೋರಾಡಲು ಕಲಿಯಿರಿ: ನಿಮಗೋಸ್ಕರ ನೀವೇ ಹೋರಾಡಲು ಕಲಿತುಕೊಳ್ಳಿ. ನೀವು ಹೇಗೆ ನಮಗೆ ಸಹಾಯ ಮಾಡಿಲ್ಲವೋ ಹಾಗೆ ಮುಂದೆ ನಿಮಗೇನಾದರೂ ಸಮಸ್ಯೆಯಾದರೆ ಅಮೆರಿಕ ಸಹಾಯ ಮಾಡಲ್ಲ ಎಂದು ಅಧ್ಯಕ್ಷ ಟ್ರಂಪ್ ಯುರೋಪ್ ರಾಷ್ಟ್ರಗಳನ್ನು ಎಚ್ಚರಿಸಿದ್ದಾರೆ.

ಇಸ್ಫಾಹಾನ್ ಮೇಲೆ ಬೃಹತ್ ದಾಳಿ



ಸುಮಾರು 23 ಲಕ್ಷ ಜನಸಂಖ್ಯೆ ಹೊಂದಿರುವ ಮತ್ತು ಬದ್ರ್ ಸೇನಾ ವಿಮಾನ ನಿಲ್ದಾಣವಿರುವ ಇಸ್ಫಾಹಾನ್ ನಗರದ ಮದ್ದುಗುಂಡು ಸಂಗ್ರಹಣಾ ಕೇಂದ್ರದ ಮೇಲೆ ಅಮೆರಿಕ ಸೇನೆ 2,000 ಪೌಂಡ್ (ಸುಮಾರು 907 ಕೆಜಿ) ತೂಕದ ಬಂಕರ್ ಬಸ್ಟರ್ ಬಾಂಬ್‌ಗಳನ್ನು ಬಳಸಿ ದಾಳಿ ನಡೆಸಿದೆ. ಈ ದಾಳಿಯಿಂದಾಗಿ ಸರಣಿ ಸ್ಫೋಟಗಳು ಮತ್ತು ಬಲವಾದ ಆಘಾತಕಾರಿ ಅಲೆಗಳು ಸೃಷ್ಟಿಯಾಗಿವೆ. ಇರಾನ್ ತನ್ನ ಬಳಿಯಿರುವ ಸುಮಾರು 540 ಕೆಜಿ ಪುಷ್ಟೀಕರಿಸಿದ ಯುರೇನಿಯಂ ಅನ್ನು ಈ ನಗರದ ಭೂಗತ ಕೇಂದ್ರಕ್ಕೆ ಸ್ಥಳಾಂತರಿಸಿರಬಹುದು ಎಂಬ ವರದಿಗಳ ಬೆನ್ನಲ್ಲೇ ಈ ದಾಳಿ ನಡೆದಿದೆ.

ಮೂಲಸೌಕರ್ಯಗಳ ನಾಶದ ಬೆದರಿಕೆ: ಒಂದು ವೇಳೆ ಯುದ್ಧ ನಿಲ್ಲಿಸಲು ಶೀಘ್ರವೇ ಒಪ್ಪಂದಕ್ಕೆ ಬರದಿದ್ದರೆ ಮತ್ತು ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸದಿದ್ದರೆ ಇರಾನ್‌ನ ಇಂಧನ ಸಂಪನ್ಮೂಲಗಳು, ಪರಮಾಣು ಕೇಂದ್ರಗಳು ಮತ್ತು ನೀರಿನ ಪ್ಲಾಂಟ್‌ಗಳನ್ನು ನಾಶಪಡಿಸುವುದಾಗಿ ಟ್ರಂಪ್ ಎಚ್ಚರಿಸಿದ ಒಂದು ದಿನದ ನಂತರ ಈ ಕಾರ್ಯಾಚರಣೆ ನಡೆದಿದೆ.

ಬಂಕರ್ ಬಸ್ಟರ್ ತಂತ್ರಜ್ಞಾನ: ಈ ದಾಳಿಯಲ್ಲಿ ಬಳಸಲಾದ ಬಿಎಲ್‌ಯು-109 ನಂತಹ ಬಾಂಬ್‌ಗಳು ಗಟ್ಟಿಯಾದ ಉಕ್ಕಿನ ಕವಚವನ್ನು ಹೊಂದಿದ್ದು, ಮಣ್ಣು ಮತ್ತು ಕಾಂಕ್ರೀಟ್ ಪದರಗಳನ್ನು ಕೊರೆದು ಒಳಗೆ ಹೋದ ನಂತರವೇ ಸ್ಫೋಟಗೊಳ್ಳುತ್ತವೆ. ಇವುಗಳಲ್ಲಿ ಕೆಲವು ಸ್ಮಾರ್ಟ್ ಫ್ಯೂಸ್‌ಗಳನ್ನು ಹೊಂದಿದ್ದು, ಕಟ್ಟಡದ ಎಷ್ಟು ಮಹಡಿಗಳನ್ನು ದಾಟಬೇಕು ಅಥವಾ ಶಬ್ದಗಳನ್ನು ಕೇಳಿಸಿಕೊಂಡ ನಂತರವೇ ಸ್ಫೋಟಗೊಳ್ಳಬೇಕೆಂಬುದನ್ನು ನಿರ್ಧರಿಸುವ ತಂತ್ರಜ್ಞಾನ ಹೊಂದಿವೆ.

ಪ್ರಾದೇಶಿಕ ಹಿನ್ನೆಲೆ: ಈ ಸಂಘರ್ಷ ಎರಡನೇ ತಿಂಗಳಿಗೆ ಕಾಲಿಟ್ಟಿದೆ. ಇರಾನ್ ಪರಮಾಣು ಅಸ್ತ್ರ ತಯಾರಿಕೆಗೆ ಹತ್ತಿರದಲ್ಲಿದೆ, ಎಂದು ಅಮೆರಿಕ ಮತ್ತು ಇಸ್ರೇಲ್ ಆರೋಪಿಸುತ್ತಿದ್ದರೂ, ವಿಶ್ವಸಂಸ್ಥೆಯ ಪರಮಾಣು ಕಾವಲು ಸಂಸ್ಥೆ ಈ ವಾದವನ್ನು ಬೆಂಬಲಿಸಿಲ್ಲ. ಕಳೆದ ವರ್ಷ ಕೂಡ 'ಆಪರೇಷನ್ ಮಿಡ್‌ನೈಟ್ ಹ್ಯಾಮರ್' ಅನ್ವಯದಲ್ಲಿ ಇಸ್ಫಾಹಾನ್ ನಗರವನ್ನು ಗುರಿಯಾಗಿಸಲಾಗಿತ್ತು.

ಟ್ರಂಪ್ ಷರತ್ತುಗಳಿಗೆ ಒಪ್ಪಿದರಷ್ಟೇ ಯುದ್ಧ ಅಂತ್ಯ



ವಾಷಿಂಗ್ಟನ್: ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಷರತ್ತುಗಳಿಗೆ ಒಪ್ಪಿದರಷ್ಟೇ ಯುದ್ಧ ಕೊನೆಗಾಣಲಿದೆ. ಮುಂದಿನ ಕೆಲವು ದಿನಗಳು ಮಧ್ಯಪ್ರಾಚ್ಯ ಯುದ್ಧದಲ್ಲಿ ಬಹಳ ನಿರ್ಣಾಯಕ ದಿನಗಳೆಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹಾಗೂ ರಕ್ಷಣಾ ಜಂಟಿ ಮುಖ್ಯಸ್ಥ ಜನರಲ್ ಡಾನ್ ಕೇನ್ ಮಂಗಳವಾರ ಘೋಷಿಸಿದ್ದಾರೆ. ಮಧ್ಯಪ್ರಾಚ್ಯ ಯುದ್ಧವು ಮುಂದಿನ ದಿನಗಳಲ್ಲಿ ಅನಿರೀಕ್ಷಿತ ತಿರುವುಗಳನ್ನು ಕಾಣಲಿದೆ ಎಂದು ಹೆಗ್ಸೆತ್ ಹೇಳಿದ್ದಾರೆ. ಇರಾನ್‌ಗೆ ಸೈನ್ಯವನ್ನು ಕಳುಹಿಸಲು ಅಮೆರಿಕ ಬಯಸುವುದಿಲ್ಲ. ಆದರೆ ಒಂದು ವೇಳೆ ನಾವು ಸೈನ್ಯ ಕಳುಹಿಸಿದರೆ ಯಾರಿಗೂ ಹೇಳಲಾರೆ ಎಂದು ಎಚ್ಚರಿಕೆ ನೀಡಿದ್ದಾರೆ. ಇರಾನ್‌ನಲ್ಲಿ ಅಮೆರಿಕ ತನ್ನ ಎಪಿಕ್ ಫ್ಯೂರಿ ಕಾರ್ಯಾಚರಣೆ ಮುಂದುವರಿಸಲು ಸಿದ್ಧವಾಗಿದೆ ಎಂದು ಹೆಗ್ಸೆತ್ ತಿಳಿಸಿದ್ದಾರೆ.

ಗೂಗಲ್, ಮೈಕ್ರೋಸಾಫ್ಟ್‌ಗೆ ಇರಾನ್‌ನಿಂದ ದಾಳಿ ಬೆದರಿಕೆ

- ಪಶ್ಚಿಮ ಏಷ್ಯಾ ಯುದ್ಧ ಉಲ್ಬಣ
- ಅಮೆರಿಕದ ಟೆಕ್ ದೈತ್ಯ ಸಂಸ್ಥೆಗಳ ಮೇಲೆ ದಾಳಿ ಎಚ್ಚರಿಕೆ

ಟೆಹ್ರಾನ್: ಪಶ್ಚಿಮ ಏಷ್ಯಾದಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿರುವ ಹಿನ್ನೆಲೆ, ಇರಾನ್ ಅಮೆರಿಕದ ಪ್ರಮುಖ ತಂತ್ರಜ್ಞಾನ ಕಂಪನಿಗಳಿಗೆ ನೇರ ಬೆದರಿಕೆ ಹಾಕಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಭಯೋತ್ಪಾದಕ ಕಾರ್ಯಾಚರಣೆಗಳಿಗೆ ಪ್ರತಿಯಾಗಿ, ಮೈಕ್ರೋಸಾಫ್ಟ್, ಆ್ಯಪಲ್, ಗೂಗಲ್, ಇಂಟೆಲ್, ಬೋಯಿಂಗ್ ಸೇರಿದಂತೆ ಹಲವು ಕಂಪನಿಗಳನ್ನು ಗುರಿಯಾಗಿಸಲಾಗುವುದು ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಎಚ್ಚರಿಸಿದೆ. ಅಮೆರಿಕದ ಐಸಿಟಿ ಮತ್ತು ಕೃತಕ ಬುದ್ಧಿಮತ್ತೆ(ಎಐ) ಕಂಪನಿಗಳು ಹತ್ಯೆ ಕಾರ್ಯಾಚರಣೆಗಳನ್ನು ರೂಪಿಸುವ ಮತ್ತು ಜಾರಿಗೆ ತರುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ ಎಂದು ಆರೋಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇರಾನ್‌ನಲ್ಲಿ ನಡೆಯುವ ಪ್ರತಿಯೊಂದು ದಾಳಿಗೂ ಪ್ರತಿಯಾಗಿ ಈ ಕಂಪನಿಗಳ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಲಾಗುವುದು ಎಂದು ಸ್ಪಷ್ಟಪಡಿಸಲಾಗಿದೆ.

ಈ ಬೆದರಿಕೆಯ ಭಾಗವಾಗಿ, ಕಂಪನಿಗಳ ಕಚೇರಿಗಳ ಸುತ್ತಮುತ್ತ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ಉದ್ಯೋಗಿಗಳು ಮತ್ತು ನಿವಾಸಿಗಳಿಗೆ ಸ್ಥಳತ್ಯಾಗ ಮಾಡಲು ಸೂಚಿಸಲಾಗಿದೆ. ಏ. 1ರಂದು ಟೆಹರಾನ್ ಸಮಯ ರಾತ್ರಿ 8 ಗಂಟೆಯಿಂದ ಪ್ರತೀಕಾರ ಕಾರ್ಯಾಚರಣೆಗಳು ಆರಂಭವಾಗಲಿವೆ ಎಂದು ಅದು ಎಚ್ಚರಿಕೆ ನೀಡಿದೆ. ಇದಕ್ಕೂ ಮುನ್ನವೂ ಇರಾನ್ ಇದೇ ರೀತಿಯ ಎಚ್ಚರಿಕೆ ನೀಡಿದ್ದರೂ, ಯಾವುದೇ ನೈಜ ದಾಳಿ ನಡೆದಿರಲಿಲ್ಲ. ಆದರೆ ಈ ಬಾರಿ ಪರಿಸ್ಥಿತಿ ಹೆಚ್ಚು ಗಂಭೀರವಾಗಿದೆ ಎಂಬ ಆತಂಕ ವ್ಯಕ್ತವಾಗಿದೆ.

ಇದಕ್ಕೆ ಪ್ರತಿಕ್ರಿಯೆಯಾಗಿ ಅಮೆರಿಕವೂ ಕಠಿಣ ನಿಲುವು ತಾಳಿದೆ. ಮುಂದಿನ ದಿನಗಳಲ್ಲಿ ನಾವು ತೀವ್ರ ರೀತಿಯಲ್ಲಿ ದಾಳಿ ನಡೆಸಲಿದ್ದೇವೆ. ಕೆಲವು ದಿನಗಳು ನಿರ್ಣಾಯಕವಾಗಿವೆ ಎಂದು ಹೇಳಿದೆ.



ಕಿರುಸುದ್ದಿ

ಟೆನಿಸ್ ದಂತಕಥೆ ಲಿಯಾಂಡರ್ ಬಿಜೆಪಿಗೆ

ಕೋಲ್ಕತ್ತಾ: ಭಾರತೀಯ ಟೆನಿಸ್ ದಂತಕಥೆ ಲಿಯಾಂಡರ್ ಪೇಸ್ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಪಶ್ಚಿಮ ಬಂಗಾಳ ಚುನಾವಣೆಗೂ ಮುನ್ನ ಈ ಬೆಳವಣಿಗೆ ನಡೆದಿದೆ. ಕೇಂದ್ರ ಸಚಿವ ಕಿರಣ್ ರಿಜಿಜು ಸೇರಿದಂತೆ ಪಕ್ಷದ ಹಿರಿಯ ನಾಯಕರ ಸಮ್ಮುಖದಲ್ಲಿ ಅವರು ಬಿಜೆಪಿ ಸೇರ್ಪಡೆಯಾಗಿದ್ದಾರೆ. ಟೆನಿಸ್ ತಾರೆ ಲಿಯಾಂಡರ್ ಪೇಸ್ ಇತ್ತೀಚೆಗೆ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿಯಾದ ಬಳಿಕ ಅವರು ಬಿಜೆಪಿಗೆ ಸೇರ್ಪಡೆಯಾಗುತ್ತಾರೆಂಬ ಊಹಾಪೋಹಗಳು ಸೃಷ್ಟಿಯಾಗಿತ್ತು.

ಕಾಲ್ತುಳಿತ: 9 ಭಕ್ತರ ಸಾವು

ಪಾಟ್ನಾ: ಭಕ್ತರ ಸಂದಣಿಯಿಂದ ಬಿಹಾರದ ನಳಂದ ಜಿಲ್ಲೆಯ ಶೀತಲ ದೇವಸ್ಥಾನದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಕನಿಷ್ಠ 9 ಮಹಿಳಾ ಭಕ್ತರು ಮೃತಪಟ್ಟಿದ್ದು, ಅನೇಕರು ಗಾಯಗೊಂಡಿದ್ದಾರೆ.ಧಾರ್ಮಿಕ ಸಭೆ ವೇಳೆ ಈ ದುರಂತ ಸಂಭವಿಸಿದೆ. ಮಹಾವೀರ ಜಯಂತಿ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ನೆರೆದಿದ್ದರು. ಇದರಿಂದಾಗಿ ಜನದಟ್ಟಣೆ ಉಂಟಾಗಿದ್ದು, ಬ್ಯಾರಿಕೇಡ್ ಮುರಿದ್ದು, ಒಬ್ಬರ ಮೇಲೆ ಒಬ್ಬರಂತೆ ಕೆಳಗೆ ಬಿದ್ದಿದ್ದಾರೆ.

ಭಾರತದತ್ತ ಮತ್ತೆ ಇರಾನ್ ಕಚ್ಚಾ ತೈಲ ಹೊತ್ತ ಟ್ಯಾಂಕರ್

- ಗುಜರಾತ್ ತೀರಕ್ಕೆ ಮೊದಲ ಕಾರ್ಗೋ ಆಗಮನ ಸಾಧ್ಯತೆ

ಹೊಸದಿಲ್ಲಿ: ಆರು ವರ್ಷಗಳ ಹಿಂದೆ ಸ್ಥಗಿತಗೊಂಡಿದ್ದ ಇರಾನ್ ಮೂಲದ ಕಚ್ಚಾ ತೈಲ ಖರೀದಿ ಮತ್ತೆ ಆರಂಭವಾಗುವ ಲಕ್ಷಣಗಳು ಕಾಣಿಸುತಿವೆ. ಅಮೆರಿಕದ ತಾತ್ಕಾಲಿಕ ನಿರ್ಬಂಧ ಸಡಿಲಿಕೆ ಬೆನ್ನಲ್ಲೇ ಸುಮಾರು 6 ಲಕ್ಷ ಬ್ಯಾರೆಲ್ ಇರಾನಿಯನ್ ಕಚ್ಚಾ ತೈಲವನ್ನು ಹೊತ್ತ ಟ್ಯಾಂಕರ್ ಒಂದು ಗುಜರಾತ್ ತೀರದ ವಡಿನಾರ್ ಬಂದರಿಗೆ ಮುಖ ಮಾಡಿದೆ ಎಂಬ ಮಾಹಿತಿ ಹಡಗು ಟ್ರ್ಯಾಕಿಂಗ್ ಡೇಟಾದಿಂದ ತಿಳಿದು ಬಂದಿದೆ.

ಅಮೆರಿಕ ಸರ್ಕಾರ 30 ದಿನಗಳ ಅವಧಿಗೆ ಸಮುದ್ರದಲ್ಲಿರುವ ಇರಾನ್ ತೈಲ ಖರೀದಿಗೆ ಸಡಿಲಿಕೆ ನೀಡಿದ್ದು, ಇದರ ಪರಿಣಾಮವಾಗಿ ಭಾರತ ಸೇರಿ ಕೆಲ ದೇಶಗಳು ಮತ್ತೆ ಈ ತೈಲವನ್ನು ಖರೀದಿಸಲು ಮುಂದಾಗಿವೆ. ಈ ಹಿನ್ನೆಲೆ ಪಿಂಗ್ ಶುನ್ ಎಂಬ ಅಫ್ರಮ್ಯಾಕ್ಸ್ ಟ್ಯಾಂಕರ್ ಮಾರ್ಚ್ ಆರಂಭದಲ್ಲಿ ಖರ್ಗ್ ದ್ವೀಪದಿಂದ ಹೊರಟು ಏಪ್ರಿಲ್ 4ರಂದು ವಡಿನಾರ್ ತಲುಪುವ ನಿರೀಕ್ಷೆಯಿದೆ.

ಕಾಮೊಡಿಟಿ ಮಾರುಕಟ್ಟೆ ವಿಶ್ಲೇಷಕ ಸಂಸ್ಥೆ ಕ್ಲೆಪರ್‌ನ ಸಂಶೋಧನಾ ವಿಶ್ಲೇಷಕ ಸುಮಿತ್ ರಿತೋಲಿಯಾ ಪ್ರಕಾರ, 2019ರ ಮೇ ಬಳಿಕ ಭಾರತಕ್ಕೆ ಬರುತ್ತಿರುವ ಮೊದಲ ಇರಾನಿಯನ್ ತೈಲ ಸರಕು ಇದು.

ಪಾವತಿ ಸಮಸ್ಯೆ ಮುಂದುವರಿಕೆ: ಅಮೆರಿಕ ನೀಡಿರುವ ಸಡಿಲಿಕೆ ಕೇವಲ ತಾತ್ಕಾಲಿಕವಾಗಿದ್ದು, ಏಪ್ರಿಲ್ 19ರವರೆಗೆ ಮಾತ್ರ ಮಾನ್ಯವಾಗಿದೆ. ಜಾಗತಿಕ ಬ್ಯಾಂಕಿಂಗ್ ಸಂಪರ್ಕ ವ್ಯವಸ್ಥೆಯಾದ ಸ್ವಿಫ್ಟ್‌ನಿಂದ ಇರಾನ್ ಹೊರಗಿಡಲ್ಪಟ್ಟಿರುವುದರಿಂದ ಪಾವತಿ ಹೇಗೆ ನಡೆಯಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಅಸ್ಸಾಂ ಬಿಜೆಪಿ ಪ್ರಣಾಳಿಕೆ: ಏನಾಸಂ ಜಾರಿ ಭರವಸೆ

ಗುವಾಹಟಿ: ಮುಂಬರುವ ಅಸ್ಸಾಂ ವಿಧಾನಸಭಾ ಚುನಾವಣೆಗಾಗಿ ಭಾರತೀಯ ಜನತಾ ಪಾರ್ಟಿ ಮಂಗಳವಾರ ತನ್ನ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಅಧಿಕಾರಕ್ಕೆ ಬಂದ ಮೂರು ತಿಂಗಳೊಳಗೆ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿಗೆ ತರುವುದಾಗಿ ಭರವಸೆ ನೀಡಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, 31 ಭರವಸೆಗಳನ್ನೊಳಗೊಂಡ ಸಂಕಲ್ಪ ಪತ್ರವನ್ನು ಬಿಡುಗಡೆ ಮಾಡಿದರು. ಲವ್ ಜಿಹಾದ್ ಮತ್ತು 'ಲ್ಯಾಂಡ್ ಜಿಹಾದ್' ವಿರುದ್ಧ ಕಾನೂನು ತರುವುದಾಗಿ ಪಕ್ಷ ಪ್ರತಿಜ್ಞೆ ಮಾಡಿದೆ. ಬುಡಕಟ್ಟು ಸಮುದಾಯಗಳ ಅವರನ್ನು ಏನಾಸಂ ವ್ಯಾಪ್ತಿಯಿಂದ ಹೊರಗಿಡಲಾಗುವುದು, ಎಂದು ತಿಳಿಸಲಾಗಿದೆ.

ಅಕ್ರಮ ವಲಸಿಗರ ಪತ್ತೆಗೆ 'ವಲಸಿಗರ (ಅಸ್ಸಾಂನಿಂದ ಹೊರಹಾಕುವಿಕೆ) ಕಾಯ್ದೆ, 1950' ಅನ್ನು ಜಾರಿಗೆ ತರುವುದಾಗಿ ಪ್ರಣಾಳಿಕೆ ವಿವರಿಸಿದೆ. 'ಮಿಷನ್ ಬಸುಂಧರಾ' ಅನ್ವಯದಲ್ಲಿ ಅತಿಕ್ರಮಿತ ಭೂಮಿಯನ್ನು ಮುಕ್ತಗೊಳಿಸಿ ಅಧಿಕೃತ ನಾಗರಿಕರಿಗೆ ಹಕ್ಕುಗಳನ್ನು ನೀಡುವ, ಅತಿಕ್ರಮಣಕ್ಕೊಳಗಾದ ಧಾರ್ಮಿಕ ಸ್ಥಳಗಳನ್ನು ತೆರವುಗೊಳಿಸುವ ಭರವಸೆಯೂ ಒಳಗೊಂಡಿದೆ.

ಮೂಲಸೌಕರ್ಯಕ್ಕಾಗಿ 5 ಲಕ್ಷ ಕೋಟಿ ರೂ. ಮತ್ತು ಪ್ರವಾಹ ನಿಯಂತ್ರಣಕ್ಕಾಗಿ 18,000 ಕೋಟಿ ರೂ. ಹೂಡಿಕೆ ಮಾಡುವ ಪ್ರಸ್ತಾವನೆ ಇಡಲಾಗಿದೆ. 2 ಲಕ್ಷ ಸರ್ಕಾರಿ ಉದ್ಯೋಗಗಳು, ಅರುಣೋದೋಯ ಯೋಜನೆಯಡಿ ಮಾಸಿಕ ಧನಸಹಾಯವನ್ನು 3,000 ರೂ.ಗೆ ಏರಿಕೆ ಮತ್ತು ಚಹಾ ತೋಟದ ಕಾರ್ಮಿಕರ ದಿನಗೂಲಿಯನ್ನು 500 ರೂ.ಗೆ ಹೆಚ್ಚಿಸುವ ಭರವಸೆ ನೀಡಲಾಗಿದೆ.

ಇನ್‌ಫ್ಲುಯೆನ್ಸರ್ಸ್ ಮೇಲೆ ಕೇಂದ್ರದ ಹದ್ದಿನ ಕಣ್ಣು

ಹೊಸದಿಲ್ಲಿ: ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸುವುದಕ್ಕಾಗಿ ಹೊಸ ಐಟಿ (ಡಿಜಿಟಲ್) ನಿಯಮ 2026 ಕಾಯ್ದೆ ಕರಡು ಪ್ರತಿಯನ್ನು ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿದೆ. ಇನ್‌ಫ್ಲುಯೆನ್ಸರ್‌ಗಳು ಮತ್ತು ವೈಯಕ್ತಿಕ ಬಳಕೆದಾರರು ಅಪ್ಲೋಡ್ ಮಾಡುವ ಡಿಜಿಟಲ್ ಕಂಟೆಂಟ್ ಮೇಲೆ ಹೆಚ್ಚಿನ ನಿಗಾ ಇರಿಸುವುದಕ್ಕಾಗಿ ಕೇಂದ್ರ ಸರ್ಕಾರ ಹೊಸ ಐಟಿ ಕಾಯ್ದೆಯನ್ನು ಪರಿಚಯಿಸಲು ಮುಂದಾಗಿದೆ.

- ಸರ್ಕಾರ ಅಥವಾ ಕೋರ್ಟ್ ಆದೇಶಿಸಿದರೆ 3 ಗಂಟೆಗಳಲ್ಲಿ ಪೋಸ್ಟ್ ಅಳಿಸಿಹಾಕಬೇಕು (ಈ ಹಿಂದೆ 36 ಗಂಟೆಗಳಲ್ಲಿ)
- ಡೀಪ್‌ಫೇಕ್ ನಗ್ನತೆ ಅಥವಾ ದ್ವೇಷಪೂರಿತ ನೀಲಿ ಚಿತ್ರಗಳ ಪೋಸ್ಟ್ ಅನ್ನು 2 ಗಂಟೆಗಳಲ್ಲಿ ಅಳಿಸಿಹಾಕಬೇಕು
- ಡೀಪ್‌ಫೇಕ್ ಪ್ರಕರಣದಲ್ಲಿ 3 ವರ್ಷ ಜೈಲು ಮತ್ತು ದಂಡ, ಕಂಟೆಂಟ್ ನಗ್ನತೆಯಿಂದ ಕೂಡಿದ್ದರೆ 5 ವರ್ಷ ಜೈಲು
- ಎಐ ಸುದ್ದಿ ವಿಡಿಯೋ, ವಾಯ್ಸ್ ಓವರ್ ಅಥವಾ ಚಿತ್ರಗಳನ್ನು ಪೋಸ್ಟ್ ಮಾಡುವ ಕ್ರಿಯೇಟರ್ಸ್ ಅದರಲ್ಲಿ ಎಐ-ಜನರೇಟೆಡ್ ವಾಟರ್‌ಮಾರ್ಕ್ ಬಳಸುವುದು ಕಡ್ಡಾಯ
- ವಯೋಮಾನ ಆಧಾರಿತ ಡಿಜಿಟಲ್ ಕಂಟೆಂಟ್ ಜಾರಿಗೆ ಬರಲಿದ್ದು, ಯು (ಯುನಿವರ್ಸಲ್), 7+, 13+, 16+ ಅಥವಾ ಎ(ಅಡಲ್ಟ್) ಲೇಬಲ್ ಬಳಕೆ ಸಾಧ್ಯತೆಯಿದೆ.
- ಕೋಮು ಗಲಭೆ ಅಥವಾ ಚುನಾವಣೆ ವೇಳೆ ಸರ್ಕಾರಿ ನಿರ್ದೇಶ ಉಲ್ಲಂಘಿಸುವುದು ಐಟಿ ನಿಯಮ ಉಲ್ಲಂಘನೆ ಎನಿಸಿಕೊಳ್ಳಲಿದೆ.

ಬಿಇಎಲ್ ಜತೆ ₹1,950 ಕೋಟಿ ಒಪ್ಪಂದಕ್ಕೆ ಸಹಿ

ಹೊಸದಿಲ್ಲಿ: ಅತಿ ಸೂಕ್ಷ್ಮ ಸಂವೇದಿ ಗಡಿ ವಲಯಗಳಲ್ಲಿ ದೇಶದ ವಾಯು ರಕ್ಷಣಾ ಸಾಮರ್ಥ್ಯಗಳ ಬಲವರ್ಧನೆಗಾಗಿ ಭಾರತ ಸರಕಾರ ಅತ್ಯಂತ ಮಹತ್ವದ ಹೆಜ್ಜೆಯಿರಿಸಿದೆ .ಇದರಂಗ ದುರ್ಗಮ ಪರ್ವತ ಪ್ರದೇಶಗಳಲ್ಲಿ ಸುಲಭವಾಗಿ ಸಾಗಣೆಯೂ ಸಾಧ್ಯವಿರುವ ಎರಡು ರಾಡಾರ್‌ಗಳ ಖರೀದಿ ಮತ್ತು ಇವುಗಳಿಗೆ ಸಂಬಂಧಿಸಿದ ಮೂಲಸೌಕರ್ಯಗಳ ಒದಗಣೆಗಾಗಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಜತೆ 1950ಕೋಟಿ ರೂ.ಮೊತ್ತದ ಒಪ್ಪಂದಕ್ಕೆ ಸರಕಾರ ಸಹಿ ಹಾಕಿದೆ.

ಅತ್ಯೆತ್ತರದ ದುರ್ಗಮ ಪರ್ವತ ಪ್ರದೇಶಗಳಲ್ಲಿ ಸಾಂಪ್ರದಾಯಿಕ ರಾಡಾರ್‌ಗಳ ಲಭ್ಯತೆ ತೀರಾ ಸೀಮಿತವಿದೆ. ಇಂತಹ ಪ್ರದೇಶಗಳಲ್ಲಿ ವಿಮಾನ, ಹೆಲಿಕಾಪ್ಟರ್‌ಗಳು, ಡ್ರೋನ್‌ಗಳ ಮುಖೇನ ಎದುರಾಗುವ ಯಾವುದೇ ಬೆದರಿಕೆಗಳ ಪತ್ತೆ ಮಾಡಲು ಪ್ರಸ್ತಾವಿತ ಪರ್ವತ ರಾಡಾರ್‌ಗಳು ತುಂಬ ಪೂರಕವಾಗಲಿದೆ.

ಕೇರಳ ವಿಧಾನಸಭೆ: ಆರೋಗ್ಯ ಕಾರ್ಡ್, ಶಬರಿಮಲೆ ತನಿಖೆ ಸಿಬಿಐಗೆ ಸೇರಿ ಹಲವು ಭರವಸೆ

ಬಿಜೆಪಿ ಚುನಾವಣಾ ಪ್ರಣಾಳಿಕೆ ಬಿಡುಗಡೆ

ತಿರುವನಂತಪುರಂ: ಕೇರಳ ವಿಧಾನಸಭಾ ಚುನಾವಣೆಗಾಗಿ ಬಿಜೆಪಿ ತನ್ನ ಪ್ರಣಾಳಿಕೆಯನ್ನು ಮಂಗಳವಾರ ಬಿಡುಗಡೆಗೊಳಿಸಿದ್ದು, ಇದರಂತೆ, ಅನೇಕ ಅಭಿವೃದ್ಧಿ ಯೋಜನೆ, ಆರೋಗ್ಯ ಸಂಬಂಧಿ ಯೋಜನೆ ಮತ್ತು ಮೂಲ ಸೌಕರ್ಯ ಒದಗಿಸುವ ಬಗ್ಗೆ ಜನತೆಗೆ ಭರವಸೆ ನೀಡಿದೆ.

ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಇಲ್ಲಿನ ಇಡಪಳಂಜಿಯಲ್ಲಿನ ಆರ್‌ಡಿಆರ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಸಮಾರಂಭದಲ್ಲಿ ಬಿಜೆಪಿಯ ಕೇರಳ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿದರು.

ಕೇರಳದಲ್ಲಿ ಬಿಜೆಪಿ ಈ ಬಾರಿ ಬೃಹತ್ ಸಾಧನೆಯ ಗುರಿ ಹೊಂದಿ ಕೆಲಸ ಮಾಡುತ್ತಿದ್ದು, 2026ರ ವಿಧಾನಸಭಾ ಚುನಾವಣೆಯಲ್ಲಿ ಅತ್ಯಂತ ಪ್ರಬಲ ಶಕ್ತಿಯಾಗಿ ಮೂಡಿಬಂದಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. "ವಿಕಸಿತ ಕೇರಳಂ"ನ ಧ್ಯೇಯದೊಂದಿಗೆ ಕೇರಳದ ಆರ್ಥಿಕ ಬೆಳವಣಿಗೆ ಮತ್ತು ಕೇರಳದ ಅಸ್ಮಿತೆಗಳನ್ನು ರಕ್ಷಿಸುವ ನಿರ್ದಿಷ್ಟ ಭರವಸೆಗಳೊಂದಿಗೆ ಆಳುವ ಎಡರಂಗ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಪರ್ಯಾಯ



ಪಕ್ಷವಾಗಿ ಬಿಜೆಪಿ ಮೂಡಿಬಂದಿದೆ.

ಶಬರಿಮಲೆ ತನಿಖೆ: ಕೇರಳದ ಹಿಂದುಗಳ ಪರಮಪವಿತ್ರ ಕ್ಷೇತ್ರವಾದ ಶಬರಿಮಲೆ ಶ್ರೀ ಅಯ್ಯಪ್ಪ ದೇವಾಲಯದಲ್ಲಿ ಭಕ್ತರ ಕಾಣಿಕೆ, ಚಿನ್ನದ ಹೊದಿಕೆ ಲೂಟಿಯಂತಹ ಹೀನ ಪ್ರಕರಣಗಳು ನಡೆದಿರುವುದು ಹಿಂದುಗಳಲ್ಲಿ ತೀವ್ರ ಆಘಾತ ತಂದಿರುವಂತೆಯೇ, ಶಬರಿಮಲೆಯಲ್ಲಿ ನಡೆದ ಚಿನ್ನ ಲೂಟಿ ಹಗರಣಗಳ ಕುರಿತಂತೆ ಕಾಲಮಿತಿಯ ಸಿಬಿಐ ತನಿಖೆ ನಡೆಸುವ ಮತ್ತು ದೇವಾಲಯಗಳ ಆಡಳಿತದಲ್ಲಿ ಭಕ್ತರ ಹೆಚ್ಚಿನ ಪಾಲ್ಗೊಳ್ಳುವಿಕೆ ಹಾಗೂ ಭ್ರಷ್ಟಾಚಾರಕ್ಕೆ ತಡೆಹಾಕುವ ಮೂಲಕ ದೇವಸ್ವಂ ಮಂಡಳಿಗಳನ್ನು ಪುನರಾಚಿಸುವ ಬಗೆಗೂ ಬಿಜೆಪಿ ಸ್ಪಷ್ಟ ಭರವಸೆ ನೀಡುವ ಮೂಲಕ ಅಯ್ಯಪ್ಪ ಭಕ್ತರ ಕಳವಳಕ್ಕೆ ಸ್ಪಂದನ ನೀಡಿದೆ.

ಬಡವರು ಮತ್ತು ಮಹಿಳೆಯರ ಅಭಿವೃದ್ಧಿಗೆ ಒತ್ತು ನೀಡಿರುವ ಪ್ರಣಾಳಿಕೆಯು ,ಬಡ-ದುರ್ಬಲ ವರ್ಗದ ಕುಟುಂಬಗಳಿಗಾಗಿ ಅಭಿವೃದ್ಧಿ ಯೋಜನೆಗಳು ಮತ್ತು ಬಡಕುಟುಂಬದ ಮುಖ್ಯಸ್ಥರಾಗಿರುವ ಮಹಿಳೆಯರು, ವಿಧವೆಯರು, 70ಕ್ಕಿಂತ ಮೇಲಿನ ಹಿರಿಯ ನಾಗರಿಕ ಮಹಿಳೆಯರಿಗೆ ತಿಂಗಳಿಗೆ 3000ರೂ.ಗಳ ಪಿಂಚಣಿ ಯೋಜನೆಯೊಂದನ್ನು ಪ್ರಕಟಿಸಿದೆ.

ಇನ್ನೊಂದು ಪ್ರಮುಖ ಭರವಸೆಯಂತೆ, ಬಡ ಮತ್ತು ಬಿಪಿಎಲ್ ಕುಟುಂಬಗಳ ಮಹಿಳೆಯರಿಗಾಗಿ "ಭಕ್ಷ್ಯ ಆರೋಗ್ಯ ಸುರಕ್ಷಾ ಕಾರ್ಡ್"ಯೋಜನೆಯೊಂದನ್ನು ಘೋಷಿಸಿದೆ. ಇದರಂತೆ ತಿಂಗಳಿಗೆ 2,500ರೂ.ಗಳ ಮಾಸಿಕ ರಿಚಾರ್ಜ್ ಕಾರ್ಡ್ ಒದಗಿಸಲಾಗುತ್ತದೆ. ಈ ಕಾರ್ಡಿನ ಮೂಲಕ ಈ ಬಡ ಕುಟುಂಬಗಳು ತಮಗೆ ಅಗತ್ಯವಿರುವ ದಿನಸಿಗಳು ಮತ್ತು ಔಷಧಗಳನ್ನು ಖರೀದಿಸಬಹುದಾಗಿದೆ.

ಭಾರತದ ಮೋಸ್ಟ್ ವಾಂಟೆಡ್ ಉಗ್ರ | ಹಲವು ದಾಳಿಯ ಕಿಂಗ್‌ಪಿನ್

ಮಸೂದ್ ಅಜರ್ ಸಹೋದರ ಹತ್ಯೆ

ಹೊಸದಿಲ್ಲಿ: ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಹಿರಿಯ ಸಹೋದರ, ಭಾರತಕ್ಕೆ ಮೋಸ್ಟ್ ವಾಂಟೆಡ್ ಆಗಿದ್ದ ಉಗ್ರ ಮೊಹಮ್ಮದ್ ತಾಹಿರ್ ಅನ್ವರ್‌ನನ್ನೇ ಅನಾಮಧೇಯರು ಹೊಡೆದುರುಳಿಸಿದ್ದಾರೆ.ಈತ ಭಾರತದಲ್ಲಿ ಹಲವು ಉಗ್ರ ದಾಳಿ ನಡೆಸುವಲ್ಲಿ ಪ್ರಮುಖ ಪಾತ್ರವಹಿಸಿದ್ದನು.

ಅನ್ವರ್ ಅಂತಾರಾಷ್ಟ್ರೀಯ ಭಯೋತ್ಪಾದಕ ಮಸೂದ್ ಅಜರ್‌ನ ಐವರು ಸಹೋದರರಲ್ಲಿ ಒಬ್ಬ. ನಿಷೇಧಿತ ಸಂಘಟನೆ ಜೈಶ್-ಎ-ಮೊಹಮ್ಮದ್‌ನ ಕಾರ್ಯಾಚರಣೆಗಳಲ್ಲಿ ಈತನೂ ಪ್ರಮುಖ ಪಾತ್ರ ವಹಿಸಿದ್ದ. ಅನ್ವರ್‌ನ ಅಂತ್ಯಕ್ರಿಯೆ ಪಾಕಿಸ್ತಾನದ ಬಹಾವಲ್ಪುರದ ಜಾಮಿಯಾ ಮಸೀದಿ ಉಸ್ಮಾನ್ ವಾಲಿಯಲ್ಲಿ ಸೋಮವಾರ ನಡೆದಿದೆ. ಪಾಕಿಸ್ತಾನದ ಅಧಿಕಾರಿಗಳಾಗಲಿ ಅಥವಾ ಜೈಶ್-ಎ-ಮೊಹಮ್ಮದ್ ಸಂಘಟನೆಯ ಅಧಿಕೃತ



ಮೂಲಗಳಾಗಲಿ ಆತನ ಸಾವಿಗೆ ದೀರ್ಘಕಾಲದ ಕಾಯಿಲೆ ಅಥವಾ ಹಠಾತ್ ವೈದ್ಯಕೀಯ ತುರ್ತು ಪರಿಸ್ಥಿತಿಯಂತಹ ಯಾವುದೇ ನಿರ್ದಿಷ್ಟ ಕಾರಣವನ್ನು ಉಲ್ಲೇಖಿಸಿಲ್ಲ. ಕೆಲವು ವರದಿಗಳು, ಆತ, ಇತ್ತೀಚೆಗೆ ಸ್ಥಾಪಿಸಲಾದ ಸಂಘಟನೆಯ ಮಹಿಳಾ ವಿಭಾಗ 'ಜಮಾತ್-ಉಲ್-ಮೊಮಿನಾತ್' ಕೇಂದ್ರದಲ್ಲಿ ಅಥವಾ ಅದರ ಸಮೀಪ ಮೃತಪಟ್ಟಿರಬಹುದು ಎಂದಿವೆ.

ಕುಟುಂಬ ಸದಸ್ಯರ ಸಾವು: ಕಳೆದ ವರ್ಷ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತ ನಡೆಸಿದ 'ಆಪರೇಷನ್ ಸಿಂದೂರ್'ನ ವೈಮಾನಿಕ ದಾಳಿಯಲ್ಲಿ ತನ್ನ ಕುಟುಂಬದ 10 ಸದಸ್ಯರು ಮತ್ತು ನಾಲ್ವರು ಸಹಚರರು ಮೃತಪಟ್ಟಿದ್ದರು ಎಂದು ಮಸೂದ್ ಅಜರ್ ಹೇಳಿಕೊಂಡಿದ್ದ.

ಮಸೂದ್ ಅಜರ್ ಹಿನ್ನೆಲೆ: ಮಸೂದ್ ಅಜರ್ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಿಂದ ಪಟ್ಟಿ ಮಾಡಲ್ಪಟ್ಟ ಅಂತಾರಾಷ್ಟ್ರೀಯ ಭಯೋತ್ಪಾದಕ.

1994 ರಲ್ಲಿ ಭಾರತ ಈತನನ್ನು ಬಂಧಿಸಿತ್ತಾದರೂ, ಏರ್ ಇಂಡಿಯಾ ವಿಮಾನ ಐಸಿ 814 ರ ಅಪಹರಣದ ನಂತರ ಬಿಡುಗಡೆ ಮಾಡಲಾಗಿತ್ತು. ಈತ 2001 ರ ಸಂಸತ್ ಭವನದ ದಾಳಿ, 2008 ರ ಮುಂಬೈ ದಾಳಿ, 2016 ರ ಪಠಾಣ್‌ಕೋಟ್ ದಾಳಿ ಮತ್ತು 2019 ರ ಪುಲ್ವಾಮಾ ದಾಳಿ ಸೇರಿದಂತೆ ಹಲವು ಪಿತೂರಿಗಳಲ್ಲಿ ಭಾಗಿಯಾಗಿದ್ದಾನೆ.

ಪುತ್ತೂರು ಪ್ರ.ದ. ಮಹಿಳಾ ಪದವಿ ಕಾಲೇಜ್: ಏ.4ರಿಂದ ಸ್ವಂತ ಕಟ್ಟಡಕ್ಕೆ ಸ್ಥಳಾಂತರ ಭಾಗ್ಯ

ಪುತ್ತೂರು: ಕಳೆದ 12 ವರ್ಷಗಳಿಂದ ಸ್ವಂತ ಕಟ್ಟಡವಿಲ್ಲದೆ ನಗರದಾದ್ಯಂತ ಸುತ್ತಾಟ ನಡೆಸಿದ್ದ ಮತ್ತು ಸವಾಲುಗಳನ್ನು ಎದುರಿಸಿದ್ದ ಪುತ್ತೂರು ಮಹಿಳಾ ಪ್ರಥಮ ದರ್ಜೆ ಪದವಿ ಕಾಲೇಜಿಗೆ ವಾರದಲ್ಲಿ ಸ್ವಂತ, ಹೊಸ ಕಟ್ಟಡ ಲಭಿಸುವ ಆಶಾಭಾವ ಕಾಣಿಸಿಕೊಂಡಿದೆ.

ಶಾಸಕರ ಕಚೇರಿಯಲ್ಲಿ ನಡೆದ ಕಾಲೇಜ್ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಏ.4ರಂದು ಮಹಿಳಾ ಕಾಲೇಜಿಗೆ ಸಂಬಂಧಿಸಿದಂತೆ ನಿರ್ಮಾಣಗೊಂಡಿರುವ ಬೊಳುವಾರಿನ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಹಾಗೂ ಏ.6ರಿಂದ ಅಲ್ಲಿ ವಿದ್ಯಾರ್ಥಿನಿಯರಿಗೆ ಪಾಠ ಪ್ರವಚನ ಆರಂಭಿಸಲು ನಿರ್ಧರಿಸಲಾಗಿದೆ. ಸದ್ಯ ಸರಕಾರಿ ಆಸ್ಪತ್ರೆಗೆ ಸಂಬಂಧಿಸಿದ ಹಳೆಯ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮಹಿಳಾ ಕಾಲೇಜಿನ ಅವ್ಯವಸ್ಥೆಯಿಂದ ನೊಂದು ತಿಂಗಳ ಹಿಂದೆ ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿದ್ದರು. ಈ ಸಂದರ್ಭದಲ್ಲಿ 45 ದಿನದೊಳಗೆ ಹೊಸ ಕಟ್ಟಡಕ್ಕೆ ವಿದ್ಯಾರ್ಥಿಗಳನ್ನು ಸ್ಥಳಾಂತರಿಸಿಯೇ ಸಿದ್ಧ ಎಂದು ಶಾಸಕ ಅಶೋಕ್ ಕುಮಾರ್ ರೈ ಭರವಸೆ ನೀಡಿದ್ದರು.

ಬೊಳುವಾರಿನಲ್ಲಿ ನಿರ್ಮಾಣವಾಗುತ್ತಿರುವ ಹೊಸ ಕಟ್ಟಡಲ್ಲಿ ಈಗಾಗಲೇ ಕೆಳ ಭಾಗದ ಕೆಲಸಗಳು ಮುಗಿದಿದ್ದು, ಉಳಿದ ಎರಡು ಮಹಡಿಗಳ ಕೆಲಸ ಕಾರ್ಯ ನಡೆಯುತ್ತಿದೆ. ಅದಾದ ಬಳಿಕ ಅಧಿಕೃತ ಉದ್ಘಾಟನೆ ನಡೆಸಲು ಅಭಿವೃದ್ಧಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸಭೆಯಲ್ಲಿ ಪ್ರಾಂಶುಪಾಲ ನಂದಕಿಶೋರ್, ಅಭಿವೃದ್ಧಿ ಸಮಿತಿಯ ಸದಸ್ಯರಾದ ಝೇವಿಯರ್ ಡಿಸೋಜಾ, ಗುತ್ತಿಗೆದಾರ ಅಶ್ರಫ್ ಮತ್ತಿತರರು ಉಪಸ್ಥಿತರಿದ್ದರು.

ಹೋರಾಟದ ಫಲ

ಈಗಿರುವ ಹಳೆಯ ಜೈಲು ಕಟ್ಟಡ ವಿದ್ಯಾರ್ಥಿನಿಯರಪಾಲಿಗೆಜೈಲಿನಸ್ಥಿತಿಯನ್ನುಉಂಟುಮಾಡಿತ್ತು. ಅಲ್ಲಿ ಆಸ್ಪತ್ರೆಯ ಡಯಾಲಿಸಿಸ್‌ಗೆ ಸಂಬಂಧಿಸಿದ ಕಾಮಗಾರಿಗಳು ನಡೆಯುತ್ತಿದ್ದುದರಿಂದ ಕಾಲೇಜಿನಲ್ಲಿ ಪಾಠ ಕೇಳುವ ಸ್ಥಿತಿ ಇರಲಿಲ್ಲ. ಇದರಿಂದ ಸಿಟ್ಟಿಗೆದ್ದ ವಿದ್ಯಾರ್ಥಿನಿಯರು ಎಂದು ಫೆ.6ರಂದು ವಿದ್ಯಾರ್ಥಿನಿಯರು ಪ್ರತಿಭಟನೆಗೆ ಇಳಿದಿದ್ದರು. ಪ್ರತಿಭಟನೆಗೆ ಹೊಣೆಯಾಗಿ ಅಲ್ಲಿನ ಪ್ರಾಂಶುಪಾಲೆಯನ್ನೂ ಹೊಣೆ ಮಾಡಿ ವರ್ಗಾವಣೆಗೊಳಿಸಲಾಗಿತ್ತು. ಶಾಸಕರು ಮುಂದಿನ 45 ದಿನಗಳಲ್ಲಿ ಬೊಳುವಾರಿನ ಹೊಸ ಕಟ್ಟಡದಲ್ಲಿ ಪಾಠ ಮಾಡುವಷ್ಟು ವ್ಯವಸ್ಥೆ ಮಾಡುವುದಾಗಿ ಭರವಸೆ ಕೊಟ್ಟಿದ್ದರು.

ಈಗಲೂ ಬೊಳುವಾರಿನ ನೂತನ ಕಟ್ಟಡ ಪೂರ್ಣಗೊಂಡಿಲ್ಲ. ಆದರೆ ಸದ್ಯಕ್ಕೆ ತರಗತಿ ನಡೆಸಲು ಅನುಕೂಲವಾಗುವಂತೆ ಒಂದು ಭಾಗವನ್ನು ಸಿದ್ಧಗೊಳಿಸಲಾಗುತ್ತಿದೆ.

ಈಗಾಗಲೇ ಕಾಲೇಜ್ ಕಟ್ಟಡ ಕಾಮಗಾರಿ ಅಂತಿಮ ಹಂತದಲ್ಲಿದ್ದು 8 ತರಗತಿ ಕೋಣೆಗಳ ಕಾಮಗಾರಿ ಪೂರ್ಣಗೊಂಡಿದೆ. ಏ.6ರಿಂದ ಹೊಸ ಕಟ್ಟಡದಲ್ಲಿ ತರಗತಿಗಳು ನಡೆಯಲಿದ್ದು, ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ಬೇಕಾದ ಎಲ್ಲಾ ವ್ಯವಸ್ಥೆಗಳು ಪೂರ್ಣಗೊಂಡಿದೆ. ಬಾಕಿ ಇರುವ ಕಾಮಗಾರಿಗಳನ್ನು ವಾರದೊಳಗೆ ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ ಎಂದು ಶಾಸಕರು ತಿಳಿಸಿದ್ದಾರೆ.

ಶಾಸಕ ವೇದವ್ಯಾಸ್ ಕಾಮತ್ ನೇತೃತ್ವದಲ್ಲಿ ಶಿಲಾನ್ಯಾಸ
1.23 ಕೋಟಿ ರೂ. ವಿಶೇಷ ಅನುದಾನದಲ್ಲಿ ತಡೆಗೋಡೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 46ನೇ ಕಂಟೋನ್ಮೆಂಟ್ ವಾರ್ಡಿನ ಪಾಂಡೇಶ್ವರ ಶಿವನಗರದಲ್ಲಿ 1.23 ಕೋಟಿ ರೂ. ವಿಶೇಷ ಅನುದಾನದಲ್ಲಿ ತಡೆಗೋಡೆ ನಿರ್ಮಾಣವಾಗಲಿದ್ದು, ಶಾಸಕ ವೇದವ್ಯಾಸ್ ಕಾಮತ್ ಅವರ ನೇತೃತ್ವದಲ್ಲಿ ಶಿಲಾನ್ಯಾಸ ನಡೆಯಿತು.

ಈ ವೇಳೆ ಮಾತನಾಡಿದ ಶಾಸಕರು, ಪ್ರತಿ ವರ್ಷ ಮಳೆಗಾಲದಲ್ಲಿ ಈ ಭಾಗದ ಜನರು ನೆರೆ ಸಮಸ್ಯೆಯಿಂದಾಗಿ ತೀವ್ರ ತೊಂದರೆ ಅನುಭವಿಸುತ್ತಿದ್ದರು. ಈ ಹಿಂದೆಯೇ ಕೆಲವು ರಾಜಕಾಲುವೆಗಳಿಗೆ ತಡೆಗೋಡೆ ನಿರ್ಮಾಣವಾಗಿದ್ದರೂ ಅನಿವಾರ್ಯ ಕಾರಣಗಳಿಂದ ಒಂದಷ್ಟು ಬಾಕಿ ಇದ್ದು, ಇದೀಗ ಆ ಕಾಮಗಾರಿಯನ್ನೂ ಸಹ ಕೈಗೆತ್ತಿಕೊಳ್ಳಲಾಗಿದೆ. ಮುಂಬರುವ ಮಳೆಗಾಲದಲ್ಲಿ ಇಲ್ಲಿನ ಜನರಿಗೆ ಯಾವುದೇ ತೊಂದರೆಯಾಗಬಾರದು ಎಂಬ ಕಾಳಜಿಯಿಂದ ಹಿರಿಯ ಅಧಿಕಾರಿಗಳು ನೀಡಿರುವ ಸಮಗ್ರ ವರದಿಗೆ ಅನುಗುಣವಾಗಿ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಅಗತ್ಯವಿರುವ ಅನುದಾನವನ್ನು ಒದಗಿಸಿಕೊಡಲಾಗಿದೆ ಎಂದರು.

ಈ ಭಾಗದ ಜನರ ಸಮಸ್ಯೆ ಬಗೆಹರಿಯಬೇಕೆಂಬುದೇ ನಮ್ಮೆಲ್ಲರ ಉದ್ದೇಶವಾಗಿದ್ದು, ಈ ನಿಟ್ಟಿನಲ್ಲಿ ನಿಕಟ ಪೂರ್ವ ಪಾಲಿಕೆ ಸದಸ್ಯ ಹಾಗೂ ಮಾಜಿ ಮೇಯರ್ ದಿವಾಕರ್ ಪಾಂಡೇಶ್ವರ ಅವರ ವಿಶೇಷ ಪ್ರಯತ್ನವಿದೆ ಎಂದರು.

ಬಿಜೆಪಿ ಪ್ರಮುಖರಾದ ನಾಮದೇವ್, ರಮೇಶ್ ಹೆಗ್ಡೆ, ಲಲೇಶ್ ಕುಮಾರ್, ಕಿರಣ್ ರೈ, ಪ್ರಕಾಶ್ ಶಿವನಗರ, ನಿತಿನ್ ಕಾಮತ್, ಸೀತಾರಾಮ್, ಪುರುಷೋತ್ತಮ್, ಶಿವಕುಮಾರ್, ಮಾಧವ, ಜನಾರ್ದನ್, ದಿನೇಶ್, ಸೇರಿದಂತೆ ಅನೇಕ ಸ್ಥಳೀಯರು ಉಪಸ್ಥಿತರಿದ್ದರು.

ಇಂದು ಉಚಿತ ಶ್ರವಣ ತಪಾಸಣೆ, ಶ್ರವಣ ಯಂತ್ರ ವಿತರಣೆ: ವಿಜಯ್ ಕೊಡವೂರು



ಉಡುಪಿ: ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಉಡುಪಿ ಜಿಲ್ಲೆ ಮತ್ತು ನಗರ ಘಟಕ, ಲಯನ್ಸ್ ಕ್ಲಬ್ ಪರ್ಕಳ ಹಾಗೂ ದಿವ್ಯಾಂಗ ರಕ್ಷಣಾ ಸಮಿತಿ ಜಿಲ್ಲಾ ಘಟಕದ ಜಂಟಿ ಆಶ್ರಯದಲ್ಲಿ ಉಚಿತ ಶ್ರವಣ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ಹಾಗೂ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮೋರ್ಚಾದ ಜಿಲ್ಲಾಧ್ಯಕ್ಷ ವಿಜಯ್ ಕೊಡವೂರು ತಿಳಿಸಿದ್ದಾರೆ.

ನಗರದಲ್ಲಿ ನಡೆದ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಈ ಶಿಬಿರವು ಏಪ್ರಿಲ್ 1ರ ಬುಧವಾರ ದಂದು ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಮಲ್ಪೆಯ ಸಭಾ ಭವನದಲ್ಲಿ ನಡೆಯಲಿದೆ. ಅಂತಾರಾಷ್ಟ್ರೀಯ ಸಂಸ್ಥೆಯ ಅನುಭವ ಹೊಂದಿರುವ ತಜ್ಞ ವೈದ್ಯರು ಶಿಬಿರದಲ್ಲಿ ಪಾಲ್ಗೊಂಡು ತಪಾಸಣೆ ನಡೆಸಲಿದ್ದಾರೆ. ಮೊದಲೇನೋಂದಾಯಿಸಿಕೊಂಡ 30 ಜನರಿಗೆ ಮಾತ್ರ ಈ ಸೌಲಭ್ಯ ದೊರೆಯಲಿದ್ದು, ಹಿರಿಯ ನಾಗರಿಕರಿಗೆ ಮೊದಲ ಆದ್ಯತೆ ನೀಡಲಾಗುವುದು.

ಶ್ರವಣ ಸಾಧನದ ಒಟ್ಟು ವೆಚ್ಚದಲ್ಲಿ ಶೇ. 40ರಷ್ಟು ಮೊತ್ತವನ್ನು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ದೇಣಿಗೆಯಿಂದ ಭರಿಸಲಾಗುವುದು. ಹಳೆಯ ವರದಿಗಳಿದ್ದಲ್ಲಿ ತಪಾಸಣೆಗೆ ತರುವಂತೆಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಾರ್ವಜನಿಕರು 9743581798 ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಅವರು ವಿನಂತಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷೆ ಭಾರತಿ ಚಂದ್ರಶೇಖರ್ ಹಾಗೂ ಕೋಶಾಧಿಕಾರಿ ರಾಜೇಂದ್ರ ಪಂದುಬೆಟ್ಟು ಉಪಸ್ಥಿತರಿದ್ದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-513th) ಡ್ರಾ ಮಾರ್ಚ್ 31ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SP 307508 (GURUVAYOOR)

Cons Prize-Rs: 5000/-
SN 307508 SO 307508 SR 307508 SS 307508
ST 307508 SU 307508 SV 307508 SW 307508
SX 307508 SY 307508 SZ 307508

2nd Prize Rs: 30,00,000/- [30 Lakhs]
SR 450620 (CHERTHALA)

3d Prize Rs: 5,00,000/- [5 Lakhs]
SX 696785 (PUNALUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0225 1591 2029 2767 3295 3802 4805 4894 5052 6192 6537 7620 8426 8484 8794 9323 9469 9558 9814

5th Prize Rs.2,000/-
2456 4326 5298 7741 8233 8315

6th Prize Rs.1,000/-
0202 0498 0635 0903 1130 1282 1596 2263 2710 3297 3452 3534 4238 4562 4919 5231 6531 6923 7077 7099 7105 8358 8665 9324 9619

7th Prize Rs.500/-
0028 0304 0339 0473 0476 0522 0573 0692 0703 0736 0862 1099 1140 1420 1498 1529 1601 1626 2006 2128 2171 2760 3072 3144 3149 3153 3402 3458 3473 3543 3741 3752 3772 3911 3939 3987 4121 4263 4471 4917 4921 4946 5104 5289 5452 5504 5605 5723 5960 5999 6038 6074 6405 6486 6598 6674 6693 6694 6712 6855 7168 7354 7928 8102 8199 8353 8692 9030 9103 9337 9348 9367 9531 9539 9849 9956

8th Prize Rs.200/-
0105 0115 0256 0382 0710 0767 0856 0911 1020 1144 1456 1492 1828 2003 2067 2123 2244 2248 2256 2264 2307 2472 2558 2769 2823 2995 3097 3120 3217 3261 3282 3299 3512 4096 4337 4342 4528 4723 4769 4887 4909 4938 4967 5283 5340 5377 5429 5503 5507 5608 5807 5895 5933 6210 6267 6534 6571 6828 6837 7001 7044 7117 7123 7160 7325 7340 7439 7588 7645 7652 7859 8222 8247 8518 8564 8594 8597 8664 8935 9025 9091 9379 9389 9442 9465 9534 9538 9596 9797 9909

9th Prize Rs.100/-
0088 0198 0388 0389 0427 0513 0516 0584 0610 0642 0665 0699 0758 0808 0818 0899 0938 0988 1013 1086 1193 1231 1261 1307 1332 1376 1581 1623 1762 1799 1833 1854 2357 2449 2546 2583 2614 2706 2927 2934 2964 3026 3059 3110 3154 3258 3298 3329 3415 3564 3608 3628 3679 3732 3773 4002 4015 4046 4075 4098 4106 4133 4164 4167 4227 4275 4306 4369 4455 4475 4505 4589 4590 4618 4728 4729 4779 4851 5011 5223 5228 5232 5260 5264 5303 5337 5344 5499 5704 5705 5781 5800 5984 6024 6035 6072 6082 6162 6291 6318 6357 6393 6501 6502 6522 6645 6901 6936 6939 7012 7090 7122 7163 7269 7316 7362 7390 7396 7483 7535 7578 7593 7602 7604 7605 7690 7697 7729 7802 7835 8080 8153 8248 8359 8364 8682 8765 8815 8823 8874 8916 8989 9086 9104 9325 9541 9653 9831 9905 9963

ಕಿರುಸುದ್ದಿ

ಏ.11ರಿಂದ 26: ಬಾಲಕರ ಸಂಸ್ಕೃತಿ ಶಿಕ್ಷಣ ಶಿಬಿರ

ಬಂಟ್ವಾಳ: ಜನ ಕಲ್ಯಾಣ ಟ್ರಸ್ಟ್ ರಾಮಗಿರಿ ನಾಟಿ, ಶ್ರೀ ಭಯಂಕೇಶ್ವರ ಸದಾಶಿವ ದೇವಸ್ಥಾನ ನರಿಕೊಂಬುಇದರ ಆಶ್ರಯದಲ್ಲಿವೇದ ವಿಜ್ಞಾನ ಗುರುಕುಲ ಬೆಂಗಳೂರು, ಗ್ರಾಮ ವಿಕಾಸ ಸಮಿತಿ ನರಿಕೊಂಬು–ಶಂಭೂರು ಇದರ ಸಹಯೋಗದೊಂದಿಗೆ ಬಾಲಕರ ಸಂಸ್ಕೃತಿ ಶಿಕ್ಷಣ ಶಿಬಿರವು ಏ.11ರಿಂದ 26 ರವರೆಗೆ ನರಿಕೊಂಬು ಗ್ರಾಮದ ರಾಮಗಿರಿ–ನಾಟಿಯಲ್ಲಿ ನಡೆಯಲಿದೆ. ಏ.12 ರಂದು ಬೆಳಗ್ಗೆ 8 ಕ್ಕೆ ವೊಳಲಿ ರಾಮಕೃಷ್ಣತಪೋವನದ ಶ್ರೀ ವಿವೇಕಚೈತನ್ಯಾನಂದ ಸ್ವಾಮೀಜಿ ಅವರು ಶಿಬಿರವನ್ನು ಉದ್ಘಾಟಿಸಲಿದ್ದಾರೆ. ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರು ಗೌರವ ಉಪಸ್ಥಿತರಿರುವರು. ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಬಿ. ನಾರಾಯಣ ಸೋಮಯಾಜಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.ಆಸಕ್ತರು ಮೊ. ಸಂ.6362220944 ಅಥವಾ 9686707611 ನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಲಾರಿ ಡಿಕ್ಕಿ: ಬೈಕ್ ಸವಾರ ಗಾಯ

ಬ್ರಹ್ಮಾವರ: ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಉಡುಪಿಯಿಂದ ಬ್ರಹ್ಮಾವರ ಕಡೆಗೆ ತೆರಳುತ್ತಿದ್ದ ಲಾರಿ, ಉಪ್ಪೂರಿನ ಕೆಜಿ ರೋಡ್ ಡಿವೈಡರ್ ಬಳಿ ಏಕಾಏಕಿ ಯೂ–ಟರ್ನ್ ಪಡೆದ ಹಿನ್ನಲೆಯಲ್ಲಿ ಹಿಂದಿನಿಂದ ಸಾಗುತ್ತಿದ್ದ ಬೈಕ್ ಡಿಕ್ಕಿ ಹೊಡೆದು, ಸವಾರ ಗಾಯಗೊಂಡ ಘಟನೆ ನಡೆದಿದೆ. ಭುವನ್ (19) ಗಾಯಗೊಂಡ ಬೈಕ್ ಸವಾರ. ಸಾರ್ವಜನಿಕರು ಅವರನ್ನು ಉಪಚರಿಸಿ ಮಹೇಶ ಆಸ್ಪತ್ರೆಗೆ ರಿಕ್ಷಾದಲ್ಲಿ ಕಳುಹಿಸಿದ್ದಾರೆ. ಬ್ರಹ್ಮಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೆನ್‌ಲಾಕ್ ಶವಾಗಾರದಲ್ಲಿ ಯುವಕನ ಮೃತದೇಹ



ಮಂಗಳೂರು: ಜಿಲ್ಲಾಸ್ಪತ್ರೆ ವೈನ್‌ಲಾಕ್‌ನ ಶವಾಗಾರದಲ್ಲಿ ಬಂಟ್ವಾಳ ತಾಲೂಕಿನ ಅಮ್ಮುಂಜೆ ಪರಿಸರದ ನಿವಾಸಿ, ಸುಮಾರು 28 ವರ್ಷ ಪ್ರಾಯದ ದೀಪಕ್ ನಾಯಕ್ ಎಂಬವರ ಮೃತದೇಹವಿದೆ. ಸಂಬಂಧಪಟ್ಟವರು ಸೂಕ್ತ ಗುರುತುಚೀಟಿ ತೋರಿಸಿ ಮೃತದೇಹವನ್ನು ಪಡೆದುಕೊಳ್ಳಬೇಕೆಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ. ಯಾರೂ ಬಾರದಿದ್ದಲ್ಲಿ ಸೂಕ್ತ ರೀತಿಯಲ್ಲಿ ಮೃದೇಹವನ್ನು ವಿಲೇವಾರಿ ಮಾಡಲಾಗುವುದೆಂದು ವೆನ್‌ಲಾಕ್ ಅಧೀಕ್ಷಕರ ಪ್ರಕಟಣೆ ತಿಳಿಸಿದೆ.

ದ್ವಿಚಕ್ರ ವಾಹನಗಳ ಡಿಕ್ಕಿ: ಸವಾರರು ಗಂಭೀರ

ಮುಲ್ಕಿ: ಬಸ್ಸು ನಿಲ್ದಾಣದ ಬಳಿಯ ಭಾಗ್ಯಲಕ್ಷ್ಮೀ ಸಿಲ್ಕ್ ಮಳಿಗೆ ಬಳಿ ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆಯಲ್ಲಿ ಬೈಕ್ ಹಾಗೂ ಸ್ಕೂಟರ್ ನಡುವೆ ಅಪಘಾತ ಸಂಭವಿಸಿ ಇಬ್ಬರು ಸವಾರರು ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಗಾಯಾಳು ಸವಾರರನ್ನು ನುಮನ್ ಅಹಮ್ಮದ್ ಮತ್ತು ಸಹದೇವ ಎಂದು ಗುರುತಿಸಲಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಬೊಳ್ಳಳ್ಳಮಾರುಗುತ್ತು ದಿ। ಪದ್ಮಾವತಿ ಶಾಂತರಾಮ ಹೆಗ್ಡೆ ಸ್ಮರಣಾರ್ಥ ಮಕ್ಕಳು–ಶ್ರೀ ಕಟೀಲುಕ್ಷೇತ್ರ ಸರಸ್ವತೀ ಸದನ.
2. ವೆಂಕಪ್ಪ ಪೂಜಾರಿ, ಮೇಲ್ದಬೆಟ್ಟು, ನಿಡ್ಡೋಡಿ, ಕಲ್ಲಮುಂಡ್ಕೂರು.
3. ಹತ್ತು ಸಮಸ್ತರು ಮಹಾಮ್ಮಾಯಿ ಮಂದಿರ, ಮುನ್ನಲಾಯಿಪದವು, ಸರಪಾಡಿ, ಬಂಟ್ವಾಳ (ತಾ).
4. ಶ್ರೀ ರಾಮ ಭಜನಾ ಮಂದಿರ, ಕಜೆ, ಸಜಿಪ, ಮೂಡ, ಬಂಟ್ವಾಳ (ತಾ).
5. ಹತ್ತು ಸಮಸ್ತರು, ಅಕ್ಷಯನಗರ, ಸುಬ್ರಹ್ಮಣ್ಯ ಮಠ, ಬೆಂಗಳೂರು.
6. ಅಶೋಕ, ದೀಪಾ, ಬಂಚಾಡಿ ಮನೆ, ಪಡುಮುಂಡು, ಸಾಯಿಬರಕಟ್ಟೆ ವಯಾ ಬ್ರಹ್ಮಾವರ.
7. ದೇವಕಿ ಸುರೇಶ್, 'ಸುದೇಷ್ಣ', ಕುಳಾಯಿ ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.

ಶ್ರೀ ಧರ್ಮಸ್ಥಳ ಮೇಳ
ಬೋಂದೆಲ್‌ನಲ್ಲಿ
ಉಮಾನಾಥ್ ಕೋಟ್ಯಾನ್ ಮಾನ್ಯ ಶಾಸಕರು ಮೂಡುಬಿದ್ರೆ, ದುರ್ಗಾಪ್ರಸಾದ್, ಬಾಯಾಡಿ ರಸ್ತೆ

ಶ್ರೀ ಸಾಲಿಗ್ರಾಮ ಮೇಳ
ಸೊನಲೆ- **ಸ್ವಪ್ನ ಮಂಟಪ**

ಶ್ರೀ ಪೆರ್ಡೂರು ಮೇಳ
ಮುಂಡಗೋಡ
ಕವಿರತ್ನ ಕಾಳಿದಾಸ-ಮಾರುತಿ ಪ್ರತಾಪ

ಶ್ರೀ ಹನುಮಗಿರಿ ಮೇಳ
ಆತೂರಿನಲ್ಲಿ

ಶ್ರೀ ಪಾವಂಜೆ ಮೇಳ
ಮಾಡದಡಿಗುಡ್ಡೆ, ಎರ್ಮೆಜಾಲ್, ಕುಂಜತ್ತಬೈಲ್
ಛಾಯಾನಂದನ



ಭಾರತದ ಖ್ಯಾತ ಕ್ರಿಕೆಟಿಗ ಹಾಗೂ ವೀಕ್ಷಣಾ ವಿವರಣೆಗಾರ ವಿಜಯ್ ಭಾರದ್ವಾಜ್ ದಂಪತಿ ಶ್ರೀ ಕ್ಷೇತ್ರ ಕೋಟ ಅಮೃತೇಶ್ವರಿ ಹಲವು ಮಕ್ಕಳ ತಾಯಿ ದೇವಸ್ಥಾನಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ದೇಗುಲದ ಟ್ರಸ್ಟಿ ಗಣೇಶ್ ನೆಲ್ಲಿಬೆಟ್ಟು ಪ್ರಸಾದವನ್ನು ನೀಡಿ ಗೌರವಿಸಿದರು. ದೇಗುಲದ ಅರ್ಚಕ ಪ್ರತಿನಿಧಿಗಳು, ವ್ಯವಸ್ಥಾಪಕರು ಇದ್ದರು.

ಬೊಳ್ಳಾರಗೋಳಿಯಲ್ಲಿ 63 ವರ್ಷದ ಬಳಿಕ ಪಂಚ ದೈವಗಳ ನೇಮೋತ್ಸವದ ಸಂಭ್ರಮ

ಸುರತ್ಕಲ್: ಸೂರಿಂಜೆ ಬೊಳ್ಳಾರಗೋಳಿಯಲ್ಲಿ 63 ವರ್ಷಗಳ ಆನಂತರ ಪಂಚ ದೈವಗಳ ನೇಮೋತ್ಸವ ಜರುಗಲಿದೆ. ಏ.2ರಿಂದ 8ರವರೆಗೆ ವಿವಿಧ ಸಾಂಸ್ಕೃತಿಕ ಹಾಗೂ ಧಾರ್ಮಿಕ ವಿಧಿ–ವಿಧಾನಗಳೊಂದಿಗೆ ನಡೆಯಲಿದೆ ಎಂದು ಪ್ರಧಾನಕಾರ್ಯದರ್ಶಿ ಜಯಪ್ರಕಾಶ್ ಸೂರಿಂಜೆ ತಿಳಿಸಿದರು. ಸುರತ್ಕಲ್‌ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವೇದಮೂರ್ತಿ ಮೂಡಿತ್ತಾಯ ಹಯವದನ ಭಟ್ ಅವರ ನೇತೃತ್ವದಲ್ಲಿ ನೇಮೋತ್ಸವದ ವಿಧಿ ವಿಧಾನಗಳು ನಡೆಯಲಿವೆ. ಏ. 2ರಂದು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಿಂದ ಹೊರೆಕಾಣಿಕೆಯು ಹೊರಡುವುದರೊಂದಿಗೆ ಚಾಲನೆ ಸಿಗಲಿದ್ದು, ಸತತ ಏಳು ದಿನಗಳ ಕಾಲ ಶಿಬರೂರು ಶ್ರೀ ಉಳ್ಳಾಯ ಮತ್ತು ಶ್ರೀ ಕೊಡಮಣಿತ್ತಾಯ, ಜಂತಬೆಟ್ಟು ಶ್ರೀ ಬಂಟ–ಸಾರಾಳ ಧೂಮಾವತಿ ಸೇರಿದಂತೆ ವಿವಿಧ ದೈವಗಳಿಗೆ ನೇಮೋತ್ಸವಗಳು ಶಾಸ್ತ್ರೋಕ್ತವಾಗಿ ನೆರವೇರಲಿವೆ ಎಂದರು.

ಮಿತ್ತೋಡಿ ಅರಸುಮನೆ ಅಶೋಕ ವೈವ ಹೆಗ್ಡೆ (ಗಡಿಪ್ರಧಾನರು), ಕುತ್ತೆತ್ತೂರು–ಸೂರಿಂಜೆ ಎಲ್ಲಾ ವರ್ಗದ ಮನೆತನದವರು ಹಾಗೂ ಗ್ರಾಮದ ಹತ್ತು ಸಮಸ್ತರು, ತಿಬಾರಗುತ್ತಿನಾರ್ ಉಮೇಶ್ ಎನ್. ಶೆಟ್ಟಿ ಹಾಗೂ ಶಿಬರೂರು ಕೊಡಮಣಿತ್ತಾಯ ದೈವಸ್ಥಾನಕ್ಕೆ ಸಂಬಂಧಪಟ್ಟ ಗುತ್ತು ಮನೆತನದವರು, ದೇಲಂತಬೆಟ್ಟು ಗ್ರಾಮದ ಹತ್ತು ಸಮಸ್ತರು.. ಪಂಜದಗುತ್ತು ಮನೆತನ ಹಾಗೂ ಎಲ್ಲಾ ವರ್ಗದ ಗುತ್ತು ಮನೆತನದವರು, ಗ್ರಾಮದ ಹತ್ತು ಸಮಸ್ತರು ಮತ್ತು ಬೊಳ್ಳಾರುಗುತ್ತು ಕುಟುಂಬಿಕರು ಒಟ್ಟಾಗಿ ಸೇರಿ ಈ ಬೃಹತ್ ನೇಮೋತ್ಸವವನ್ನು ಆಯೋಜಿಸುತ್ತಿದ್ದಾರೆ ಎಂದರು.

ಧಾರ್ಮಿಕ ಸಭೆಯಲ್ಲಿ ಜನಪ್ರತಿನಿಧಿಗಳು ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬೊಳ್ಳಾರಗೋಳಿ ಪಂಚ ದೈವಗಳ ನೇಮೋತ್ಸವ ಸಮಿತಿ ಅಧ್ಯಕ್ಷ ರಾಜೇಂದ್ರ ಶೆಟ್ಟಿ ಕುಡ್ತಿಮಾರುಗುತ್ತು, ಗೌರವಾಧ್ಯಕ್ಷರಾದ ಅನಿಲ್ ಶೆಟ್ಟಿ ತೇವು ಸೂರಿಂಜೆ, ಯೋಗೀಶ್ ಶೆಟ್ಟಿ ಮುಂಬಯಿ, ಕಾರ್ಯಾಧ್ಯಕ್ಷ ಮನೋಹರ ಶೆಟ್ಟಿ ಸೂರಿಂಜೆ, ಸ್ವಾಗತ ಸಮಿತಿ ಸಂಚಾಲಕ ಮೋಹನ್‌ದಾಸ್ ಶೆಟ್ಟಿ, ಬೊಳ್ಳಾರುಗುತ್ತು, ಮಾಧ್ಯಮ ಸಮಿತಿ ಸಹಸಂಚಾಲಕ ಪುಷ್ಪರಾಜ್ ಶೆಟ್ಟಿ ಮಧ್ಯ ಉಪಸ್ಥಿತರಿದ್ದರು.

ರೆಡ್‌ಕ್ರಾಸ್ ಸೊಸೈಟಿ, ಶಾಸಕ ಡಾ. ವೈ. ಭರತ್ ಶೆಟ್ಟಿ ಸಹಕಾರ | ರಸ್ತೆಗೆ ಕಾಂಕ್ರೀಟೀಕರಣ

ವಿಕಲಚೇತನ ಮಹಿಳೆಗೆ ಫೋಲ್ಡಿಂಗ್ ಬೆಡ್

ಸುರತ್ಕಲ್: ಗ್ರಾಮೀಣ ಭಾರತದ ಅನೇಕ ಮೂಲೆಗಳಲ್ಲಿ ಇನ್ನೂ ಮೂಲಭೂತ ಸೌಲಭ್ಯಗಳ ಕೊರತೆ ಜನಜೀವನವನ್ನು ಸಂಕಷ್ಟಕ್ಕೆ ತಳ್ಳುತ್ತಲೇ ಇದೆ. ಇಂತಹವೇ ಒಂದು ಮನಕಲಕುವ ಘಟನೆಗೆ ಇದೀಗ ಮಾನವೀಯ ಸ್ಪರ್ಶ ಸಿಕ್ಕಿದ್ದು, ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಮಂಗಳೂರು ಪದವಿನಂಗಡಿ ಬಳಿ ಸಣ್ಣ ಮನೆಯೊಂದರಲ್ಲಿ 18 ವರ್ಷಗಳಿಂದ ಮಲಗಿದಲ್ಲಿಯೇ ಜೀವನ ಸಾಗಿಸುತ್ತಿದ್ದ ಅಂಗವಿಕಲಚೇತನ ಮಹಿಳೆಗೆ ಫೋಲ್ಡಿಂಗ್ ಬೆಡ್ ಒದಗಿಸುವ ಮೂಲಕ ನೆಮ್ಮದಿಯ ದಿನಗಳಿಗೆ ಶಾಸಕ ಡಾ. ವೈ. ಭರತ್ ಶೆಟ್ಟಿ ಅವರು ಮಾನವೀಯ ಸ್ಪರ್ಶ ನೀಡಿದ್ದಾರೆ.

ಇದೇ ವೇಳೆ, ಆ ಪ್ರದೇಶದಲ್ಲಿ ಸುಸಜ್ಜಿತ ರಸ್ತೆ ನಿರ್ಮಾಣವಾಗಿರುವುದು ಗ್ರಾಮಸ್ಥರ ದಶಕಗಳ ಕನಸನ್ನು ನನಸುಗೊಳಿಸಿದೆ. 18 ವರ್ಷದ ಸಂಕಷ್ಟ ಜೀವನ ಸ್ಥಳೀಯ ಗ್ರಾಮದ ನಿವಾಸಿಯಾಗಿರುವ ಆಶಾಲತಾ ಅವರಿಗೆ 38 ವರ್ಷ. ಪತ್ರಿಕೋದ್ಯಮದಲ್ಲಿ ಪದವಿಯನ್ನು ಪಡೆದು ಹೊಸ ಕನಸುಗಳೊಂದಿಗೆ ಬೆಂಗಳೂರಿಗೆ ಹೋದ ಆಶಾಲತಾ ಉದ್ಯೋಗ ಒಂದನ್ನು ಪಡೆದು ತಮ್ಮ ಬಡ ಕುಟುಂಬಕ್ಕೆ ಆಧಾರವಾಗಿ ನಿಲ್ಲಬೇಕು ಎಂಬ ಕನಸು ಹೊಂದಿದ್ದರು.


ಅವರ ಕನಸು ನನಸು ಕೂಡ ಆಯಿತು. ಉದ್ಯೋಗವನ್ನು ಸಿಕ್ಕಿ ಇನ್ನೇನು ಜೀವನದಲ್ಲಿ ಒಳ್ಳೆಯ ದಿನಗಳು ಬರಬೇಕು ಎನ್ನುವಷ್ಟರಲ್ಲಿ ಆರೋಗ್ಯದಲ್ಲಿ ಸಮಸ್ಯೆ ಉಂಟಾಗಿ ಆಸ್ಪತ್ರೆಗೆ ದಾಖಲಾದರು. ವೈದ್ಯರು ಮಾಡಿದ ಒಂದು ಎಡವಟ್ಟಿನಿಂದ ಜೀವನ ಇಡೀ ಹಾಸಿಗೆಯಲ್ಲಿ ಮಲಗುವಂತಾಯಿತು.



ಮಲಗಿದಲ್ಲಿಯೇ ಇರುವ ಆಶಾಲತಾ



ಶಾಸಕ ಡಾ. ಭರತ್ ಶೆಟ್ಟಿಯಿಂದ ಫೋಲ್ಡಿಂಗ್ ಬೆಡ್ ಕೊಡುಗೆ



ಕಾಂಕ್ರಿಟೀಕರಣಗೊಂಡ ರಸ್ತೆ

> ▸ ಆಶಾಲತಾ ಕಳೆದ 18 ವರ್ಷಗಳಿಂದ ದೈಹಿಕ ಅಶಕ್ತತೆಯಿಂದ ಮಲಗಿದಲ್ಲಿಯೇ ಜೀವನ ನಡೆಸುತ್ತಿದ್ದಾರೆ.
>
> ▸ ಫೋಲ್ಡಿಂಗ್ ಬೆಡ್ ಒದಗಿಸುವ ಮೂಲಕ ನೆಮ್ಮದಿಯ ದಿನಗಳಿಗೆ ಶಾಸಕ ಡಾ. ವೈ. ಭರತ್ ಶೆಟ್ಟಿ ಅವರಿಂದ ಮಾನವೀಯ ಸ್ಪರ್ಶ

ಆಚಾನಕ್ ಬರ ಸಿಡಿಲು ಅಪ್ಪಳಿಸಿದಂತೆ ಅವರ ಜೀವನವೇ ಏರುಪೇರಾಯಿತು. ಲಕ್ಷಾಂತರ ರೂಪಾಯಿ ವೆಚ್ಚ ಮಾಡಿದರೂ ಜೀವನ ಸರಿಯಾಗದೆ ಇದೀಗ ತಾಯಿಯೇ ಆಧಾರವಾಗಿದ್ದಾರೆ.

ಕಳೆದ 18 ವರ್ಷಗಳಿಂದ ದೈಹಿಕ ಅಶಕ್ತತೆಯಿಂದ ಮಲಗಿದಲ್ಲಿಯೇ ಜೀವನ ನಡೆಸುತ್ತಿದ್ದಾರೆ.

ಸರಿಯಾದ ಹಾಸಿಗೆ, ಚಿಕಿತ್ಸಾ ಸೌಲಭ್ಯಗಳ ಕೊರತೆಯಿಂದ ಅವಳ ದಿನನಿತ್ಯ ಜೀವನ ಅತ್ಯಂತ ಕಷ್ಟಕರವಾಗಿತ್ತು. ಮನೆಯ ಸಮೀಪ ಇರುವ ಒಂದು ಓಣಿಯನಂಥ ರಸ್ತೆಯಲ್ಲಿ ಗ್ರಾಮಸ್ಥರ ಸಹಾಯದಿಂದ ಎತ್ತಿಕೊಂಡು ಹೋಗುವಂತಹ ಸ್ಥಿತಿಯಿತ್ತು. ಕುಟುಂಬದವರು ಸಹ ಆರ್ಥಿಕವಾಗಿ ಹಿಂದುಳಿದವರಾಗಿದ್ದು, ಮೂಲಭೂತ ಅಗತ್ಯಗಳನ್ನೇ ಪೂರೈಸಲು ಹೋರಾಟ ನಡೆಸುತ್ತಿದ್ದರು.

ಮಾನವೀಯತೆಗೆ ಜೀವ ತುಂಬಿದ ನೆರವು

ಈ ಪರಿಸ್ಥಿತಿಯನ್ನು ಗಮನಿಸಿದ ಸ್ಥಳೀಯ ಶಾಸಕ ಡಾ. ಭರತ್ ಶೆಟ್ಟಿ ಅವರ ಗಮನಕ್ಕೆ ಬಂದಾಗ ಮುಂದೆ ಬಂದು, ಆ ಮಹಿಳೆಗೆ ಫೋಲ್ಡಿಂಗ್ ಬೆಡ್ ಒದಗಿಸಿದರು. ಸ್ಥಳೀಯ ಮನಪಾ ಸದಸ್ಯ ಮಾಜಿ ಮೇಯರ್ ಜಯಾನಂದ ಹಾಗೂ ಬಿಜೆಪಿ ಕಾರ್ಯಕರ್ತರು ನೇರವಾದರು. ರೆಡ್ ಕ್ರಾಸ್ ಸೊಸೈಟಿಯ ಡಾ. ಶಾಂತಾರಾಮ್ ಶೆಟ್ಟಿ ಅವರಲ್ಲಿ ತಿಳಿಸಿ ಫೋಲ್ಡಿಂಗ್ ಬೆಡ್ ಸಂಸ್ಥೆಯಿಂದ ನೀಡಲಾಯಿತು. ಇದೀಗ ಈ ಬೆಡ್‌ನಿಂದ ಮಹಿಳೆಗೆ ಸ್ವಲ್ಪ ಮಟ್ಟಿಗೆ ಆರಾಮ ದೊರಕುವಂತಾಯಿತು. ಈ ಕಾರ್ಯ ಸ್ಥಳೀಯರಲ್ಲಿ ಮಾನವೀಯತೆಯ ಉದಾಹರಣೆಯಾಗಿ ಪರಿಣಮಿಸಿದೆ.

ರಸ್ತೆ ನಿರ್ಮಾಣದಿಂದ ಬದಲಾದ ಬದುಕು ಇದೇ ಗ್ರಾಮದ ಇನ್ನೊಂದು ಪ್ರಮುಖ ಸಮಸ್ಯೆಯಾಗಿದ್ದ ರಸ್ತೆ ಕೊರತೆ ಕೂಡ ಈಗ ಪರಿಹಾರ ಕಂಡಿದೆ. ಹಲವು ವರ್ಷಗಳಿಂದ ಕಚ್ಚಾ ರಸ್ತೆ, ಕೆಸರು, ಮಳೆಯ ಸಮಯದಲ್ಲಿ ಸಂಚಾರ ಅಸಾಧ್ಯವಾಗಿದ್ದ ಪರಿಸ್ಥಿತಿ ಜನರನ್ನು ಬೇಸತ್ತುಗುವಂತೆ ಮಾಡಿತು.

ಡಾ. ಭರತ್ ಶೆಟ್ಟಿ ಶಾಸಕರಾಗಿ ಆಯ್ಕೆಯಾದ ಬಳಿಕ ಜನರಿಗೆ ನೀಡಿದ ವಾಗ್ದಾನದಂತೆ 2 ಕೋಟಿ ವೆಚ್ಚ ಮಾಡಿ ಸ್ಥಳೀಯ ಜನರ ಸಹಕಾರದಲ್ಲಿ ರಸ್ತೆ ವಿಸ್ತರಿಸಿ ಕಾಂಕ್ರಿಟಿಕರಣ ಮಾಡಿ ಇದೀಗ ಉದ್ಘಾಟನೆಗೊಂಡಿದೆ. ಇದೀಗ ವಾಹನ ಸಂಚಾರ ಸುಗಮವಾಗಿದೆ. ಶಾಲಾ ಮಕ್ಕಳು, ರೋಗಿಗಳು, ವೃದ್ಧರು ಎಲ್ಲರಿಗೂ ಇದರಿಂದ ಹೆಚ್ಚಿನ ಅನುಕೂಲವಾಗಿದೆ.

ಗ್ರಾಮಸ್ಥರ ಹರ್ಷ

ರಸ್ತೆ ನಿರ್ಮಾಣ ಮತ್ತು ಮಹಿಳೆಗೆ ದೊರೆತ ನೆರವಿನಿಂದ ಗ್ರಾಮದಲ್ಲಿ ಸಂತೋಷದ ವಾತಾವರಣ ನಿರ್ಮಾಣವಾಗಿದೆ. "ನಾವು ವರ್ಷಗಳಿಂದ ಕಾಯುತ್ತಿದ್ದ ಸೌಲಭ್ಯಗಳು ಈಗ ದೊರೆತಿವೆ. ಇದು ನಮ್ಮ ಬದುಕನ್ನೇ ಬದಲಾಯಿಸುತ್ತದೆ" ಎಂದು ಗ್ರಾಮಸ್ಥರು ಅಭಿಪ್ರಾಯಪಟ್ಟಿದ್ದಾರೆ. ಶಾಸಕರ ಈ ನೆರವಿಗೆ ವಿಶೇಷ ಚೇತನ ಮಹಿಳೆಯ ತಾಯಿ ಮೀನಾಕ್ಷಿ ಮನದುಂಬಿ ಕೃತಜ್ಞತೆ ಅರ್ಪಿಸಿದ್ದಾರೆ. ಮತದಾರರಿಗೆ ಸೌಲಭ್ಯ ಒದಗಿಸಿದ ಶಾಸಕರ ಬದ್ಧತೆ ಕಾರ್ಯಕರ್ತರಿಗೂ ಸಂತಸ ತಂದಿದ್ದು ಜನರ ಬೇಡಿಕೆಯೂ ಈಡೇರಿದೆ.

ಚೇತನಾ ಶಾಲೆಯಲ್ಲಿ ಸಾಮೂಹಿಕ ಜನ್ಮದಿನಾಚರಣೆ

ಮಕ್ಕಳಿಗೆ ಸಿಹಿತಿಂಡಿ, ಉಡುಗೊರೆ

ಮಂಗಳೂರು: ಸೇವಾಭಾರತಿಯ ಅಂಗಸಂಸ್ಥೆಯಾದ ಚೇತನಾ ಬಾಲ ವಿಕಾಸ ಕೇಂದ್ರದಲ್ಲಿ ವಿಶೇಷ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ ವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಮುಖ್ಯಅತಿಥಿ ಬಿ.ಎ.ಎಸ್.ಎಫ್. ನಿರ್ದೇಶಕ ಶ್ರೀನಿವಾಸ ಪ್ರಾಣೇಶ್ ಮಾತನಾಡಿ, ಸಾಂಪ್ರದಾಯಿಕ ಶೈಲಿಯಲ್ಲಿ ಹುಟ್ಟುಹಬ್ಬದ ಆಚರಣೆ ಮಾಡುತ್ತಿರುವ ಸೇವಾಭಾರತಿ ಸಂಸ್ಥೆಯಲ್ಲಿ ವಿಶೇಷ ಮಕ್ಕಳಿಗೆ ಶಿಕ್ಷಣ ನೀಡುವ ಶಿಕ್ಷಕಿಯರ ಬದ್ಧತೆಯನ್ನು ಮತ್ತು ಕರ್ತವ್ಯವನ್ನು ಪ್ರಶಂಸಿಸಿದರು. ಶ್ರೀನಿವಾಸ ಪ್ರಾಣೇಶ್ ಅವರನ್ನು ಇದೇ ಸಂದರ್ಭದಲ್ಲಿ ಸೇವಾ ಭಾರತಿ ವತಿಯಿಂದ ಸನ್ಮಾನಿಸಲಾಯಿತು. ಬಿ.ಎ.ಎಸ್.ಎಫ್. ಮಾನವ ಸಂಪನ್ಮೂಲ ಅಧಿಕಾರಿ ಸಂತೋಷ್ ಪೈ ಭಾಗವಹಿಸಿದ್ದರು.

ಸೇವಾಭಾರತಿ ಸಂಸ್ಥೆಯ ಹಿರಿಯ ಸ್ವಯಂಸೇವಕ ಪ್ರಕಾಶ್ ಪೈ ಅವರು ಹುಟ್ಟುಹಬ್ಬದ ಆಚರಣೆ ಬಗ್ಗೆ ಪ್ರಾಸ್ತಾವಿಕ ಮಾತನ್ನಾಡಿದರು. ಸೇವಾ ಭಾರತಿ ಗೌರವ ಕಾರ್ಯದರ್ಶಿ ನಾಗರಾಜ ಭಟ್, ವಿಶ್ವಸ್ಥರಾದ ವಿನೋದ್ ಶೆಣೈ, ಶಾಲಾ ಮುಖ್ಯೋಪಾಧ್ಯಾಯಿನಿ ಸುಪ್ರೀತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಾಲಾ ಶಿಕ್ಷಕಿಯರಿಂದ ಪ್ರಾರ್ಥನಾ ಗೀತೆ ಮೂಲಕ ಆರಂಭವಾದ ಸಮಾರಂಭದಲ್ಲಿ, ನಾಗರಾಜ್ ಭಟ್ ಸ್ವಾಗತಿಸಿದರು. ಶಿಕ್ಷಕಿ ಚಂಪಾ ಧನ್ಯವಾದ ಅರ್ಪಿಸಿದರು. ಶಿಕ್ಷಕಿ ರೇಖಾ ಕಾರ್ಯಕ್ರಮ ನಿರೂಪಿಸಿದರು.

ಸೇವಾಭಾರತಿ ವಿಶ್ವಸ್ಥರು, ಶಾಲಾ ಶಿಕ್ಷಕಿಯರು ಹಾಗೂ ಶಿಕ್ಷಕೇತರರು, ಸಂಸ್ಥೆಯ ಇತರ ಸಹೋದ್ಯೋಗಿಗಳು, ಸ್ವಯಂಸೇವಕರು, ಹೆತ್ತವರು ಹಾಗೂ ಪೋಷಕರು, ಹಿತೈಷಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಹಾಡು, ನೃತ್ಯ

ಪೋಷಕರು, ಸ್ವಯಂ ಸೇವಕರು, ಮಕ್ಕಳು ಮತ್ತು ಶಿಕ್ಷಕಿಯರು ಹಾಡು ಮತ್ತು ನೃತ್ಯದ ಮೂಲಕ ವಿಶೇಷ ಮಕ್ಕಳನ್ನು ರಂಜಿಸಿದರು ಮಕ್ಕಳಿಗೆ ತಿಲಕ ಇಟ್ಟು ಆರತಿ ಬೆಳಗಿ, ಸಿಹಿ ತಿಂಡಿ ತಿನಿಸು ನೀಡುವ ಮೂಲಕ ಮಕ್ಕಳ ಜನ್ಮದಿನಾಚರಣೆ ಆಚರಿಸಲಾಯಿತು.
ಎಲ್ಲಾ ಮಕ್ಕಳಿಗೂ ವಿಶೇಷ ಉಡುಗೊರೆ ನೀಡಲಾಯಿತು.

ಏ.2 : ಮಿಜಾರು ಅಣ್ಣಪ್ಪ ಸಂಸ್ಮರಣಾ ಗೋಷ್ಠಿ

ಮಂಗಳೂರು: ಯಕ್ಷಗಾನ ರಂಗದ ಹಾಸ್ಯ ಚಕ್ರವರ್ತಿಯಾಗಿದ್ದ ಮಿಜಾರು ಅಣ್ಣಪ್ಪ ಅವರ ಸಂಸ್ಮರಣಾ ಗೋಷ್ಠಿ ಹಾಗೂ 'ಕೋಟಿ ಚೆನ್ನಯ' ತುಳು ಯಕ್ಷಗಾನ ಪ್ರದರ್ಶನ ಏ.2 ರಂದು ಮಧ್ಯಾಹ್ನ 2ಕ್ಕೆ ಮೂಡಬಿದಿರೆಯ ಶ್ರೀ ಮಹಾವೀರ ಕಾಲೇಜಿನಲ್ಲಿ ನಡೆಯಲಿದೆ.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಶ್ರೀ ಯಕ್ಷ ಮಿತ್ರಕಲಾ ಮಂಡಳಿ ಬೆಳುವಾಯಿ ಹಾಗೂ ಶ್ರೀ ಮಹಾವೀರ ಕಾಲೇಜು ಮೂಡಬಿದರೆ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಮಾಜಿ ಸಚಿವ ಅಭಯಚಂದ್ರ ಜೈನ್ ಕಾರ್ಯಕ್ರಮ ಉದ್ಘಾಟಿಸುವರು. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸುವರು. ಹಿರಿಯ ಯಕ್ಷಗಾನ ಕಲಾವಿದ ಸಂಜಯ ಕುಮಾರ್ ಗೋಣಿಬೀಡು ಅವರು ಸಂಸ್ಮರಣಾ ಉಪನ್ಯಾಸ ಮಾಡುವರು. ಅತಿಥಿಗಳಾಗಿ ಶ್ರೀ ಯಕ್ಷ ದೇವ ಮಿತ್ರಮಂಡಳಿಯ ಗೌರವಾಧ್ಯಕ್ಷ ಕೆ.ಶ್ರೀಪತಿ ಭಟ್, ಬಿಜೆಪಿ ದ.ಕ. ಜಿಲ್ಲಾ ಮಾಜಿ ಅಧ್ಯಕ್ಷ ಸುದರ್ಶನ್ ಎಂ., ಕಾಲೇಜಿನ ಪ್ರಾಂಶುಪಾಲ ಡಾ.ರಾಧಾಕೃಷ್ಣ, ತುಳು ಸಂಘದ ಸಂಚಾಲಕ ಪ್ರವೀಣ್ ಭಂಡಾರಿ, ಉದ್ಯಮಿ ಸದಾಶಿವ ಮಿಜಾರು ಭಾಗವಹಿಸುವರು. ಸಂಸ್ಮರಣಾ ಗೋಷ್ಠಿ ಬಳಿಕ ಎಂ. ದೇವಾನಂದ ಭಟ್ ಬೆಳುವಾಯಿ ಅವರ ಸಂಯೋಜನೆಯಲ್ಲಿ 'ಕೋಟಿ ಚೆನ್ನಯ' ತುಳು ಯಕ್ಷಗಾನ ಪ್ರದರ್ಶನ ನಡೆಯಲಿದೆ ಎಂದು ಅಕಾಡೆಮಿ ತಿಳಿಸಿದೆ.

ಶಾಸಕರಿಂದ ನೀರಿನ ವ್ಯವಸ್ಥೆ



ಮಡಿಕೇರಿ: ಬೇಸಿಗೆ ಸಮಯದಲ್ಲಿ ಸಾರ್ವಜನಿಕರು ನೀರಿನ ಅಭಾವದಿಂದ ಬಳಲಬಾರದೆಂಬ ಉದ್ದೇಶದಿಂದ, ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಅವರು ತಮ್ಮ ವೈಯಕ್ತಿಕ ವೆಚ್ಚದಲ್ಲಿ, ವೀರಾಜಪೇಟೆ ಬ್ಲಾಕ್ ವ್ಯಾಪ್ತಿಯ ಸಾರ್ವಜನಿಕರಿಗೆ ತುರ್ತು ನೀರಿನ ಸೌಲಭ್ಯ ಟ್ಯಾಂಕರ್ ವಾಹನವನ್ನು ಕಲ್ಪಿಸಿದ್ದಾರೆ.

ವೀರಾಜಪೇಟೆಯಲ್ಲಿರುವ ತಮ್ಮ ಗೃಹ ಕಚೇರಿ ಎದುರು, ಈ ವಾಹನಕ್ಕೆ ಚಾಲನೆ ನೀಡಿದ ಶಾಸಕರು, ತೀವ್ರ ಬೇಸಿಗೆಯಿಂದ ಕ್ಷೇತ್ರದಲ್ಲಿ ನೀರಿನ ಅಭಾವ ತಲೆದೋರಿದ್ದು, ಸಾರ್ವಜನಿಕರಿಗೆ ನೀರಿನ ಅಭಾವ ಉಂಟಾಗದಂತೆ ಎಚ್ಚರವಹಿಸಿ ಈ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಸಾರ್ವಜನಿಕರು ತಮ್ಮ ಅಗತ್ಯಕ್ಕೆ ಅನುಸಾರವಾಗಿ ನೀರಿನ ಸದ್ಬಳಕೆ ಮಾಡಿಕೊಳ್ಳಬೇಕೆಂದು ಕರೆ ನೀಡಿದ ಶಾಸಕರು, ಜೀವ ಜಲವನ್ನು ಸಂರಕ್ಷಿಸಿ ನಮ್ಮ ಮುಂದಿನ ಪೀಳಿಗೆಗೆ ಅಗತ್ಯದ ಬಗ್ಗೆ ಮಾಹಿತಿ ನೀಡಲು ಪ್ರತಿಯೊಬ್ಬ ಸಾರ್ವಜನಿಕನೂ ಬದ್ಧನಾಗಿರಬೇಕೆಂದು ಕರೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಮಹಿಳಾ ಅಧ್ಯಕ್ಷೆ ನಯನಾ, ಪುರಸಭೆಯ ಮಾಜಿ ಅಧ್ಯಕ್ಷೆ ದೇಚಮ್ಮ ಕಾಳಪ್ಪ, ಪುರಸಭೆಯ ಮಾಜಿ ಸದಸ್ಯರು, ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಪ್ರಮುಖರು ಉಪಸ್ಥಿತರಿದ್ದರು. ಭಾನುವಾರ ಪೊನ್ನಂಪೇಟೆ ಬ್ಲಾಕ್'ನಲ್ಲೂ ಟ್ಯಾಂಕರ್ ಸೌಲಭ್ಯ ಕಲ್ಪಿಸಲಾಗಿತ್ತು.

ಬ್ರಹ್ಮಕಲಶ ಸಂಭ್ರಮದಲ್ಲಿರುವ ಪದ್ಯಾಣ ಶ್ರೀಮಹಾಲಿಂಗೇಶ್ವರ ದೇವಸ್ಥಾನಕ್ಕೆ ಉಪ್ಪಿನಂಗಡಿಯಿಂದ ಹೊರೆಕಾಣಿಕೆ ಸಮರ್ಪಣೆ

ಮಾನವೀಯ ಮೌಲ್ಯದ ಮೂಲಕ ಬದುಕು ಕಟ್ಟಬೇಕು: ಮಾಣಿಲ ಸ್ವಾಮೀಜಿ

ಉಪ್ಪಿನಂಗಡಿ: ದೇವಸ್ಥಾನದ ಬ್ರಹ್ಮಕಲಶ ಸಲುವಾಗಿ ಭರತ ಖಂಡದ 11 ಪುಣ್ಯ ನದಿಗಳಿಂದ ಪವಿತ್ರ ತೀರ್ಥ ಸಂಗ್ರಹಿಸಿ ನದಿಗಳ ತೀರ್ಥಗಳೊಂದಿಗೆ ಹಸಿರುವಾಣಿಯ ಶೋಭಾಯಾತ್ರೆ ಆಗುತ್ತಿರುವುದು ಐತಿಹಾಸಿಕ ಪುಣ್ಯ ಸೇವೆಯಾಗಿದೆ ಎಂದು ಮಾಣಿಲ ಶ್ರೀಧಾಮದ ಮೋಹನದಾಸ ಸ್ವಾಮೀಜಿ ಹೇಳಿದರು.

ಅವರು ಸೋಮವಾರದಂದು ಉಪ್ಪಿನಂಗಡಿಯ ಶ್ರೀ ಸಹಸ್ರಲಿಂಗೇಶ್ವರ ಮಹಾಕಾಲೀ ದೇವಾಲಯದ ಸನ್ನಿಧಿಯಲ್ಲಿ ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದ ಅಂಗವಾಗಿ ನಡೆದ ಭಜನಾ ಕಾರ್ಯಕ್ರಮ, ಸಾಮೂಹಿಕ ಪ್ರಾರ್ಥನೆ, ಸಂಗಮ ತೀರ್ಥ ಸಂಗ್ರಹ, ಹಾಗೂ ಏಕದಶ ಕಲಶ ತೀರ್ಥ ರಥ ಯಾತ್ರೆಗೆ ಚಾಲನೆ ನೀಡಿ ಆಶೀರ್ವಚನ ನೀಡಿದರು.

ನಾವುಗಳು ಮಾಡುವ ದೇವರ ಸೇವೆಯೊಂದಿಗೆ ಮಾನವೀಯ ಮೌಲ್ಯವನ್ನು ಎತ್ತಿಹಿಡಿಯುವ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ದೇವಾನು ದೇವತೆಗಳ ಸುಭಿಕ್ಷೆಯಿಂದ ವಿಶ್ವ ಶಾಂತಿಯಾಗಲಿ, ಎಲ್ಲಾ ಗಂಡಾಂತರಗಳು ದೂರವಾಗಲಿ ಎಂದರು.



ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಮಾತನಾಡಿ, ಒಂದು ಊರಿನ ದೇವಸ್ಥಾನದ ಬ್ರಹ್ಮಕಲಶ ಆ ಊರಿಗೆ ಸೀಮಿತ ಆಗಬಾರದು. ಅದರ ಪಾವಿತ್ರ್ಯತೆ ಮತ್ತು ಪುಣ್ಯ ಎಲ್ಲೆಡೆಯ ಜನತೆಗೂ ದೊರಕುವಂತಾಗಬೇಕು. ಈ ನಿಟ್ಟಿನಲ್ಲಿ ಇಲ್ಲಿನ ಈಶ್ವರ ಕ್ಷೇತ್ರದ ಸಂದೇಶ ಪಂದ್ಯಾಣ ಕ್ಷೇತ್ರದ ಮೂಲಕ ಎಲ್ಲೆಡೆ ಪಸರಿಸಲಿ ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಅರುಣ್ ಶ್ಯಾಮ್ ಮಾತನಾಡಿ, ಪದ್ಯಾಣದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವಕ್ಕೆ ಎಲ್ಲೆಡೆಯ ಭಕ್ತರ ಸಹಕಾರ ಲಭಿಸುತ್ತಿರುವುದು ಸಂತಸದಾಯಕ ಬೆಳವಣಿಗೆ ಎಂದರು.



ಕಾರ್ಯಕ್ರಮದಲ್ಲಿ ಶ್ರೀ ಸಹಸ್ರಲಿಂಗೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ರಾಧಾಕೃಷ್ಣ ನಾಯಕ್, ಮಾಜಿ ಅಧ್ಯಕ್ಷ ಕರುಣಾಕರ ಸುವರ್ಣ, ಸದಸ್ಯರಾದ ದೇವಿದಾಸ ರೈ, ಡಾ. ರಮ್ಯಾ ರಾಜಾರಾಮ್, ಪದ್ಯಾಣ ದೇವಸ್ಥಾನ ಸಮಿತಿ ಅಧ್ಯಕ್ಷ ಸತ್ಯ ನಾರಾಯಣ ಭಟ್, ಪದಾಧಿಕಾರಿಗಳಾದ ಕೃಷ್ಣ ಎಂ.ಆರ್., ಬಾಬು ನ್ಯಾಕ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಶಶಿಧರ್, ಉಪ್ಪಿನಂಗಡಿ ಸಹಕಾರಿ ವ್ಯವಸಾಯಿಕ ಸಂಘದ ಅಧ್ಯಕ್ಷ ಸುನಿಲ್ ಕುಮಾರ್ ದಡ್ಡು, ಪ್ರಮುಖರಾದ ಸುರೇಶ್ ಅತ್ರಮಜಲು, ರಾಮಚಂದ್ರ ಮಣಿಯಾಣಿ, ವಿದ್ಯಾಧರ ಜೈನ್, ಕೈಲಾರ್ ರಾಜಗೋಪಾಲ್ ಭಟ್, ರವೀಂದ್ರ ಇಳಂತಿಲ, ಮಹೇಶ್ ಬಜತ್ತೂರು, ಪ್ರಶಾಂತ್ ಪೆರಿಯಡ್ಕ, ಎನ್ ರಾಘವೇಂದ್ರ ನಾಯಕ್, ಕಂಗ್ವೆ ವಿಶ್ವನಾಥ ಶೆಟ್ಟಿ, ಹೇರಂಭ ಶಾಸ್ತ್ರಿ, ಸುಜಾತಕೃಷ್ಣ ಆಚಾರ್ಯ, ರಾಜಶೇಖರ್ ರೈ ಕರಾಯ, ಶ್ಯಾಮ್ ಸುದರ್ಶನ್, ಜಯಂತ ಪೊರೋಳಿ ಮತ್ತಿತರರು ಉಪಸ್ಥಿತರಿದ್ದರು.

ಲೋಕೇಶ್ ಬೆತ್ತೋಡಿ ಕಾರ್ಯಕ್ರಮ ನಿರ್ವಹಿಸಿದರು.

> ಧಾರ್ಮಿಕ ವ್ಯವಸ್ಥೆಗೆ ದೇವಸ್ಥಾನ ದೊಡ್ಡ ಶಕ್ತಿಯಾಗಿದ್ದು, ತೀರ್ಥ ಮೆರವಣಿಗೆಯೂ ಧಾರ್ಮಿಕ ಕ್ಷೇತ್ರಕ್ಕೆ ಶಕ್ತಿಯಾಗಿದೆ.
> ■ ಹರೀಶ್ ಪೂಂಜ, ಶಾಸಕ



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಅವರು ಚುನಾವಣಾ ಪ್ರಚಾರದ ಹಿನ್ನೆಲೆಯಲ್ಲಿ ಪೈವಳಿಕೆ ಮತ್ತು ಮೀಂಜ ಪಂಚಾಯತ್ ವ್ಯಾಪ್ತಿಯ ವಿವಿಧೆಡೆ ಮತದಾರರನ್ನು ಭೇಟಿಯಾಗಿ ಮತ ಯಾಚಿಸಿದರು. ಸೋಮವಾರ ಬೆಳಗ್ಗೆ ಕುರುಡಪದವಿನಿಂದ ಆರಂಭಿಸಿದ ಅವರು ಮಧ್ಯಾಹ್ನ ದುರ್ಗಿಪಳ್ಳ ಸಂಜೆ ಚೇವಾರಿನಲ್ಲಿ ಕೊನೆಗೊಳಿಸಿದರು. ಬಿಜೆಪಿ ನೇತಾರರು, ಕಾರ್ಯಕರ್ತರು ಉಪಸ್ಥಿತರಿದ್ದರು.



ಉಪ್ಪಳ: ಮಂಜೇಶ್ವರ ವಿಧಾನ ಸಭಾ ಕ್ಷೇತ್ರ ಚುನಾವಣೆಗೆ ಇನ್ನು ಕೆಲವೇ ದಿನಗಳು ಬಾಕಿ ಉಳಿದಿರುವಂತೆ ಮಂಜೇಶ್ವರ ಮಂಡಲದ ವಿವಿಧೆಡೆ ಹಿರಿಯರಿಗೆ ಮಾತದಾನ ಸೋಮವಾರ ಆರಂಭಗೊಂಡಿದೆ. ಆದರಂತೆ ಪೈವಳಿಕೆ ಪಂಚಾಯತ್‌ನ ಕಯ್ಯಾರ್ ಅತ್ತಕಟ್ಟೆಯಲ್ಲಿ 128ನೇ ಬೂತ್‌ನ ಹಿರಿಯರಾದ ನಾರಾಯಣ ಪೂಜಾರಿ ಅವರು ಚುನಾವಣಾ ಅಧಿಕಾರಿಯವರ ಉಪಸ್ಥಿತಿಯಲ್ಲಿ ಮನೆಯಲ್ಲಿ ಮತ ಚಲಾಯಿಸಿದರು.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎಡರಂಗದ ಅಭ್ಯರ್ಥಿ ಕೆ.ಆರ್.ಜಯಾನಂದ ಅವರ ಚುನಾವಣಾ ಸಭೆ ಸೋಮವಾರ ಹೊಸಂಗಡಿಯಲ್ಲಿ ನಡೆಯಿತು. ಸಿಪಿಐ ರಾಜ್ಯ ಕಾರ್ಯದರ್ಶಿ ಬಿನೋಯ್ ವಿಶ್ವಂ ಪ್ರಧಾನ ಭಾಷಣ ಮಾತನಾಡಿದರು. ಸಿಪಿಐ ಜಿಲ್ಲಾ ಕೌನ್ಸಿಲ್ ಸದಸ್ಯ ಜಯರಾಮ ಬಲ್ಲಂಗುಡೇಲು ಅಧ್ಯಕ್ಷತೆ ವಹಿಸಿದ್ದರು. ಸಿಪಿಎಂ ನಾಯಕ ಸಿಜಿ ಮ್ಯಾಥ್ಯೂ ಪ್ರಸ್ತಾವಿಕ ಮಾತನಾಡಿದರು. ಅಭ್ಯರ್ಥಿ ಕೆ. ಆರ್ .ಜಯಾನಂದ, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಬೇಬಿ ಬಾಲಕೃಷ್ಣನ್, ಸಿಪಿಐ ಜಿಲ್ಲಾ ಕಾರ್ಯದರ್ಶಿ ಸಿ.ಪಿ.ಬಾಬು, ಸಿಪಿಐ ಜಿಲ್ಲಾ ಅಸಿಸ್ಟಂಟ್ ಸೆಕ್ರೆಟರಿ ಬಿ.ರಾಜನ್, ಸಿಪಿಐಎಂ ಕುಂಬಳೆ ಏರಿಯಾ ಸೆಕ್ರೆಟರಿ ಸಿ.ಎ.ಸುಬೈರ್, ಸಿಪಿಐ ನಾಯಕ ರಾಮಕೃಷ್ಣ ಕಡಂಬಾರ್, ತಾಜುದ್ದೀನ್, ಕಮಲಾಕ್ಷ ಮೊದಲಾದವರು ಉಪಸ್ಥಿತರಿದ್ದರು.

ಕಿರುಸುದ್ದಿ

ಇಂದು ಪುತ್ತೂರು ಜಾತ್ರೆಗೆ ಗೊನೆ ಮುಹೂರ್ತ



ಪುತ್ತೂರು: ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ವಾರ್ಷಿಕ ಜಾತ್ರೋತ್ಸವದ ಅಂಗವಾಗಿ ಏ.1ರಂದು ಗೊನೆ ಮುಹೂರ್ತದ ಮೂಲಕ ಚಾಲನೆ ದೊರೆಯಲಿದೆ. ಸೀಮಾತೀತ ಭಕ್ತರನ್ನು ಹೊಂದಿರುವ ಮಹಾಲಿಂಗೇಶ್ವರ ದೇವಾಲಯದ ಜಾತ್ರೆ ಎಂದರೆ ಬಹು ದಿನಗಳ ಮತ್ತು ದೊಡ್ಡ ಉತ್ಸವ. ಪೂರ್ವ ಶಿಷ್ಟ ಸಂಪ್ರದಾಯದಂತೆ ನಡೆಯುವ ವಿಶೇಷಗಳ ಜಾತ್ರೆಗೆ ಊರ, ಪರವೂರ ಭಕ್ತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಏ.1ರಂದು ಗೊನೆ ಮುಹೂರ್ತ ನಡೆದರೆ, ಏ.10ರಂದು ಜಾತ್ರೆಗೆ ಧ್ವಜಾರೋಹಣ ನಡೆಯಲಿದೆ. ಏ.17ರಂದು ಶ್ರೀ ದೇವರ ಬ್ರಹ್ಮರಥೋತ್ಸವ, ಪುತ್ತೂರು ಬೆಡಿ ನಡೆಯಲಿದೆ. ಏ.1ರಂದು ಮಂಗಳವಾರ ಬೆಳಗ್ಗೆ ಪ್ರಾರ್ಥನೆ, ಗಂಟೆ 9.15ರ ವೃಷಭ ಲಗ್ನದಲ್ಲಿ ಗೊನೆ ಕಡಿಯುವುದು, ಮಧ್ಯಾಹ್ನ ಕೊಟ್ಟಿಬೆಟ್ಟು ಏಳ್ನಾಡುಗುತ್ತಿನವರಿಂದ ಅನ್ನ ಸಂತರ್ಪಣೆ ನಡೆಯಲಿದೆ.

ಇಂದು ಪಾಂಡವರಕಲ್ಲು ಶ್ರೀ ಬ್ರಹ್ಮ ಬೈದೆರೆ ಗರೋಡಿ ಜಾತ್ರೆ

ಬಂಟ್ವಾಳ: ಇತಿಹಾಸ ಪ್ರಸಿದ್ಧ ಪಾಂಡವರಕಲ್ಲು ಶ್ರೀ ರಾಜನ್ ದೈವ ಕೊಡಮಣಿತ್ತಾಯ ಹಾಗೂ ಶ್ರೀ ಬ್ರಹ್ಮ ಬೈದೆರೆ ಗರೋಡಿ ಕ್ಷೇತ್ರದಲ್ಲಿ ನಡೆಯುವ ಶ್ರೀ ಬ್ರಹ್ಮ ಬೈದೆರೆ ಜಾತ್ರೋತ್ಸವ ಇಂದು ಭಕ್ತಿಭಾವದಿಂದ ಹಾಗೂ ವಿಜೃಂಭಣೆಯಿಂದ ನಡೆಯಲಿದೆ. ಇಂದು ಮುಂಜಾನೆ 5 ಗಂಟೆಗೆ ಪಿಲಿಚಾಮುಂಡಿ ದೈವದ ನೇಮೋತ್ಸವ ನಡೆಯಲಿದ್ದು, ಅದೇ ದಿನ ರಾತ್ರಿ ಶ್ರೀ ಬ್ರಹ್ಮ ಬೈದೆರೆ ಜಾತ್ರೋತ್ಸವ ಜರುಗಲಿದೆ. ನಂತರ ದಾನಿಗಳ ಸೇವಾರ್ಥವಾಗಿ ಶಾಶ್ವತ ಅನ್ನಸಂತರ್ಪಣೆ ಹಾಗೂ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ. ಬಳಿಕ ರಾತ್ರಿ 10 ಗಂಟೆಗೆ ಬೈದೆರುಗಳು ಗರೋಡಿ ಇಳಿಯುವ ಕಾರ್ಯಕ್ರಮ ಮತ್ತು ಸುಡುಮದ್ದು ಪ್ರದರ್ಶನವೂ ನಡೆಯಲಿದೆ. ಏ. 2ರಂದು ಧ್ವಜಾವರೋಹಣ, ಕುರುಸಂಬಿಲ ನೇಮ ಮತ್ತು ಭಂಡಾರ ಇಳಿಸುವ ಕಾರ್ಯಕ್ರಮಗಳು ನಡೆಯಲಿವೆ ಎಂದು ಶ್ರೀ ಕ್ಷೇತ್ರದ ಆಡಳಿತ ಮಂಡಳಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಸುದೀಪ್ ರೈ ಸಾವಿನ ತನಿಖೆಗೆ ಹೆತ್ತವರ ಆಗ್ರಹ


ಮಂಗಳೂರು: 'ನಮ್ಮ ಮಗನ ಸಾವಿಗೆ ಆತನ ಪತ್ನಿ ನೀಡಿರುವ ಮಾನಸಿಕ ಹಿಂಸೆ, ಕಿರುಕುಳ ಹಾಗೂ ಆಹಾರದಲ್ಲಿ ವಿಷ ನೀಡಿರುವುದು ಕಾರಣವಾಗಿದ್ದು, ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು' ಎಂದು ಇತ್ತೀಚೆಗೆ ಸಾವಿಗೀಡಾಗಿರುವ ಸುದೀಪ್ ರೈ ಅವರ ಪೋಷಕರು ಆಗ್ರಹಿಸಿದ್ದಾರೆ. ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೃತ ಸುದೀಪ್ ರೈ ತಂದೆ ಬಿ. ದಾಮೋದರ ನೆಲ್ಯಾಡಿ, 'ಮಗನ ಸಾವಿಗೆ ಮಾ. 17ರಂದು ಆತನ ಪತ್ನಿ ನೆಲ್ಯಾಡಿ ಪೇಟೆಯಲ್ಲಿ ನಡೆಸಿದ ಗಲಾಟೆಯೇ ಮುಖ್ಯ ಕಾರಣ. ನಂತರ ಆಕೆ ಆಸ್ಪತ್ರೆಯಲ್ಲಿ ನನ್ನ ಮಗ ಹಾಗೂ ಪತ್ನಿಗೆ ಜೀವ ಬೆದರಿಕೆ ಒಡ್ಡಿ ಆತನನ್ನು ಕರೆದೊಯ್ದು ಮಾನಸಿಕ ಹಿಂಸೆ ನೀಡಿದ್ದಾಳೆ. ಬಳಿಕ ಆತನ ಪರಿಸ್ಥಿತಿ ಚಿಂತಾಜನಕವಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಾ. 29ರಂದು ಮುಂಜಾನೆ ಆತ ಮೃತಪಟ್ಟಿದ್ದಾನೆ. ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ವೇಣುಗೋಪಾಲ್ ಎಂಬವರು ಮಾತನಾಡಿ, 'ಸುದೀಪ್ ರೈ ಅವರಿಗೆ ಆಗಿರುವ ಮಾನಸಿಕ ಕಿರುಕುಳವನ್ನು ತಾನೂ ಸ್ವತಃ ಆಕೆಯಿಂದ ಅನುಭವಿಸಿದ್ದೇನೆ. ಕಳೆದ ವರ್ಷ ವಿವಾಹದ ಹಂತಕ್ಕೆ ತಲುಪಿದ್ದ ನಮ್ಮ ಸಂಬಂಧ ಮುರಿದು ಬಿದ್ದಿತ್ತು. ಹಾಗಿದ್ದೂ ಮಾನಸಿಕ ಹಿಂಸೆ ತಾಳಲಾರದೆ ತಾನು ಕೆಲ ಸಮಯ ಮುಂಬೈಗೆ ತೆರಳಿ ನೆಲೆಸಿದ್ದೆ. ನಮ್ಮಿಬ್ಬರ ಸಂಬಂಧ ಮುಂದುವರಿದಿದ್ದರೆ ಸುದೀಪ್ ರೈ ಅವರದ್ದೇ ಪರಿಸ್ಥಿತಿ ನನ್ನದಾಗುತ್ತಿತ್ತು. ಹಾಗಾಗಿ ಈ ಪ್ರಕರಣದ ಬಗ್ಗೆ ತನಿಖೆಯಾಗಿ ಸುದೀಪ್ ರೈ ಅವರ ಕುಟುಂಬಕ್ಕೆ ನ್ಯಾಯ ದೊರೆಯಬೇಕು' ಎಂದು ಆಗ್ರಹಿಸಿದರು. ಸುದೀಪ್ ರೈ ಅವರ ತಾಯಿ ಉಪಸ್ಥಿತರಿದ್ದರು.

ಏ.3-4: ಶ್ರೀ ಈಶ್ವರ ಸ್ಥಾನದ ಪ್ರತಿಷ್ಠಾ ಮಹೋತ್ಸವ, ನೇಮ

ಮಂಗಳೂರು: ನಗರದ ಮಣ್ಣಗುಡ್ಡೆಯ ಶ್ರೀ ಭೂತನಾಥೇಶ್ವರ ದೇವಸ್ಥಾನದ (ಈಶ್ವರ ಸ್ಥಾನ) ಪ್ರತಿಷ್ಠಾ ಮಹೋತ್ಸವ, ಆಶ್ಲೇಷಾ ಬಲಿ, ದುರ್ಗಾ ನಮಸ್ಕಾರ ಪೂಜೆ ಏ.3ರಂದು ಜರಗಲಿದೆ. ಏ.4 ರಂದು ಧರ್ಮ ದೈವಗಳಾದ ಶ್ರೀ ಕಾಂತೇರಿ ಜುಮಾದಿ- ಬಂಟ, ಜಾರಂದಾಯ-ಬಂಟ, ಮೈಸಂದಾಯ, ಪರಿವಾರ ದೈವಗಳಿಗೆ ಗಗ್ಗರ ಸೇವೆ-ಬಂಡಿ ನೇಮ ಮತ್ತು ಅಣ್ಣಪ್ಪ ಪಂಜುರ್ಲಿ, ಮಾಯಂದಾಲ್ ದೈವಕ್ಕೆ ನೇಮ ಜರಗಲಿದೆ.

ನಿಧನ ಸುದ್ದಿ

ಗೋವಿಂದ ಭಟ್



ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ ಆರಂಭದಿಂದ 30 ವರ್ಷಕ್ಕೂ ಮಿಕ್ಕಿ ಹಿಂದಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಗೋವಿಂದ ಭಟ್ ಕೆ. (75) ಸೋಮವಾರ ರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ಅಲ್ಪಕಾಲದ ಅಸೌಖ್ಯದಿಂದ ನಿಧನ ಹೊಂದಿದ್ದಾರೆ. ವಿದ್ಯಾರ್ಥಿಗಳಿಗೆ ಯಕ್ಷಗಾನದ ಗುರುಗಳಾಗಿ ಪೌರಾಣಿಕ ಪ್ರಸಂಗಗಳ ಬಗ್ಗೆ ವಿಶೇಷ ಅನುಭವ ಹೊಂದಿದ್ದರು. ಮಕ್ಕಳ ತಂಡಕಟ್ಟಿ ಪ್ರದರ್ಶನ ಮಾಡಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯಕಾರ್ಯಕರ್ತರಾಗಿದ್ದು ಹಲವು ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ಬಾಳ್ತಿಲ ಕಾಂಪ್ರಬೈಲಿನಲ್ಲಿ ವಾಸವಾಗಿದ್ದು ಕೃಷಿಕಾರ್ಯದಲ್ಲಿ ಜನಾನುರಾಗಿಯಾಗಿದ್ದರು.

ಸೂಫಿ ಕುಂಞ



ಕೊಣಾಜೆ: ಕೊಣಾಜೆ ಗ್ರಾಮದ ಕೋಡಿಜಾಲ್ ಕರ್ಮಾರ್ ನಿವಾಸಿ ಸೂಫಿ ಕುಂಞ ಕೋಡಿಜಾಲ್ (63) ಅಲ್ಪಕಾಲದ ಅನಾರೋಗ್ಯದಿಂದ ಮಂಗಳವಾರ ಬೆಳಿಗ್ಗೆ ದೇರಳಕಟ್ಟೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಇವರು ಕೋಡಿಜಾಲ್ ರಿಫಾಯಿ ಜುಮಾ ಮಸೀದಿ ಇದರ ಆಡಳಿತ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಪ್ರಮುಖ ಮೂರು ಮಂದಿ ಅಭ್ಯರ್ಥಿಗಳಿಗೂ ಗೆಲುವಿನ ಭರವಸೆ

ಲೀಗ್ ಭದ್ರಕೋಟೆಯಲ್ಲಿ ಕಮಲ ಅರಳಿತೇ?

ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ, ಕಾಂಗ್ರೆಸ್ ನೇತೃತ್ವದ ಐಕ್ಯರಂಗ ಒಕ್ಕೂಟ ಹಾಗೂ ಎಡರಂಗ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಸ್ಪರ್ಧಿಸುತ್ತಿದ್ದು, ಈ ಮೂವರಲ್ಲೂ ಗೆಲುವಿನ ಭರವಸೆ ಮೂಡಿದೆ.

ಎನ್‌ಡಿಎ ಅಭ್ಯರ್ಥಿಯಾಗಿ ಬಿಜೆಪಿಯಿಂದ ಎಂ.ಎಲ್.ಅಶ್ವಿನಿ, ಯುಡಿಎಫ್ ಅಭ್ಯರ್ಥಿಯಾಗಿ ಮುಸ್ಲಿಂಲೀಗ್‌ನ ಕಲ್ಲಟ್ರ ಮಾಹಿನ್ ಹಾಜಿ, ಸ್ವತಂತ್ರ ಅಭ್ಯರ್ಥಿಯಾಗಿ (ಎಡರಂಗ ಬೆಂಬಲಿತ) ಶಾನವಾಸ್ ಪಾದೂರು ಕಣದಲ್ಲಿದ್ದಾರೆ. ಎಂ.ಎಲ್.ಅಶ್ವಿನಿ ಅವರು ಬಿಜೆಪಿ ಜಿಲ್ಲಾಧ್ಯಕ್ಷೆಯಾಗಿ ಪ್ರಸಿದ್ಧಿ ಪಡೆದಿದ್ದು, ಇಡೀ ಕ್ಷೇತ್ರದಲ್ಲಿ ಪಾದರಸದಂತೆ ಓಡಾಡಿ ಮತದಾರರ ಮನಸ್ಸು ಗೆಲ್ಲುವ ಪ್ರಯತ್ನದಲ್ಲಿದ್ದಾರೆ. ಕಲ್ಲಟ್ರ ಮಾಹಿನ್ ಹಾಜಿ ಅವರು ಮುಸ್ಲಿಂಲೀಗ್‌ನ ಜಿಲ್ಲಾಧ್ಯಕ್ಷರಾಗಿದ್ದಾರೆ. ಶಾನವಾಸ್ ಪಾದೂರು ಅವರು ಜಿಲ್ಲಾ ಪಂಚಾಯತ್‌ನ ಮಾಜಿ ಉಪಾಧ್ಯಕ್ಷರಾಗಿದ್ದಾರೆ. ಈ ಮೂರು ಮಂದಿಯೂ ಕ್ಷೇತ್ರದಲ್ಲಿ ಭರದಿಂದ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ.



ಕಾಸರಗೋಡು ಕ್ಷೇತ್ರದ ವ್ಯಾಪ್ತಿ ಮತ್ತು ಜನಸಂಖ್ಯೆ

ಕಾಸರಗೋಡು ವಿಧಾನಸಭಾ ಕ್ಷೇತ್ರವು ಕಾಸರಗೋಡು ನಗರಸಭೆ, ಬದಿಯಡ್ಕ, ಬೆಳ್ಳೂರು, ಚೆಂಗಳ, ಕಾರಡ್ಕ, ಕುಂಬ್ಡಾಜೆ, ಮಧೂರು, ಮೊಗ್ರಾಲ್ ಪುತ್ತೂರು ಗ್ರಾಮ ಪಂಚಾಯತ್‌ಗಳನ್ನು ಒಳಗೊಂಡಿದೆ. ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,10,923 ಮಂದಿ ಮತದಾರರಿದ್ದು, ಈ ಪೈಕಿ 1,05,524 ಪುರುಷರು ಹಾಗೂ 1,05,399 ಮಹಿಳೆಯರು ಸೇರಿದ್ದಾರೆ.

ಬಿಜೆಪಿ ಬಲಿಷ್ಠವಿರುವ ವಿಧಾನಸಭಾ ಕ್ಷೇತ್ರ

ಕಾಸರಗೋಡು ವಿಧಾನಸಭಾ ಕ್ಷೇತ್ರವು ಬಿಜೆಪಿ ಬಲಿಷ್ಠವಿರುವ ಕೇರಳ ರಾಜ್ಯದ ವಿಧಾನಸಭಾ ಕ್ಷೇತ್ರಗಳಲ್ಲಿ ಒಂದಾಗಿದೆ. ಕಳೆದ ಸ್ಥಳೀಯಾಡಳಿತ ಸಂಸ್ಥೆಗಳ ಚುನಾವಣೆಯಲ್ಲಿ ಈ ಮಂಡಲದ ಮಧೂರು, ಬದಿಯಡ್ಕ, ಕುಂಬ್ಡಾಜೆ, ಕಾರಡ್ಕ, ಬೆಳ್ಳೂರು ಗ್ರಾಮ ಪಂಚಾಯತ್‌ಗಳಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದಿದೆ. ವಿಶ್ಲೇಷಣೆಯೊಂದರ ಪ್ರಕಾರ ಈ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಮುಸ್ಲಿಂಲೀಗ್ ನಡುವೆ ಬಿಗ್ ಫೈಟ್ ನಡೆಯುತ್ತಿದೆ. 1982ರಿಂದ ಈ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಎರಡನೇ ಸ್ಥಾನ ಪಡೆಯುತ್ತಿದೆ. 2011ರಿಂದ ಬಿಜೆಪಿಯ ಸೋಲಿನ ಅಂತರ ಕಡಿಮೆಯಾಗಿದ್ದು, 8000ರಿಂದ 13,000ದ ಮಧ್ಯೆ ಇರುವುದಾಗಿದೆ.

ಎಡರಂಗ ಒಕ್ಕೂಟ ಆಟಕ್ಕುಂಟು, ಲೆಕ್ಕಕ್ಕಿಲ್ಲ

ಇನ್ನೊಂದೆಡೆ ಈ ಕ್ಷೇತ್ರದಲ್ಲಿ ಎಡರಂಗ ಒಕ್ಕೂಟವು ಆಟಕ್ಕುಂಟು, ಲೆಕ್ಕಕ್ಕಿಲ್ಲದಂತಾಗಿದೆ. ಆದಕಾರಣವೇ ಈ ಕ್ಷೇತ್ರದಲ್ಲಿ ಎಡರಂಗವು ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸದೆ ಸ್ವತಂತ್ರ ಅಭ್ಯರ್ಥಿಗೆ ಮಣೆ ಹಾಕುವುದಾಗಿದೆ. ಈ ಕ್ಷೇತ್ರದಲ್ಲಿ ಎಡರಂಗ ಒಮ್ಮೆಯೂ ಗೆಲುವು ಸಾಧಿಸಿದ ಇತಿಹಾಸವಿಲ್ಲ. ಮಾತ್ರವಲ್ಲದೆ ಎಡರಂಗವು ಈ ಕ್ಷೇತ್ರವನ್ನು ಐಎನ್‌ಎಲ್‌ಗೆ ಬಿಟ್ಟುಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಎಡರಂಗದ ಮತಗಳು ಐಕ್ಯರಂಗದತ್ತ ಸೋರಿಕೆಯಾಗುತ್ತಿರುವುದಾಗಿ ಹೇಳಲಾಗುತ್ತಿದೆ.

ಈ ಮಧ್ಯೆ ಮುಸ್ಲಿಂಲೀಗ್‌ನ ಭದ್ರಕೋಟೆಯಾದ ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಜನರು ಬದಲಾವಣೆ ಬಯಸಿದ್ದು, ಈ ಹಿನ್ನೆಲೆಯಲ್ಲಿ ಗಮನಿಸುವುದಾದರೆ ಕಮಲ ಅರಳಬಹುದೇ ಎಂಬ ಕುತೂಹಲ ಜನರದ್ದಾಗಿದೆ.

ಈ ವಿಧಾನಸಭಾ ಕ್ಷೇತ್ರವು 1957ರಲ್ಲಿ ರಚನೆಯಾಗಿದ್ದು, ಆರಂಭದಲ್ಲಿ ಅಂದರೆ 1957 ಮತ್ತು 1960ರಲ್ಲಿ ಕಾಂಗ್ರೆಸ್ ಪಕ್ಷವು ಗೆಲುವು ಸಾಧಿಸಿತ್ತು. ನಂತರದ ಮೂರು ಚುನಾವಣೆಗಳಾದ 1965, 1967, 1970ರಲ್ಲಿ ಪಕ್ಷೇತರ ಅಭ್ಯರ್ಥಿಗಳು ಜಯಶಾಲಿಯಾಗಿದ್ದರು. ಪಕ್ಷೇತರ ಅಭ್ಯರ್ಥಿಗಳ ಗೆಲುವಿಗೆ ಕನ್ನಡ ಹೋರಾಟ ಕಾರಣವಾಗಿತ್ತು.

1977ರ ಬಳಿಕ ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಮುಸ್ಲಿಂಲೀಗ್ ಸತತವಾಗಿ ಜಯ ಸಾಧಿಸಿದೆ. ಕಳೆದ 11 ಚುನಾವಣೆಗಳಲ್ಲಿ ಮುಸ್ಲಿಂಲೀಗ್ ಅಭ್ಯರ್ಥಿಗಳೇ ಶಾಸಕರಾಗಿ ಆಯ್ಕೆಯಾದರು. ಈ ಕ್ಷೇತ್ರದಿಂದ ಸಿ.ಟಿ.ಅಹಮ್ಮದಾಲಿ ಅವರು ಸುದೀರ್ಘ ಅವಧಿಗೆ ಶಾಸಕರಾಗಿದ್ದು, ನಂತರ ಸಚಿವರೂ ಆಗಿದ್ದಾರೆ. 1980ರಿಂದ ಅವರು ಸತತ ಏಳು ಬಾರಿ ಆಯ್ಕೆಯಾಗಿದ್ದರು. ಬಳಿಕ 2011, 2016, 2021ರಲ್ಲಿ ಈ ಕ್ಷೇತ್ರದಲ್ಲಿ ಮುಸ್ಲಿಂಲೀಗ್‌ನ ಎನ್ .ಎ.ನೆಲ್ಲಿಕುನ್ನು ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಮಂಜೇಶ್ವರ ಮಂಡಲ ಯುಡಿಎಫ್ ಪರ್ಯಟನೆ

ಮಂಜೇಶ್ವರ: ಮಂಜೇಶ್ವರ ಮಂಡಲ ಯುಡಿಎಫ್ ಅಭ್ಯರ್ಥಿ ಎ.ಕೆ.ಎಂ.ಅಶ್ರಫ್ ಅವರ ಚುನಾವಣಾ ಪ್ರಚಾರದ ಮಂಡಲ ಪರ್ಯಟನೆ ಎರಡನೇ ದಿನವಾದ ಸೋಮವಾರ ಮೀಂಜ, ಪೈವಳಿಕೆ ಪಂಚಾಯತ್‌ನ ಹಲವೆಡೆ ಕಾರ್ನರ್ ಮೀಟಿಂಗ್ ಸಹಿತ ಜನತಾ ಸಂದರ್ಶನ ನಡೆಯಿತು. ಬೆಳಗ್ಗೆ ದೈಗೋಳಿಯಿಂದ ಆರಂಭಗೊಂಡ ಪರ್ಯಟನೆ ಮಜೀರ್ಪಳ್ಳ, ಗಾಂಧೀನಗರ, ಮದಂಗಲ್ಲು, ಮೀಯಪದವು,



ಚಿಗುರುಪಾದೆ, ಬಾಳಿಯೂರು, ಮೂಡಂಬೈಲು,, ಕಡಂಬಾರು ಮೊದಲಾದ ಕೇಂದ್ರಗಳಲ್ಲಿ ಕಾರ್ನರ್ ಸಭೆ ನಡೆಸಿ ಮಧ್ಯಾಹ್ನ ಕಡಂಬಾರಿನಲ್ಲಿ ವಿಶ್ರಾಂತಿ ಪಡೆಯಲಾಯಿತು. ಅಪರಾಹ್ನ ಲಾಲ್‌ಬಾಗ್, ಬಾಯಾರ್ ಪದವು, ಶಿರಂತಡ್ಕ, ಸುಂಕದಕಟ್ಟೆ, ಕುರುಡಪದವು, ಮುಳಿಗದ್ದೆ, ಪೆರುವೋಡಿ, ಬಳ್ಳೂರು, ಕನಿಯಾಲ, ಚೇರಾಲು, ಸಜಂಕಿಲ, ಧರ್ಮತ್ತಡ್ಕ, ಸುಬ್ಬಯಕಟ್ಟೆ,ಕಯ್ಯಾರ್,ಕೊಕ್ಕೆಚಾಲ್, ಜೋಡುಕಲ್ಲು, ಬಾಯಿಕಟ್ಟೆ ಮೊದಲಾದೆಡೆ ಪರ್ಯಟನೆ ಪೂರೈಸಿ ರಾತ್ರಿ ಪೈವಳಿಕೆಯಲ್ಲಿ ಸಮಾಪ್ತಿಯಾಯಿತು. ಯುಡಿಎಫ್ ಮಂಡಲಾಧ್ಯಕ್ಷ ಅಝೀಝ್ ಮರಿಕ್ಕೆ, ಸಂಚಾಲಕ ಮಂಜುನಾಥ ಆಳ್ವ, ಟಿ.ಎ. ಮೂಸ, ಎಂ. ಅಬ್ಬಾಸ್, ಎ.ಕೆ.ಆರಿಫ್, ಲಕ್ಷ್ಮಣ ಪ್ರಭು, ಹರ್ಷಾದ್ ವ ' ಕ ರ್ ಡಿ , ಅ ಝೀ ೦ ಝ್ ' ಬ್ ಕಳತ್ತೂರು, ಯು. ಕೆ.ಸೈಫುಲ್ಲ ತಂಜಳ್, ಹಾದಿ ತಂಜಳ್, ಡಿಎಂಕೆ ಮುಹ್ಮದ್, ಸೋಮಪ್ಪ, ದಾಮೋಜರ ಮಾಸ್ಟರ್ ಸೇರಿದಂತೆ ಪ್ರಮುಖ ನಾಯಕರು, ಕಾರ್ಯಕರ್ತರು ಉಪಸ್ಥಿತರಿದ್ದರು.



ಸ್ಥಳೀಯಾಡಳಿತ ಸಂಸ್ಥೆಗಳ ಮುಸ್ಲಿಂಲೀಗ್ ಪ್ರತಿನಿಧಿಗಳ ಸಭೆ

ಕಾಸರಗೋಡು: ಕಾಸರಗೋಡು ನಗರಸಭಾ ಮಹಿಳಾ ಭವನದಲ್ಲಿ ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುನೈಟೆಡ್ ಡೆಮಾಕ್ರೆಟಿಕ್ ಫ್ರಂಟ್ (ಯುಡಿಎಫ್) ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರನ್ನು ಗೆಲ್ಲಿಸಲು ಸ್ಥಳೀಯಾಡಳಿತ ಸಂಸ್ಥೆಗಳ ಮುಸ್ಲಿಂಲೀಗ್ ಪ್ರತಿನಿಧಿಗಳ ಸಭೆಯನ್ನು ಸೋಮವಾರ ಹಮ್ಮಿಕೊಳ್ಳಲಾಯಿತು.



ಮುಸ್ಲಿಂಲೀಗ್ ಜಿಲ್ಲಾ ಪ್ರಧಾನ ಕಾರ್ಯ ದರ್ಶಿ ಎ.ಅಬ್ದುರಹಿಮಾನ್ ಸಭೆ ಯನ್ನು ಉದ್ಘಾಟಿಸಿ ಮಾತನಾಡಿದರು. ಮುಸ್ಲಿಂಲೀಗ್ ಮಂಡಲಾಧ್ಯಕ್ಷ ಮಾಹಿನ್ ಕೇಳೋಟ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕಾಸರಗೋಡು ಶಾಸಕ ಎನ್ .ಎ.ನೆಲ್ಲಿಕುನ್ನು, ಜಿಲ್ಲಾ ಪದಾಧಿಕಾರಿಗಳಾದ ಪಿ.ಎಂ.ಮುನೀರ್ ಹಾಜಿ, ಎ.ಎಂ.ಕಡವತ್, ವಕೀಲ ಎನ್.ಎ.ಖಾಲಿದ್, ಹಾರಿಸ್ ಚೂರಿ, ಬ್ಲಾಕ್ ಪಂಚಾಯತ್ ಅಧ್ಯಕ್ಷ ಕೆ.ಅಬ್ದುಲ್ಲ ಕುಂಞ ಚೆರ್ಕಳ, ಟಿ.ಎಂ. ಇಕ್ಬಾಲ್, ಅಶ್ರಫ್ ಎಡನೀರು, ನಾಸರ್ ಚಾಯಿಂಡಡಿ, ಎಸ್.ಮುಹಮ್ಮದ್, ಶಾಹಿನಾ ಸಲೀಂ, ಕೆ.ಎ.ಅಬ್ದುಲ್ಲ ಕುಂಞ, ವಸಂತ ಅಜಕ್ಕೋಡು, ಕೆ.ಎಂ.ಹನೀಫ್, ಬೀಫಾತಿಮಾ ಇಬ್ರಾಹಿಂ, ಶಕೀಲಾ ಮಜೀದ್ ಮುಂತಾದವರು ಮಾತನಾಡಿದರು. ಮಾತನಾಡಿದರು. ಕಾರ್ಯದರ್ಶಿ ಟಿ. ಇ.ಮುಕ್ತಾರ್ ಸ್ವಾಗತಿಸಿ, ವಂದಿಸಿದರು.



ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ಚುನಾವಣಾ ಪ್ರಚಾರದ ಬಿಜೆಪಿ ಮಹಾ ಸಂಪರ್ಕ ಅಭಿಯಾನದಲ್ಲಿ ಪಾಲ್ಗೊಂಡ ಚೆರುಗೋಳಿ ಬೂತ್‌ನ ಕಾರ್ಯಕರ್ತರು.

ಉಗ್ರಗಾಮಿಗಳು, ಮತೀಯ ಮೂಲಭೂತವಾದಿಗಳ ಮತಗಳು ನಮಗೆ ಬೇಕಿಲ್ಲ: ಬಿನೋಯ್ ವಿಶ್ವಂ

ಕಾಸರಗೋಡು: ಉಗ್ರಗಾಮಿಗಳು ಹಾಗೂ ಮತೀಯ ಮೂಲಭೂತ ವಾದಿಗಳ ಮತಗಳು ನಮಗೆ ಬೇಕಿಲ್ಲವೆಂದು ಸಿಪಿಐ ರಾಜ್ಯ ಕಾರ್ಯದರ್ಶಿ ಬಿನೋಯ್ ವಿಶ್ವಂ ಹೇಳಿದ್ದಾರೆ. ಕಾಸರಗೋಡು ಪ್ರೆಸ್‌ಕ್ಲಬ್‌ನಲ್ಲಿ ನಡೆದ ಮುಖಾಮುಖಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.



ಎಲ್ಲಾಮತಗಳುಮನುಷ್ಯರದ್ದೇಆಗಿದೆ. ಮನುಷ್ಯರ ಮತಗಳು ನಮಗೆ ಬೇಕು. ರಾಜ್ಯದಲ್ಲಿ ನಿಜವಾದ ಡೀಲ್ ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ಏರ್ಪಟ್ಟಿದೆ. ಬಿಜೆಪಿಯೊಂದಿಗೆ ನಂಟಿನಿಂದ ಕಾಂಗ್ರೆಸ್‌ನ ಹಸ್ತ ಕಳಂಕಿತಗೊಂಡಿದೆ. ಇದನ್ನು ಮರೆಮಾಚಲು ವಿರೋಧ ಪಕ್ಷ ನಾಯಕ ವಿ.ಡಿ.ಸತೀಶನ್‌ನಂತಹ ಕಾಂಗ್ರೆಸ್ ನೇತಾರರು ಯತ್ನಿಸುತ್ತಿದ್ದಾರೆ. ಅವರು ತಮ್ಮ ನಿಲುವನ್ನು ಮರೆಮಾಚದಂತೆ ಮಾಡಲು ಸಿಪಿಎಂ ಮತ್ತು ಬಿಜೆಪಿ ನಡುವೆ ಡೀಲ್ ಏರ್ಪಟ್ಟಿದೆ ಎಂಬ ರೀತಿಯ ಪ್ರಚಾರ ನಡೆಸುತ್ತಿದ್ದಾರೆ. ಎಡರಂಗ ಎಂದೂ ಆಸ್ತಿಕ ಬಾಂಧವರ ಶತ್ರುವಲ್ಲ. ಬದಲಾಗಿ ಮಿತ್ರವಾಗಿದೆ. ಆದರೆ ಮತೀಯ ಮೂಲಭೂತವಾದಿಗಳೊಂದಿಗೆ ಎಡರಂಗ ಎಂದೂ ಸಹಮತ ಹೊಂದಿಲ್ಲವೆಂದು ಬಿನೋಯ್ ವಿಶ್ವಂ ತಿಳಿಸಿದರು.

ಉಡುಪಿ 'ಕೇಶವ ನಿಲಯ'ದಲ್ಲಿ 'ಮಂಥನ' | ಚಿಂತಕ ಜಿ.ಪಿ. ಪ್ರಭಾಕರ್ ತುಮರಿ ಅಭಿಮತ

ಮಲ್ಹೋತ್ರಾ ಕೃತಿಗಳು ನಮಗೆ ದಾರಿದೀಪ

ಉಡುಪಿ: ಹಿಂದುತ್ವ ಎನ್ನುವುದು ಕೇವಲ ಒಂದು ಧರ್ಮವಲ್ಲ, ಅದೊಂದು ಭಾರತೀಯ ಜೀವನಪದ್ಧತಿ ಎಂದು ನ್ಯಾಯಾಲಯವೇ ತೀರ್ಪು ನೀಡಿದೆ. ಆದರೆ ಇಂದು ಹಿಂದುತ್ವಪರ ಮತ್ತು ವಿರೋಧಿಗಳೆಂಬ ಇಬ್ಬರ ಅತಿರೇಕದ ನಿಲುವುಗಳಿಂದಾಗಿ ಸಾಂವಿಧಾನಿಕ ಹಿಂದುತ್ವವು ಹಿಂದೆ ಸರಿಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಚಿಂತಕ ಜಿ.ಪಿ. ಪ್ರಭಾಕರ್ ತುಮರಿ ಅಭಿಪ್ರಾಯಪಟ್ಟರು.

ಉಡುಪಿಯ ಸಂಘ ಕಾರ್ಯಾಲಯ 'ಕೇಶವ ನಿಲಯ'ದಲ್ಲಿ ಮಂಗಳವಾರ ಚಿಂತನಾ ಚಾವಡಿ ಮತ್ತು ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಉಡುಪಿ ಘಟಕದ ಜಂಟಿ ಆಶ್ರಯದಲ್ಲಿ ನಡೆದ 'ಸಮಾಜದಲ್ಲಿ ಹಿಂದುತ್ವದ ಪರಿಕಲ್ಪನೆ: ಸಾಂವಿಧಾನಿಕ ನೆಲೆಯಲ್ಲಿ ಮರುಚಿಂತನೆ' ಕುರಿತಾದ 'ಮಂಥನ' ಮಾಸಿಕ ವೈಚಾರಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಪಾಶ್ಚಾತ್ಯ ಅಪವ್ಯಾಖ್ಯಾನಗಳ ವಿರುದ್ಧ ಎಚ್ಚರಿಕೆ: ಪಾಶ್ಚಾತ್ಯ ವಸಾಹತುಶಾಹಿ ವ್ಯವಸ್ಥೆಯ ಫಲಾನುಭವಿಗಳಾದ ಪಾಲ್ ಹ್ಯಾಕರ್, ಶೆಲ್ಡನ್



ಪೋಲಾಕ್, ರಿಚರ್ಡ್ ಕಿಂಗ್ ಸೇರಿದಂತೆ ಅನೇಕ ಪಾಶ್ಚಾತ್ಯ ವಿದ್ವಾಂಸರು ಹಾಗೂ ಭಾರತದ ರೋಮಿಲಾ ಥಾಪರ್ ಮತ್ತು ಮೀರಾನಂದ ಅಂತಹವರು ಭಾರತೀಯ ಜೀವನ ದರ್ಶನವನ್ನೇ ವಿಡಂಬಿಸಿ ಅಪವ್ಯಾಖ್ಯಾನ ಮಾಡಿದ್ದಾರೆ. ಈ ಸುಳ್ಳುಗಳನ್ನು ಬಯಲು ಮಾಡಲು ಸಂಶೋಧನಾತ್ಮಕ ನೆಲೆಯಲ್ಲಿ ಅಧ್ಯಯನ ನಡೆಯಬೇಕಾದ್ದು ಇಂದಿನ ತುರ್ತು. ಈ ನಿಟ್ಟಿನಲ್ಲಿ ರಾಜೀವ್ ಮಲ್ಹೋತ್ರಾ ಅವರ ಕೃತಿಗಳು ನಮಗೆ ದಾರಿದೀಪವಾಗಬಲ್ಲವು ಎಂದು ಅವರು ತಿಳಿಸಿದರು.

ಗಣ್ಯರ ಅಭಿಪ್ರಾಯ ಹಂಚಿಕೊಂಡರು

ಮೋಹನ್‌ದಾಸ್ ಪೈ ಮಾತನಾಡಿ, ಹಿಂದುತ್ವವನ್ನು ಕೇವಲ ವ್ಯಾಖ್ಯಾನಗಳಿಗೆ ಸೀಮಿತಗೊಳಿಸಲು ಸಾಧ್ಯವಿಲ್ಲ. ಸ್ವಾರ್ಥವಿರುವವರಿಗೆ ಸಂಘರ್ಷವಿದ್ದರೂ, ಸಂವಿಧಾನದ ಮೂಲಕ ಸಾಮರಸ್ಯ ಸಾಧ್ಯವಿದೆ ಎಂದರು.

ಪಾಂಡುರಂಗ ನಾಯಕ್ ಮಾತನಾಡಿ, ಹಿಂದು ಸಮಾಜ ಸಂಘಟಿತವಾಗಿಲ್ಲದಿರುವುದೇ ಇಂದಿನ ಸಮಸ್ಯೆಗಳಿಗೆ ಕಾರಣ ಎಂದು ತಿಳಿಸಿದರು.

ಸಂವಾದ ಮತ್ತು ವೈಚಾರಿಕ ಮಂಥನ

ವಿಷಯ ಮಂಡನೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್, ಲೋಹಿಯಾ ಮತ್ತು ಮಹಾತ್ಮಾ ಗಾಂಧೀಜಿಯವರ ದೃಷ್ಟಿಕೋನದ ಹಿಂದುತ್ವವನ್ನು ವಿವರಿಸಿದ ಅವರು, ಸಾವರ್ಕರ್ ಮತ್ತು ಅರವಿಂದರು ನೀಡಿದ ವ್ಯಾಖ್ಯಾನಗಳ ಬಗ್ಗೆ ಬೆಳಕು ಚೆಲ್ಲಿದರು ಎಂದು ಜಿ.ಪಿ. ಪ್ರಭಾಕರ್ ತುಮರಿ ತಿಳಿಸಿದರು.

ಶ್ಯಾಮರಾಜ್ ಮಾತನಾಡಿ, ಇಂಡೋನೇಷ್ಯಾದಂತಹ ದೇಶಗಳಲ್ಲಿ ಜಾತಿ ವ್ಯವಸ್ಥೆಯಿದ್ದರೂ ಸಾಮರಸ್ಯವಿದೆ. ಭಾರತದಲ್ಲೂ ಇದು ಪ್ರಾಚೀನ ಕಾಲದಲ್ಲಿ ಆರ್ಥಿಕ ವ್ಯವಸ್ಥೆಯ ಭಾಗವಾಗಿತ್ತು ಎಂದರು.

ಪ್ರೊ. ಸದಾಶಿವ್ ರಾವ್ ಮಾತನಾಡಿ, ನಮ್ಮ ಸಂವಿಧಾನ ಧರ್ಮಕ್ಕಿಂತ ನಡವಳಿಕೆಗೆ ಪ್ರಾಧಾನ್ಯತೆ ನೀಡಿದೆ. ಅರ್ಹತೆಗೆ ತಕ್ಕಂತೆ ಪ್ರಾಶಸ್ತ್ಯ ಸಿಕ್ಕಾಗ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದರು.

ನಂದನ್ ಪ್ರಭು ಮಾತನಾಡಿ, ಸಾವರ್ಕರ್ ಮತ್ತುಅರವಿಂದರಹಿಂದುತ್ವದವ್ಯಾಖ್ಯಾನಗಳನ್ನು ಸವಿವರವಾಗಿ ಮಂಡಿಸಿದರು.

ಕಾರ್ಯಕ್ರಮವು ಅಭಯ್ ಅವರ ಪ್ರಾರ್ಥನೆ ಮತ್ತು ವೈಯಕ್ತಿಕ ಗೀತೆಯೊಂದಿಗೆ ಆರಂಭವಾಯಿತು. ಸಂಯೋಜಕ ನಟೇಶ್ ಉಡುಪ ಅವರು ವಕ್ತಾರರ ಪರಿಚಯ ನೀಡಿ, ಕಾರ್ಯಕ್ರಮ ಸಮನ್ವಯಗೊಳಿಸಿ ಧನ್ಯವಾದ ಅರ್ಪಿಸಿದರು. ಸಂವಾದದಲ್ಲಿ ಮೋಹನ್ ಭಟ್, ಸುಬ್ರಾಯ ಕೃಷ್ಣ ಸುಭಾಷ್ ಮತ್ತಿತರರು ಪಾಲ್ಗೊಂಡಿದ್ದರು.

ನೀತಿ ಸಂಹಿತೆ ಉಲ್ಲಂಘನೆ: ಪ್ರಚಾರ ಸಾಮಗ್ರಿ ತೆರವು

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸುವವರ ವಿರುದ್ಧ ಜಿಲ್ಲಾಡಳಿತವು ಕಟ್ಟುನಿಟ್ಟಿನ ಕ್ರಮಗಳನ್ನು ತ್ವರಿತಗೊಳಿಸಿದೆ. ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಲ್ಲಿ ಅಕ್ರಮವಾಗಿ ಇರಿಸಲಾಗಿರುವ ಪ್ರಚಾರ ಸಾಮಗ್ರಿಗಳನ್ನು ತೆಗೆದುಹಾಕುವ ಭಾಗವಾಗಿ ಜಿಲ್ಲೆಯಲ್ಲಿ ಇದುವರೆಗೆ (ಮಂಗಳವಾರದ ತನಕ) 3,773 ಪ್ರಕರಣಗಳು ವರದಿಯಾಗಿವೆ.

ಇವುಗಳಲ್ಲಿ ಬಹುಪಾಲು ಸಾರ್ವಜನಿಕ ಸ್ಥಳಗಳಲ್ಲಿ ನಡೆದ ಉಲ್ಲಂಘನೆಯಾಗಿದೆ. ಇಲ್ಲಿಯವರೆಗೆ ಸಾರ್ವಜನಿಕ ಸ್ಥಳಗಳಲ್ಲಿ ಒಟ್ಟು 3,606 ಪ್ರಕರಣಗಳು ದಾಖಲಾಗಿವೆ. ಇದರಲ್ಲಿ 1,863 ಪೋಸ್ಟರ್‌ಗಳು, 277 ಬ್ಯಾನರ್‌ಗಳು, 198 ಗೋಡೆ ಬರಹಗಳು ಮತ್ತು 1,268 ಇತರ ಪ್ರಚಾರ ಸಾಮಗ್ರಿಗಳು ಸೇರಿವೆ. ದಾಖಲಾದವುಗಳಲ್ಲಿ 3,597 ಅನಧಿಕೃತ ಪ್ರಚಾರ ಸಾಮಗ್ರಿಗಳನ್ನು ಅಧಿಕಾರಿಗಳು ಈಗಾಗಲೇ ತೆಗೆದುಹಾಕಿದ್ದಾರೆ. ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ ಎರಡು ಪ್ರಕರಣಗಳನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಖಾಸಗಿ ಆಸ್ತಿಗಳಲ್ಲಿ ಪ್ರಚಾರ ಸಾಮಗ್ರಿಗಳನ್ನು ಅನಧಿಕೃತವಾಗಿ ಅಳವಡಿಸಿದ 167 ಪ್ರಕರಣಗಳು ವರದಿಯಾಗಿವೆ. ಇದರಲ್ಲಿ 89 ಪೋಸ್ಟರ್‌ಗಳು, 24 ಬ್ಯಾನರ್‌ಗಳು, 15 ಗೋಡೆ ಬರಹಗಳು ಮತ್ತು 39 ಇತರ ಪ್ರಚಾರ ಸಾಮಗ್ರಿಗಳು ಸೇರಿವೆ. ಈ ಪೈಕಿ ತಂಡಗಳು 159 ಸ್ಥಳಗಳಿಂದ ಅಕ್ರಮ ವಸ್ತುಗಳನ್ನು ತೆಗೆದುಹಾಕಿವೆ. ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿಯಾಗಿರುವ ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಕೆ.ವಿ.ಶ್ರುತಿ ನೇತೃತ್ವದ ತಂಡವು ಜಿಲ್ಲೆಯಲ್ಲಿ ಚುನಾವಣಾ ನೀತಿ ಸಂಹಿತೆಗೆ ಸಂಬಂಧಿಸಿದ ದಳವು ಚಟುವಟಿಕೆಗಳನ್ನು ಸಂಘಟಿಸುತ್ತಿದೆ.



ಕಿರುಸುದ್ದಿ

ಫುಟ್‌ಬಾಲ್: ಭಾರತ ಶುಭಾರಂಭ

ಕೊಚ್ಚಿ: ಇಲ್ಲಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆದ ಎಎಫ್‌ಸಿ ಏಷ್ಯನ್ ಕಪ್ 2027 ಅರ್ಹತಾ ಪಂದ್ಯದಲ್ಲಿ ಭಾರತ 2–1 ಅಂತರದಲ್ಲಿ ಹಾಂಗ್ ಕಾಂಗ್ ತಂಡವನ್ನು ಸೋಲಿಸಿ ನಗರದಲ್ಲಿ ತನ್ನ ಮೊದಲ ಗೆಲುವು ದಾಖಲಿಸಿದೆ. ಪಂದ್ಯದ ಆರಂಭದಲ್ಲೇ ಎಲ್ಲರ ಗಮನ ಸೆಳೆದ ರಿಯಾನ್ ವಿಲಿಯಮ್ಸ್, ತಮ್ಮ ಡೆಬ್ಯೂ ಪಂದ್ಯದಲ್ಲೇ 4ನೇ ನಿಮಿಷದಲ್ಲಿ ಗೋಲು ಬಾರಿಸಿ ಭಾರತಕ್ಕೆ ಮುನ್ನಡೆ ನೀಡಿದರು. ಇದು ಭಾರತೀಯ ಪುರುಷರ ತಂಡದ ಇತಿಹಾಸದಲ್ಲಿ ಡೆಬ್ಯೂ ಆಟಗಾರರಿಂದ ಬಂದ ಅತ್ಯಂತ ವೇಗದ ಗೋಲು ಕೂಡ ಆಗಿದೆ.

ಇನ್ನೊಂದು ಗೋಲು ಆಕಾಶ್ ಮಿಶ್ರಾ ಅವರಿಂದ ಬಂತು. ಅವರು ಭಾರತ ಪರ ತಮ್ಮ ಮೊದಲ ಗೋಲು ದಾಖಲಿಸಿದರು. 65ನೇ ನಿಮಿಷದಲ್ಲಿ ಎವೆರ್ಟನ್ ಕಮಾರ್ಗೋ ಗೋಲು ಬಾರಿಸಿ ಹಾಂಗ್ ಕಾಂಗ್ ಅಂತರವನ್ನು ಕಡಿಮೆ ಮಾಡಿದರೂ, ಕೊನೆಯವರೆಗೂ ಮುನ್ನಡೆ ಕಾಯ್ದುಕೊಂಡ ಭಾರತ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಖಾಲಿದ್ ಜಮೀಲ್ ನೇತೃತ್ವದ ಭಾರತ ತಂಡ ತನ್ನ ಏಷ್ಯನ್ ಕಪ್ ಅರ್ಹತಾ ಅಭಿಯಾನವನ್ನು ಸಕಾರಾತ್ಮಕವಾಗಿ ಮುಕ್ತಾಯಗೊಳಿಸಿದೆ.

ಬ್ರಾಡ್‌ಕಾಸ್ಟಿಂಗ್ ಸಿಬ್ಬಂದಿ ಅನುಮಾನಾಸ್ಪದ ಸಾವು

ಮುಂಬೈ: ಬ್ರಿಟಿಷ್ ನಾಗರಿಕ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಬ್ರಾಡ್‌ಕಾಸ್ಟಿಂಗ್ ಸಿಬ್ಬಂದಿ ಇಯಾನ್ ವಿಲಿಯಮ್ಸ್ ಲ್ಯಾಂಗ್‌ಫೋರ್ಡ್ ಮುಂಬೈನಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟರೆಂದು ಮುಂಬೈ ಪೊಲೀಸರು ತಿಳಿಸಿದ್ದಾರೆ. 76 ವರ್ಷದ ಇಯಾನ್ ಮುಂಬೈನ ಖಾಸಗಿ ಹೋಟೆಲಿನಲ್ಲಿ ಮೃತಪಟ್ಟರು. ಐಪಿಎಲ್ ಆಡಳಿತ ಮಂಡಳಿ ಮತ್ತು ಬಿಸಿಸಿಐ ಅವರ ಸಾವಿಗೆ ಸಾಂತ್ವಾನ ತಿಳಿಸಿದೆ. ಪ್ರಕಟಣೆಯಲ್ಲಿ ಐಪಿಎಲ್ ಬ್ರಾಡ್‌ಕಾಸ್ಟಿಂಗ್ ಇಂಜಿನೀಯರ್ ಮೃತರಾದರು. ಬಿಸಿಸಿಐ ಅವರ ಸಾವಿಗೆ ಸಾಂತ್ವಾನ ತಿಳಿಸುತ್ತದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಐಪಿಎಲ್ ಯಶಸ್ಸಿನಲ್ಲಿ ಅವರ ಪಾತ್ರ ನಮಗೆ ಸದಾ ನೆನಪಿರುತ್ತದೆ. ಅವರ ಕುಟುಂಬಕ್ಕೆ ಬೇಕಾದ ಎಲ್ಲಾ ಬೆಂಬಲ ಬಿಸಿಸಿಐ ನೀಡುತ್ತದೆ ಎಂದು ಬರೆದುಕೊಂಡಿದೆ.

ಕನ್ನಡಿಗ ವಿಜಯ್‌ಗೆ 3 ವಿಕೆಟ್ | ಗುಜರಾತ್ 162/6

ವೈಶಾಖ್ ಮಾರಕ ಬೌಲಿಂಗ್ ಪಂಜಾಬ್‌ಗೆ ಸ್ಪರ್ಧಾತ್ಮಕ ಗುರಿ

ಚಂಡೀಗಢ: ಮೊದಲಿಗೆ ಸ್ಫೋಟಕ ಬ್ಯಾಟಿಂಗ್ ಮಾಡಿದರೂ, ಕನ್ನಡಿಗ ವಿಜಯ್‌ಕುಮಾರ್ ವೈಶಾಖ್ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದ ಗುಜರಾತ್ ಟೈಟಾನ್ಸ್ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 4ನೇ ಪಂದ್ಯದಲ್ಲಿ ಸ್ಪರ್ಧಾತ್ಮಕ ಗುರಿ ಮಾತ್ರ ನೀಡಲು ಶಕ್ತವಾಯಿತು.

ಗಿಲ್, ಸುದರ್ಶನ್ ಹಾಗೂ ಬಟ್ಲರ್ ಅವರ ಬ್ಯಾಟಿಂಗ್‌ನೊಂದಿಗೆ ಒಂದು ಹಂತದಲ್ಲಿ ದೊಡ್ಡ ಸ್ಕೋರ್‌ನತ್ತ ಸಾಗುತ್ತಿದ್ದ ಗುಜರಾತ್ ಮಧ್ಯಮ ಇನ್ನಿಂಗ್ಸ್‌ನಲ್ಲಿ ಎಡವಿತು. ವೇಗಿ ವಿಜಯ್ ಕುಮಾರ್ ವೈಶಾಖ್ ಅವರ ದಾಳಿಯಲ್ಲಿ ಸಿಲುಕಿಕೊಂಡು ಚಾಹಲ್ ದಾಳಿಗೆ ತತ್ತರಿಸಿತು. ಟಾಸ್ ಸೋಲಿನೊಂದಿಗೆ ಬ್ಯಾಟಿಂಗ್‌ಗಿಳಿದ ಗುಜರಾತ್ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 162 ರನ್ ಗಳಿಸಿದೆ. ಗಿಲ್ ಹೆಚ್ಚು ರನ್ ಗಳಿಸಿದವರಲ್ಲಿ ಬಂದರೆ, ಬಟ್ಲರ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಬೌಲಿಂಗ್‌ನಲ್ಲಿ ಪಂಜಾಬ್‌ನ ಬಹುತೇಕ ಎಲ್ಲಾ ಬೌಲರ್‌ಗಳು ಮಿಂಚಿದರು. ವೈಶಾಖ್ 3, ಚಾಹಲ್ 2 ವಿಕೆಟ್ ಪಡೆದರು. ಉಳಿದ ಬೌಲರ್‌ಗಳು ಡಾಟ್‌ಗಳ ಮೂಲಕ ಗಮನ ಸೆಳೆದರು.

ಉತ್ತಮ ಆರಂಭ: ಗುಜರಾತ್‌ನ ಸ್ವಾಭಾವಿಕ ಬ್ಯಾಟಿಂಗ್‌ನೊಂದಿಗೆ ಪಂದ್ಯ ಶುರುವಾಯಿತು. ಗಿಲ್ ಮತ್ತು ಸಾಯಿ ಸುದರ್ಶನ್ ಆರಂಭಿಕ ಹಂತದಲ್ಲಿ ಸೆಟ್ ಆಗುವತ್ತ ಗಮನ ಹರಿಸಿದರು. ಆದರೆ ಸೆಟ್ ಆಗುವ ಮೊದಲೇ ಸಾಯಿ ಸುದರ್ಶನ್ ಕ್ಯಾಚ್ ಆದರು. 11 ಎಸೆತ ಎದುರಿಸಿದ ಅವರು 13 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಟ್ಲರ್ ಬಂದು ಒಂದು ಬದಿಯಲ್ಲಿ ಅಂಟಿಕೊಂಡು ನಿಲ್ಲುವ ಜವಾಬ್ದಾರಿ ನಂದೆಂದರು. ಅಷ್ಟರೊತ್ತಿಗಾಗಲೇ ಸೆಟ್ ಆಗಿ ನಿಂತಿದ್ದ ಗಿಲ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 6 ಸ್ಟ್ರೋಕ್‌ಗಳ ಮೂಲಕ ಮನಮೋಹಕ ಬೌಂಡರಿಗಳೊಂದಿಗೆ 27 ಬಾಲ್‌ಗಳಲ್ಲಿ 39 ರನ್ ಗಳಿಸಿ ಔಟಾದರು. ಅನಿರೀಕ್ಷಿತವಾಗಿ ಜಾಸ್ ಬಟ್ಲರ್ ಸೆಟ್ ಆಗುವುದಕ್ಕೆ ಹೆಚ್ಚಿನ ಸಮಯ ತೆಗೆದುಕೊಂಡರು. ನಡುವೆ ಒಂದೆರಡು ಬೌಂಡರಿಗಳನ್ನು ಚಾಡಿಸಿದರೂ, 33 ಬಾಲ್‌ಗಳಲ್ಲಿ ಅವರು ಗಳಿಸಿದ್ದು 38 ರನ್ ಮಾತ್ರ. ಇದರಲ್ಲಿ 3 ಬೌಂಡರಿ ಮತ್ತು 2 ಸಿಕ್ಸರ್ ಸೇರಿವೆ. ಮಧ್ಯಮ ಕ್ರಮಾಂಕದಲ್ಲಿ ಫಿಲಿಪ್ಸ್ ಸರಸರನೇ ಬೌಂಡರಿ ಸಿಕ್ಸರ್‌ಗಳನ್ನು ಬಾರಿಸಿ 25 ಕ್ಕೆ ಕ್ಯಾಚ್ ಆದರು. ಸುಂದರ್ ಔಪಚಾರಿಕತೆ ಮುಗಿಸುವಷ್ಟರಲ್ಲಿ 18ಕ್ಕೆ ವಿಕೆಟ್ ಕೊಟ್ಟರು.



ದಿಢೀರ್ ಕುಸಿತ

ಗಿಲ್, ಬಟ್ಲರ್ ಅವರ ಬ್ಯಾಟಿಂಗ್‌ನೊಂದಿಗೆ ಒಂದು ಹಂತದಲ್ಲಿ ಉತ್ತಮವಾಗೆ ಬ್ಯಾಟಿಂಗ್ ಮಾಡುತ್ತಿದ್ದ ಗುಜರಾತ್ ಅವರ ವಿಕೆಟ್ ಬಿದ್ದ ನಂತರ ನಿಧಾನವಾಯಿತು. ರನ್ ವೇಗ ಕುಸಿಯಿತು, ಒತ್ತಡಕ್ಕೆ ಸಿಲುಕಿಕೊಂಡ ಗುಜರಾತ್, ಭಾರೀ ಹಿನ್ನಡೆ ಅನುಭವಿಸಲಾರಂಭಿಸಿತು. ಆರಂಭದಲ್ಲಿ 200 ರನ್ ದಾಟುವ ಭರವಸೆಯಲ್ಲಿದ್ದ ತಂಡ ಈಗ 160 ರನ್ ದಾಟುವುದಕ್ಕೂ ಪರದಾಟ ನಡೆಸಿದಂತೆ ಮಾಡಿತು. ಯಜ್ವೇಂದ್ರ ಚಾಹಲ್ ಮಾರಕ ಬೌಲಿಂಗ್ ದಾಳಿಯೊಂದಿಗೆ 3 ವಿಕೆಟ್ ಕಿತ್ತರು. ಚಾಹಲ್ 2 ವಿಕೆಟ್ ಕಿತ್ತರು. ಅಂತಿಮದಲ್ಲಿ ಟೆವಾಟಿಯಾ 160ರ ಗಡಿ ದಾಟಿಸಿದರು.

ಸ್ಕೋರ್ ವಿವರ

ಗುಜರಾತ್: 162/6

ಸುದರ್ಶನ್	ಸಿ ಶ್ರೇಯಸ್ ಬಿ ಯಾನ್ಸನ್	13
ಗಿಲ್	ಸಿ ಕೂಪರ್ ಬಿ ಚಾಹಲ್	39
ಬಟ್ಲರ್	ಸಿ ಬಾರ್ಟ್‌ಲೆಟ್ ಬಿ ಚಾಹಲ್	38
ಫಿಲಿಪ್ಸ್	ಸಿ ಯಾನ್ಸನ್ ಬಿ ವೈಶಾಖ್	25
ಸುಂದರ್	ಸಿ ಅರ್ಶದೀಪ್ ಬಿ ವೈಶಾಖ್	18
ಶಾರುಖ್	ಸಿ ಅರ್ಶದೀಪ್ ಬಿ ವೈಶಾಖ್	4
ಟೆವಾಟಿಯಾ	ನಾಟೌಟ್	11
ರಶಿದ್	ನಾಟೌಟ್	0
ಇತರೆ	14	
ಅರ್ಶದೀಪ್	4–0–42–0	
ಬಾರ್ಟ್‌ಲೆಟ್	4–0–36–0	
ಯಾನ್ಸನ್	4–0–20–1	
ವೈಶಾಖ್	4–0–34–3	
ಚಾಹಲ್	4–0–28–2	

ಗೆಲುವಿನ ಭರವಸೆಯಲ್ಲಿ ರಿಷಭ್ ಪಂತ್ ಪಡೆ

ಇಂದು ಲಖನೌ vs ದಿಲ್ಲಿ



ಪಿಚ್ ರಿಪೋರ್ಟ್

ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬೌಲರ್‌ಗಳಿಗೆ ಅಲ್ಪ ಅನುವು ಮಾಡಿಕೊಡುವ ಏಕೈಕ ಐಪಿಎಲ್ ಪಿಚ್ ಇದಾಗಿದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಮಿಂಚುವ ಸಾಧ್ಯತೆ ಇದೆ. ದೊಡ್ಡ ದೊಡ್ಡ ಸ್ಕೋರ್‌ಗಳು ಬಂದರೂ ತೀರಾ ಸ್ಫೋಟಕ ಬ್ಯಾಟಿಂಗ್ ಮಾಡಲಾಗಲ್ಲ. ಪಿಚ್‌ನಲ್ಲಿ ಹೆಚ್ಚಿನ ಬೌನ್ಸ್ ಇರುತ್ತದೆ, ನೇರ ಬ್ಯಾಟ್‌ಗೆ ಬರಬಹುದು.

ಲಖನೌ: ಬದಲಾವಣೆಗಳೊಂದಿಗೆ ಮೈದಾನಕ್ಕಿಳಿಯುತ್ತಿರುವ ದಿಲ್ಲಿ ಕ್ಯಾಪಿಟಲ್ಸ್ ಮತ್ತು ಲಖನೌ ಸೂಪರ್ ಜೇಂಟ್ಸ್ ತಂಡಗಳು ಗುರುವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಕಳೆದ ಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾದರೂ ದಿಲ್ಲಿ ಕ್ಯಾಪಿಟಲ್ಸ್ ಕೊನೆಯಲ್ಲಿ ಹಿನ್ನಡೆ ಅನುಭವಿಸಿತ್ತು. ಇತ್ತ ಲಖನೌ ಕೂಡ ಆರಂಭಿಕ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಬಳಿಕ ಹೊರಬಿದ್ದಿತ್ತು. ದಿಲ್ಲಿ ಪಡೆಯಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಮತ್ತು ಲಖನೌ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿತ್ತು. ಅರ್ಜುನ್ ತೆಂಡೂಲ್ಕರ್ ಮತ್ತು ಮುಖ್ಯವಾಗಿ ಮೊಹಮ್ಮದ್ ಶಮಿಯವರನ್ನು ಟ್ರೇಡ್ ಮಾಡಿಕೊಂಡಿತ್ತು. ಇತ್ತ ದಿಲ್ಲಿ ಕ್ಯಾಪಿಟಲ್ಸ್ ಬೇಕಾದ ಆಟಗಾರರನ್ನು ಹರಾಜಿನಲ್ಲಿ ಆಯ್ಕೆ ಮಾಡಿಕೊಂಡಿದ್ದಲ್ಲದೆ ನಿತಿಶ್ ರಾಣಾ ಅವರನ್ನು ಟ್ರೇಡ್ ಮಾಡಿಕೊಂಡಿತ್ತು. ಅಗತ್ಯ ಬದಲಾವಣೆಯೊಂದಿಗೆ ಕಣಕ್ಕಿಳಿಯುತ್ತಿರುವ ಉಭಯ ತಂಡಗಳು ಕುತೂಹಲ ಮೂಡಿಸಿವೆ. ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಪಂತ್ ಲಯ ಲಖನೌ ಶಕ್ತಿ: ಬ್ಯಾಟಿಂಗ್‌ನಲ್ಲಿ ಆರಂಭಿಕರು ಮಾರ್ಕ್ರಂ ಮತ್ತು ಮಾರ್ಷ್ ಮತ್ತೊಮ್ಮೆ ತಯಾರಾಗಿ ನಿಂತಿದ್ದಾರೆ. ಕಳೆದ ಬಾರಿ ಬ್ಯಾಟಿಂಗ್‌ನಲ್ಲಿ ವೈಫಲ್ಯ ಎದುರಿಸಿದ್ದ ರಿಷಭ್ ಪಂತ್ ಅಭ್ಯಾಸದಲ್ಲಿ ಬಲಿಷ್ಠರಾಗಿ ಕಾಣಿಸಿಕೊಂಡಿರುವುದೇ ತಂಡಕ್ಕೆ ಆನೆ ಬಲ. ನಿಕೊಲಸ್ ಪೂರಣ್ ಸ್ಪಷ್ಟ ಹೊಡೆತಗಳ ಮೂಲಕ ಮಿಂಚಲು ಸಿದ್ಧರಾಗಿದ್ದಾರೆ. ಇನ್ನು ಬಲಿಷ್ಠ ಜೋಶ್ ಇಂಗ್ಲಿಸ್ ಅವರನ್ನು ಆಯ್ಕೆ ಖರೀದಿಸಿದ್ದಾರೆ. ಫಿನಿಶಿಂಗ್‌ಗೆ ಅಬ್ದುಲ್ ಸಮಾದ್, ಆಯುಷ್ ಬದೋನಿ ಅಂಥವರು ಕಣಕ್ಕಿಳಿಯಲಿದ್ದಾರೆ. ಬೌಲಿಂಗ್ ವಿಚಾರದಲ್ಲಿ ಶಾರ್ದೂಲ್ ಠಾಕೂರ್ ಈ ಬಾರಿ ಮುಂಬೈ ಸೇರಿಕೊಂಡಿದ್ದಾರೆ. ಆದಾಗ್ಯೂ ಶಮಿ, ನೋಕಿಯಾ, ಮುಕುಲ್ ಚೌದ್ರಿ ಅವರನ್ನು ಖರೀದಿಸಿದೆ. ದೇಸಿ ಬೌಲರ್‌ಗಳ ಬಲವೂ ತಂಡಕ್ಕಿದೆ.

ದಿಲ್ಲಿಯಲ್ಲಿ ವಿಶ್ವಾಸ: ಇನ್ನು ಕೆ.ಎಲ್. ರಾಹುಲ್ ಇರುವ ತಂಡ ದಿಲ್ಲಿ ಕೂಡ ಬಲಿಷ್ಠ ಪಡೆಯಾಗಿ ನಿಂತಿದೆ. ಪೃಥ್ವಿ ಶಾ, ಪೋರಲ್ ಅಂಥವರು ತಂಡದಲ್ಲಿದ್ದಾರೆ. ಅಕ್ಷರ್ ಪಟೇಲ್ ಮುನ್ನಡೆಸಲಿರುವ ತಂಡಕ್ಕೆ ಸ್ಟಾರ್ಕ್ ಇಲ್ಲದ ಶಾಕ್ ಇದ್ದರೂ ಚಮೀರಾ, ಕೇಲ್ ಜೆಮಿಸನ್, ಟಿ ನಟರಾಜನ್, ಲುಂಗಿ ಎನ್‌ಗಿಡಿ ಅಂತವರು ತಂಡದಲ್ಲಿದ್ದಾರೆ. ಬ್ಯಾಟಿಂಗ್ ವಿಭಾಗವನ್ನು ನಿಸ್ಸಂಕಾ, ನಿತಿಶ್ ರಾಣಾ, ಕರುಣ್ ನಾಯರ್ ಇದ್ದು ಬಲಿಷ್ಠ ತಂಡ ಸಿದ್ಧವಾಗಿದೆ.

ಪಂದ್ಯದ ವಿವರ:
ಯಾವಾಗ?: ಗುರುವಾರ
ಎಲ್ಲಿ: ಏಕಾನಾ, ಲಖನೌ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಐಪಿಎಲ್‌ನಲ್ಲಿ ಸೂರ್ಯವಂಶಿಯ ಮಿಂಚಿನಾಟ

ವೈಭವ್ ಅಂತಾರಾಷ್ಟ್ರೀಯ ಪದಾರ್ಪಣೆ ಯಾವಾಗ?

ಸೋಮವಾರದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ 15 ವರ್ಷದ ಸಂಚಲನ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿರುವುದು ವಿಶ್ವ ಕ್ರಿಕೆಟ್‌ನಲ್ಲಿ ಮತ್ತೊಂದು ಚರ್ಚೆ ಹುಟ್ಟುಹಾಕಿದೆ.

ರಾಜಸ್ಥಾನ ಹಾಗೂ ಚೆನ್ನೈ ನಡುವಿನ ಪಂದ್ಯದಲ್ಲಿ 17 ಬಾಲ್‌ಗಳಲ್ಲಿ ಅವರು ಅರ್ಧಶತಕ ಬಾರಿಸಿದರು. ಇದರೊಂದಿಗೆ ಹೊಸ ಶೈಲಿಯ ಕ್ರಿಕೆಟ್‌ನಲ್ಲಿ ಮತ್ತೊಂದು ದಾಖಲೆ ಮಾಡಿದರು. ರಾಜಸ್ಥಾನ ಆ ಪಂದ್ಯ ಗೆದ್ದಿತು. ಈ ಬಳಿಕ ವಿಶ್ವದ ಗಣ್ಯ ಕ್ರಿಕೆಟಿಗರೆಲ್ಲಾ ವೈಭವ್ ಸೂರ್ಯವಂಶಿ ಅವರನ್ನು ಪುರುಷರ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಯ್ಕೆ ಮಾಡುವ ಕುರಿತು ಮಾತನಾಡಿದ್ದಾರೆ.

ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದಂತೆ ಇತ್ತ ಇಂಗ್ಲೆಂಡಿನ ಮಾಜಿ ನಾಯಕ ಮೈಕಲ್ ವಾಘನ್ ಬಿಸಿಸಿಐಗೆ ಮನವಿ ಸಲ್ಲಿಸಿದ್ದಾರೆ. ಆ ವೈಭವ್ ಸೂರ್ಯವಂಶಿ ಅವರ ಅಂತಾರಾಷ್ಟ್ರೀಯ ತಂಡಕ್ಕೆ ಆಯ್ಕೆ ಯಾವಾಗ? ನಾನು ಕಾಯುತ್ತಿದ್ದೇನೆ, ಅವರು ಒಂದು ತಂಡದಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆಂದರೆ ಸೀನಿಯರ್ ತಂಡದಲ್ಲಿ ಯಾಕೆ ಆಯ್ಕೆಯಾಗಬಾರದು? ಮುಂದಿನ ದಿನಗಳಲ್ಲಿ ಇಂಗ್ಲೆಂಡ್‌ನೊಂದಿಗೆ ವೈಟ್‌ಬಾಲ್ ಸರಣಿಯಿದೆ ಅಲ್ಲಿ ಅವರನ್ನು ಆಯ್ಕೆ ಮಾಡಿದರೆ ಇತಿಹಾಸ ಆಗುವುದನ್ನು ನೋಡಬಹುದು' ಎಂದಿದ್ದಾರೆ. ಇತ್ತ ಭಾರತ ತಂಡದ ಮಾಜಿ ಆಟಗಾರ ಮೊಹಮ್ಮದ್ ಕೈಫ್ ಕೂಡ ಈ ಬಗ್ಗೆ ಮಾತನಾಡಿ, 'ವೈಭವ್ ಸೂರ್ಯವಂಶಿ ಅಂತಾರಾಷ್ಟ್ರೀಯ ಪಂದ್ಯವಾಡುವುದಕ್ಕೆ ಸಿದ್ಧರಿದ್ದಾರೆ' ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇತ್ತ ಸಾಮಾಜಿಕ ಜಾಲತಾಣದಲ್ಲೂ ಚರ್ಚೆಗಳು ಜೋರಾಗಿವೆ.

ಭಾರತದ ಸರಣಿಯಲ್ಲಿ ಟಿ20: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಮುಕ್ತಾಯಗೊಂಡ ನಂತರ ಭಾರತ ಪುರುಷರ ತಂಡ ಇಂಗ್ಲೆಂಡಿನಂತಹ ಪ್ರವಾಸ ಕೈಗೊಳ್ಳಲಿದೆ. ತವರು ಸರಣಿಗಳಲ್ಲಿ ಟಿ20 ಪಂದ್ಯಗಳನ್ನಾಡಲಿದೆ. ವೈಟ್ ಬಾಲ್ ಕ್ರಿಕೆಟಿ ನಲ್ಲಿ ವೈಭವ್ ಅವರಿಗೆ ಒಂದಾದರೂ ಅವಕಾಶ ನೀಡಬೇಕೆಂಬ ಮಾತು ವಿವಿಧ ಕ್ರಿಕೆಟ್ ಎಕ್ಸ್‌ಪರ್ಟ್‌ಗಳದ್ದಾಗಿದೆ.

ಅಂಡರ್–19ನಲ್ಲಿ ವೈಭವ್‌ಗಿಲ್ಲ ಅವಕಾಶ?: ವಿಶ್ವಕಪ್ ಗೆದ್ದಿರುವ ಭಾರತ ಅಂಡರ್–19 ತಂಡವು ಮುಂದಿನ ದಿನಗಳಲ್ಲಿ ಮತ್ತಷ್ಟು ಅಂಡರ್–19 ಸರಣಿ, ಪಂದ್ಯಾವಳಿಗಳನ್ನು ಆಡಲಿವೆ. ಆದರೆ ಅಂಡರ್–19 ವಿಶ್ವಕಪ್‌ಗಳಲ್ಲಿ ಒಮ್ಮೆ ಆಡಿದ ಆಟಗಾರರನ್ನು ಎರಡನೇ ಬಾರಿ ಆಯ್ಕೆ ಮಾಡಲಾಗಲ್ಲ. ಈಗಾಗಲೇ ಒಂದು ಬಾರಿ ಆಡಿರುವ ವೈಭವ್ ಸೂರ್ಯವಂಶಿ ಇನ್ನೊಂದು ಬಾರಿ ಆಯ್ಕೆಯಾಗಲ್ಲ. ಇದು ಬಿಸಿಸಿಐ ವಾಡಿಕೆ. ಹೀಗಾಗಿ ಐಪಿಎಲ್ ಮುಗಿದ ತಕ್ಷಣ ವೈಭವ್ ದೇಶಿ ಕ್ರಿಕೆಟ್‌ವರೆಗೂ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಲಿದೆ. ಹೀಗಾಗಿ ವೈಭವ್ ಸೂರ್ಯವಂಶಿಗೆ ಆಯ್ಕೆ ಮಾಡಬೇಕು ಅನ್ನುವ ಅಭಿಪ್ರಾಯಗಳು ಮುಂದೆ ಬರುತ್ತಿವೆ. ಒಟ್ಟಿನಲ್ಲಿ ವೈಭವ್ ಆಯ್ಕೆ ಮಾಡಿದರೆ ಹತ್ತಾರು ದಾಖಲೆಗಳು ಆಗಲಿವೆ. ಕ್ರಿಕೆಟ್ ದೇವರಾದ ಸಚಿನ್ ತೆಂಡೂಲ್ಕರ್ ಅಂತವರ ದಾಖಲೆಗಳನ್ನು ಅವರು ಮುರಿಯಲಿದ್ದಾರೆ. ಆದರೆ ಬಿಸಿಸಿಐನ ಹೊಸ ಮಾನದಂಡಗಳ ಪ್ರಕಾರ ಇಂತಿಷ್ಟು ದೇಶಿ ಕ್ರಿಕೆಟ್ ಪಂದ್ಯಗಳನ್ನಾಡಬೇಕೆಂಬ ನಿಯಮಗಳಿವೆ. ಆದಾಗ್ಯೂ ವೈಭವ್ ದೇಶಿ ಕ್ರಿಕೆಟ್‌ನಲ್ಲೂ ಸಾಧನೆ ಮಾಡಿದ್ದಾರೆ. ಸೂರ್ಯವಂಶಿ ಸಾಧನೆ ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡುತ್ತಾ ಎಂಬ ವಿಚಾರ ತಂಡ ಬಿಡಗಡೆ ವೇಳೆ ಗೊತ್ತಾಗಲಿದೆ.



ವೈಭವ್ ದಾಖಲೆ

- 2025ರಲ್ಲಿ ಐಪಿಎಲ್‌ಗೆ ಆಯ್ಕೆಯಾದ ಅತಿ ಕಿರಿಯ ಆಟಗಾರ
- ಐಪಿಎಲ್‌ನಲ್ಲಿ ಶತಕ ಬಾರಿಸಿದ ಅತ್ಯಂತ ಕಿರಿಯ ಆಟಗಾರ
- ಐಪಿಎಲ್‌ನ ವೇಗದ ಶತಕ ಬಾರಿಸಿರುವುದು
- ರಣಜಿ ಆಡಿದ ಅತಿ ಕಿರಿಯ (12 ವರ್ಷ)
- ಒಂದು ಐಪಿಎಲ್ ಆವೃತ್ತಿಯಲ್ಲಿ 300 ರನ್ ಬಾರಿಸಿದ ಅತ್ಯಂತ ಕಿರಿಯ
- ಅಂಡರ್–19 ವಿಶ್ವಕಪ್‌ನಲ್ಲಿ ಸರಣಿಶ್ರೇಷ್ಠ
- ವಿಶ್ವಕಪ್ ಫೈನಲ್‌ನಲ್ಲಿ ಶತಕ
- ಅಂಡರ್–19 ಫೈನಲ್‌ನಲ್ಲಿ ಅತಿ ಹೆಚ್ಚು ರನ್

ವೈಭವ್ ಉದಯ

2024ರಲ್ಲಿ ನಡೆದಿದ್ದ 2025ರ ಐಪಿಎಲ್ ಹರಾಜಿನಲ್ಲಿ 14 ವರ್ಷದ ಬಾಲಕ ನಾಮನಿರ್ದೇಶನ ಮಾಡಿದ್ದ. ಆರ್‌ಆರ್ ತಂಡದ ಪ್ರಮುಖ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಥಟ್ಟನೆ ಖರೀದಿಸಿದರು. ಅಲ್ಲಿಂದ ಐಪಿಎಲ್‌ನಲ್ಲಿ ಹೊಸ ಇತಿಹಾಸ ಶುರುವಾಯಿತು. ಆ ಇತಿಹಾಸ, ಭಾರತದ ಭವಿಷ್ಯದ ಹೆಸರು ವೈಭವ್ ಸೂರ್ಯವಂಶಿ. ಐಪಿಎಲ್ ಪಂದ್ಯದಲ್ಲಿ ಅವಕಾಶ ಸಿಕ್ಕ ನಂತರ 14 ವರ್ಷದ ಬಾಲಕ ಅಂತಾರಾಷ್ಟ್ರೀಯ ಬೌಲರುಗಳನ್ನು ಮನ ಬಂದಂತೆ ದಂಡಿಸಲಾರಂಭಿಸಿದರು. ಎಲ್ಲಿಲ್ಲದ ಸ್ಫೋಟಕ ಬ್ಯಾಟಿಂಗ್, ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸತೊಡಗಿದರು. ಐಪಿಎಲ್‌ನ ವೇಗದ ಶತಕ ಬಾರಿಸಿದರು. ಬಾಲನೊಬ್ಬನ ಸ್ಫೋಟಕ ಬ್ಯಾಟಿಂಗ್ ನೋಡಿ ನಿಬ್ಬೆರಗಾಗಿ ನಿಂತ ಜನರು ಕ್ರಿಕೆಟಿನಲ್ಲಿ ಭಾರತದ ಉಜ್ವಲ ಭವಿಷ್ಯ ಪ್ರತ್ಯಕ್ಷ ಕಂಡರು. ಅಲ್ಲಿಂದ ಭಾರತದಲ್ಲಿ ಹೊಸ ಸಂಚಲನ. ತಕ್ಷಣಕ್ಕೆ ಅವರನ್ನು ಭಾರತ ತಂಡಕ್ಕೆ ಆಯ್ಕೆ ಮಾಡದೆ ಅಂಡರ್–19 ತಂಡದಲ್ಲಿ ಸೇರಿಸಲಾಗಿತ್ತು. ಅಲ್ಲದೆ ದೇಶಿ ಕ್ರಿಕೆಟಿನಲ್ಲಿ ಬಿಹಾರ ತಂಡಕ್ಕೂ ಅವರನ್ನು ಆಯ್ಕೆ ಮಾಡಲಾಗಿತ್ತು. ಅಂಡರ್–19 ತಂಡದ ಏಷ್ಯಾಕಪ್, ವಿಶ್ವಕಪ್ ಪಂದ್ಯಾವಳಿಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಮೂಲಕ ವಿಶ್ವ ಕ್ರಿಕೆಟ್‌ನಲ್ಲಿ ಅಬ್ಬರದಾಟ ಪ್ರದರ್ಶಿಸಿದ ಸೂರ್ಯವಂಶಿ ಜಾಗತಿಕ ಮಟ್ಟದ ಮಾಧ್ಯಮದಲ್ಲಿ ಹೆಡ್‌ಲೈನ್ ಆದರು. ಸೂರ್ಯವಂಶಿ ಈಗ ವಿಶ್ವದರ್ಜೆಯ ಸ್ಟಾರ್. ಆಸಕ್ತಿದಾಯಕ ಕ್ರಿಕೆಟಿಗರಿಗೆ ವೈಭವ್ ಫೇವರಿಟ್, ಕ್ರಿಕೆಟ್ ಅಭಿಮಾನಿಗಳಿಗೆ ಅವರೊಬ್ಬ ರೋಲ್ ಮಾಡಲ್. ಇಂತದ್ದೇ ಸಮಯದಲ್ಲಿ ಮತ್ತೊಂದು ಬಾರಿ ಐಪಿಎಲ್ ಶುರುವಾಗಿದೆ. ಮೊದಲ ಪಂದ್ಯದಲ್ಲೇ ವೈಭವ್ ಸೂರ್ಯವಂಶಿ ದಾಖಲೆಯ ಬ್ಯಾಟಿಂಗ್ ಮಾಡಿದ್ದಾರೆ.

ಏಪ್ರಿಲ್ 9ಕ್ಕೆ ಒಲಿಂಪಿಕ್ಸ್ ಕೂಟದ ಟಿಕೆಟ್ ಲಭ್ಯ

ಹೊಸದಿಲ್ಲಿ: 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಕ್ರೀಡಾಕೂಟದ ಟಿಕೆಟ್‌ಗಳು ಏಪ್ರಿಲ್ 9 ರಂದು ಸಾರ್ವಜನಿಕರಿಗೆ ಮಾರಾಟಕ್ಕೆ ಬರಲಿವೆ ಎಂದು ಸಂಘಟಕರು ಸೋಮವಾರ ತಿಳಿಸಿದ್ದಾರೆ. ವಿಶೇಷವಾಗಿ ಈ ಬಾರಿ ಅಭಿಮಾನಿಗಳಿಗೆ ಟಿಕೆಟ್ ಭದ್ರತೆಯ ಬಗ್ಗೆ ಭರವಸೆ ನೀಡಲು ಮುಂದಾಗಿದೆ.

ಲಾಸ್ ಏಂಜಲೀಸ್ ಮತ್ತು ಒಕ್ಲಹೋಮ ನಗರದ ಅರ್ಹತಾ ಪ್ರದೇಶಗಳಲ್ಲಿನ ನಿವಾಸಿಗಳಿಗೆ ಪೂರ್ವ–ಮಾರಾಟವು ಏಪ್ರಿಲ್ 2 ರಂದು ಪ್ರಾರಂಭವಾಗಲಿದ್ದು, ಆಯ್ದ ಖರೀದಿದಾರರಿಗೆ ಅಧಿಸೂಚನೆ ಇಮೇಲ್‌ಗಳು ಮಾರ್ಚ್ 31 ರಿಂದ ಏಪ್ರಿಲ್ 4 ರವರೆಗೆ ಬಿಡುಗಡೆಯಾಗಲಿವೆ ಎಂದು ತಿಳಿಸಿದೆ. ಏಪ್ರಿಲ್ 7 ರಂದು, ಸಂಘಟನಾ ಸಮಿತಿಯು ಉಳಿದ ನೋಂದಣಿದಾರರಿಗೆ ಡ್ರಾಪ್ 1 ಎಂದು ಕರೆಯಲ್ಪಡುವ ಮೊದಲ ಸಾಮಾನ್ಯ ಮಾರಾಟ ಸುತ್ತಿನಲ್ಲಿ ಖರೀದಿ ವಿಂಡೋಗೆ ಆಯ್ಕೆಯಾಗಿದೆಯೇ ಎಂದು ತಿಳಿಸುತ್ತದೆ. ಈ ವಾರ ಅಭಿಮಾನಿಗಳು ಎಲ್‌ಎ28 ಒಲಿಂಪಿಕ್ ಕ್ರೀಡಾಕೂಟದಲ್ಲಿ ಸ್ಥಾನವನ್ನು ಪಡೆಯಲು ಮೊದಲ ಅವಕಾಶವನ್ನು ಸೂಚಿಸುತ್ತದೆ ಎಂದು ಎಲ್‌ಎ28 ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೆನಾಲ್ಡ್ ಹೂವರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಭಯ್, ಅನಾಹತ್ ಸಿಂಗ್ ವರ್ಷದ ಸ್ಕ್ವ್ಯಾಷ್ ಆಟಗಾರರು

ಹೊಸದಿಲ್ಲಿ: ಭಾರತದ ಸ್ಕ್ವ್ಯಾಷ್ ಆಟಗಾರ ಅಭಯ್ ಸಿಂಗ್ ಅವರಿಗೆ 2025ನೇ ಸಾಲಿನ ಏಷ್ಯನ್ ಸ್ಕ್ವ್ಯಾಷ್ ಫೆಡರೇಷನ್ ಪುರುಷರ ವರ್ಷದ ಆಟಗಾರ ಪ್ರಶಸ್ತಿ ಲಭಿಸಿದೆ. ಇನ್ನು ಕಿರಿಯರ ವಿಭಾಗದಲ್ಲಿ ಯುವ ಪ್ರತಿಭೆ ಅನಾಹತ್ ಸಿಂಗ್ ಅತ್ಯುತ್ತಮ ಆಟಗಾರ್ತಿಯಾಗಿ ಆಯ್ಕೆಯಾಗಿದ್ದಾರೆ.


ಈ ನಡುವೆ, ಈಜಿಪ್ಟ್‌ನಲ್ಲಿ ನಡೆದ 2025ರ ವಿಶ್ವ ಜೂನಿಯರ್ ತಂಡ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಪದಕ ಗೆದ್ದ ಭಾರತೀಯ ಬಾಲಕರ ತಂಡಕ್ಕೂ 'ಪುರುಷರ ತಂಡ' ಪ್ರಶಸ್ತಿ ಲಭಿಸಿದೆ ಎಂದು ಫೆಡರೇಷನ್ ಪ್ರಕಟಿಸಿದೆ. ಪ್ರಸ್ತುತ ವಿಶ್ವ ಶ್ರೇಯಾಂಕದಲ್ಲಿ 25ನೇ ಸ್ಥಾನದಲ್ಲಿರುವ ಅಭಯ್ ಸಿಂಗ್, ಏಷ್ಯನ್ ಗೇಮ್ಸ್ ಹಾಗೂ ಏಷ್ಯನ್ ಚಾಂಪಿಯನ್‌ಶಿಪ್ ಪದಕ ವಿಜೇತರಾಗಿದ್ದು, ಕಳೆದ ವರ್ಷ ಭಾರತ ಗೆದ್ದ ವಿಶ್ವಕಪ್ ಮಿಶ್ರ ಟೀಮ್ ಪ್ರಶಸ್ತಿ ವಿಜೇತ ತಂಡದ ಭಾಗವಾಗಿದ್ದರು.

ವಿಶ್ವ 20ನೇ ಶ್ರೇಯಾಂಕದಲ್ಲಿರುವ ಅನಾಹತ್ ಸಿಂಗ್ ಕೂಡ ಏಷ್ಯನ್ ಗೇಮ್ಸ್ ಮತ್ತು ಏಷ್ಯನ್ ಚಾಂಪಿಯನ್‌ಶಿಪ್ ಪದಕ ವಿಜೇತೆ. 2025ರಲ್ಲಿ ಕೈರೋದಲ್ಲಿ ನಡೆದ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಪದಕ ಗೆದ್ದಿದ್ದು, ವಿಶ್ವಕಪ್ ಮಿಶ್ರ ತಂಡ ಚಿನ್ನದ ಸಾಧನೆಯಲ್ಲೂ ಭಾಗಿಯಾಗಿದ್ದರು. ಇದಕ್ಕೂ ಮುನ್ನ 2022ರಲ್ಲಿ ಸೌರವ್ ಘೋಷಾಲ್ ಮತ್ತು ಜೋಷ್ನಾ ಚಿನಪ್ಪಾ ಕ್ರಮವಾಗಿ ಪುರುಷ ಹಾಗೂ ಮಹಿಳಾ ವಿಭಾಗಗಳಲ್ಲಿ ಈ ಪ್ರಶಸ್ತಿಗಳನ್ನು ಪಡೆದಿದ್ದರು.

ಟಿಟಿ ವಿಶ್ವಕಪ್: ಮನಿಕಾ ಆಸೆ ಜೀವಂತ

ಹೊಸದಿಲ್ಲಿ: ಮನಿಕಾ ಬಾತ್ರಾ ಐಟಿಟಿಎಫ್ ಟೇಬಲ್ ಟೆನಿಸ್ ವರ್ಲ್ಡ್ ಕಪ್‌ನಲ್ಲಿ ನಾಕೌಟ್ ಹಂತದ ನಿರೀಕ್ಷೆ ಜೀವಂತವಾಗಿಟ್ಟುಕೊಂಡಿದ್ದಾರೆ.


ಚೀನಾದ ಮಕಾವಿನಲ್ಲಿ ನಡೆದ ಪಂದ್ಯದಲ್ಲಿ ಮನಿಕಾ ಅಮೆರಿಕದ ಲಿಲ್ಲಿ ಝಾಂಗ್ ವಿರುದ್ಧ 3–2 (11–7, 11–2, 14–16, 5–11, 11–6) ಅಂತರದಲ್ಲಿ ಕಠಿಣ ಜಯ ಸಾಧಿಸಿದರು. 43 ನಿಮಿಷಗಳ ಈ ಪಂದ್ಯದಲ್ಲಿ ಮಣಿಕಾ ತಾಳ್ಮೆಯ ಆಟ ಪ್ರದರ್ಶಿಸಿದರು. ಟೂರ್ನಿಯ ಮೊದಲ ಪಂದ್ಯದಲ್ಲಿ ಅವರು ಜಪಾನ್‌ನ ಮಿವಾ ಹರಿಮೋಟೋ ವಿರುದ್ಧ 0–3 ಅಂತರದಲ್ಲಿ ಸೋತಿದ್ದರು.



ಇನ್ನೊಂದೆಡೆ, ವಿಶ್ವದ 43ಶ್ರೇಯಾಂಕದ ಹೊಂದಿರುವ ಶ್ರೀಜಾ ಆಕುಲಾ ತಮ್ಮ ಮೊದಲ ಪಂದ್ಯದಲ್ಲಿ ಪೋರ್ಚುಗಲ್‌ನ ಫು ಯು ವಿರುದ್ಧ 1–3 (11–8, 9–11, 13–15, 8–11) ಅಂತರದಲ್ಲಿ ಸೋಲು ಕಂಡರು. ಅವರು ಮುಂದಿನ ಗುಂಪು ಹಂತದ ಪಂದ್ಯದಲ್ಲಿ ವಿಶ್ವ ನಂ.2 ಚೀನಾದ ವಾಂಗ್ ಮಾನ್ಯು ವಿರುದ್ಧ ಬುಧವಾರ ಆಡಲಿದ್ದಾರೆ. ಪುರುಷರ ವಿಭಾಗದಲ್ಲಿ ಭಾರತದಿಂದ ಏಕೈಕ ಆಟಗಾರ ಮಾನವ್ ಠಕ್ಕರ್, ಕೊರಿಯಾದ ಪಾರ್ಕ್ ಗ್ಯಾಂಗ್ ಹ್ಯೋನ್ ವಿರುದ್ಧ 0–3 ಸೋಲಿನ ನಂತರ, ಸ್ವೀಡನ್‌ನ ಟ್ರುಲ್ಸ್ ಮೊರೆಗಾರ್ಡ್ ವಿರುದ್ಧ ನಡೆಯುವ ಮಹತ್ವದ ಪಂದ್ಯದಲ್ಲಿ ಗೆಲುವು ಸಾಧಿಸಲೇಬೇಕಾಗಿದೆ. ಒಟ್ಟು 16 ಗುಂಪುಗಳಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ, ಪ್ರತಿ ಗುಂಪಿನ ಅಗ್ರಸ್ಥಾನ ಪಡೆದ ಆಟಗಾರರು ಮಾತ್ರ ರೌಂಡ್ 16ರ ಸುತ್ತಿಗೆ ಪ್ರವೇಶ ಪಡೆಯುತ್ತಾರೆ.

ಪ ದ ಬಂ ಧ

ರಾಜಾ ಸಂಗಮೇಶ ಹಿರೇಮಠ



5940

ಎಡದಿಂದ ಬಲಕ್ಕೆ
1.ವಾರೆಯಾಗಿ ಕಂಡ ಮುಖ (2)
2.ತೆಂಗಿನ ಕಾಯಿಯಿಂದ ಮಾಡಿದ ಮೋದಕ (5)
4. ಕಾಯು–ರಕ್ಷಿಸು ಎಂಬರ್ಥದ ಶಬ್ದ (3)
5. ಓಟು ಚಲಾಯಿಸುವ ವ್ಯಕ್ತಿ (4)
7.ವಸ್ತು–ವಿಷಯವು ಸಾರದಿಂದ ಕೂಡಿದೆ (4)
9.ಶಬ್ದಗಳೊಂದಿಗೆ ಆಡುವ ಬೌದ್ಧಿಕ ಆಟ (4)
13.ಅಂಕುರ–ಮೊಳಕೆಯಿದು (4)
15.ಬರವನ್ನು ಹೋಗಲಾಡಿಸಲು ಮಾಡಿದ ಕಾಳಗ (3)
16.ಗೆಲುವಿನ ಹಬ್ಬ–ವಿಜಯೋತ್ಸವವಿದು (5)
17.ಮನೆಸಾಲುಗಳ ನಡುವಿನ ಹಾದಿ (2)

ಮೇಲಿನಿಂದ ಕೆಳಕ್ಕೆ
1.ಭೂಮಿಯನ್ನು ಅಳತೆ ಮಾಡುವವನು (5)
2.ಕಾನನದಲ್ಲಿರುವ ಸದನ (4)
3.ಮರದ ಕಾಂಡದ ಕೆಳಗಿನ ಭಾಗ (2)
4.ಸಾಹಿತಿಯ ಪರ್ಯಾಯ ಹೆಸರಿದು (4)
6.ಸುವರ್ಣವಿಲ್ಲಿ ತಲೆಕೆಳಗಾಗಿದೆ (3)
8.ತಕ್ಕಮಟ್ಟಿಗೆ ಒಂದೇ ಆಗಿರುವುದು (3)
10.ದರದ ಬಗ್ಗೆ ತಿಳಿದುಕೊಂಡ ಹಿರಿಯ ವೇದೆ (4)
11.ಬಿಳಿಯ ಬಣ್ಣದ ಹಿಮಾಚ್ಛಾದಿತ ಪರ್ವತ (5)
12.ಅಸಾಧಾರಣವಾದ ಶಕ್ತಿ ಆಲದ ನಡುವೆ ಇದೆ (4)
14.ಗಿಡ–ಮರಗಳ ಹುಟ್ಟಿಗೆ ಕಾರಣವಾದುದು (2)

5939 ಉತ್ತರ

ಎಡದಿಂದ ಬಲಕ್ಕೆ:
3.ತಾಣದೀವಿಗೆ
5.ಗುಟುರು 6.ತಬಲ
7.ಕರಜ 9.ರಣರಂಗ
11.ಜಡತನ 14.ಈಚಲ
16.ಶಿಲ್ಪಿಗ 17.ದಕ್ಷಿಣ
18.ತೋರಣದ್ವಾರ

ಮೇಲಿನಿಂದ ಕೆಳಕ್ಕೆ :
1. ಸಂಗೀತಗಾರ
2.ಅಂಗುಲ
3.ತಾರುಮಾರು 4.ದೀಪಕ
8.ರಕುತ 10.ಚರಣ
12.ನಖಶಿಖಾಂತ
13.ಪುರಂದರ 15.ಲಕ್ಷಣ
16.ಗಣನೆ

ಬಾಲ್ ವಿರೂಪ: ಜಮಾನ್‌ಗೆ 2 ವರ್ಷ ನಿಷೇಧ

- ಪಿಎಸ್‌ಎಲ್ ಪಂದ್ಯದಲ್ಲಿ ಘಟನೆ
- ಪಂದ್ಯಾವಳಿಯಿಂದ 2 ವರ್ಷ ನಿಷೇಧ

ಕರಾಚಿ: ಐಪಿಎಲ್‌ನಲ್ಲಿ ಸೊಗಸಾದ ಪಂದ್ಯಗಳು ನಡೆಯುತ್ತಿರುವ ಸಮಯದಲ್ಲೇ ಅಲ್ಲಿ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿಯಲ್ಲಿ ಬಾಲ್ ವಿರೂಪಗೊಳಿಸಿರುವ ಆರೋಪದಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡದ ಪ್ರಮುಖ ಆಟಗಾರ ಫಕರ್ ಜಮಾನ್‌ಗೆ ಪಿಸಿಬಿ ಎರಡು ವರ್ಷದ ನಿಷೇಧ ಹೇರಿದೆ.



ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೂ ಮುನ್ನವೇ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿ ಶುರುವಾಗಿದೆ. ಹೀಗಿರುವಾಗ ಭಾನುವಾರ ಲಾಹೋರ್ ಹಾಗೂ ಕರಾಚಿ ತಂಡಗಳು ಎದುರಾಗಿದ್ದವು. ಕರಾಚಿ ತಂಡದ ನಾಯಕ ಶಾಹಿನ್ ಅಫ್ರಿದಿ ಹಾಗೂ ಹ್ಯಾರಿಸ್ ರೌಫ್ ಅವರೊಂದಿಗೆ ಗೇಮ್ ಪ್ಲಾನ್ ಮಾಡುವಾಗ ಅದೇ ತಂಡದ ಫಕರ್ ಜಮಾನ್ ಅವರು ಬಾಲನ್ನು ವಿರೂಪಗೊಳಿಸುವ ತುಣುಕುಗಳು ಹರಿದಾಡಿವೆ. ಖಾತರಿಗೊಂಡಂತೆ ಪಿಸಿಬಿ ಕಠಿಣ ನಿರ್ಧಾರಕ್ಕೆ ಮುಂದಾಯಿತು. ಮಂಗಳವಾರ ಈ ಬಗ್ಗೆ ಹೇಳಿರುವ ಪಿಸಿಬಿ, ಫಕರ್ ಜಮಾನ್ ಟೂರ್ನಮೆಂಟಿನ ಲೆವಲ್ ಮೂರರ ಮಾನದಂಡ ಉಲ್ಲಂಘನೆ ಮಾಡಿದ್ದಾರೆ. ನಮ್ಮ ನಿಯಮ ಪಟ್ಟಿಯ ವಿಧಿ 2.14ರ ಅಡಿಯಲ್ಲಿ ಅವರಿಗೆ ಸಜೆ ನೀಡಲಾಗುತ್ತದೆ. ಅಲ್ಲದೆ, ವಿಧಿ 41.3ರ ಅಡಿಯಲ್ಲಿ ಬಾಲ್ ವಿರೂಪಗೊಳಿಸಿರುವುದು ಖಾತರಿಯಾಗಿದೆ. ಇದಕ್ಕೆ ಕಠಿಣ ಕ್ರಮ ಕೈಗೊಳ್ಳಲಿರುವ ಪಿಸಿಬಿ ಜಮಾನ್ ಅವರನ್ನು ಪಿಎಸ್‌ಎಲ್‌ನಿಂದ 2 ವರ್ಷ ನಿಷೇಧ ಮಾಡುತ್ತದೆ ಎಂದು ಹೇಳಿದೆ. ಬಾಲ್ ವಿರೂಪಗೊಳಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮೈದಾನದಲ್ಲೇ ನಿರ್ಣಾಯಕರು ಹಾಗೂ ಆಟಗಾರರ ನಡುವೆ ಗೊಂದಲಗಳಾಗಿವೆ. ಇದಕ್ಕೂ ಅವರಿಗೆ ದಂಡ ವಿಧಿಸಲಾಗಿದೆ.

ಕಿರುಸುದ್ದಿ

ಮಾದಕ ವಸ್ತು ಸೇವನೆ : ಮೂರು ಮಂದಿ ಬಂಧನ

◆ **ಮಂಗಳೂರು:** ಮಾದಕ ವಸ್ತು ಸೇವನೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ಮೂರು ಮಂದಿಯನ್ನು ಉರ್ವಾ ಠಾಣಾ ಪೊಲೀಸರು ಬಂಧಿಸಿದ್ದಾರೆ.



ಕೇರಳ ಕೊಟ್ಟಾಯಂ ನಿವಾಸಿಗಳಾದ ಜೋಯೆಲ್ (24), ಲೂಯಿಸ್ ಜೋಸೆ ಫ್ ಸಾಲು (22) ಹಾಗೂ ಕಾಸರಗೋಡು ಜಿಲ್ಲೆಯ ಆದಿತ್ಯನ್ (22) ಬಂಧಿತರು. ಇವರು ಬಿಜೈ ಕಾಪಿಕಾಡ್ ಆನೆಗುಂಡಿ ರಸ್ತೆಯಲ್ಲಿ ಸಿಗರೇಟಿಗೆ ಮಾದಕ ವಸ್ತು ಬೆರೆಸಿ ಸೇದುತ್ತಿದ್ದರು. ಈ ಬಗ್ಗೆ ಮಾಹಿತಿ ಪಡೆದ ಪೊಲೀಸರು ದಾಳಿನಡೆಸಿ ಬಂಧಿಸಿದ್ದಾರೆ. ಆರೋಪಿಗಳು ಸಿಗರೇಟಿನೊಳಗೆ ಮಾದಕ ವಸ್ತು ತುಂಬಿಸಿ ಸೇದುತ್ತಿದ್ದುದನ್ನು ಒಪ್ಪಿಕೊಂಡಿದ್ದಾರೆ. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಮಾದಕ ವಸ್ತು ಸೇವನೆ ಮಾಡಿರುವುದು ದೃಢಪಟ್ಟಿದೆ. ಆರೋಪಿಗಳ ವಿರುದ್ಧ ಎನ್ ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಮಾದಕ ವಸ್ತು ಸೇವಿಸಿ ಅಸಭ್ಯ ವರ್ತನೆ : ಓರ್ವನ ಸೆರೆ, ಉಳಿದವರು ಪರಾರಿ

◆ **ಬಂಟ್ವಾಳ:** ನರಿಕೊಂಬು ಗ್ರಾಮದ ನೆಹರೂ ನಗರ ಎಂಬಲ್ಲಿ ಮಾದಕ ವಸ್ತುವನ್ನು ಸೇವಿಸಿ ಅಸಭ್ಯವಾಗಿ ವರ್ತಿಸುತ್ತಿದ್ದ ತಂಡದ ಓರ್ವನನ್ನು ಪೊಲೀಸರು ಬಂಧಿಸಿದ್ದಾರೆ. ಸಜಿಪ ಮೂಡ ನಿವಾಸಿ ಶಾಕೀರ್ (28) ಬಂಧಿತ ಆರೋಪಿಯಾಗಿದ್ದಾನೆ. ಸೋಮವಾರ ಸಂಜೆ ಖಚಿತ ವರ್ತಮಾನದ ಮೇರೆಗೆ ಬಂಟ್ವಾಳ ನಗರ ಪೊಲೀಸ್ ಠಾಣಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ ವೇಳೆ ಮೈದಾನದಲ್ಲಿ ನಿಂತಿದ್ದ ಕಾರಿನಲ್ಲಿದ್ದವರು ಪೊಲೀಸರನ್ನು ಕಂಡು ಪರಾರಿಯಾಗಿದ್ದಾರೆನ್ನಲಾಗಿದೆ. ಈ ಪೈಕಿ ಪೊಲೀಸರು ಓರ್ವನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸ್ಥಳದಿಂದ ಪರಾರಿಯಾದ ಆಸೀಫ್, ಸಿದ್ದಿಕ್ ಮತ್ತು ಇರ್ಷಾದ್ ಎಂಬವರು ಒಟ್ಟಿಗೆ ಮಾದಕ ವಸ್ತು ಸೇವನೆ ಮಾಡುತ್ತಿರುವುದನ್ನು ಒಪ್ಪಿಕೊಂಡಿದ್ದಾರೆನ್ನಲಾಗಿದೆ. ಬಂಧಿತ ಶಾಕೀರನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಈತ ಮಾದಕವಸ್ತು ಸೇವಿಸಿರುವುದು ದೃಢಪಟ್ಟಿದೆ. ಈ ಬಗ್ಗೆ ಬಂಟ್ವಾಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಂದೆಗೆ ಕರುಳು ನೀಡಿದ ಪುತ್ರಿಗೆ ಅಭಿನಂದನೆ

◆ **ಕಾಸರಗೋಡು:** ಕರುಳು ಬದಲಾವಣೆಯ ಮೂಲಕ ಮಾತ್ರವೇ ಜೀವ ಉಳಿಸಬಹುದೆಂಬ ವೈದ್ಯರ ನಿರ್ಧಾರದಂತೆ ಮೊಗ್ರಾಲ್ ವಲಿಯನಾಂಗಿ ನಿವಾಸಿ ಅಬ್ದುಲ್ ಮುನೀರ್ ಅವರ ಬದುಕಿಗೆ ಕೈಹಿಡಿದು ಮುನ್ನಡೆಸಿದ ಪುತ್ರಿ ಮಿರ್ಷಾನ ಅವರು ಮಾನವ ಸ್ನೇಹಕ್ಕೆ ಉದಾಹರಣೆಯಾಗಿದ್ದಾರೆ ಎಂದು ಮೊಗ್ರಾಲ್ ದೇಶೀಯ ವೇದಿ ಅಭಿಪ್ರಾಯಪಟ್ಟಿದೆ. ಗಂಭೀರ ಕರುಳು ರೋಗದಿಂದ ಬಳಲುತ್ತಿದ್ದ ಅಬ್ದುಲ್ ಮುನೀರ್ ಅವರಿಗೆ ತನ್ನ ಕರುಳಿನ ಒಂದು ಭಾಗವನ್ನು ನೀಡಿ ತಂದೆಯನ್ನು ಹೊಸ ಬದುಕಿನತ್ತ ತಂದ ಮಿರ್ಷಾನ ಅವರ ಮಾದರಿ ಕಾರ್ಯವನ್ನು ದೇಶೀಯ ವೇದಿ ಅಭಿನಂದಿಸಿದೆ. ಮಿರ್ಷಾನ ಅವರ ಮನೆಗೆ ತೆರಳಿ ದೇಶೀಯ ವೇದಿ ಪದಾಧಿಕಾರಿಗಳು ಅಭಿನಂದಿಸಿದ್ದಾರೆ. ಸಂಘಟನೆಯ ಅಧ್ಯಕ್ಷ ಎಂ.ಎ.ಸಿದ್ದಿಕ್ ರಹಮಾನ್, ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಕುಂಞಿ, ಎಂ.ಎ.ಮೂಸ, ಟಿ.ಕೆ.ಅನ್ವರ್, ಮೊಹಮ್ಮದ್ ಸ್ಮಾರ್ಟ್, ರಿಯಾಸ್ ಕರೀಂ ಮುಂತಾದವರು ಭಾಗವಹಿಸಿದ್ದರು.

ಕಾಣಿಕೆ ಹುಂಡಿ ಕಳವು ಪ್ರಕರಣ: ಆರೋಪಿ ಸೆರೆ

◆ **ಮಂಗಳೂರು:** ಕಾಣಿಕೆ ಹುಂಡಿಯ ಹಣ ಕಳವು ಪ್ರಕರಣದ ಅಂತಾರಾಜ್ಯ ಆರೋಪಿಯೊಬ್ಬನನ್ನು ಬಜ್ಪೆ ಠಾಣಾ ಪೊಲೀಸರು ಬಂಧಿಸಿದ್ದಾರೆ. ತಮಿಳುನಾಡಿನ ಶಬಿಕ್ ಅಹಮ್ಮದ್ ಶೇಖ್ ಅಬ್ದುಲ್ ಖಾದರ್ (25) ಬಂಧಿತ. ಈತ ಕೆಂಜಾರು ಗ್ರಾಮದ ಶ್ರೀ ರಾಮಾಂಜನೇಯ ದೇವಸ್ಥಾನದ ಬಾಗಿಲನ್ನು ಮುರಿದು ಒಳನುಗ್ಗಿ, 3 ಕಾಣಿಕೆ ಹುಂಡಿಗಳಲ್ಲಿದ್ದ ಸುಮಾರು 25,000 ರೂ. ಕಳವು ಮಾಡಿದ್ದ ಆರೋಪಿಯಾಗಿದ್ದಾನೆ. ಈತ ಉಡುಪಿ ಜಿಲ್ಲೆಯ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ದಾಖಲಾದ ಕಳವು ಪ್ರಕರಣದ ಆರೋಪಿ. ಅಲ್ಲದೆ ಇದೇ ವರ್ಷದ ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ಪಣಂಬೂರು ಪೊಲೀಸ್ ಠಾಣಾ ವ್ಯಾಪ್ತಿಯ ತೋಕೂರು-ಜೊಕಟ್ಟೆ ಪ್ರದೇಶದಲ್ಲಿ ಪ್ಯಾಷನ್ ಪ್ರೋ ಮೋಟಾರ್ ಸೈಕಲ್ ಕಳವು ಪ್ರಕರಣದಲ್ಲೂ ಭಾಗಿಯಾಗಿದ್ದಾನೆ. ಆರೋಪಿಯು ತಮಿಳುನಾಡಿನಿಂದ ರೈಲಿನಲ್ಲಿ ಬಂದು ಕಳ್ಳತನ ಮಾಡಿ, ಮತ್ತೆ ತಮಿಳುನಾಡಿಗೆ ತೆರಳಿ ತಪ್ಪಿಸಿಕೊಳ್ಳುವ ಪ್ರವೃತ್ತಿ ಹೊಂದಿದವನಾಗಿದ್ದಾನೆ. ಬಜಪೆ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಬಾಲಕೃಷ್ಣ ಮತ್ತು ಠಾಣಾ ಕ್ರೈಂ ಸಿಬ್ಬಂದಿಗಳಾದ ನೂತನ್, ರಾಜೇಶ್ ಮತ್ತು ಪ್ರಕಾಶ್ ರವರು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ.

ಮಾದರಿ ಹೆಜ್ಜೆಯಿಟ್ಟ ಮಂಗಳೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಪಿ.ಎಲ್. ಧರ್ಮ

ಮಂಗಳೂರು ವಿವಿಯಲ್ಲಿ ಪಿಂಚಣಿ ನಿಧಿ ಟ್ರಸ್ಟ್

◆ **ಮಂಗಳೂರು:** ಮಂಗಳೂರು ವಿಶ್ವವಿದ್ಯಾನಿಲಯದ ಸಿಬ್ಬಂದಿಗಳ ಭವಿಷ್ಯದ ಹಿತದೃಷ್ಟಿಯಿಂದ ಮಹತ್ವದ ಯೋಜನೆಯೊಂದನ್ನು ಮಂಗಳೂರು ವಿಶ್ವವಿದ್ಯಾನಿಲಯ ರೂಪಿಸಿದೆ. ಈ ಮೂಲಕ ರಾಜ್ಯದ ಇತರೆ ವಿಶ್ವವಿದ್ಯಾನಿಲಯಗಳ ಗಮನಸೆಳೆದಿದೆ.

ಪಿಂಚಣಿ ನಿಧಿ ಟ್ರಸ್ಟ್ ಎಂಬ ಯೋಜನೆಗೆ ಬುನಾದಿ ಹಾಕಿದವರು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ. ಎಲ್. ಧರ್ಮ.

ಮಂಗಳವಾರ ಮಂಗಳೂರು ವಿವಿಯಲ್ಲಿ ನಡೆದ ಶೈಕ್ಷಣಿಕ ಮಂಡಳಿಯ 2025-26ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಪಿಂಚಣಿ ನಿಧಿ ಟ್ರಸ್ಟ್ (ಪಿಎಫ್‌ಟಿ)ನ್ನು ಆರಂಭಿಸಾಗಿದ್ದು, ಇದು ನಿವೃತ್ತರಾದ ವಿವಿ ಸಿಬ್ಬಂದಿಗಳಿಗೆ ಆರ್ಥಿಕ ಶಕ್ತಿಯಾಗಲಿದೆ. ಈಗಾಗಲೇ 50 ಲಕ್ಷ ರೂ. ಮೊತ್ತದೊಂದಿಗೆ ಇದನ್ನು ನೋಂದಣಿ ಮಾಡಲಾಗಿದೆ ಎಂದರು.

ಮಂಗಳೂರು ವಿವಿಗೆ ಬರುವ ಅನುದಾನ ಇತರ ಮೊತ್ತಗಳಲ್ಲಿ ಉಳಿಕೆಯಾದ ಮೊತ್ತವನ್ನು ಈ ನಿಧಿಗೆ ಬಳಕೆ ಮಾಡುವುದರಿಂದ ಪಿಂಚಣಿ ಸಮಸ್ಯೆಗೆ ಪರಿಹಾರ ಸಿಗಲಿದೆ. ಇದಕ್ಕಾಗಿ ಈಗಾಗಲೇ ಕುಲಪತಿಗಳ ಅಧ್ಯಕ್ಷತೆಯಲ್ಲಿ 11 ಮಂದಿಯ ಸಮಿತಿ ರಚಿಸಲಾಗಿದೆ. ಸರ್ಕಾರ ಪ್ರತಿ ತಿಂಗಳು ಪಿಂಚಣಿಗೆ 1.30 ಕೋಟಿ ರೂ.ನೀಡುತ್ತಿದ್ದು, ವಿವಿ 1.40 ಕೋಟಿ ಪಿಂಚಣಿ ನೀಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹೆಚ್ಚುವರಿ ಮೊತ್ತವನ್ನು ಆಂತರಿಕ ನಿಧಿಯಲ್ಲಿ



ವಿದ್ಯಾರ್ಥಿಗಳ ಶುಲ್ಕದಿಂದ ನೀಡಲಾಗುತ್ತಿತ್ತು. ಈ ಟ್ರಸ್ಟ್ ಬಂದ ಬಳಿಕ ಮುಂದೆ ಪಿಂಚಣಿ ಸಮಸ್ಯೆ ನಿವಾರಣೆಯಾಗುತ್ತದೆ ಎಂದರು.

'ಸ್ಕೂಲ್ ಸಿಸ್ಟಮ್' ಮಾದರಿ ಪಠ್ಯಕ್ರಮಕ್ಕೆ ಚಿಂತನೆ

ಮಂಗಳೂರು ವಿಶ್ವವಿದ್ಯಾನಿಲಯ 2026-27ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಗೋವಾ ಮಾದರಿಯಲ್ಲಿ 'ಸ್ಕೂಲ್ ಸಿಸ್ಟಮ್' ಮಾದರಿಯ ಪಠ್ಯಕ್ರಮ ಪರಿಚಯಲು ಚಿಂತನೆ ನಡೆಸಿದೆ ಎಂದು ಕುಲಪತಿಗಳು ತಿಳಿಸಿದರು.

ಈ ಸಂಬಂಧ ವಿವಿಯ ನಿಯೋಗ ಶೀಘ್ರವೇ ಗೋವಾಕ್ಕೆ ಭೇಟಿ ನೀಡಿ ಅಧ್ಯಯನ ನಡೆಸಲಿದೆ. ಈಗಾಗಲೇ ಹೊಸ ಪಠ್ಯಕ್ರಮ ರಚನೆಯ ಚಟುವಟಿಕೆಗಳು ಹಿರಿಯ ಡೀನ್‌ಗಳ ಉಸ್ತುವಾರಿಯಲ್ಲಿ ಪ್ರಾರಂಭವಾಗಿವೆ ಎಂದವರು ತಿಳಿಸಿದರು.

ಮಂಗಳೂರು ವಿವಿಯಲ್ಲಿ ಕಾಯಂ ಪ್ರಾಧ್ಯಾಪಕರ ಕೊರತೆ ಇದೆ. ಪ್ರಸಕ್ತ ಹೊಸ ನೇಮಕಾತಿ ಆಗುತ್ತಿಲ್ಲ. ಎಲ್ಲ ವಿದ್ಯಾರ್ಥಿಗಳಿಗೆ ಹಿರಿಯ ಪ್ರಾಧ್ಯಾಪಕರ ಬೋಧನೆ ಲಭ್ಯವಾಗಬೇಕು ಎಂಬ ಹಿನ್ನೆಲೆಯಲ್ಲಿ ವಾಣಿಜ್ಯ, ರಸಾಯನ ವಿಜ್ಞಾನ, ಮಾನವಿಕ ವಿಭಾಗ, ಜೀವ ವಿಜ್ಞಾನ ಹೀಗೆ ನಾಲ್ಕು ಮುಖ್ಯ ವಿಭಾಗಗಳನ್ನು ಮಾಡಿ, ಅವುಗಳಿಗೆ ಸಂಬಂಧಿತ ಉಪ ವಿಷಯಗಳನ್ನು ಆಯಾ ವಿಭಾಗಕ್ಕೆ ಜೋಡಿಸಿ ಅದಕ್ಕೆ ಪ್ರತ್ಯೇಕ ಪಠ್ಯಕ್ರಮ ರೂಪಿಸಲಾಗುವುದು ಎಂದರು.

ಮೊದಲ ಮತ್ತು ಎರಡನೇ ಸೆಮಿಸ್ಟರ್‌ನಲ್ಲಿ ನಿರ್ದಿಷ್ಟ ವಿಭಾಗ ವ್ಯಾಪ್ತಿಯ ಎಲ್ಲ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ಸಮಗ್ರವಾಗಿ ಬೋಧನೆ ಮಾಡಲಾಗುತ್ತದೆ. ಮೂರನೇ ಸೆಮಿಸ್ಟರ್‌ನಲ್ಲಿ ವಿದ್ಯಾರ್ಥಿಗಳು ಆಯ್ದುಕೊಂಡಿರುವ ವಿಷಯಕ್ಕೆ ಸಂಬಂಧಿಸಿದ ವಿಭಾಗಕ್ಕೆ ವರ್ಗಾವಣೆಯಾಗಲಿದೆ. ಮೂರು ಮತ್ತು ನಾಲ್ಕನೇ ಸೆಮಿಸ್ಟರ್‌ಗಳು ನಿರ್ದಿಷ್ಟ ವಿಷಯದ ಕೇಂದ್ರೀಕೃತ ಅಧ್ಯಯನಕ್ಕೆ ಮೀಸಲಾಗಿರಲಿದೆ ಎಂದರು.

ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ, ಕುಲಸಚಿವ ಪ್ರೊ.ಗಣೇಶ್ ಸಂಜೀವ ಉಪಸ್ಥಿತರಿದ್ದರು.

ಮೊದಲ ಬಾರಿಗೆ ವರ್ಷಾಂತ್ಯದೊಳಗೆ ಬಜೆಟ್ ಮಂಡನೆ

ಮಂಗಳೂರು ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಆರ್ಥಿಕ ವರ್ಷದ ಅಂತ್ಯದೊಳಗೆ ಬಜೆಟ್ ಮಂಡನೆ ಮಾಡಲಾಗಿದೆ. ಕುಲಪತಿ ಪ್ರೊ.ಪಿ.ಎಲ್.ಧರ್ಮ ಅಧ್ಯಕ್ಷತೆಯಲ್ಲಿ ನಡೆದ ಮಂಗಳೂರು ವಿವಿ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಹಣಕಾಸು ವಿಭಾಗದ ಉಪ ಕುಲಚಿವರಾದ ಲಲಿತಾ ಅವರು ಬಜೆಟ್ ಮಂಡಿಸಿದರು.



68.34 ಕೋ.ರೂ.ಕೊರತೆ ಬಜೆಟ್

ಮಂಗಳೂರು ವಿಶ್ವವಿದ್ಯಾನಿಲಯ 2026-27ನೇಸಾಲಿನಲ್ಲಿ ಯೋಜನೆಯ ಆದಾಯ 54.90 ಕೋ.ರೂ.ಅಂದಾಜಿಸಲಾಗಿದ್ದು, 95.71 ಕೋ.ರೂ.ವೆಚ್ಚ ನಿರೀಕ್ಷಿಸಲಾಗಿದೆ. ಒಟ್ಟು 194.09 ಕೋಟಿರೂ.ಸ್ವೀಕೃತಿ ಅಂದಾಜಿಸಲಾಗಿದ್ದು, 262.43 ಕೋ.ರೂ.ಖರ್ಚು ಅಂದಾಜಿಸಲಾಗಿದೆ. 68.34 ಕೋ.ರೂ.ಆದಾಯ ಕೊರತೆ ಕಾಣಿಸಲಾಗಿದೆ.

ಹಾಲಿ ಶೈಕ್ಷಣಿಕ ಸಾಲಿನಲ್ಲಿ ಪಿಎಂ-ಉಷಾ ಯೋಜನೆಯಡಿ 19.95 ಕೋ.ರೂ. ಬಿಡುಗಡೆಯಾಗಿದೆ. ಬ್ರಹ್ಮಶ್ರೀ ನಾರಾಯಣಗುರು ಪೀಠಕ್ಕೆ ಸರ್ಕಾರ 1 ಕೋ.ರೂ.ಬಿಡುಗಡೆ ಮಾಡಿದೆ. 2024-25ನೇ ಸಾಲಿನಲ್ಲಿ 0.67 ಕೋ.ರೂ. ಅಭಿವೃದ್ಧಿ ಅನುದಾನಕ್ಕೆ ವೆಚ್ಚವಾಗಿದೆ. ವಿವಿಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಮಾತ್ರ ಬಳಸಿಕೊಳ್ಳಲು ತೀರ್ಮಾನಿಸಲಾಗಿದ್ದು, ವಿವಿಯ ಆಂತರಿಕ ಸಂಪನ್ಮೂಲದಿಂದ ಯಾವುದೇ ಹೊಸ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿಲ್ಲ ಎಂದು ಕುಲಪತಿ ಪ್ರೊ.ಪಿ.ಎಲ್.ಧರ್ಮ ತಿಳಿಸಿದರು.

ಗುಡ್ ಫ್ರೈಡೆ ಪ್ರಯುಕ್ತ ಯಶವಂತಪುರ-ಕಣ್ಣೂರು ನಡುವೆ ವಿಶೇಷ ರೈಲು ಸಂಚಾರ

◆ **ಸುಬ್ರಹ್ಮಣ್ಯ:** ಗುಡ್ ಫ್ರೈಡೆ ಮತ್ತು ವಾರಾಂತ್ಯದ ಹಿನ್ನೆಲೆಯಲ್ಲಿ ಪ್ರಯಾಣಿಕರ ದಟ್ಟಣೆಯನ್ನು ನಿಯಂತ್ರಿಸಲು, ನೈಋತ್ಯ ರೈಲ್ವೆಯು ಬೆಂಗಳೂರಿನ ಯಶವಂತಪುರ ಮತ್ತು ಕೇರಳದ ಕರಾವಳಿ ನಗರಿ ಕಣ್ಣೂರು ನಡುವೆ ಮಂಗಳೂರು ಜಂಕ್ಷನ್ ಮಾರ್ಗವಾಗಿ ಒಂದು ಟ್ರಿಪ್ ವಿಶೇಷ ರೈಲನ್ನು ಕಾರ್ಯಾಚರಣೆಗೊಳಿಸಲಿದೆ.

ರೈಲುಸಂಖ್ಯೆ06551 ಯಶವಂತಪುರ-ಕಣ್ಣೂರು ವಿಶೇಷ ಎಕ್ಸ್‌ಪ್ರೆಸ್ ರೈಲು ಏ.2ರ ಗುರುವಾರ ಬೆಳಗ್ಗೆ 11.50ಕ್ಕೆ ಯಶವಂತಪುರದಿಂದ ಹೊರಟು, ಮರುದಿನ ಏ.3ರ ಶುಕ್ರವಾರ ಮುಂಜಾನೆ 3 ಗಂಟೆಗೆ ಕಣ್ಣೂರು ತಲುಪಲಿದೆ. ಮರಳಿ ಪ್ರಯಾಣದಲ್ಲಿ, ರೈಲು ಸಂಖ್ಯೆ 06552 ಕಣ್ಣೂರು-ಯಶವಂತಪುರ ವಿಶೇಷ ಎಕ್ಸ್



» ಏ.3ರ ಶುಕ್ರವಾರ ಬೆಳಗ್ಗೆ 8.45ಕ್ಕೆ ಕಣ್ಣೂರಿನಿಂದ ಹೊರಟು, ಅದೇ ದಿನ ರಾತ್ರಿ 9.30ಕ್ಕೆ ಯಶವಂತಪುರವನ್ನು ತಲುಪಲಿದೆ.

ಪ್ರೆಸ್ ರೈಲು ಏ.3ರ ಶುಕ್ರವಾರ ಬೆಳಗ್ಗೆ 8.45ಕ್ಕೆ ಕಣ್ಣೂರಿನಿಂದ ಹೊರಟು, ಅದೇ ದಿನ ರಾತ್ರಿ 9.30ಕ್ಕೆ ಯಶವಂತಪುರವನ್ನು ತಲುಪಲಿದೆ.

ಈ ವಿಶೇಷ ರೈಲು ಕುಣಿಗಲ್, ಚನ್ನರಾಯಪಟ್ಟಣ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕ ಪುತ್ತೂರು, ಬಂಟವಾಳ, ಮಂಗಳೂರು ಜಂಕ್ಷನ್, ಕಾಸರಗೋಡು, ಕಾಂಜನಗಾಡ್ ಮತ್ತು ಪಯ್ಯನ್ನೂರು ನಿಲ್ದಾಣಗಳಲ್ಲಿ ನಿಲುಗಡೆ ನೀಡಲಿದೆ.

ಈ ರೈಲು ಒಟ್ಟು 21 ಬೋಗಿಗಳನ್ನು ಹೊಂದಿರಲಿದ್ದು, ಅವುಗಳಲ್ಲಿ 2 ಎಸಿ ಟು-ಟಯರ್, 6 ಎಸಿ ತ್ರೀ-ಟಯರ್, 7 ಸ್ಲೀಪರ್ ಕ್ಲಾಸ್, 4 ಸಾಮಾನ್ಯ ದ್ವಿತೀಯ ದರ್ಜೆ ಬೋಗಿಗಳು ಹಾಗೂ 2 ಲಗೇಜ್ ಕಮ್ ಜನರೇಟರ್ ಕಾರ್ ಮತ್ತು ಬ್ರೇಕ್ ವ್ಯಾನ್‌ಗಳು ಇರಲಿವೆ.

ಬೋಳಾರದ ಸೈಕಲ್ ಪಥ ನಿರ್ಮಾಣ ಕಾಮಗಾರಿಗೆ ವಿಘ್ನ

ಸಿಆರ್‌ಝೆಡ್ ನಿಯಮ ಪಾಲಿಸಲು ಎನ್‌ಜಿಟಿ ಆದೇಶ

◆ **ಮಂಗಳೂರು:** ನಿಯಮಗಳನ್ನು ಮೀರಿ ಪರಿಸರಕ್ಕೆ ಹಾನಿಯಾಗುವ ರೀತಿಯಲ್ಲಿ ಮಂಗಳೂರಿನ ಬೋಳಾರದ ಹೊಳೆ ತೀರದಲ್ಲಿ ಸೈಕಲ್ ಪಥ ನಿರ್ಮಾಣವಾಗುತ್ತಿರುವುದಕ್ಕೆ 2011ರ ಸಿಆರ್‌ಝೆಡ್ ನಿಯಮ ಪಾಲಿಸುವಂತೆ ಆದೇಶ ನೀಡುವ ಮೂಲಕ ಚೆನ್ನೈನ ಹಸಿರು ಪೀಠ (ಎನ್‌ಜಿಟಿ) ಕಾಮಗಾರಿಗೆ ತಡೆ ನೀಡಿದೆ ಎಂದು ಎನ್‌ಇಸಿಎಫ್‌ನ ಅಧ್ಯಕ್ಷ ಜೋನಸ್ ಡಿಸೋಜಾ ತಿಳಿಸಿದ್ದಾರೆ.



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2011ರ ಸಿಆರ್‌ಝೆಡ್ ಅಧಿಸೂಚನೆ ಪಾಲಿಸುವಂತೆ ಎನ್‌ಜಿಟಿ ಆದೇಶ ನೀಡಿರುವುದರಿಂದ ಯೋಜನೆ ಕೈಗೆತ್ತಿಕೊಂಡಿರುವ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಡ್ಡಾಯವಾಗಿ ನಿಯಮವನ್ನು ಪಾಲಿಸಬೇಕಾಗುತ್ತದೆ ಎಂದರು.

ಎನ್‌ಜಿಟಿ ಆದೇಶದನ್ವಯ ಯೋಜನೆಯನ್ನು ರದ್ದುಗೊಳಿಸುವಂತೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಚೆನ್ನೈನ ಹಸಿರುಪೀಠದ ಆದೇಶದ ಮೇರೆಗೆ ಪತ್ರ ಬರೆಯಲಾಗಿದೆ. 15 ದಿನಗಳಲ್ಲಿ ಕ್ರಮ ಆಗದಿದ್ದರೆ ಎನ್‌ಜಿಟಿಯಲ್ಲಿ ಮತ್ತೆ ಆದೇಶ ಅನುಷ್ಠಾನವಾಗದೇ ಇರುವ ಕುರಿತು ದೂರು ದಾಖಲಿಸಲಾಗವುದು ಎಂದವರು ಹೇಳಿದರು.

ನಿಗದಿತ ಅವಧಿಯಲ್ಲಿ ಯೋಜನೆ ರದ್ದುಗೊಳಿಸುವ ಕಾರ್ಯ ಆಗದಿದ್ದರೆ ಆದೇಶ ಪಾಲನೆಗೆ ಸಂಬಂಧಿಸಿ ಹಸಿರು ಪೀಠಕ್ಕೆ ಮೇಲ್ಮನವಿ ಸಲ್ಲಿಸುವುದು ಅನಿವಾರ್ಯವಾಗಲಿದೆ ಎಂದವರು ಹೇಳಿದರು.

ಎನ್‌ಇಸಿಎಫ್ ಗೌರವ ಕಾರ್ಯದರ್ಶಿ ಶಶಿಧರ ಶೆಟ್ಟಿ ಮಾತನಾಡಿ, ಸೈಕಲ್ ಪಥ ಕಾಮಗಾರಿಯ ಕುರಿತಂತೆ ತಮ್ಮ ಸಂಘಟನೆಯು ಚೆನ್ನೈಯ ರಾಷ್ಟ್ರೀಯ ಹಸಿರು ಪೀಠದಲ್ಲಿ ದಾಖಲಿಸಿರುವ ದೂರಿಗೆ ಸಂಬಂಧಿಸಿ ಅಂತಿಮ ಆದೇಶ ನೀಡಲಾಗಿದ್ದು, ಅದರಂತೆ ನಿಯಮದಂತೆ ನೇತ್ರಾವತಿ ನದಿ ದಂಡೆ ಮತ್ತು ಜಪ್ಪಿನಮೊಗರು ಗ್ರಾಮದಲ್ಲಿ ನಿರ್ಮಿಸಲಾಗಿರುವ ಎಲ್ಲಾ ಶಾಶ್ವತ ಕಾಂಕ್ರೀಟ್ ರಚನೆಗಳನ್ನು ಕೆಡವಬೇಕಿದೆ ಎಂದರು.

> ಎಮ್ಮೆಕೆರೆಯಲ್ಲಿ ನಿರ್ಮಾಣವಾಗಿರುವ ಅಂತಾರಾಷ್ಟ್ರೀಯ ಈಜುಕೊಳ ಜಾಗವೂ ಕೆರೆಗೆ ಮಣ್ಣು ಹಾಕಿ ಮಾಡಲಾಗಿದೆ. ಬಫರ್ ಝೋನ್ ನಿಯಮ ಉಲ್ಲಂಘಿಸಿ ಈ ಯೋಜನೆ ರೂಪಿಸಲಾಗಿದ್ದು, ಇದರ ವಿರುದ್ಧವೂ ಹಸಿರು ನ್ಯಾಯ ಪೀಠದಲ್ಲಿ ಎನ್‌ಇಸಿಎಫ್‌ನಿಂದ ದೂರು ದಾಖಲಿಸಲಾಗಿದೆ.ಏ. 16ರಂದು ಮುಂದಿನ ವಿಚಾರಣೆ ನಡೆಯಲಿದೆ.
>
> ■ **ಶಶಿಧರ ಶೆಟ್ಟಿ**, ಸಂಘಟನೆಯ ಗೌರವ ಕಾರ್ಯದರ್ಶಿ

ಈ ಭಾಗದಲ್ಲಿ ಈಗಾಗಲೇ ಸಿಆರ್‌ಝೆಡ್ ನಿಯಮವನ್ನು ಉಲ್ಲಂಘಿಸಿ ಶೌಚಾಲಯ ಬ್ಲಾಕ್, ಆಹಾರ ಕಿಯೋಸ್ಕ್, ಟಿಕೆಟ್ ಕೌಂಟರ್ ನಿರ್ಮಾಣವಾಗಿದೆ. ಇಲ್ಲಿ ಮ್ಯಾಂಗ್ರೋವ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ಕತ್ತರಿಸಲಾಗಿದೆ ಎಂದು ಅವರುಆರೋಪಿಸಿದರು.

ಎನ್‌ಇಸಿಎಫ್ ಸದಸ್ಯ ಬೆನೆಡಿಕ್ಟ್ ಫೆರ್ನಾಂಡಿಸ್ ಮಾತನಾಡಿ, ಸಿಆರ್‌ಝೆಡ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಮನರಂಜನಾ ಚಟುವಟಿಕೆಗಳನ್ನು ನಡೆಸುವಂತಿಲ್ಲ. ಈ ಸೈಕಲ್ ಪಥಹಾಗೂ ಜಲಮುಖಿ ಯೋಜನೆಗಾಗಿ ಈಗಾಗಲೇ 70 ಕೋಟಿ ರೂ.ಗಳ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಇದು ಜನರ ತೆರಿಗೆ ಹಣದ ದುರುಪಯೋಗವಾಗಿದೆ. ಈ ಭಾಗದಲ್ಲಿ ಬಂದರು ಮತ್ತು ಜೆಟ್ಟಿಗಳು, ಕ್ವೇಗಳು, ವಾರ್ಫ್‌ಗಳು, ಸವೆತ ನಿಯಂತ್ರಣ ಕ್ರಮಗಳು, ಬ್ರೇಕ್ ವಾಟರ್, ಪೈಪಲೈನ್, ಲೈಟ್ ಹೌಸ್‌ಗಳು, ನ್ಯಾವಿಗೇಶನಲ್ ಸುರಕ್ಷತಾ ಸೌಲಭ್ಯಗಳು, ಕರಾವಳಿ ಪೊಲೀಸ್ ಠಾಣೆ ಮೊದಲಾದ ಕಾರ್ಯಾಚರಣೆ ನಡೆಸಬಹುದು. ಆದರೆ ಸೈಕಲ್ ಪಥದಂತಹ ಯೋಜನೆ ನಡೆಸುವಂತಿಲ್ಲ ಎಂದರು.

ಉಡುಪಿ ಜಿಲ್ಲೆಯ 5 ಗ್ರಾಪಂಗಳಿಗೆ ರಾಷ್ಟ್ರೀಯ ಪುರಸ್ಕಾರದ ಮನ್ನಣೆ

◆ **ಉಡುಪಿ:** ಕೇಂದ್ರ ಪಂಚಾಯತ್ ರಾಜ್ ಸಚಿವಾಲಯವು ಘೋಷಿಸುವ ಪ್ರತಿಷ್ಠಿತ 'ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸತತ ವಿಕಾಸ ಪುರಸ್ಕಾರ-2025'ಕ್ಕೆ ಉಡುಪಿ ಜಿಲ್ಲೆಯ ಐದು ಗ್ರಾಮ ಪಂಚಾಯತ್‌ಗಳು ಭಾಜನವಾಗಿವೆ. ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ತಳಮಟ್ಟದಲ್ಲಿ ಅತ್ಯಂತ ಯಶಸ್ವಿಯಾಗಿ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಈ ಗೌರವ ಲಭಿಸಿದೆ.

ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಪುರಸ್ಕಾರ ಎಂದರೇನು?

ಗ್ರಾಮೀಣ ಭಾಗದ ಆಡಳಿತದಲ್ಲಿ ಪಾರದರ್ಶಕತೆ ತರಲು ಮತ್ತು ಉತ್ತಮ ಕಾರ್ಯನಿರ್ವಹಣೆಯ ಪಂಚಾಯತ್‌ಗಳನ್ನು ಉತ್ತೇಜಿಸಲು ಕೇಂದ್ರ ಸರ್ಕಾರವು ಈ ಪ್ರಶಸ್ತಿಯನ್ನು 2022ರಲ್ಲಿ ಪ್ರಾರಂಭಿಸಿದೆ. ಒಟ್ಟು 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಆಧಾರವಾಗಿಟ್ಟುಕೊಂಡು, ಅವುಗಳನ್ನು 9 ಸ್ಥಳೀಕೃತ ಸುಸ್ಥಿರ ಅಭಿವೃದ್ಧಿ ಗುರಿಗಳಾಗಿ ವಿಂಗಡಿಸಲಾಗಿದೆ. 2030ರೊಳಗೆ ಈ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಪಂಚಾಯತ್‌ಗಳ ನಡುವೆ ಸ್ಪರ್ಧಾತ್ಮಕ ಮನೋಭಾವ ಮೂಡಿಸುವುದು ಈ ಪ್ರಶಸ್ತಿಯ ಮುಖ್ಯ ಉದ್ದೇಶವಾಗಿದೆ.

ಪ್ರಶಸ್ತಿಯ ಮಾನದಂಡ ಮತ್ತು ಆಯ್ಕೆ ಪ್ರಕ್ರಿಯೆ

ಈ ಪ್ರಶಸ್ತಿಗೆ ಆಯ್ಕೆ ಮಾಡಲು ಅತ್ಯಂತ ಕಠಿಣವಾದ ಮೌಲ್ಯಮಾಪನ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತದೆ.

ಸಮಗ್ರ ಸೂಚ್ಯಂಕ

ಪಂಚಾಯತ್‌ಗಳು 156 ಸೂಚ್ಯಾಂಕಗಳ ಆಧಾರದ ಮೇಲೆ 'ಪಂಚಾಯತ್ ಅಭಿವೃದ್ಧಿ ಸೂಚ್ಯಂಕ' ಪ್ರಶ್ನಾವಳಿಗಳನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು. ಮೌಲ್ಯಮಾಪನ ವಿಧಾನ: ಒಟ್ಟು ಅಂಕಗಳಲ್ಲಿ ಶೇ. 50ರಷ್ಟು ಅಂಕಗಳನ್ನು ಪಂಚಾಯತ್ ನೀಡಿದ ಮಾಹಿತಿಯ ಆಧಾರದ ಮೇಲೆ ನೀಡಿದರೆ, ಉಳಿದ ಶೇ. 50ರಷ್ಟು ಅಂಕಗಳನ್ನು ಕೇಂದ್ರ ಸರ್ಕಾರದ ಮೌಲ್ಯಮಾಪನ ತಂಡವು ಪಂಚಾಯತ್‌ಗಳಿಗೆ ಖುದ್ದಾಗಿ ಭೇಟಿ ನೀಡಿ, ಕ್ಷೇತ್ರ ಮಟ್ಟದ ಪರಿಶೀಲನೆ ನಡೆಸಿದ ನಂತರ ನೀಡುತ್ತದೆ.

ಉಡುಪಿ ಜಿಲ್ಲೆಯ ಸಾಧಕ ಪಂ.ಗಳು

ಮುದ್ರಾಡಿ (ಹೆಬ್ರಿ): 'ಬಡತನ ಮುಕ್ತ ಮತ್ತು ಸುಧಾರಿತ ಜೀವನೋಪಾಯ' ವಿಷಯದಲ್ಲಿ ರಾಷ್ಟ್ರಕ್ಕೆ ಪ್ರಥಮ ಸ್ಥಾನ ಪಡೆದಿದ್ದು, 1 ಕೋಟಿ ರೂ. ನಗದು ಬಹುಮಾನ ಪಡೆಯಲಿದೆ.

ವಂಡ್ಸೆ (ಕುಂದಾಪುರ): 'ಆರೋಗ್ಯಕರ ಪಂಚಾಯತ್' ವಿಭಾಗದಲ್ಲಿ ದ್ವಿತೀಯ ಸ್ಥಾನ (75 ಲಕ್ಷ ರೂ. ಬಹುಮಾನ).

ಮಡಾಮಕ್ಕಿ (ಹೆಬ್ರಿ): 'ಜಲ ಸಮೃದ್ಧ ಪಂಚಾಯತ್' ವಿಭಾಗದಲ್ಲಿ ದ್ವಿತೀಯ ಸ್ಥಾನ (75 ಲಕ್ಷ ರೂ. ಬಹುಮಾನ).

ಸಾಣೂರು (ಕಾರ್ಕಳ): 'ಸ್ವಾವಲಂಬಿ ಮೂಲಸೌಕರ್ಯ' ವಿಷಯದಲ್ಲಿ ತೃತೀಯ ಸ್ಥಾನ (50 ಲಕ್ಷ ರೂ. ಬಹುಮಾನ).

ಹಕ್ಲಾಡಿ (ಕುಂದಾಪುರ): 'ಸಾಮಾಜಿಕ ನ್ಯಾಯ ಮತ್ತು ಭದ್ರತೆ' ವಿಭಾಗದಲ್ಲಿ ತೃತೀಯ ಸ್ಥಾನ (50 ಲಕ್ಷ ರೂ. ಬಹುಮಾನ).

ಕೇರಳ ಚುನಾವಣೆ: ಮದ್ಯ ಮಾರಾಟ ನಿಷೇಧ

◆ **ಮಂಗಳೂರು:** ಕೇರಳ ರಾಜ್ಯದಲ್ಲಿ ನಡೆಯಲಿರುವ ವಿಧಾನಸಭಾ ಸಾರ್ವತ್ರಿಕ ಚುನಾವಣೆ-2026ರ ಸಂಬಂಧ ಮತದಾನದ ನಿಮಿತ್ತ ಏಪ್ರಿಲ್ 7 ಸಂಜೆ 5 ಗಂಟೆಯಿಂದ ಏಪ್ರಿಲ್ 9 ರಂದು ಮಧ್ಯರಾತ್ರಿ 12 ಗಂಟೆಯ ತನಕ ಮತ್ತು ಮತ ಎಣಿಕೆಯ ನಿಮಿತ್ತ ಮೇ 3 ರ ಮಧ್ಯರಾತ್ರಿ 12 ಗಂಟೆಯಿಂದ ಮೇ 4ರ ಮಧ್ಯರಾತ್ರಿ 12 ಗಂಟೆಯ ತನಕ ಮದ್ಯ ಮಾರಾಟ ನಿಷೇಧಿಸಲಾಗಿದೆ.



ಈ ದಿನಗಳಲ್ಲಿ ಕೇರಳ ರಾಜ್ಯಕ್ಕೆ ಹೊಂದಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ, ಬಂಟ್ವಾಳ, ಪುತ್ತೂರು ಮತ್ತು ಸುಳ್ಯ ತಾಲೂಕುಗಳ ಗಡಿಭಾಗದ 5 ಕಿ.ಮೀ. ವ್ಯಾಪ್ತಿಯಲ್ಲಿರುವ ಮದ್ಯದಂಗಡಿ/ಶೇಂದಿ ಅಂಗಡಿಗಳನ್ನು ಮುಚ್ಚುವಂತೆ ಹಾಗೂ ಈ ದಿನಗಳಂದು ನಿಷೇಧಿಸಿರುವ ಪ್ರದೇಶಗಳಲ್ಲಿ ಎಲ್ಲಾ ವಿಧದ ಮದ್ಯ ಮಾರಾಟವನ್ನು ನಿಷೇಧಿಸಿ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಆದೇಶ ಹೊರಡಿಸಿದ್ದಾರೆ.

ಉಡುಪಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗೃಹ ಬಳಕೆ ಸೇರಿದಂತೆ ಮತ್ತಿತರ ಅನಿಲ ವಿತರಣೆ ಕುರಿತ ಸಭೆಯಲ್ಲಿ ಸಂಸದ ಕೋಟ ಶ್ರೀನಿವಾಸ ಪೂಜಾರಿ

ಗೃಹ ಬಳಕೆ ಸಿಲಿಂಡರ್‌ಗಳ ವಿತರಣೆಯಲ್ಲಿ ಸಮಸ್ಯೆ ಉಂಟಾಗದಂತೆ ಕ್ರಮ ವಹಿಸಿ

◆ **ಉಡುಪಿ:** ಜಿಲ್ಲೆಯ ಗೃಹ ಬಳಕೆ ಗ್ರಾಹಕರಿಗೆ ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆಯಲ್ಲಿ ಯಾವುದೇ ರೀತಿಯ ಸಮಸ್ಯೆಗಳು ಉಂಟಾಗದಂತೆ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಹಾಗೂ ಸಿಲಿಂಡರ್ ವಿತರಣಾ ಸಂಸ್ಥೆಯವರಿಗೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗೃಹ ಬಳಕೆ ಸೇರಿದಂತೆ ಮತ್ತಿತರ ಅನಿಲ ವಿತರಣೆ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಗೃಹ ಬಳಕೆ ಸಿಲಿಂಡರ್‌ಗಳ ವಿತರಣೆ ಅದರಲ್ಲಿಯು ಏಕ ಸಿಲಿಂಡರ್ ಹೊಂದಿರುವವರಿಗೆ ವಿತರಣೆಯಲ್ಲಿ ಹೆಚ್ಚಿನ ಸಮಸ್ಯೆ ಉಂಟಾಗುತ್ತಿದೆ ಎಂದು ದೂರುಗಳು ಕೇಳಿ ಬರುತ್ತಿವೆ. ಈ ಹಿಂದೆ ಬೇಡಿಕೆಗೆ ಅನುಗುಣವಾಗಿ ಅನಿಲ ಲಭ್ಯವಾಗುತ್ತಿತ್ತು. ಪಶ್ಚಿಮ ಏಷ್ಯಾ ದೇಶಗಳಲ್ಲಿನ ಯುದ್ಧದ ಬಿಕ್ಕಟ್ಟಿನಿಂದಾಗಿ ಸಮರ್ಪಕವಾಗಿ ಅನಿಲಗಳು ಆಮದು ಆಗದೆ ಇರುವ ಹಿನ್ನೆಲೆ, ಸ್ವಲ್ಪ ತೊಂದರೆಗಳು ಉಂಟಾಗಿವೆ. ಆದರೆ ಗೃಹ ಬಳಕೆ ಅನಿಲಗಳ ವಿತರಣೆಯಲ್ಲಿ ಯಾವುದೇ ತೊಂದರೆ ಉಂಟಾಗದಂತೆ ವಿತರಿಸಲು ಸರಕಾರ ಬದ್ಧವಿದೆ. ಗೃಹ ಬಳಕೆ ವಿತರಣೆಯಲ್ಲಿ ಏಕ ಸಿಲಿಂಡರ್ ಹೊಂದಿರುವ ಗ್ರಾಹಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗೆ ಹಾಗೂ ವಿತರಣಾ ಸಂಸ್ಥೆಯವರಿಗೆ ಸೂಚಿಸಿದರು.

ಅನಿಲ ವಿತರಣೆ ಸಮರ್ಪಕವಾಗಿಲ್ಲ

ವಾಣಿಜ್ಯ ಬಳಕೆಯ ಗ್ರಾಹಕರಿಗೆ ಶೇ. 20 ರಷ್ಟು ಪ್ರಮಾಣದಲ್ಲಿ ಕೊಡುವ ಉದ್ದೇಶ ಸರ್ಕಾರ ಹೊಂದಿರುವ ಬಗ್ಗೆ ಸರಕಾರ ತಿಳಿಸಿದೆ. ವಿದ್ಯಾರ್ಥಿನಿಲಯಗಳಿಗೆ, ಆಸ್ಪತ್ರೆ, ಶಾಲೆ ಸೇರಿದಂತೆ ಮತ್ತಿತರ ಅತೀ ಅಗತ್ಯ ವಿರುವ ಸಂಸ್ಥೆಗಳಿಗೆ ಆದ್ಯತೆಯ ಮೇಲೆ ವಾಣಿಜ್ಯ ಸಿಲಿಂಡರ್‌ಗಳನ್ನು ವಿತರಣೆ ಮಾಡಬೇಕು ಎಂದ ಅವರು, ಮಣಿಪಾಲ ವ್ಯಾಪ್ತಿಯಲ್ಲಿ ವಾಣಿಜ್ಯ ಸಿಲಿಂಡರ್ ನೋಂದಾಯಿತ ಗ್ರಾಹಕರಿಗೆ ನೋಂದಣಿ ಮಾಡಿಕೊಂಡ ಸಂಸ್ಥೆಗಳಿಂದ



ಅನಿಲ ವಿತರಣೆ ಆಗುತ್ತಿಲ್ಲ. ಇದರಿಂದ ತೊಂದರೆ ಉಂಟಾಗುತ್ತಿದೆ. ನೋಂದಾಣಿಯನ್ನು ಇತರೆ ಸಂಸ್ಥೆಗಳಿಗೆ ವರ್ಗಾಯಿಸುವುದು ಅವಶ್ಯವಿದ್ದು, ಈ ಬಗ್ಗೆ ಅನಿಲ ಕಂಪನಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಲಾಗುವುದು ಎಂದರು.

ದರ ಹೆಚ್ಚಳ ಮಾಡಬಾರದು

ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ, ಮಾತನಾಡಿ, ವಾಹನಕ್ಕೆ ಬಳಕೆ ಮಾಡುವ ಎಲ್‌ಪಿಜಿ ಹಾಗೂ ಸಿಎನ್‌ಜಿ ಅನಿಲಗಳನ್ನು ಆಯಿಲ್ ಕಾರ್ಪೋರೇಶನ್ ಸಂಸ್ಥೆಗಳು ನಿಗದಿಪಡಿಸಿರುವ ದರದಲ್ಲಿಯೇ ವಿತರಿಸಬೇಕು. ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿವೆ. ಈ ಬಗ್ಗೆ ಸೂಕ್ತ ಕ್ರಮ ವಹಿಸಬೇಕು. ನಿಗದಿಪಡಿಸಿರುವ ಮೊತ್ತವನ್ನು ಹಾಗೂ ದಾಸ್ತನನ್ನು ತಮ್ಮ ವಿತರಣಾ ಕೇಂದ್ರದಲ್ಲಿ ಜನಸಾಮಾನ್ಯರಿಗೆ ಕಾಣುವ ರೀತಿಯಲ್ಲಿ ಪ್ರದರ್ಶಿಸಬೇಕು, ಒಂದೊಮ್ಮೆ ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ಹಣ ಪಡೆದಲ್ಲಿ ಅಂಥವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಪೆಟ್ರೋಲಿಯಂ ಪೂರೈಕೆಯಲ್ಲಿ ಸಮಸ್ಯೆ ಇಲ್ಲ

ಜಿಲ್ಲೆಯಲ್ಲಿ ಪೆಟ್ರೋಲ್ ಹಾಗೂ ಡಿಸೇಲ್ ವಿತರಣೆಯಲ್ಲಿ ಯಾವುದೇ ರೀತಿಯ ಸಮಸ್ಯೆಗಳು ಇಲ್ಲ. ಆದರೆ ಅನಧಿಕೃತವಾಗಿ ದಾಸ್ತಾನು ಮಾಡದಂತೆ ಎಚ್ಚರ ವಹಿಸಬೇಕು. ಜನರೇಟರ್‌ಗಳಿಗೆ ಹಾಗೂ ಮೀನುಗಾರಿಕಾ ಬೋಟ್‌ಗಳಿಗೆ, ನಿರಂತರವಾಗಿ ಕೊಂಡೊಯ್ಯುವವರಿಗೆ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಬೇಕು ಎಂದರು.

ಗೃಹ ಬಳಕೆ ಸಿಲಿಂಡರ್ ಗಳನ್ನು ಇತರೆ ಉದ್ದೇಶಕ್ಕೆ ಬಳಸದಂತೆ ನೋಡಿಕೊಳ್ಳಬೇಕು ಒಂದೊಮ್ಮೆ ಇತರೆ ಉದ್ದೇಶಕ್ಕೆ ಬಳಸಿದಲ್ಲಿ ಅಂತವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ಏಕ ಬಳಕೆ ಸಿಲಿಂಡರ್ ಹೊಂದಿರುವ ಗ್ರಾಹಕರುಗಳು, ಸಿಲಿಂಡರ್ ಪಡೆದ 25 ದಿನಗಳ ನಂತರ ಹಾಗೂ ಎರಡು ಸಿಲಿಂಡರ್ ಹೊಂದಿರುವ ಗ್ರಾಹಕರುಗಳು ಅನಿಲ ಪೂರೈಕೆ ಮಾಡಿದ 35 ದಿನಗಳ ನಂತರ ಬುಕಿಂಗ್ ಮಾಡಲು ಅವಕಾಶವಿದೆ. ಆದಷ್ಟು ಮನೆ ಮನೆಗೆ ಗೃಹ ಬಳಕೆಯ ಸಿಲಿಂಡರ್ ವಿತರಣೆ ಮಾಡುವುದರೊಂದಿಗೆ ಏಜನ್ಸಿ ಗಳ ಮುಂದೆ ಸಾಲುಗಟ್ಟಿ ನಿಲ್ಲದಂತೆ ನೋಡಿಕೊಳ್ಳಬೇಕು ಎಂದು ವಿತರಕರಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ಎ.ಎಸ್.ಪಿ ಸುಧಾಕರ್ ನಾಯಕ್, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪನಿರ್ದೇಶಕ ರವೀಂದ್ರ, ಗ್ಯಾಸ್ ಏಜೆನ್ಸಿ ಹಾಗೂ ಬಂಕುಗಳ ಮಾಲೀಕರುಗಳು, ವಿತರಕರುಗಳು ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 34° 26°
ಉಡುಪಿ 32° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 01, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಯುವ ಮತದಾರರಿಗೆ ಸ್ಫೂರ್ತಿಯಾದ ಎಂಕಪ್ಪನಾಯ್ಕ



ಪುಟ 6

ಟಾರ್ಪಲ್ ಹೊದ್ದು ನಿಂತಿದೆ ಅಜೆಕಾರಿನ ಆರೋಗ್ಯ ಕೇಂದ್ರ

ಇನ್ನಷ್ಟು ಕಾವೇರಿದ ಚುನಾವಣಾ ಕಣ... ಮತದಾರರ ಮನೆ ಮನಗಳತ್ತ ಸಾಗಿದೆ ಅಭ್ಯರ್ಥಿಗಳ ಹೆಜ್ಜೆ






ಕೇರಳ ವಿಧಾನ ಸಭಾ ಚುನಾವಣೆಗೆ ದಿನ ಗಣನೆ ಆರಂಭವಾಗಿರುವ ಬೆನ್ನಿಗೇ ಅಭ್ಯರ್ಥಿಗಳ ಪ್ರಚಾರ ಕಾರ್ಯ ಬಿರುಸು ಪಡೆಯುತ್ತಿದೆ. ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಕೆ. ಸುರೇಂದ್ರನ್, ಯುಡಿಎಫ್ ಅಭ್ಯರ್ಥಿ ಎ.ಕೆ.ಎಂ. ಅಶ್ರಫ್, ಕಾಸರಗೋಡು ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿ, ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಕ್ಷೇತ್ರದುದ್ದಕ್ಕೂ ಬಿರುಸಿನ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ.

ಸುತ್ತಮುತ್ತ

ಮತ್ತಷ್ಟು ಖಾರವಾದ ಕರಾವಳಿ: 40° ಸೆಲ್ಸಿಯೆಸ್ ಕಡೆಗೆ ತಾಪಮಾನ ಓಟ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಪಮಾನ ಮಂಗಳವಾರ 38 ಡಿಗ್ರಿ ಸೆಲ್ಸಿಯೆಸ್ ದಾಟಿದ್ದು, 40 ಡಿಗ್ರಿಯತ್ತ ಮುಖಮಾಡುತ್ತಿದೆ. ಮೋಡ ಬಿಸಿಲಿನ ನಡುವೆ ಅಸಾಧ್ಯ ಸೆಕೆ ನಾಗರಿಕರನ್ನು ಹೈರಾಣಾಗಿಸಿದೆ. ಈ ನಡುವೆ ಕರಾವಳಿಯಲ್ಲಿ ಬೇಸಗೆ ಮಳೆ ಸುರಿಯುವ ನಿರೀಕ್ಷೆಯೂ ಹುಸಿಯಾಗಿದ್ದು, ಜನತೆ ಬೆವರಿಳಿಸುತ್ತಲೇ ಮಳೆಗಾಗಿ ಕಾತರಿಸಿದ್ದಾರೆ. ಈ ನಡುವೆ ಕರಾವಳಿಯಲ್ಲಿ ಮಳೆಯ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮತ್ತೊಮ್ಮೆ ಹೇಳಿದೆ.

ನಿಯಂತ್ರಣಕ್ಕೆ ಬಂದ ಗ್ಯಾಸ್ ಟ್ರಬಲ್: ಎಲ್ಪಿಜಿ ಪೂರೈಕೆಗೆ ತುಸು ವೇಗ!

ಮಂಗಳೂರು: ಮಧ್ಯಪ್ರಾಚ್ಯ ಯುದ್ಧಾರಂಭದ ಬಳಿಕ ತೀವ್ರ ಸಂಕಷ್ಟಕ್ಕೊಳಗಾಗಿದ್ದ ವಾಣಿಜ್ಯ ಬಳಕೆ ಎಲ್‌ಪಿಜಿ ಪೂರೈಕೆ ವ್ಯವಸ್ಥೆ ಈಗ ತುಸು ಸುಧಾರಿಸಿದ್ದು, ಕರಾವಳಿ ಭಾಗದಲ್ಲಿ ಸಿಲಿಂಡರ್‌ಗಳ ಪೂರೈಕೆ ನಿಧಾನವಾಗಿ ವೇಗ ಪಡೆದುಕೊಳ್ಳುತ್ತಿದೆ. ಸದ್ಯ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇಡಿಕೆಯ ಶೇ.35ರಷ್ಟು ಪೂರೈಕೆ ಮಾಡಲಾಗುತ್ತಿದೆ. ಇದರೊಂದಿಗೆ ಸಿಲಿಂಡರ್ ಅಭಾವದಿಂದ ಕಂಗೆಟ್ಟಿದ್ದ ಉದ್ಯಮಗಳು ತುಸು ನಿಟ್ಟುಸಿರು ಬಿಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬೆಳ್ತಂಗಡಿ ತಾಲೂಕಿನಲ್ಲಿ ಮತ್ತೆ ಕಾಡಿದ ಕಾಡಾನೆ: ಆತಂಕದಲ್ಲಿ ನಾಗರಿಕರು

ಮಂಗಳೂರು: ಬೆಳ್ತಂಗಡಿ ತಾಲೂಕಿನ ಕೊಕ್ಕಡ ಗ್ರಾಮದಲ್ಲಿ ಕಾಡಾನೆಗಳ ಹಾವಳಿ ಮತ್ತೆ ಕಾಣಿಸಿಕೊಂಡಿದ್ದು, ನಾಗರಿಕರು ಭಯ ಭೀತರಾಗಿದ್ದಾರೆ. ಇಲ್ಲಿನ ಮುಂಡೂಪಳಿಕೆ ಪರಿಸರದಲ್ಲಿ ದಾಂಧಲೆ ನಡೆಸಿರುವ ಕಾಡಾನೆಗಳು ಕೃಷಿ ಭೂಮಿಗೂ ನುಗ್ಗಿ ಅಪಾರ ಪ್ರಮಾಣದಲ್ಲಿ ಬೆಳೆ ನಾಶಕ್ಕೆ ಕಾರಣವಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಈ ಬಗ್ಗೆ ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳುವಂತೆ ಇಲ್ಲಿನ ನಾಗರಿಕರು, ಕೃಷಿಕರು ಆಗ್ರಹಿಸಿದ್ದಾರೆ.

ಬಗೆಹರಿಯದ ಕೊಲ್ಲಿ ಬಿಕ್ಕಟ್ಟು: ವಿಮಾನ ಪ್ರಯಾಣಿಕರಿಗೆ ಇಕ್ಕಟ್ಟು

ಮಂಗಳೂರು: ಕೊಲ್ಲಿ ರಾಷ್ಟ್ರದಲ್ಲಿ ಕಾಣಿಸಿಕೊಂಡಿರುವ ಬಿಕ್ಕಟ್ಟಿನಿಂದ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸ್ಥಗಿತವಾಗಿರುವ ಕೆಲವು ವಿಮಾನ ಸಂಚಾರ ಇನ್ನೂ ಪುನರಾರಂಭಗೊಂಡಿಲ್ಲ, ಪ್ರಯಾಣಿಕರು ಇನ್ನೂ ಸಂಕಷ್ಟ ಎದುರಿಸುತ್ತಿದ್ದಾರೆ.

ಕಾಸರಗೋಡು ಮುಡಿಗೆ ಮತ್ತೊಂದು ಗರಿ
ಊರಿಗೆ ಸೋಲಾರ್! ಇಲೆಕ್ಟ್ರಿಕ್ ವಾಹನಕ್ಕೆ ಸಹಕಾರಿ ಸಾಥ್

ಕಾಸರಗೋಡು: ಈ ಭಾಗದ ಜನತೆಯ ಬಹುನಿರೀಕ್ಷಿತ ಯೋಜನೆಯೊಂದು ಈಗ ಕಾಸರಗೋಡು ಜಿಲ್ಲೆಯಲ್ಲಿ ಉದ್ಘಾಟನೆಗೆ ಸರ್ವ ರೀತಿಯಲ್ಲಿ ಸಿದ್ಧಗೊಳ್ಳುತ್ತಿದೆ.

ಕಾಸರಗೋಡು ಜಿಲ್ಲಾ ಸಹಕಾರಿ ಆಸ್ಪತ್ರೆ ಸಂಘದ ಆಶ್ರಯದಲ್ಲಿ ಸೋಲಾರ್ ಆಧಾರಿತ ಇಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಸ್ಟೇಷನ್ ಉದ್ಘಾಟನೆಗೆ ಸಜ್ಜಾಗುತ್ತಿದ್ದು ಇಲೆಕ್ಟ್ರಿಕ್ ವಾಹನಗಳ ಮಾಲಿಕರಿಗೆ ಬೂಸ್ಟರ್ ಡೋಸ್ ಸಿಕ್ಕಿದಂತಾಗಿದೆ.

ಮೂರು ಕಡೆಗಳಲ್ಲಿ ಸ್ಥಾಪನೆ

ಕಾಸರಗೋಡು ಜಿಲ್ಲಾ ಸಹಕಾರಿ ಆಸ್ಪತ್ರೆ, ಕುಂಬಳೆ, ಚೆಂಗಳ ಈ ಮೂರು ಕಡೆಗಳ ಸಹಕಾರಿ ವಲಯದ ಆಸ್ಪತ್ರೆಗಳಲ್ಲಿ 210 ಕೆಡಬ್ಲ್ಯೂ ಸೋಲಾರ್ ಪ್ಯಾನಲ್ ಮತ್ತು 141 ಕೆಡಬ್ಲ್ಯೂ ಚಾರ್ಜಿಂಗ್ ಯಂತ್ರ ಸ್ಥಾಪಿಸಲಾಗಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಆರ್ಥಿಕ ಸಹಕಾರದೊಂದಿಗೆ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ.

ಇದಲ್ಲದೆ ಕೊಯಂಮತ್ತೂರು ಕೇಂದ್ರವಾಗಿ ಕಾರ್ಯಾಚರಿಸುತ್ತಿರುವ ಟೆಕ್ 7 ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆಯು ಸೋಲಾರ್ ಇಲೆಕ್ಟ್ರಿಕ್ ವೆಹಿಕಲ್ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಿದೆ.

ತೃಶೂರು ಕೇಂದ್ರವಾಗಿ ಕಾರ್ಯವೆಸಗುತ್ತಿರುವ ಟೀಂ ಕೋ – ಆಪರೇಟಿವ್ ಕನ್ಸಲ್ಟೆನ್ಸಿ ಆಗಿದೆ. ಕಾಸರಗೋಡು ಕೇಂದ್ರವಾಗಿ ಕಾರ್ಯವೆಸಗುತ್ತಿರುವ ನ್ಯೂ ಪವರ್ ಟೆಕ್ ಯೋಜನೆಯ ಕಾಮಗಾರಿ ನಡೆಸಿರುವುದಾಗಿದೆ.



ಕನಿಷ್ಠ ದರದಲ್ಲಿ ವಿದ್ಯುತ್ ಚಾರ್ಜ್

ಅನರ್ಟ್‌ನ ಸಬ್ಸಿಡಿಯು ಈ ಯೋಜನೆಗೆ ಲಭಿಸಲಿದೆ. ಕಾಸರಗೋಡು ಜಿಲ್ಲೆಯಲ್ಲಿ ವಿದ್ಯುತ್ ವಾಹನ ಮಾಲಕರಿಗೆ ಕನಿಷ್ಠ ದರದಲ್ಲಿ ವಿದ್ಯುತ್ ಚಾರ್ಜ್ ಮಾಡಲು ಸಾಧ್ಯವಾಗಲಿದೆ.

ಚಾರ್ಜಿಂಗ್ ಸ್ಟೇಷನ್ ಉದ್ಘಾಟನೆಗೆ ಸಿದ್ಧತೆ

ಸಹಕಾರಿ ವಲಯದಲ್ಲಿ ಪ್ರಥಮ ಯೋಜನೆ

ಕಾಸರಗೋಡು ಜಿಲ್ಲೆಯ ಸಹಕಾರಿ ವಲಯದಲ್ಲಿ ಪ್ರಥಮ ಯೋಜನೆ ಇದಾಗಿದೆ. ಮಾತ್ರವಲ್ಲದೆ ರಾಜ್ಯದ ಸಹಕಾರಿ ಆಸ್ಪತ್ರೆಗಳಲ್ಲಿ ಮೊದಲನೇ ಉದ್ಯಮವೂ ಇದೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಜಿಲ್ಲಾ ಸಹಕಾರಿ ಆಸ್ಪತ್ರೆ ಸಂಘದ ಅಧೀನದಲ್ಲಿರುವ ಜಿಲ್ಲಾ ಸಹಕಾರಿ ಆಸ್ಪತ್ರೆ, ಕುಂಬಳೆ ಮತ್ತು ಚೆಂಗಳದ ಆಸ್ಪತ್ರೆಗಳಲ್ಲಿ ಇಲೆಕ್ಟ್ರಿಕ್ ವೆಹಿಕಲ್ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಲಾಗಿದ್ದು, ಉದ್ಘಾಟನೆಗೆ ಕಾಯುತ್ತಿದೆ.

ಕಾರ್ಕಳ ಪುರಸಭಾ ವ್ಯಾಪ್ತಿಯಲ್ಲಿ ಸಮಸ್ಯೆ
worry ಮೂಡಿಸಿದೆ ಕುಸಿದಿರುವ ಮೋರಿ
ಸಂಕಷ್ಟದಲ್ಲಿ ಶಾಲಾ ಮಕ್ಕಳು, ನಾಗರಿಕರು

ಕಾರ್ಕಳ: ಕಾರ್ಕಳ ಪುರಸಭಾ ವ್ಯಾಪ್ತಿಯ ಆನೆಕೆರೆ ಕೃಷ್ಣ ಮಂದಿರ –ಕುಂಟಲ್ಪಾಡಿ ರಸ್ತೆ ಬೈಲಡ್ಕ ಬಾಲಾಜಿ ಅಯ್ಯಪ್ಪ ಮಂದಿರ ಬಳಿ ಮೋರಿ ಸಂಪೂರ್ಣ ಕುಸಿದಿದ್ದು, ಶಾಲಾ ಮಕ್ಕಳಿಗೆ, ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಯಾಗಿದೆ. ಕೂಡಲೇ ಪುರಸಭೆ ಇತ್ತ ಗಮನ ಹರಿಸಿ ಕುಸಿದಿರುವ ಮೋರಿ ಬದಲಾಯಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲ ಮಾಡಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಇಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದೆ ರಸ್ತೆ ಬದಿ ಮೋರಿಗಳಲ್ಲಿ ಮಣ್ಣು, ಕಸ ತುಂಬಿ, ನೀರು ಸರಾಗವಾಗಿ ಚರಂಡಿಯಲ್ಲಿ ಹರಿಯದೆ ರಸ್ತೆಯ ಮೇಲೆ ಹರಿಯುತ್ತಿದೆ. ಕಾರ್ಕಳ ಪುರಸಭಾ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ವೇಗದಲ್ಲಿ ನಡೆಯುತ್ತಿಲ್ಲ ವೆಂಬ ಆರೋಪಗಳು ಸಾರ್ವಜನಿಕರಿಂದ ಕೇಳಿಬಂದಿವೆ.

ಪುರಸಭೆಗೆ ಮನವಿ

ಮಳೆಗಾಲದಲ್ಲಿ ಚರಂಡಿ ನೀರು ರಸ್ತೆ ಮೇಲೆಯೇ ಹರಿದು ಸಾರ್ವಜನಿಕರಿಗೆ, ವಾಹನ ಚಾಲಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಮಳೆಗಾಲದ ಮೊದಲು ಪುರಸಭೆ ಎಚ್ಚೆತ್ತು ನಗರದ ಎಲ್ಲಾ ಚರಂಡಿಗಳನ್ನು ಸ್ವಚ್ಛಗೊಳಿಸಬೇಕು ಅಲ್ಲದೆ ರಸ್ತೆ ಬದಿಯಲ್ಲಿ ಸಾರ್ವಜನಿಕರು ಹಾಗೂ ವಾಹನ ಚಾಲಕರು ಕಸ ಎಸೆಯುತ್ತಿದ್ದು, ಇದಕ್ಕೆ ಅಲ್ಲಲ್ಲಿ ಸಿಸಿ ಕ್ಯಾಮೆರಾವನ್ನು ಅಳವಡಿಸಬೇಕೆಂದು ಪುರಸಭಾ ಮಾಜಿ ಸದಸ್ಯ ಪ್ರಕಾಶ್ ರಾವ್ ಪುರಸಭೆಗೆ ಮನವಿ ನೀಡಿದ್ದಾರೆ.



ಮನವಿಗೂ ಇಲ್ಲಿ ಸಿಕ್ಕಿಲ್ಲ ಸ್ಪಂದನೆ

ಮಳೆ ಬಂದಾಗಲೆಲ್ಲ ಪ್ರತಿಬಾರಿಯೂ ಇದೇ ಸಮಸ್ಯೆಯಾಗುತ್ತದೆ. ಇದನ್ನು ಸರಿಪಡಿಸಿಕೊಡಿ ಎಂದು ಹಲವು ಬಾರಿ ಪುರಸಭೆಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ...

● ಸುನಿಲ್ ಕೋಟ್ಯಾನ್, ಪುರಸಭಾ ಮಾಜಿ ಸದಸ್ಯರು, ಕುಂಟಲ್ಪಾಡಿ, ಕಾರ್ಕಳ

ಕಚ್ಚಾವಸ್ತು ಬೆಲೆಯಲ್ಲಿ ಹೆಚ್ಚಳ | ಸಂಕಷ್ಟದ ಹಾದಿಯಲ್ಲಿ ಉದ್ಯಮ
ಸೋಡಾ, ಸಾಫ್ಟ್ ಡ್ರಿಂಕ್‌ಗಳ ಬೆಲೆ ಏರಿಕೆ

ಕಾಸರಗೋಡು: ಕಚ್ಚಾ ವಸ್ತುಗಳ ಬೆಲೆಯಲ್ಲಿ ಗಿರುವ ಭಾರೀ ಹೆಚ್ಚಳ, ಕೈಸುಡುತ್ತಿರುವ ಇತರ ಉತ್ಪಾದನಾ ವೆಚ್ಚಗಳ ಹಿನ್ನೆಲೆಯಲ್ಲಿ ಸೋಡಾ ಹಾಗೂ ಸಾಫ್ಟ್ ಡ್ರಿಂಕ್ ಬೆಲೆ ಏರಿಕೆ ಮಾಡಲು ನಿರ್ಧರಿಸಲಾಗಿದೆ ಎಂದು ಮ್ಯಾನುಫ್ಯಾಕ್ಚರ್ಸ್ ಅಸೋಸಿಯೇಶನ್ ಆಫ್ ಸೋಡಾ ಆ್ಯಂಡ್ ಸಾಫ್ಟ್ ಡ್ರಿಂಕ್ಸ್ ಕೇರಳ ಹೇಳಿದೆ.

ಮಂಗಳವಾರ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅಸೋಸಿಯೇಶನ್‌ನ ಪದಾಧಿಕಾರಿಗಳು, ಸದ್ಯದ ಬೆಲೆ ಏರಿಕೆಯಿಂದಾಗಿ ಈ ಉದ್ಯಮವನ್ನು ಮುಂದಕ್ಕೆ ಕೊಂಡೊಯ್ಯಲು ಸಾಧ್ಯವಾಗುತ್ತಿಲ್ಲ. ಅನಿವಾರ್ಯವಾಗಿ ಇದರ ಬೆಲೆಯನ್ನು ಅಲ್ಪ ಪ್ರಮಾಣದಲ್ಲಿ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದು ಅವರು ಹೇಳಿದ್ದಾರೆ.



ಇನ್ನುಮುಂದೆ ಸೋಡಾದ ಚಿಲ್ಲರೆ ಮಾರಾಟ ಬೆಲೆ, 10 ರೂ. ಮತ್ತು ಸಾಫ್ಟ್ ಡ್ರಿಂಕ್ಸ್‌ನ ಚಿಲ್ಲರೆ ಮಾರಾಟ ಬೆಲೆಯು 15 ರೂ. ಆಗಲಿದೆ. ಸುದ್ದಿಗೋಷ್ಠಿಯಲ್ಲಿ ಎ.ವಿ. ಶಶಿಧರನ್, ಅಬ್ದುಲ್ ಸತ್ತಾರ್, ಅನ್ವರ್, ಸಿ. ಮೊಹಮ್ಮದ್, ಸಿ.ಅಬ್ದುಲ್ ರಹಮಾನ್ ಉಪಸ್ಥಿತರಿದ್ದರು.

ಸೋಡಾಗೆ 10 ರೂ., ಸಾಫ್ಟ್‌ಡ್ರಿಂಕ್‌ಗೆ 15 ರೂ.

ಇದುವರೆಗೆ ಪ್ಲೇನ್ ಸೋಡಾ ಪೆಟ್ಟಿಗೆಯೊಂದಕ್ಕೆ 120 ರೂ. ಇತ್ತು. ಆದರೆ ಏಪ್ರಿಲ್ 2ರಿಂದ ಇದರ ಬೆಲೆಯು 140 ರೂ. ಆಗಲಿದೆ. ಇದೇ ರೀತಿ ಇದುವರೆಗೆ ಸಾಫ್ಟ್ ಡ್ರಿಂಕ್ಸ್ ಒಂದರ ಪೆಟ್ಟಿಗೆಗೆ 180 ರೂ. ಇತ್ತು. ಆದರೆ ಏಪ್ರಿಲ್ 2ರಿಂದ ಇದರ ಬೆಲೆಯು 220 ರೂ. ಆಗಲಿದೆ. ಸೋಡಾದ ಚಿಲ್ಲರೆ ಮಾರಾಟ ಬೆಲೆಯು 10 ರೂ. ಮತ್ತು ಸಾಫ್ಟ್ ಡ್ರಿಂಕ್ಸ್‌ನ ಚಿಲ್ಲರೆ ಮಾರಾಟ ಬೆಲೆಯು 15 ರೂ. ಆಗಲಿದೆ.

ಗುಡ್‌ಫ್ರೈಡೆಗೆ ಯಶವಂತಪುರ – ಕಣ್ಣೂರು ನಡುವೆ ವಿಶೇಷ ರೈಲು

ಸುಬ್ರಹ್ಮಣ್ಯ: ಗುಡ್ ಫ್ರೈಡೆ, ವಾರಾಂತ್ಯದ ಹಿನ್ನೆಲೆಯಲ್ಲಿ ಬೆಂಗಳೂರು ಯಶವಂತಪುರ ಮತ್ತು ಕೇರಳದ ಕಣ್ಣೂರು ನಡುವೆ ಮಂಗಳೂರು ಜಂಕ್ಷನ್ ಮಾರ್ಗವಾಗಿ ಒಂದು ಟ್ರಿಪ್ ವಿಶೇಷ ರೈಲು ಓಡಿಸಲು ನೈಋತ್ಯ ರೈಲ್ವೆ ಸಿದ್ಧತೆ ನಡೆಸಿದೆ.

ರೈಲು ಸಂಖ್ಯೆ 06551 ಯಶವಂತಪುರ –ಕಣ್ಣೂರು ವಿಶೇಷ ಎಕ್ಸ್‌ಪ್ರೆಸ್ ರೈಲು ಏ.2 ಬೆಳಿಗ್ಗೆ 11.50ಕ್ಕೆ ಯಶವಂತಪುರ ದಿಂದ ಹೊರಟು, ಏ.3ರ ಮುಂಜಾನೆ 3 ಗಂಟೆಗೆ ಕಣ್ಣೂರು ತಲುಪಲಿದೆ. ರೈಲು ಸಂಖ್ಯೆ 06552 ಕಣ್ಣೂರುಯಶವಂತಪುರ ರೈಲು ಏ. 3 ಬೆಳಿಗ್ಗೆ 8.45ಕ್ಕೆ ಕಣ್ಣೂರಿನಿಂದ ಹೊರಟು, ಅದೇ ದಿನ ರಾತ್ರಿ 9.30ಕ್ಕೆ ಯಶವಂತಪುರ ತಲುಪಲಿದೆ.

ಅಧೋಗತಿಯಲ್ಲಿದೆ ಇಲ್ಲಿ ಶ್ರೀಲಂಕಾ ಪುನರ್ ವಸತಿದಾರರ ಮನೆಗಳ ಪರಿಸ್ಥಿತಿ
ಶ್ರಮಿಕರ ಬವಣೆಯ ಬದುಕಿಗೆ ಸಿಗದೇ ಭದ್ರತೆ?

■ ಮಿಥುನ್ ಕರ್ಲಪ್ಪಾಡಿ

ಸುಳ್ಯ: ಶ್ರೀಲಂಕಾ ಪುನರ್ ವಸತಿದಾರರಾಗಿ ಬಂದು ಇಲ್ಲಿನ ರಬ್ಬರ್ ತೋಟಗಳಲ್ಲಿ ಟ್ಯಾಪಿಂಗ್ ಕೆಲಸ ನಿರ್ವಹಿಸುತ್ತಿರುವ ನಿವಾಸಿಗಳ ಮನೆಗಳು ಇಂದೋ ನಾಳೆಯೋ ಎಂಬ ಸ್ಥಿತಿಯಲ್ಲಿ ಅಪಾಯದಲ್ಲಿದ್ದು, ಅವರೀಗ ಭವಿಷ್ಯದ ಚಿಂತೆಯಲ್ಲಿದ್ದಾರೆ.

1964ರಲ್ಲಿ ಭಾರತಕ್ಕೆ ಬಂದಿದ್ದಾರೆ

ಈ ಹಿಂದೆ 1964ರಲ್ಲಿ ಭಾರತದ ಪ್ರಧಾನಿ ದಿ.ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಶ್ರೀಲಂಕಾ ಪ್ರಧಾನಿ ನಡುವೆ ನಡೆದ ಒಪ್ಪಂದದ ಪ್ರಕಾರ ಶ್ರೀಲಂಕಾದಿಂದ ಭಾರತದ ತಮಿಳುನಾಡಿಗೆ ಪುನರ್ ವಸತಿದಾರರಾಗಿ ಇವರು ಆಗಮಿಸಿದ್ದರು.



ಸಂಗಮ ವಿಶೇಷ

ಆ ಬಳಿಕ ಕೆಎಫ್‌ಡಿಸಿ ಕರ್ನಾಟಕಕ್ಕೂ ಅವರನ್ನು ಪುನರ್ ವಸತಿದಾರರಾಗಿ ಕರೆಯಲಾಗಿದ್ದು, ಒಪ್ಪಂದದ ಪ್ರಕಾರ ಒಟ್ಟು 924 ಕುಟುಂಬಗಳು ಸುಳ್ಯ ತಾಲೂಕಿನ ನಾನಾ ಭಾಗಗಳಿಗೆ ಪುನರ್ ವಸತಿದಾರರಾಗಿ ಬಂದು ನೆಲೆಸಿದ್ದರು. ಇದೀಗ ಇವರು ಸೌಕರ್ಯದಿಂದ ವಂಚಿತರಾಗಿದ್ದು ಅವರ ಪುನಶ್ಚೇತನಕ್ಕೆ ಮಾನವ ಹಕ್ಕು ಆಯೋಗ, ಸರ್ಕಾರ ಸೌಲಭ್ಯ ಕಲ್ಪಿಸಬೇಕಿದೆ. »ಪುಟ 6

5000ಕ್ಕೂ ಅಧಿಕ ಮಂದಿ

ಸುಳ್ಯ ವ್ಯಾಪ್ತಿಯ ವಿಭಾಗಗಳಾದ ಸುಳ್ಯ, ಐವರ್ನಾಡು, ಸುಬ್ರಹ್ಮಣ್ಯ ವ್ಯಾಪ್ತಿಯಲ್ಲಿ ಸುಮಾರು 42 ಕಾಲೋನಿಗಳಲ್ಲಿ ಸುಮಾರು 5000ಕ್ಕೂ ಅಧಿಕ ಮಂದಿ ವಾಸಿಸುತ್ತಿದ್ದು, ಈ ಕಾಲೋನಿಗಳಲ್ಲಿರುವ ಮನೆಗಳು ದುರಸ್ತಿಯಾಗದೆ ಕುಸಿದು ಬೀಳುವ ಹಂತದಲ್ಲಿವೆ.

ಕಲ್ಲುಗುಂಡಿ, ಗೂನಡ್ಕ, ತೊಡಿಕಾನ, ಅರಂತೋಡು...

ಸುಳ್ಯ ತಾಲೂಕಿನ ಅರಂತೋಡು, ಕಲ್ಲುಗುಂಡಿ, ಗೂನಡ್ಕ, ತೊಡಿಕಾನ, ಅಜ್ಜಾವರ ಬರ್ಪಣೆ, ಕಂದಡ್ಕ, ಕೂಟೇಲು, ಸೋಣಂಗೇರಿ, ಐವರ್ನಾಡು, ನಿಡುಬೆ, ಸುಬ್ರಹ್ಮಣ್ಯ ಸೇರಿದಂತೆ ನಾನಾ ಭಾಗಗಳಲ್ಲಿ ಗುಂಪು ಮನೆಗಳಿವೆ. ಅಜ್ಜ, ಅಪ್ಪನ ಬಳಿಕ ಇದೀಗ ಅವರ ಮಕ್ಕಳು ಟ್ಯಾಪಿಂಗ್ ಕೆಲಸಗಳನ್ನು ನಿರ್ವಹಿಸುತ್ತಿದ್ದು, ಅವರ ಮನೆಗಳು ಇದೀಗ ದುಃಸ್ಥಿಯಲ್ಲಿದೆ. ಈ ಕುರಿತು ಕಾಲೋನಿ ಮನೆಗಳ ಸೂಪರ್ ವೈಸರ್‌ಗಳನ್ನು ಸಂಪರ್ಕಿಸಿದಾಗ ದೂರವಾಣಿ ಕರೆಗೆ ಲಭ್ಯವಾಗಿಲ್ಲ.

ಸುತ್ತಮುತ್ತ

ಪದ್ಯಾಣ ಬ್ರಹ್ಮಕಲಶ, ಚಂಡಿಕಾ ಯಾಗ, ಪಾರಾಯಣ



ವಿಟ್ಲ: ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಬ್ರಹ್ಮಕಲಶೋತ್ಸವ ಹಿನ್ನೆಲೆ ಚಂಡಿಕಾ ಯಾಗ ಮಂಗಳವಾರ ನಡೆಯಿತು. ಬೆಳಗ್ಗೆ ಪೂಜೆ, ಗಣಪತಿ ಹೋಮ, ಅಂಕುರ ಪೂಜೆ, ವೇದ ಪಾರಾಯಣಾದಿಗಳು, ಕ್ಷಾಳನಾದಿ ಸಪ್ತಶುದ್ಧಿ, ಪ್ರೋಕ್ತ ಪ್ರಾಯಶ್ಚಿತ್ತ ಹೋಮಗಳು, ಹೋಮ ಕಲಶಾಭಿಷೇಕ ಬಳಿಕ ಚಂಡಿಕಾ ಯಾಗ ನಡೆಯಿತು. ವೇದಮೂರ್ತಿ ಸುಬ್ರಹ್ಮಣ್ಯ ಕಾರಂತ, ಸುರತ್ಕಲ್ ಅವರಿಂದ ಸತ್ಸಂಗ, ಶ್ರೀ ಭಗವತಿ ಆರಾಧನೆ, ಸಾಮೂಹಿಕ ಸೌಂದರ್ಯ ಲಹರಿ ಪಾರಾಯಣ ನಡೆಯಿತು. ಪ್ರಸಿದ್ಧ ಕಲಾವಿದರಿಂದ ಶಿವಭಕ್ತ ವೀರಮಣಿ ಯಕ್ಷಗಾನ ತಾಳಮದ್ದಳೆ ಜರುಗಿತು. ಹಿಮ್ಮೇಳದಲ್ಲಿ ಚಿನ್ಮಯ ಭಟ್ ಕಲ್ಲಡ್ಕ, ಹೇಮಸ್ವಾತಿ ಕುರಿಯಾಜೆ, ಪದ್ಯಾಣ ಶಂಕರನಾರಾಯಣ ಭಟ್, ಚೈತನ್ಯ ಕೃಷ್ಣ ಪದ್ಯಾಣ, ವೇಣುಗೋಪಾಲ ಮಾಂಬಾಡಿ, ಮುಮ್ಮೇಳದಲ್ಲಿ ಡಾ.ಎಂ. ಪ್ರಭಾಕರ ಜೋಷಿ, ವಾಸುದೇವ ರಂಗ ಭಟ್, ಜಯಪ್ರಕಾಶ್ ಶೆಟ್ಟಿ ಪೆರ್ಮುದೆ, ಉಜಿರೆ ಅಶೋಕ ಭಟ್ ಭಾಗವಹಿಸಿದ್ದರು.

ಇಂದು ಪವಮಾನ ಯಾಗ ನಿರ್ವಹಣೆಗಾಗಿ ಸಭೆ

ಮುಲ್ಕಿ: ಮೇ 2ರಂದು ನಡೆಯಲಿರುವ ಪವಮಾನ ಯಾಗದ ಯಶಸ್ವಿ ನಿರ್ವಹಣೆಗಾಗಿ ಪೂರ್ವಭಾವಿ ಸಭೆಯು ಏ.1ರಂದು ಸಂಜೆ 5ಕ್ಕೆ ಪಡುಪಣಂಬೂರು ಮುಲ್ಕಿ ಅರಮನೆಯ ಧರ್ಮ ಚಾವಡಿಯಲ್ಲಿ, ಗುರುಪುರ ವಜ್ರದೇಹಿ ಮಠದ ರಾಜಶೇಖರನಂದ ಸ್ವಾಮೀಜಿ, ಉಪಸ್ಥಿತಿಯಲ್ಲಿ ಸಭೆಯನ್ನು ಆಯೋಜಿಸಲಾಗಿದೆ. ಸಭೆಯಲ್ಲಿ ಯಾಗದ ತಯಾರಿ, ಜವಾಬ್ದಾರಿಗಳ ಹಂಚಿಕೆ ವಿಚಾರವಾಗಿ ಚರ್ಚಿಸಲಾಗುವುದು ಎಂದು ಪ್ರಾಣ ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ಏ.2, 3: ಅಗರಿಮಾಡದಲ್ಲಿ ಬ್ರಹ್ಮಕಲಶ ಉತ್ಸವ

ಬಂಟ್ವಾಳ: ಸಜೀಪಮಾಗಣೆ ಶ್ರೀ ನಡಿಯೇಳು ದೈವಂಗಳು ಶ್ರೀ ಉಳ್ಳಾಲ್ತಿ ಶ್ರೀ ನಾಲ್ಕೈತ್ತಾಯ ಕ್ಷೇತ್ರದ ಆಲಾಡಿಸ್ಥಾನ ಶಿಲಾಮಯವಾಗಿ ನಿರ್ಮಾಣಗೊಂಡ ಆಗರಿಮಾಡದಲ್ಲಿ ಬ್ರಹ್ಮಕಲಶ ಉತ್ಸವವು ಏ.2 ಮತ್ತು 3ಕ್ಕೆ ಬ್ರಹ್ಮಶ್ರೀ ನೀಲೇಶ್ವರ ಕೆ. ಉಚ್ಚಿಲತ್ತಾಯ ಪದ್ಮನಾಭ ತಂತ್ರಿಗಳ ಮಾರ್ಗದರ್ಶನ ಸಜೀಪ ಮಾಗಣೆ ತಂತ್ರಿ ಎಂ. ಸುಬ್ರಹ್ಮಣ್ಯ ಭಟ್ ಅವರ ನೇತೃತ್ವದಲ್ಲಿ ನಡೆಯಲಿದೆ. ಏ.2ರಂದು ಪ್ರಾರ್ಥನೆ, ವಿವಿಧ ವೈದಿಕ ವಿಧಾನ ಅನ್ನಸಂತರ್ಪಣೆ ನಡೆಯಲಿದೆ. ಏ.3ರಂದು ಬೆಳಗ್ಗೆ ಗಣಯಾಗ, ಶಿಖರ ಪ್ರತಿಷ್ಠೆ ಕಲಶ ಪೂಜೆ, ಪ್ರತಿಷ್ಠಾ ಹೋಮ, ಪುನರ್ ಪ್ರತಿಷ್ಠೆ ಬ್ರಹ್ಮ ಕಲಶಾಭಿಷೇಕ, ಪರ್ವ ಸೇವೆ, ಪ್ರಸಾದ ವಿತರಣೆ, ಅನ್ನದಾನ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಆಟೋಗಳಿಗೆ ಎಲ್‌ಪಿಜಿ ಸಮಸ್ಯೆ

ಮಂಗಳೂರು: ನಗರ ಸೇರಿದಂತೆ ಜಿಲ್ಲೆಯ ವಿವಿಧ ಕಡೆಗಳಲ್ಲಿ ಆಟೋ ಎಲ್‌ಪಿಜಿ ಸಮಸ್ಯೆಯಿಂದ ರಿಕ್ಷಾ ಚಾಲಕರು ಸೇರಿದಂತೆ ದುಡಿಯುವ ವರ್ಗ ಸಂಕಷ್ಟಕ್ಕೆ ಸಿಲುಕಿದೆ. ಸರಕಾರ ಈ ಬಗ್ಗೆ ಗಮನ ಹರಿಸಿ ಕ್ರಮ ವಹಿಸಬೇಕೆಂದು ಸೋಶಿಯಲ್ ಡೆಮೊಕ್ರಾಟಿಕ್ ಟ್ರೇಡ್ ಯೂನಿಯನ್ (ಎಸ್‌ಡಿಟಿಯು) ಸರಕಾರವನ್ನು ಒತ್ತಾಯಿಸಿದೆ.
ಆಟೋ ಗ್ಯಾಸ್ ಕೊರತೆಯ ಜತೆಗೆ ಬೆಲೆ ಏರಿಕೆಯಿಂದಾಗಿ ರಿಕ್ಷಾ ಚಾಲಕರು ಮಾತ್ರವಲ್ಲದೆ ಎಲ್ಲಾ ಕ್ಷೇತ್ರದ ದುಡಿಯುವ ವರ್ಗ ತೊಂದರೆ ಅನುಭವಿಸುತ್ತಿದೆ. ಅಧಿಕೃತ ಸುತ್ತೋಲೆಯ ಹೊರತಾಗಿಯೂ ಕೆಲವು ಗ್ಯಾಸ್ ಪಂಪ್‌ಗಳು ಬೇಕಾಬಿಟ್ಟಿ ಬೆಲೆ ಏರಿಕೆ ಮಾಡಿ ಚಾಲಕರಿಂದ ಸುಲಿಗೆ ಮಾಡುತ್ತಿವೆ. ಗೃಹಬಳಕೆ ಹಾಗೂ ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್‌ಗಳು ಕೂಡಾ ಅಧಿಕ ಬೆಲೆಗೆ ಮಾರಾಟವಾಗುತ್ತಿವೆ ಎಂದು ಎಸ್‌ಡಿಟಿಯು ಮಂಗಳೂರು ನಗರ ಜಿಲ್ಲಾ ಅಧ್ಯಕ್ಷ ರಹಿಮಾನ್ ಬೋಳಿಯಾರ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು. ಮಂಗಳೂರು ಗ್ರಾಮಾಂತರ ಅಧ್ಯಕ್ಷ ಸಲೀಂ ಜಿ.ಕೆ., ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಲೀಂ ಅಲಾಡಿ, ಜಿಲ್ಲಾ ಉಪಾಧ್ಯಕ್ಷ ಫಿಲಿಫ್ ಹೆನ್ರಿ ಡಿಸೋಜ, ಮುಲ್ಕಿ ಘಟಕದ ಅಧ್ಯಕ್ಷ ವಿಜು ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಲ್ಯಾಸ್ ಬೆಂಗ್ರೆ ಇದ್ದರು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದಲ್ಲಿ 'ಮಾತೃಸಂಗಮ' ಕಾರ್ಯಕ್ರಮ

ದೇವಳ ಆತ್ಮೋನ್ನತಿಗೆ ಪೂರಕ: ಶ್ರೀ ಮಾತಾನಂದಮಯೀ

ವಿಟ್ಲ: ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯುತ್ತಿರುವ ಬ್ರಹ್ಮಕಲಶೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ ಮಾತೃಸಂಗಮ ಕಾರ್ಯಕ್ರಮ ನಡೆಯಿತು.

ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಂನ ಶ್ರೀ ಮಾತಾನಂದಮಯೀ ಕಾರ್ಯಕ್ರಮ ಉದ್ಘಾಟಿಸಿ, ಸಮಾಜ ಧೀಶಕ್ತಿಯಿಂದ ಮುಂದುವರಿಯಬೇಕು. ತಾಯಿ ಮಗುವಿನ ಸಂಬಂಧ ಕ್ಷೀಣವಾಗುತ್ತಿರುವ ಹೊತ್ತಿನಲ್ಲಿ ತಳಪಾಯ ಗಟ್ಟಿ ಇರುವಂತ ಸಂಬಂಧ ಸೃಷ್ಟಿಯಾಗಬೇಕು. ತಾಯಿಬೇರು ಗಟ್ಟಿ ಇರಬೇಕು ಎಂದರು. ಪದ್ಯಾಣ ಮನೆತನವೆಂದರೆ ಚೇತನಪ್ರದ ಇದ್ದಂತೆ. ಜನರ ಅಂತಃಕರಣ ಗೆಲ್ಲುವುದು ಬಾಂಧವ್ಯದ ಸಂದೇಶ. ಭಾರತೀಯ ಸಂಸ್ಕೃತಿಯಲ್ಲಿ ಮಾತೆಗೆ ಮೊದಲ ಸ್ಥಾನ ನೀಡಲಾಗಿದೆ. ಜನ್ಮನಾತೆಗೆ ಮಾತೆಯ ಸ್ಥಾನ ನೀಡಲಾಗಿದೆ. ದೇವಾಲಯ ಎಂಬುದು ಆತ್ಮೋನ್ನತಿಗೆ ಪೂರಕವಾದ ಸಂಗತಿ ಎಂದು ಹೇಳಿದ ಅವರು, ಧರ್ಮಕ್ಕೆ ಮೂಲವಾದದ್ದು ಸ್ತ್ರೀ. ಷಟ್ ಚಕ್ರಕ್ಕೆ ಮಹಿಳೆ ಆಧಾರ ಎಂದರು.

ದೆಹಲಿಯ ವಾಗ್ನಿ ಕಾಜಲ್ ಹಿಂದುಸ್ತಾನಿ ಧಾರ್ಮಿಕ ಉಪನ್ಯಾಸ ನೀಡಿ, ಮಾತೃಶಕ್ತಿ ಸೃಷ್ಟಿಯ ಸಂಕಲನ ಮಾಡುತ್ತದೆ. ಮಹಿಷಾಸುರನ ನಾಶ ಮಾಡಲು ದೇವಿ ಬೇಕಾಯಿತು. ಪ್ರತಿಯೊಂದು ಕಾಲದಲ್ಲಿ ಮಹಿಳೆಯನ್ನು ಅತ್ಯಾಚಾರ ಮಾಡುವ ಮಹಿಷಾಸುರ ಹುಟ್ಟುತ್ತಾನೆ. ಮಹಾದೇವ ಎಲ್ಲವನ್ನೂ ನಿಶ್ಚಿತಗೊಳಿಸಿದ್ದಾನೆ. ಆತನ ಮಂತ್ರಿಮಂಡಲದಲ್ಲಿ ಸರಸ್ವತಿ ವಿದ್ಯಾದೇವತೆಯಾಗಿ ವಿದ್ಯಾಮಂತ್ರಿ, ಲಕ್ಷ್ಮೀ ಹಣಕಾಸು ಸಚಿವೆ, ದುರ್ಗಾ ರಕ್ಷಣಾ ಸಚಿವೆಯಾಗಿ ಮೂಡಿಬರುತ್ತಾಳೆ. ಮಹಿಷಾಸುರ, ಶುಭ, ನಿಶುಂಭ, ಚಂಡ, ಮುಂಡರ ನಾಶವನ್ನು ಶ್ರೀದೇವಿಯೇ ಮಾಡಿದ್ದಾಳೆ. ಹೀಗಾಗಿ ನಾವು ಮಹಿಳೆಯರಿಗೆ ನಮ್ಮ ರಕ್ಷಣೆ ಮಾಡುವುದು ಗೊತ್ತಿಲ್ಲವೇ ಎಂದು ಪ್ರಶ್ನಿಸಿದರು.

ಅಧ್ಯಕ್ಷತೆಯನ್ನು ಜಿ.ಪಂ. ಮಾಜಿ ಅಧ್ಯಕ್ಷೆ ಶೈಲಜಾ ಭಟ್ ಕೊಂಕೋಡಿ ವಹಿಸಿದ್ದರು. ಅಭ್ಯಾಗತರಾಗಿ ಮಾಜಿ ಶಾಸಕಿ ಕೆ. ಶಕುಂತಳಾ ಶೆಟ್ಟಿ ಮಾತನಾಡಿ, ಇಲ್ಲಿ ಎಲ್ಲರೂ ಪ್ರಬುದ್ಧರು. ಇವತ್ತು ನಮಗೆ ಧರ್ಮವೇ ಕಲಿಸಿದೆ ನೀನು ಹೀಗೆ ಇರಬೇಕು ಎಂದು ಕಲಿಸಿದೆ. ನಾವು ಮೀಸಲಾತಿಗೆ ಬೇಡುವುದು ಎಂಬುದು ನಮ್ಮ ಮಹಿಳಾ ಧರ್ಮಕ್ಕೆ ಸೂಕ್ತವಲ್ಲ ಎಂದರು.

ಪತ್ರಕರ್ತೆ ಶೋಭಾ ಮಳವಳ್ಳಿ, ಇದು ಅರ್ಥಪೂರ್ಣ ಕಾರ್ಯಕ್ರಮವಾಗಿದೆ. ಹಿಂದುಗಳಿಗೆ ಹಿಂದುಗಳ ಬಗ್ಗೆಯೇ ಅನುಮಾನ ಇರುವುದು ಖೇದಕರ. ಹಿಂದುಗಳ ಹಿಂದು ವಿರೋಧಿ ಅಜೆಂಡಾಗಳ ಕುರಿತು ಎಚ್ಚರವಾಗಿರಬೇಕು. ಹೆಣ್ಣುಮಕ್ಕಳ ಮನಸ್ಥಿತಿಗೆ ತಕ್ಕಂತೆ ಗಂಡು ಮಕ್ಕಳೂ ಹೊಂದಿಕೊಳ್ಳಬೇಕಾಗಿದೆ ಎಂದರು.

ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪಕ್ಕಳ ಮಾತನಾಡಿದರು. ಸುಮನಾ ಫೌಂಡೇಶನ್ ಅಧ್ಯಕ್ಷೆ ಡಾ. ಸುನಿತಾ ಮಂಜುನಾಥ್, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ವಿದ್ಯಾಗೌರಿ ಪುತ್ತೂರು, ಸಮಾಜ ಸೇವಕ ರಮಿತಾ ಸೂರ್ಯವಂಶಿ ಇದ್ದರು. ಉಷಾ ಸತ್ಯನಾರಾಯಣ ಸೇರಾಜೆ ಸ್ವಾಗತಿಸಿ, ವೀಣಾ ಪ್ರಸಾದ್ ಕಜೆ ವಂದಿಸಿ, ನವ್ಯ ಕೃಷ್ಣಮಾಣಿಪ್ಪಾಡಿ ಮತ್ತು ಡಾ. ಶ್ರೀದೇವಿ ಕಾರ್ಯಕ್ರಮ ನಿರ್ವಹಿಸಿದರು.

ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಪದ್ಯಾಣ ತಿಮ್ಮಣ್ಣ ಭಟ್ಟ ಅಭಿರಾಮ, ಪದ್ಯಾಣ ರಘುರಾಮ ಕಾರಂತ, ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಸೇರಾಜೆ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಡಾ. ಅರುಣ ಶಾಮ್, ಕಾರ್ಯಾಧ್ಯಕ್ಷ ಶ್ಯಾಮಸುದರ್ಶನ ಹೊಸಮೂಲೆ, ಸಮಿತಿ ಸಂಚಾಲಕ ಸೇರಾಜೆ ಗೋಪಾಲಕೃಷ್ಣಭಟ್, ಕಾರ್ಯದರ್ಶಿ ಕೃಷ್ಣಎಂ.ಆರ್. ಕಡಬ, ಸಮಿತಿ ಅಧ್ಯಕ್ಷ ಅರವಿಂದ ಪದ್ಯಾಣ, ಕಾರ್ಯದರ್ಶಿ ಈಶಾನ್ಯ ಪದ್ಯಾಣ ಉಪಸ್ಥಿತರಿದ್ದರು.



ವಿವಿಧ ಕಾರ್ಯಕ್ರಮ

ಮಂಗಳವಾರ ಸಂಜೆ 5ರಿಂದ ಅಂಕುರ ಪೂಜೆ, ರಾತ್ರಿ ಪೂಜೆ, ಶ್ರೀ ದುರ್ಗಾಪೂಜೆ, ಅನುಜ್ಞಾ ಕಲಶ ಪೂರಣೆ, ಅಧಿವಾಸಹೋಮ ನಡೆಯಿತು. ಲಲಿತಾ ಸಹಸ್ರನಾಮ ಸಾಮೂಹಿಕ ಪಾರಾಯಣ ನಡೆಯಿತು. ಯಕ್ಷಗಾನ ತಾಳಮದ್ದಳೆ ಶಿವಭಕ್ತ ವೀರಮಣಿ. ಬಳಿಕ ನಯನಗೌರಿ ಸೇರಾಜೆ ಮತ್ತು ಬಳಗದ ಸುಗಮ ಸಂಗೀತ ನಡೆಯಿತು. ಸಂಜೆ ಭರತನಾಟ್ಯ, ನೃತ್ಯ ನಾಟಕ ಜರುಗಿತು.

'ಶಾಪಿಂಗ್ ಹಬ್ಬದ ಮೆಗಾ ಡ್ರಾ'ದಲ್ಲಿ ಬಲರಾಮ ಆಚಾರ್ಯ ಅಭಿಪ್ರಾಯ

ವ್ಯವಹಾರ ಕ್ಷೇತ್ರದಲ್ಲಿ ಈಗ ಪೈಪೋಟಿ ಹೆಚ್ಚಿದೆ

ಪುತ್ತೂರು: ಪುತ್ತೂರಿನ ವ್ಯಾಪರ ಅಂಗಡಿಗಳಿಗೆ ಗ್ರಾಹಕರನ್ನು ಸೆಳೆಯುವ ನಿಟ್ಟಿನಲ್ಲಿ ಪ್ರಥಮ ಬಾರಿಗೆ ಪುತ್ತೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ವತಿಯಿಂದ ಹಮ್ಮಿಕೊಂಡಿರುವ ಪುತ್ತೂರು ಶಾಪಿಂಗ್ ಹಬ್ಬದ ಮೆಗಾ ಡ್ರಾ ಕಾರ್ಯಕ್ರಮವು ಪುತ್ತೂರು ಕೋ-ಓಪರೇಟಿವ್ ಟೌನ್ ಬ್ಯಾಂಕ್ ಸಭಾಂಗಣದಲ್ಲಿ ನೆರವೇರಿತು.

ಸದಸ್ಯರಲ್ಲಿ ಒಗ್ಗಟ್ಟು

ಮುಖ್ಯ ಅತಿಥಿಯಾಗಿದ್ದ ಮಂಗಳೂರು ಕೆನರಾ ಛೇಂಬರ್ ಆಫ್ ಕಾಮರ್ಸ್ ಹಾಗೂ ಇಂಡಸ್ಟ್ರೀ ಅಧ್ಯಕ್ಷ ಪಿ.ಬಿ. ಅಹಮದ್ ಮುದಸ್ಸರ್ ಮಾತನಾಡಿ, ಪ್ರಸ್ತುತ ವಿದ್ಯಾಮಾನದಲ್ಲಿ ವರ್ತಕರಿಗೆ ಬಹಳಷ್ಟು ಸವಾಲುಗಳಿವೆ. ಪುತ್ತೂರು ವರ್ತಕರ ಸಂಘವು ವರ್ತಕರ ಹಾಗೂ ಸಮಾಜದ ಏಳಿಗೆಗೋಸ್ಕರ ಒಳ್ಳೆಯ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ. ಮಂಗಳೂರಿನಂತೆ ದೊಡ್ಡನಗರ ಪುತ್ತೂರು ಅಲ್ಲದಿದ್ದರೂ ಪುತ್ತೂರು ವರ್ತಕರ ಸಂಘದ ಸದಸ್ಯರಲ್ಲಿ ಒಗ್ಗಟ್ಟು ಮೇಳೈಸಿದೆ. ಇಂದಿನ ಆಧುನಿಕ ಯುಗದಲ್ಲಿ ಅನೇಕ ಸ್ಪರ್ಧೆಗಳನ್ನು ವರ್ತಕರು ಎದುರಿಸಬೇಕಾಗುತ್ತದೆ. ವರ್ತಕರ ಕುಟುಂಬದ ಸದಸ್ಯರಿಗೆ ಏರ್ಪಡಿಸಿದ ಇಂತಹ ಕುಟುಂಬ ಸಮ್ಮಿಲನ ಕಾರ್ಯಕ್ರಮ ಬಹಳ ಅರ್ಥಪೂರ್ಣ ಎಂದರು.

ಇನ್ನೋರ್ವ ಮುಖ್ಯ ಅತಿಥಿ ಸ್ವರ್ಣೋದ್ಯಮಿ ಬಲರಾಮ ಆಚಾರ್ಯ ಮಾತನಾಡಿ, ವ್ಯವಹಾರ ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ಪೈಪೋಟಿ ಹೆಚ್ಚಾಗಿದೆ. ಆನ್‌ಲೈನ್, ಕಾರ್ಪೋರೇಟ್ ಸೆಕ್ಟರ್‌ಗಳಿಂದ ಸ್ಥಳೀಯ ವರ್ತಕರಿಗೆ ಪೆಟ್ಟು ಬೀಳುವಂತಾಗಿದೆ. ಈ ಶಾಪಿಂಗ್ ಹಬ್ಬದ ಯೋಜನೆಯಿಂದ ಚಿಲ್ಲರೆ ವ್ಯಾಪಾರಸ್ಥರಿಗೆ ಅನುಕೂಲವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪುತ್ತೂರು ವಾಣಿಜ್ಯ ಮತ್ತು ವರ್ತಕ ಸಂಘದ ಅಧ್ಯಕ್ಷ ರವಿಕೃಷ್ಣ ಕಲ್ಲಾಜೆ, ವರ್ತಕರ ಒಳಿತಿಗಾಗಿ ಸಾಕಷ್ಟು ಹೋರಾಟವನ್ನು ಸಂಘ ಮಾಡಿಕೊಂಡು ಬಂದಿದೆ. ಸಣ್ಣ ಮಟ್ಟದ ವ್ಯಾಪಾರಸ್ಥರಿಗೆ ತಮ್ಮ ವ್ಯಾಪಾರವನ್ನು ಆಕರ್ಷಿಸಲು ಹಬ್ಬಗಳ ಆಚರಿಸಲು ಆಗುವುದಿಲ್ಲ. ಆದ್ದರಿಂದ ವರ್ತಕರನ್ನು ಸಕ್ರಿಯಗೊಳಿಸಲು, ಒಟ್ಟಿಗೆ ಸೇರಿಸಲು ಹಾಗೂ ವ್ಯಾಪಾರ ವೃದ್ಧಿಸಲು ಶಾಪಿಂಗ್ ಹಬ್ಬ ಸಣ್ಣ ಪ್ರಯತ್ನವಾಗಿದೆ ಎಂದರು. ಉದ್ಯಮಿ ಗಿಲ್ಬರ್ಟ್ ಡಿ'ಸೋಜ, ಪುತ್ತೂರು ವಾಣಿಜ್ಯ ಮತ್ತು ವರ್ತಕ ಸಂಘದ ಕಾರ್ಯದರ್ಶಿ ಉಲ್ಲಾಸ್ ಪೈ ಶುಭ ಹಾರೈಸಿದರು.

ಡಾ. ಅನುಪಮಾ ಪ್ರಾರ್ಥಿಸಿದರು. ಸಂಘದ ಮಾಜಿ ಅಧ್ಯಕ್ಷ ವಾಮನ್ ಪೈ ಅತಿಥಿಗಳನ್ನು ಪರಿಚಯಿಸಿದರು. ಮಾಜಿ ಅಧ್ಯಕ್ಷ ಜೋನ್ ಕುಟಿನ್ಹಾ ವಂದಿಸಿದರು. ಡಾ. ರಾಜೇಶ್ವರಿ ಹಾಗೂ ಪ್ರೊ. ನೀಮಾ ಕಾರ್ಯಕ್ರಮ ನಿರ್ವಹಿಸಿದರು.



ಆಲ್ಟೋ ಕಾರು ಬಂಪರ್ ಬಹುಮಾನ

ಪುತ್ತೂರು ಶಾಪಿಂಗ್ ಹಬ್ಬದ ಮೆಗಾ ಡ್ರಾದಲ್ಲಿ 37664 ನಂಬರಿಗೆ ಆಲ್ಟೋ ಕಾರು ಬಂಪರ್ ಬಹುಮಾನವಾಗಿ ಲಭಿಸಿದೆ. ಶಾಪಿಂಗ್ ಹಬ್ಬದ ಕೂಪನ್ ವಿತರಿಸಿದ 125 ಅಂಗಡಿಗಳ ವರ್ತಕರಿಗೆ ಏರ್ಪಡಿಸಿದ ಕೂಪನ್ ಡ್ರಾ ನಡೆಸಲಾಯಿತು.

ಮುರಿದು ಬಿದ್ದ ವಿದ್ಯುತ್ ಕಂಬ | ತಪ್ಪಿದ ಅನಾಹುತ, ಕೇಬಲ್‌ಗೂ ಹಾನಿ

ಅಮೃತ್ ಯೋಜನೆ ಕಾಮಗಾರಿ ಅವಾಂತರ!

ಮುಲ್ಕಿ: ಕಿನ್ನಿಗೋಳಿ, ಮುಲ್ಕಿ ಪಟ್ಟಣ ಪಂಚಾಯತ್‌ಗೆ ನೀರುಣಿಸುವ ಬಹು ಕೋಟಿ ವೆಚ್ಚದ ಅಮೃತ್ 2.0 ಪೈಪ್ ಲೈನ್ ಕಾಮಗಾರಿ ಕಿಲ್ಪಾಡಿ ಪಂಚಾಯತ್ ವ್ಯಾಪ್ತಿಯ ಕುಬೆವೂರು ಕಿನ್ನಿಗೋಳಿ ಮುಲ್ಕಿ ಹೆದ್ದಾರಿ ಬಳಿ ಅವೈಜ್ಞಾನಿಕ ಹಾಗೂ ನಿಧಾನಗತಿಯಲ್ಲಿ ನಡೆಯುತ್ತಿದ್ದು ಸ್ಥಳೀಯರಿಗೆ ಕಂಟಕಪ್ರಾಯವಾಗಿ ಪರಿಣಮಿಸಿದೆ.

45 ಮನೆಗಳಿಗೆ ವಿದ್ಯುತ್ ಮೊಟಕು

ಸೋಮವಾರ ರಾತ್ರಿ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದ್ದ ಸಂದರ್ಭ ಕಾಮಗಾರಿ ನಡೆಯುತ್ತಿದ್ದ ಗುತ್ತಿಗೆದಾರರ ನಿರ್ಲಕ್ಷ್ಯದಿಂದ ವಿದ್ಯುತ್ ಕಂಬ ಮುರಿದು ಬಿದ್ದು ಧರಶಾಹಿಯಾಗಿ ಹೆದ್ದಾರಿ ಬದಿಯ ಮರದ ಮೇಲೆ ಬಿದ್ದಿದೆ. ವಿದ್ಯುತ್ ಕಂಬದ ಬದಿಯಲ್ಲಿ ಹೈ ಟೆನ್ಶನ್ ಲೈನ್ ಹಾದು ಹೋಗುತ್ತಿರುವುದು ಅಲ್ಲದೆ ಪರಿಸರದಲ್ಲಿ ಸುಮಾರು 40 ರಿಂದ 45 ಮನೆಗಳಿದ್ದು ವಿದ್ಯುತ್ ಸ್ಥಗಿತಗೊಂಡಿದ್ದು ಭಾರೀ ಅನಾಹುತ ತಪ್ಪಿದೆ.

ಈ ಸಂದರ್ಭ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರು ಮೆಸ್ಕಾಂ ಇಲಾಖೆಗೆ ಅಥವಾ ಸಂಬಂಧಪಟ್ಟ ಇಲಾಖೆಗೆ ಯಾವುದೇ ಮುನ್ಸೂಚನೆ ನೀಡದೆ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಂಗಳವಾರ ಬೆಳಿಗ್ಗೆ ಕಿಲ್ಪಾಡಿ ಗ್ರಾ.ಪಂ. ಮಾಜಿ ಸದಸ್ಯ ನಾಗರಾಜ್ ಕುಲಾಲ್ ಮತ್ತಿತರರು ಹೆದ್ದಾರಿಯಲ್ಲಿ ಹಾದು ಹೋಗುತ್ತಿರುವಾಗ ಈ ಘಟನೆ ಬೆಳಕಿಗೆ ಬಂದಿದ್ದು ಕೂಡಲೇ ಅವರು ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರನ್ನು ಸಂಪರ್ಕಿಸಿದಾಗ ಗುತ್ತಿಗೆದಾರರು ನಿರ್ಲಕ್ಷ್ಯ ವಹಿಸಿದ್ದಾರೆ ಹಾಗೂ ಕಾಮಗಾರಿಯಿಂದ ಪರಿಸರ ಧೂಳು ಮಯವಾಗಿದ್ದು ರೋಗದ ಭೀತಿ ಎದುರಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬಳಿಕ ಮುಲ್ಕಿ ಮೆಸ್ಕಾಂ ಇಲಾಖೆಯನ್ನು ಸಂಪರ್ಕಿಸಿ ಮುಂಜಾಗರೂಕತೆ ವಹಿಸಲು ಸೂಚನೆ ನೀಡಿದ್ದಾರೆ. ಅವೈಜ್ಞಾನಿಕ ಕಾಮಗಾರಿಯಿಂದ ಬಿಎಸ್‌ಎನ್‌ಎಲ್ ಕೇಬಲ್ ಕೂಡ ಹಾನಿಯಾಗಿದೆ ಎಂದು ಮುಲ್ಕಿ ಬಿಎಸ್‌ಎನ್‌ಎಲ್ ದೂರವಾಣಿ ವಿಭಾಗದ ಸಿಬ್ಬಂದಿ ಕೀರ್ತೇಶ್ ದೂರಿದ್ದಾರೆ.





ಮೆಸ್ಕಾಂ ಇಲಾಖೆ ಅಧಿಕಾರಿಗಳ ದೌಡು!

ಸ್ಥಳಕ್ಕೆ ಮುಲ್ಕಿ ಮೆಸ್ಕಾಂ ಇಲಾಖೆಯ ಎಸ್. ಒ ಕೃಷ್ಣಪ್ಪ ಭೇಟಿ ನೀಡಿ ಪರಿಶೀಲಿಸಿದ್ದು, ಮೆಸ್ಕಾಂ ಇಲಾಖೆಗೆ ಸುಮಾರು ನಷ್ಟ ಉಂಟಾಗಿದೆ ಎಂದು ಮಾಹಿತಿ ನೀಡಿದ್ದು ಪೈಪ್ ಲೈನ್ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಮೆಸ್ಕಾಂ ಇಲಾಖೆಯ ಗುತ್ತಿಗೆದಾರರಿಂದ ವಿದ್ಯುತ್ ಕಂಬ ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ.

ಮುಗುಳಿ ದೇವಸ್ಥಾನದಲ್ಲಿ ಪಾಕಶಾಲೆ, ಸಭಾಗೃಹ ನಿರ್ಮಾಣಕ್ಕೆ ಭೂಮಿಪೂಜೆ



ಬಂಟ್ವಾಳ: ಸಜೀಪಮುನ್ನೂರು ಗ್ರಾಮದ ಮುಗುಳಿಯ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಉತ್ತರ ಭಾಗದಲ್ಲಿ ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಳ್ಳಲಿರುವ ಪಾಕಶಾಲೆ ಸಹಿತ ಸುಸಜ್ಜಿತ ಸಭಾಗೃಹಕ್ಕೆ ಶಿಲಾನ್ಯಾಸ ನೆರವೇರಿಸಲಾಯಿತು.

ಸಜೀಪ ಮಾಗಣೆ ತಂತ್ರಿ ಎಂ.ಸುಬ್ರಹ್ಮಣ್ಯ ಭಟ್ ಧಾರ್ಮಿಕ ವಿಧಿ, ವಿಧಾನ ನೆರವೇರಿಸಿದರು. ಎನ್.ಎಂ.ಪಿ.ಟಿ. ನಿರ್ದೇಶಕ ಡಾ. ಪೃಥ್ವಿರಾಜ್ ಶಿಲಾನ್ಯಾಸಗೈದರು. ಉದ್ಯಮಿ ಆಚಲ್ ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಗುತ್ತಿಗೆದಾರ ಎಂ.ಮಹಾಬಲ ಕೊಟ್ಟಾರಿ, ಮಾಜಿ ಜಿ. ಪಂ.ಸದಸ್ಯ ಕೆ. ರಾಧಾಕೃಷ್ಣ ಆಳ್ವ, ಶ್ರೀ ಕ್ಷೇತ್ರ ನಂದಾವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಪ್ರಭಾಕರ ಶೆಟ್ಟಿ, ಸಜೀಪಮುನ್ನೂರು ಗ್ರಾ.ಪಂ. ಮಾಜಿ ಅಧ್ಯಕ್ಷ ಪರಮೇಶ್ವರ ಎಂ., ಸಜೀಪಮೂಡ ಗ್ರಾ.ಪಂ. ಮಾಜಿ ಅಧ್ಯಕ್ಷ ದೇವಿಪ್ರಸಾದ್ ಪೂಂಜ, ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮುಳ್ಳಂಜ ವೆಂಕಟೇಶ್ವರ ಭಟ್, ಶ್ರೀಕೃಷ್ಣ ಶಿಶುಮಂದಿರ ಅಧ್ಯಕ್ಷ ಸುರೇಶ್ ಸಾರ್ ತಾವು, ಪಾಣೆಮಂಗಳೂರು ರೈ.ಸೇ.ಸ. ಸಂಘ ಮಾಜಿ ಅಧ್ಯಕ್ಷ ಟಿ. ಸುಬ್ರಾಯ ಕಾರಂತ, ಅರ್ಚಕ ಕೃಷ್ಣ ಭಟ್, ತಂತ್ರಿ ಸೂರ್ಯನಾರಾಯಣ ಭಟ್, ಮಲರಾಯ ದೈವದ ಗಡಿ ಪ್ರದಾನರಾದ ಸುಕುಮಾರ ಬಂಟ್ವಾಳ, ಹರೀಶ್ ಗಟ್ಟಿ, ಕೆ. ಸೀತಾರಾಮ ಶೆಟ್ಟಿ ವ್ಯವಸ್ಥಾಪನಾ ಸಮಿತಿ ಸದಸ್ಯ ಪಿ. ಧನಂಜಯ ಶೆಟ್ಟಿ, ಎನ್.ಕೆ. ಶಿವ, ಹರಿಪ್ರಸಾದ್ ಭಂಡಾರಿ, ರಾಜು ಪೂಜಾರಿ, ಶ್ರೀನಿವಾಸ ನಾಯಕ, ಮಾಜಿ ಸದಸ್ಯ ಚಿತ್ರವರ ಕಾಯಿ,ಚಿತ್ರ ಎಸ್ ರೈ, ಪ್ರಮುಖರಾದ ವಸಂತ ರಾವ್, ಧನೇಶ್ವರ ರಾವ್, ನ್ಯಾಯವಾದಿ ದಿನೇಶ ಭಂಡಾರಿ, ಬಾಲಕೃಷ್ಣರಾವ್, ದಿರೇಶ್ ರಾವ್ ಇದ್ದರು. ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಯ ಶಂಕರ ಬಾಸ್ರಿತ್ತಾಯ ಸ್ವಾಗತಿಸಿದರು.

ಬಪ್ಪನಾಡು ಜಾತ್ರಾ ಮಹೋತ್ಸವ: ಭವ್ಯ ಮೆರವಣಿಗೆ, ಹೊರೆಕಾಣಿಕೆ ಸಮರ್ಪಣೆ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜಾತ್ರಾ ಮಹೋತ್ಸವ ಏ.1ರಿಂದ 8ರವರೆಗೆ ನಡೆಯಲಿದ್ದು ಪೂರ್ವಭಾವಿಯಾಗಿ ಮುಲ್ಕಿ ಕಾರು ಚಾಲಕರ ಹಾಗೂ ಮಾಲಕರ ಸಂಘ, ರಿಕ್ಷಾ ಚಾಲಕರ ಹಾಗೂ ಮಾಲಕರ ಸಂಘ, ಹಿಂದೂ ಯುವ ಸೇನೆ ಮತ್ತು ಒಂಭತ್ತು ಮಾಗಣೆಯ ಭಕ್ತರ ವತಿಯಿಂದ ಸೀಮೆ ಒಂಭತ್ತು ಮಾಗಣೆಯ ಭಕ್ತರಿಂದ 5ನೇ ವರ್ಷದ ಹೊರೆ ಕಾಣಿಕೆ ಸಮರ್ಪಣೆಯು ಮಂಗಳವಾರ ನಡೆಯಿತು.

ಈ ಸಂದರ್ಭ ದೇವಸ್ಥಾನದ ಅರ್ಚಕ ಗೋಪಾಲಕೃಷ್ಣ ಭಟ್ ವಿಶೇಷ ಪ್ರಾರ್ಥನೆ ಸಲ್ಲಿಸಿ, ಭಕ್ತರ ಕಾರ್ಯಕ್ಕೆ ಶುಭ ಹಾರೈಸಿದರು. ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಕಾರು ಹಾಗೂ ರಿಕ್ಷಾ ಚಾಲಕ ಮಾಲಕರ ಸಂಘದ ಅಧ್ಯಕ್ಷರಾದ ರಾಜೇಶ್ ಕೆರೆಕಾಡು, ದೇವರಾಜ ಕೊಲಕಾಡಿ, ಉದಯಕುಮಾರ್ ಶೆಟ್ಟಿ ಅಧಿಧನ್, ಕೋಲ್ನಾಡು ಕೊರಗಜ್ಜ ಕ್ಷೇತ್ರದ ಅಧ್ಯಕ್ಷ ಶೇಖರ್ ಸಾಲ್ಯಾನ್, ರಂಜನ್ ಬಿ. ಶೆಟ್ಟಿ ಕಿಲ್ಪಾಡಿ, ಶಶೀಂದ್ರ ಸಾಲ್ಯಾನ್, ಶೀನ ಪೂಜಾರಿ ಪಡುಬಿದ್ರೆ, ಕಿಶೋರ್ ಶೆಟ್ಟಿ ಬಪ್ಪನಾಡು, ಲತಾ ಶೇಖರ್, ಶಿವರಾಮ್ ಜಿ ಅಮೀನ್, ಉದಯಕುಮಾರ್ ಶೆಟ್ಟಿ ಕಾರ್ನಾಡ್ ಬೈಪಾಸ್, ಗಿರೀಶ್ ಮೆಂಡನ್ ಮತ್ತಿತರರು ಇದ್ದರು. ಹೊರ ಕಾಣಿಕೆಯ ಭವ್ಯ ಮೆರವಣಿಗೆಯು ಮುಲ್ಕಿ ಶಾರದಾ ಮಂಟಪದಿಂದ ಹೊರಟು ಬಪ್ಪನಾಡು ದೇವಸ್ಥಾನಕ್ಕೆ ಸಮರ್ಪಿಸಲಾಯಿತು. ದಿನೇಶ್ ಕೋಲ್ನಾಡು ನಿರೂಪಿಸಿದರು.



ಅನಾರೋಗ್ಯದಿಂದ ಬಳಲುತ್ತಿರುವ ಹಿಂದೂ ಯುವ ಸೇನೆ ಏಕಲವ್ಯ ಶಾಖೆ ಮಣಿ ಹಳ್ಳ ಇದರ ಹಿರಿಯ ಕಾರ್ಯಕರ್ತ ಸದಾನಂದ ಕುಲಾಲ್ ಅವರ ಮನೆಗೆ ಏಕಲವ್ಯ ಶಾಖೆ ಸದಸ್ಯರು ಭೇಟಿ ನೀಡಿ ಧನ ಸಹಾಯ ನೀಡಿದರು. ಕೇಂದ್ರೀಯ ಮಂಡಳಿ ಗೌರವಾಧ್ಯಕ್ಷ ಭಾಸ್ಕರ ಚಂದ್ರ ಶೆಟ್ಟಿ, ಅಧ್ಯಕ್ಷ ಯಶೋಧರ ಚೌಟ, ಉದ್ಯಮಿ ರವಿಚಂದ್ರ ಬಂಟ್ವಾಳ, ಬಂಟ್ವಾಳ ತಾಲೂಕು ಅಧ್ಯಕ್ಷ ವಸಂತ್ ಕುಮಾರ್ ಮಣಿಹಳ್ಳ, ಏಕಲವ್ಯ ಶಾಖೆ ಅಧ್ಯಕ್ಷ ತಾರಾನಾಥ ಗೌಡ, ಕಾರ್ಯದರ್ಶಿ, ಮಾಜಿ ಅಧ್ಯಕ್ಷ ನವೀನ್ ಕುಮಾರ್, ಸಂಘಟನಾ ಕಾರ್ಯದರ್ಶಿ ಲೋಕನಾಥ್, ರಿಕ್ಷಾ ಚಾಲಕ ರವಿಕುಮಾರ್ ಶ್ರೀನಿವಾಸ್, ಗಣೇಶ ಇದ್ದರು. ಈ ಸಂದರ್ಭ ಕೇಬಲ್ ಮಾಸಿಕ ಕಂತನ್ನು ಉಚಿತವಾಗಿ ನೀಡುವ ಭರವಸೆ ರವಿಚಂದ್ರ ಬಂಟ್ವಾಳ ನೀಡಿದರು.



ಪೆರ್ನೆ ಬಿಳಿಯೂರು ಗ್ರಾಮದಲ್ಲಿ 1.44 ಕೋ.ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅಶೋಕ್ ಕುಮಾರ್ ರೈ ಹೇಳಿದರು. ತಾಲೂಕು ಗ್ಯಾರಂಟಿ ಅನುಷ್ಠಾನ ಯೋಜನಾ ಅಧ್ಯಕ್ಷ ಉಮಾನಾಥ ಶೆಟ್ಟಿ, ಪೆರ್ನೆ ಗ್ರಾ.ಪಂ. ಮಾಜಿ ಅಧ್ಯಕ್ಷ ಎಸ್ ತೋಯೋಜಾಕ್ಷ ಶೆಟ್ಟಿ, ಯು.ಟಿ.ತೌಸಿಫ್, ಕ ರಾಜಾರಾಮ ಕೆ.ಬಿ. ಮತ್ತಿತರರು ಉಪಸ್ಥಿತರಿದ್ದರು.

ದೇವಾಡಿಗ ಸಂಘದ ಆಲಂಕಾರು, ಕಡಬ ವಲಯ, ದೇವಾಡಿಗ ಬಂಧುಗಳಿಂದ ಸಹಕಾರ | ಪ್ರಶ್ನಾ ಚಿಂತನೆಯಂತೆ ನಿರ್ಮಾಣ

ಇಂದು ಶರವೂರು ಶ್ರೀ ದುರ್ಗಾಪರಮೇಶ್ವರೀ ಶ್ರೀಕ್ಷೇತ್ರಕ್ಕೆ ನೂತನ ಪುಷ್ಪರಥ, ಪಲ್ಲಕ್ಕಿ ಸಮರ್ಪಣೆ

ಆಲಂಕಾರು: ಶರವೂರಿನ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಶ್ರೀಕ್ಷೇತ್ರಕ್ಕೆ ದೇವಾಡಿಗ ಸುಧಾರಕರ ಸಂಘ ಆಲಂಕಾರು ಕಡಬ ವಲಯ ಹಾಗೂ ಸಮಸ್ತ ದೇವಾಡಿಗ ಬಂಧುಗಳಿಂದ ಕೊಡಮಾಡಿದ ಪುಷ್ಪರಥ ಹಾಗೂ ಪಲ್ಲಕ್ಕಿ ಇಂದು (ಬುಧವಾರ) ಶ್ರೀ ಕ್ಷೇತ್ರಕ್ಕೆ ಸಮರ್ಪಣೆಯಾಗಲಿದೆ.

ಬ್ರಿಟಿಷರ ಕಾಲದ ಮುಂಚೆಯೇ ದೂರದ ಊರಿನಿಂದ ದೇವಾಡಿಗ ಸಮುದಾಯ ತಾಯಿಯ ಸೇವೆಗಾಗಿ ಬಂದಿದ್ದರು ಎಂಬ ವಿಚಾರ ಐತಿಹಾಸಿಕವುಳ್ಳದ್ದಾಗಿದೆ. ಈ ಕ್ಷೇತ್ರದಲ್ಲಿ ಮೊದಲೇ ಸಣ್ಣ ರಥ ಇತ್ತೆಂದು ಪ್ರಶ್ನೆ ಚಿಂತನೆಯಲ್ಲಿ ಕಂಡು ಬಂದಿತ್ತು. ದೇವಾಲಯವನ್ನು ಪೂರ್ಣ ಶಿಲಾಮಯವಾಗಿ ಪರಿವರ್ತಿಸುವ ಸಮಯದಲ್ಲಿ ದೇವಾಡಿಗ ಸಮುದಾಯ ದೇವರಿಗೆ ಪುಷ್ಪ ರಥ ಹಾಗೂ ಪಲ್ಲಕ್ಕಿ ಕೊಡುಗೆಯಾಗಿ ಕೊಡುವ ವಿಚಾರ ಪ್ರಸ್ತಾಪಿಸಿದ್ದರು. ಈ ವಿಚಾರವಾಗಿ ದೇವರಲ್ಲಿ ಪ್ರಾರ್ಥಿಸಿ ದೇವರ ಅನುಗ್ರಹದಂತೆ ದೇವಾಡಿಗ ಸುಧಾರಕರ ಸಂಘ ಆಲಂಕಾರು ಕಡಬ ವಲಯ ಹಾಗೂ ಸಮಸ್ತ ದೇವಾಡಿಗ ಬಂದುಗಳ ಸಹಾಯಹಸ್ತದ ನೆರವಿನಿಂದ ಪುಷ್ಪರಥ ಹಾಗೂ ಪಲ್ಲಕ್ಕಿ ಇಂದು ಶ್ರೀದೇವಿಗೆ ಅರ್ಪಣೆಗಾಗಿ ಸಿದ್ದತೆಗೊಂಡಿದೆ.



ಮಧ್ಯಾಹ್ನ ಸಭಾ ಕಾರ್ಯಕ್ರಮ

ಮಧ್ಯಾಹ್ನ 12ರಿಂದ 2ತನಕ ಸಭಾ ಕಾರ್ಯಕ್ರಮ ನಡೆಯಲಿದ್ದು, ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನಂ ಪೇಜಾವರ ಅಧೋಕ್ಷಜ ತೀರ್ಥರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀ ಪಾದಂಗಳವರು ಮತ್ತು ಶ್ರೀ ವಿದ್ಯಾವಲ್ಲಭ ತೀರ್ಥ ಶ್ರೀಪಾದಂಗಳವರು ಆಶೀರ್ವಚನ ನೀಡಲಿದ್ದಾರೆ. ಮಾಜಿ ಮುಖ್ಯಮಂತ್ರಿ ಡಾ.ಎಂ. ವೀರಪ್ಪ ಮೊಯ್ಲಿ ಅವರು ಪುಷ್ಪರಥ ಹಾಗೂ ಪಲ್ಲಕ್ಕಿಯನ್ನು ಸಮರ್ಪಣೆ ಮಾಡಲಿದ್ದಾರೆ. ದೇವಾಡಿಗ ಸುಧಾರಕರಕ ಸಂಘ ಆಲಂಕಾರು ಕಡಬ ವಲಯದ ಎನ್. ರಾಮಚಂದ್ರ ದೇವಾಡಿಗ ನಗ್ರಿ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭವನ್ನು ದೇವಾಲಯದ ಪವಿತ್ರಪಾಣಿ ಎನ್. ಹರೀಶ ಆಚಾರ್ಯ ನಗ್ರಿಗುತ್ತು ದೀಪ ಪ್ರಜ್ವಲನೆ ಮಾಡಲಿದ್ದಾರೆ. ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಎಂ. ಗೋಪಾಲಕೃಷ್ಣ ಪಡ್ಡಿಲ್ಲಾಯ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ಸುಬ್ರಹ್ಮಣ್ಯ ರಾವ್, ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಹೇಮಂತ್ ರೈ ಮನವಳಿಕೆಗುತ್ತು, ದೇವಾಲಯದ ಪ್ರಧಾನ ಅರ್ಚಕ ಕೆ. ಹರಿಪ್ರಸಾದ್ ಉಪಾಧ್ಯಾಯ ಅವರ ಗೌರವ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ ನೆರವೇರಲಿರುವುದು.

ರಾಜ್ಯ ಪ್ರಶಸ್ತಿ ವಿಜೇತ ಅಣ್ಣು ದೇವಾಡಿಗ ಧರ್ಮಸ್ಥಳ, ಕರ್ನಾಟಕ ರಾಜ್ಯ ದೇವಾಡಿಗರ ಸಂಘದ ಅಧ್ಯಕ್ಷ ಅಶೋಕ್ ಮೊಯ್ಲಿ, ವಿಶ್ವ ದೇವಾಡಿಗ ಮಂಡಲ ಮುಂಬಯಿ ಇದರ ಅಧ್ಯಕ್ಷ ಧರ್ಮಪಾಲ ಯು. ದೇವಾಡಿಗ. ನಿವೃತ್ತ ಅಧ್ಯಾಪಕ ನಾಗಪ್ಪ ಗೌಡ ಮರುವಂತಿಲ. ಕೆಯ್ಯೂರು ಶ್ರೀ ಮಹಿಷಮರ್ದಿನಿ ದುರ್ಗಾಪರಮೇಶ್ವರೀ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಎ.ಕೆ. ಜಯರಾಜ್ ರೈ, ಶ್ರೀ ದುರ್ಗಾಂಬ ಅಲಂಕಾರ ಸಮಿತಿ ಆಲಂಕಾರು ಇದರ ಅಧ್ಯಕ್ಷ ಗಣರಾಜ್ ಕೆ., ದೇವಾಡಿಗ ಸಂಘ ಮುಂಬಯಿ ಇದರ ಅಧ್ಯಕ್ಷ ರವಿ ದೇವಾಡಿಗ, ನಾಟಿ ವೈದ್ಯ ಪ್ರಶಾಂತ ದೇವಾಡಿಗ, ಅಳದಂಗಡಿ ಶ್ರೀ ದುರ್ಗಾಂಬ ಕಲಾ ಸಂಗಮದ ಅಧ್ಯಕ್ಷ ಚಂದ್ರ ದೇವಾಡಿಗ, ಮತ್ತೂರು ಕೊಂಬೆಟ್ಟಿನ ರಾಮಕೃಷ್ಣ ಪ್ರೌಢ ಶಾಲೆಯ ಸಂಚಾಲಕ ಕಾವು ಹೇಮನಾಥ ಶೆಟ್ಟಿ ದುಬೈನ ಉದ್ಯಮಿ ಹರೀಶ್ ಸೇರಿಗಾರ್, ಪುತ್ತೂರು ಅಕ್ಷಯ ಕಾಲೇಜಿನ ಅಧ್ಯಕ್ಷ ಜಯಂತ ನಡುಬೈಲು, ರಾಮಕುಂಜದ ಶ್ರೀ ರಾಮಕುಂಜೇಶ್ವರ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ರಾಧಾಕೃಷ್ಣ ಕುವೆಚ್ಚಾರು, ಅಭಿವೃದ್ಧಿ ಸಮಿತಿಯ ಸದಸ್ಯ ಭಾಸ್ಕರ ಗೌಡ ಇಡಾಲ, ಪುರಂದರ ರೈ ಸಬಲೂರು ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ದೇವಾಡಿಗ ಸುಧಾರಕರ ಸಂಘದ ಅಧ್ಯಕ್ಷ ಎನ್. ರಾಮಚಂದ್ರ ದೇವಾಡಿಗ ನಗ್ರಿ ತಿಳಿಸಿದ್ದಾರೆ.

ಸಂಘದ ಕಾರ್ಯದರ್ಶಿ ಚಂದ್ರಶೇಖರ ದೇವಾಡಿಗ ಬಿ., ಕೋಶಾಧಿಕಾರಿ ಶಿವಾನಂದ ದೇವಾಡಿಗ, ಜೊತೆ ಕಾರ್ಯದರ್ಶಿ ಉಮೇಶ್ ದೇವಾಡಿಗ, ಉಪ ಕಾರ್ಯದರ್ಶಿ ಪ್ರೀತಮ್ ದೇವಾಡಿಗ, ಸಂಘಟನಾ ಕಾರ್ಯದರ್ಶಿ ಹರಿಶ್ಚಂದ್ರ ದೇವಾಡಿಗ, ಸಂಚಾಲಕ ಅಶೋಕ್ ಕುಮಾರ್ ಎನ್. ಉಪಸ್ಥಿತರಿದ್ದರು.

ಸುತ್ತಮುತ್ತ

ದೈವದ ಅವಹೇಳನ ಪ್ರಕರಣ: ಹಿಂದೂ ಜಾಗರಣ ವೇದಿಕೆ ಖಂಡನೆ

ಮಡಿಕೇರಿ: ಹಿಂದೂ ಧಾರ್ಮಿಕ ನಂಬಿಕೆಯನ್ನು, ಶ್ರದ್ಧೆಯನ್ನು ಅವಹೇಳನ ಮಾಡುವ ರೀತಿಯಲ್ಲಿ ಅನ್ಯ ಧರ್ಮದ ಕಿಡಿಗೇಡಿಗಳ ತಂಡ ವೀಡಿಯೋ ಮಾಡಿ ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟಿರುವುದು ಅಕ್ಷಮ್ಯ ಅಪರಾಧವಾಗಿದ್ದು, ಈ ದುಷ್ಕೃತ್ಯವನ್ನು ತೀವ್ರವಾಗಿ ಖಂಡಿಸುವುದಾಗಿ ಹಿಂದೂ ಜಾಗರಣ ವೇದಿಕೆ ತಿಳಿಸಿದೆ. ಅಲ್ಲದೆ ಸಂಘಟನೆಯು ದೈವ ಆರಾಧಕರ ಬೆಂಬಲಕ್ಕೆ ಸದಾ ನಿಲ್ಲುತ್ತದೆ ಎಂದು ಘೋಷಿಸಿದೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ವೇದಿಕೆಯ ಜಿಲ್ಲಾ ಸಂಯೋಜಕ ಭೋಜೇಗೌಡ ಅವರು, ದುಷ್ಕೃತ್ಯ ಎಸಗಿದ ಆರೋಪಿಗಳನ್ನು ಕಾನೂನು ಅಡಿಯಲ್ಲಿ ಶಿಕ್ಷಿಸುವ ಮೂಲಕ ಸಮಾಜಘಾತುಕ ಶಕ್ತಿಗಳನ್ನು ಪೊಲೀಸ್ ಇಲಾಖೆಯೇ ಸದೆ ಬಡಿಯಬೇಕೆಂದು ಆಗ್ರಹಿಸಿದ್ದಾರೆ. ಹಿಂದು ಧರ್ಮವನ್ನು, ಹಿಂದು ಸಂಸ್ಕೃತಿಯನ್ನು, ಹಿಂದು ಧಾರ್ಮಿಕ ನಂಬಿಕೆಗಳನ್ನು ಘಾಸಿಗೊಳಿಸಿ ಹಿಂದುಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುವಂತಹ ಘಟನೆಗಳು ಇತ್ತೀಚಿನ ದಿನಗಳಲ್ಲಿ ಕೊಡಗಿನಲ್ಲಿ ಮುಸ್ಲಿಮರು ಅಧಿಕವಾಗಿ ವಾಸಿಸುತ್ತಿರುವ ಕಡೆಗಳಲ್ಲಿ ಹೆಚ್ಚು ಹೆಚ್ಚು ನಡೆಯುತ್ತಿದೆ. ಪೊಲೀಸ್ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಇದೇ ರೀತಿ ಮುಂದುವರಿದರೆ ಹಿಂದೂ ಸಮಾಜವು ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ, ತಕ್ಕ ಪ್ರತಿರೋಧವನ್ನು ಅನಿವಾರ್ಯವಾಗಿ ನೀಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಹಿಂದುಗಳ ತಾಳ್ಮೆಯನ್ನು ಅನ್ಯರು ದೌರ್ಬಲ್ಯವೆಂದು ಭಾವಿಸಿದಂತಿದೆ. ಹಿಂದು ವಿರೋಧಿ ಕೃತ್ಯಗಳು ಎಲ್ಲೇ ನಡೆದರೂ ತಕ್ಕ ಪ್ರತ್ಯುತ್ತರವನ್ನು ಕೊಡುವ ಸಾಮರ್ಥ್ಯ ಹಿಂದೂ ಸಮಾಜಕ್ಕಿದೆ ಎನ್ನುವ ಎಚ್ಚರಿಕೆಯನ್ನೂ ಅವರು ನೀಡಿದ್ದಾರೆ.

ಇಂದು ಮಣೂರು ಫ್ರೆಂಡ್ಸ್ ರಜತ ಸಂಭ್ರಮ, ಸಾಧಕರಿಗೆ ಸನ್ಮಾನ

ಕೋಟ: ಇಲ್ಲಿನ ಮಣೂರು ಮಹಾಲಿಂಗೇಶ್ವರ ಜಾತ್ರೆಯಲ್ಲಿ ಪ್ರತಿವರ್ಷ ಸಾಂಸ್ಕೃತಿಕ, ಸಾಮಾಜಿಕ ಕಾರ್ಯಕ್ರಮದಡಿ ವಿಭಿನ್ನ ಕಾರ್ಯಕ್ರಮ ಆಯೋಜಿಸಿಕೊಂಡು ಬರುತ್ತಿರುವ ಮಣೂರು ಫ್ರೆಂಡ್ಸ್ ಮಣೂರು ಇದರ ರಜತ ಸಂಭ್ರಮ ಏ.1ರಂದು ಮಣೂರು ದೇಗುಲದ ವಠಾರದಲ್ಲಿ ಆಯೋಜಿಸಿದೆ
ಈ ಹಿನ್ನೆಲೆಯಲ್ಲಿ ಪದ್ಮಶ್ರೀ ಡಾ.ಹರೇಕಳ ಹಾಜಬ್ಬರಿಗೆ ಸನ್ಮಾನ, ಹುಟ್ಟೂರ ಗೌರವಾಭಿನಂದನೆ, ವಿಶೇಷ ಅಭಿನಂದನೆ, ಪ್ರತಿಭಾ ಪುರಸ್ಕಾರ, ಸಂಘ-ಸಂಸ್ಥೆಗೆ ಗೌರವ ಪುರಸ್ಕಾರ, ಅಶಕ್ತರಿಗೆ ಸಹಾಯಹಸ್ತ, ಆಶ್ರಮಕ್ಕೆ ನೆರವು, ಸಚಿನ್ ಆಚಾರ್ ಇವರ ಮೂನ್ ವಾಕರ್ಸ್ ಡಾನ್ಸ್ ಕ್ರಿವ್, ಸ್ಥಳೀಯ ಅಂಗನವಾಡಿ ಪುಟಾಣಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ 9ಕ್ಕೆ ಪ್ರಸಿದ್ಧ ಗಾಯಕರಿಂದ ಆರ್ಕೆಸ್ಟ್ರಾ ಕಾರ್ಯಕ್ರಮ ಜರಗಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಏ.9-11: ಪಡುಬೆಳ್ಳೆಯಲ್ಲಿ ವಾರ್ಷಿಕ ನೇಮ

ಶಿರ್ವ: ಪಡುಬೆಳ್ಳೆಯ ಕಾರಣಿಕ ಕ್ಷೇತ್ರ ಶ್ರೀಗುರುಬ್ರಹ್ಮ ಮುಗ್ಗೇರ್ಕಳ ದೈವಸ್ಥಾನದ ನಲ್ವತ್ತೆರಡನೆಯ ವಾರ್ಷಿಕ ನೇಮ ಏ. 9ರಿಂದ ಏ.11ರವರೆಗೆ ಜರುಗಲಿದೆ. ಏ.9ರಂದು ಸಂಜೆ ಶ್ರೀದೈವಗಳ ಅಗೆಲು, ಏ.10ರಂದು ಮಧ್ಯಾಹ್ನ 12.30ರಿಂದ ಸಾರ್ವಜನಿಕ ಅನ್ನಸಂತರ್ಪಣೆ, ರಾತ್ರಿ ಶ್ರೀದೈವಗಳ ವಾರ್ಷಿಕ ನೇಮ, ಏ.11ರಂದು ಮಧ್ಯಾಹ್ನ ಅಲ್ಯಾರ ಪಂಜುರ್ಲಿ ದೈವದ ನೇಮ ಜರುಗಲಿದೆ ಎಂದು ದೈವಸ್ಥಾನದ ಆಡಳಿತ ಮಂಡಳಿಯ ಪ್ರಕಟನೆ ತಿಳಿಸಿದೆ.

ಏ.11: ಕ್ರೀಡಾಕೂಟ, ಡ್ಯಾನ್ಸ್ ಮೇಳ

ಮಡಿಕೇರಿ: ಮಡಿಕೇರಿ ನಗರ ಆಟೋ ಮಾಲಕ ಮತ್ತು ಚಾಲಕರ ಸಂಘದ ವತಿಯಿಂದ ಏ.5ರಿಂದ ಮೂರು ದಿನಗಳ ಕಾಲ ಕ್ರೀಡಾಕೂಟ ಹಾಗೂ ಏ.11ರಂದು ಡ್ಯಾನ್ಸ್ ಮೇಳ ನಡೆಯಲಿದೆ.
ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಟೋ ಮಾಲಕ ಚಾಲಕರ ಸಂಘದ ಜಿಲ್ಲಾಧ್ಯಕ್ಷ ಡಿ.ಎಚ್. ಮೇದಪ್ಪ, ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಕಡ್ಡಾಯವಾಗಿ ಸ್ಥಳೀಯ ಆಟೋ ಸಂಘಟನೆಗಳಲ್ಲಿ ಸದಸ್ಯರಾಗಿರುವ ಕೊಡಗಿನ ಆಟೋ ಚಾಲಕರಿಗೆ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ. ಈಗಾಗಲೇ 16ತಂಡಗಳು ಹೆಸರು ನೋಂದಾಯಿಸಿಕೊಂಡಿವೆ. ಉದ್ಘಾಟನಾ ಪಂದ್ಯದಲ್ಲಿ 5 ಓವರ್‌ಗಳಿಗೆ ಸೀಮಿತವಾಗಿ ಪೊಲೀಸ್ ಇಲಾಖಾ ಸಿಬ್ಬಂದಿ, ವಕೀಲರು ಹಾಗೂ ವೈದ್ಯರ ತಂಡವನ್ನು ನಿರೀಕ್ಷಿಸಲಾಗಿದೆ. ವಿಜೇತ ತಂಡಕ್ಕೆ ವಿನ್ನರ್ ಮತ್ತು ರನ್ನರ್ ಟ್ರೋಫಿ ನೀಡಲಾಗುವುದು. ಆಟೋ ಚಾಲಕರ ನಡುವೆ ನಡೆಯುವ ಪಂದ್ಯಾವಳಿಯ ವಿಜೇತ ತಂಡಕ್ಕೆ 40ಸಾವಿರ ರೂ. ನಗದು ಮತ್ತು ಟ್ರೋಫಿ ಹಾಗೂ ರನ್ನರ್ 25ಸಾವಿರ ನಗದು ಮತ್ತು ಟ್ರೋಫಿ, ಮೂರು ಮತ್ತು ನಾಲ್ಕನೇ ಬಹುಮಾನವಾಗಿ ಟ್ರೋಫಿ ನೀಡಲಾಗುವುದು ಮಾಹಿತಿ ನೀಡಿದರು.
ಏ.11ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಗರದ ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಕ್ರೀಡಾಕೂಟ ಮತ್ತು ಡ್ಯಾನ್ಸ್ ಮೇಳ ನಡೆಯಲಿದೆ. ಕ್ರೀಡಾಕೂಟದಲ್ಲಿ ಪುಟಾಣಿ ಮಕ್ಕಳಿಂದ ಕಾಲೇಜು ವಿದ್ಯಾರ್ಥಿಗಳವರೆಗೆ, ಪುರುಷರಿಗೆ, ಮಹಿಳೆಯರಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಅಂದು ಸಂಜೆ 6 ಗಂಟೆಯ ನಂತರ ಆಕರ್ಷಕ ಡ್ಯಾನ್ಸ್ ಮೇಳ ನಡೆಯಲಿದೆ ಎಂದು ಸ್ಪಷ್ಟಪಡಿಸಿದರು. ಡ್ಯಾನ್ಸ್ ಮೇಳದಲ್ಲಿ ಭಾಗವಹಿಸುವ ತಂಡಗಳು ಏ. 5ರ ಒಳಗಾಗಿ 6360252689 ಮತ್ತು 9483840637 ಈ ಸಂಖ್ಯೆಗಳನ್ನು ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು ಎಂದರು.
ಸುದ್ದಿಗೋಷ್ಠಿಯಲ್ಲಿ ಮಡಿಕೇರಿ ನಗರ ಆಟೋ ಮಾಲಕ ಚಾಲಕರ ಸಂಘದ ನಗರಾಧ್ಯಕ್ಷ ಸಮದ್ ಎ., ಉಪಾಧ್ಯಕ್ಷ ದಿನೇಶ್ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಬಾರನ ದಿನೇಶ್, ಖಜಾಂಚಿ ಹೆಚ್.ಎಸ್.ನಾಗರಾಜ್ ಹಾಗೂ ನಿರ್ದೇಶಕ ಜೆಸ್ಟಿನ್ ಡಿಸೋಜಾ ಇದ್ದರು.

ಕೆದಂಬಾಡಿ ರಾಮಯ್ಯ ಗೌಡರ ಸಂಸ್ಮರಣಾ ದಿನಾಚರಣೆಯಲ್ಲಿ ಶಾಸಕಿ ಭಾಗೀರಥಿ ಮುರುಳ್ಯ ಆಶಯ

ಬೆಳ್ಳಾರೆಯಲ್ಲಿ ರಾಮಯ್ಯ ಗೌಡರ ಸ್ಮಾರಕ ನಿರ್ಮಾಣವಾಗಲಿ

ಸುಳ್ಯ: ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ವತಿಯಿಂದ ಬೆಳ್ಳಾರೆ ಬಂಗ್ಲೆಗುಡ್ಡೆಯಲ್ಲಿ ಸಮರ ವೀರ ಕೆದಂಬಾಡಿ ರಾಮಯ್ಯ ಗೌಡರ ಸಂಸ್ಮರಣಾ ದಿನಾಚರಣೆ ಮಂಗಳವಾರ ನಡೆಯಿತು.
ಕಾರ್ಯಕ್ರಮ ಉದ್ಘಾಟಿಸಿದ ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ, ರೈತರ ಪರವಾಗಿ ಹೋರಾಟ ಮಾಡಿದ ಸಮರ ವೀರ ಕೆದಂಬಾಡಿ ರಾಮಯ್ಯ ಗೌಡರ ಪುತ್ಥಳಿ ನಿರ್ಮಾಣವಾಗಬೇಕಿದ್ದು ಜೊತೆಗೆ ಬೆಳ್ಳಾರೆ ಬಂಗ್ಲೆಗುಡ್ಡೆಯು ಐತಿಹಾಸಿಕ ಸ್ಮಾರಕವಾಗಿ ಪ್ರೇಕ್ಷಣೀಯವಾಗಿ ಸಮರ ವೀರರ ಇತಿಹಾಸಗಳನ್ನು ಸಾರುವಂತೆ ಬದಲಾಗಬೇಕು. ಈ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯಬೇಕು ಎಂದು ಅವರು ಹೇಳಿದರು.

ಪ್ರತಿ ವರ್ಷ ಆಚರಣೆ

ಅರೆಭಾಷೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಮರವೀರ ಕೆದಂಬಾಡಿ ರಾಮಯ್ಯ ಗೌಡರ ಸಂಸ್ಮರಣೆ ಪ್ರತಿ ವರ್ಷ ಆಚರಿಸುವಂತಾಗಬೇಕು. ಬಂಗ್ಲೆಗುಡ್ಡೆಯನ್ನು ಐತಿಹಾಸಿಕ ಸ್ಮಾರಕವಾಗಿ ಮಾಡಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಸಂಸ್ಕೃತಿ ಇಲಾಖೆಯ ಅಧೀನದಲ್ಲಿ ತರಬೇಕಾದ ಅಗತ್ಯತೆಯಿದೆ. ಸಂಸ್ಕೃತಿ ಇಲಾಖೆಯ ಅಧೀನದಲ್ಲಿಯಾದರೆ ಸಾಕಷ್ಟು ಅನುದಾನ ತಂದು ಅಭಿವೃದ್ಧಿ ಮಾಡಲು ಸಾಧ್ಯವಿದೆ. ಬಂಗ್ಲೆಗುಡ್ಡೆಯ ಅಭಿವೃದ್ಧಿಯ ನಿಟ್ಟಿನಲ್ಲಿ ಅರೆಭಾಷೆ ಅಕಾಡೆಮಿ ಎಲ್ಲಾ ಪ್ರಯತ್ನ ನಡೆಸುತ್ತಿದೆ ಎಂದು ಹೇಳಿದರು.



ಸ್ಮಾರಕ ನಿರ್ಮಾಣವಾಗಲಿ

ಸುಳ್ಯ ಶ್ರೀ ಶಾರದಾ ಪದವಿ ಪೂರ್ವ ಕಾಲೇಜಿನ ಇತಿಹಾಸ ಪ್ರಾಧ್ಯಾಪಕ ಪ್ರಸನ್ನ ನಿಡ್ಯಮಲೆ ಮಾತನಾಡಿ, ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮೊದಲು ರೈತರಿಗಾಗುತ್ತಿರುವ ಅನ್ಯಾಯದ ವಿರುದ್ಧ ನಡೆದ ಹೋರಾಟವಾಗಿದ್ದು ಈ ಹೋರಾಟಗಳಿಗೆ ರಾಷ್ಟ್ರೀಯ ಕಲ್ಪನೆಗಳು ಇರಲಿಲ್ಲ,ಆದರೂ ಹಿರಿಯರ ತ್ಯಾಗ ಬಲಿದಾನಗಳ ಫಲವಾಗಿ ನಾವು ಇಂದು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ. ಆದುದರಿಂದ ಕೆದಂಬಾಡಿ ರಾಮಯ್ಯ ಗೌಡರಂತಹ ನಾಯಕರನ್ನು ಸದಾ ಸ್ಮರಿಸುವಂತಾಗಬೇಕಿದ್ದು ಅದಕ್ಕಾಗಿ ಅವರ ಸ್ಮಾರಕ ಬಂಗ್ಲಗುಡ್ಡೆಯಲ್ಲು ನಿರ್ಮಾಣ ಆಗಬೇಕು ಎಂದು ಹೇಳಿದರು.
ವೇದಿಕೆಯಲ್ಲಿ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ರಾಜಣ್ಣ, ಬೆಳ್ಳಾರೆ ಗ್ರಾ.ಪಂ. ಆಡಳಿತಾಧಿಕಾರಿ, ಜಿ.ಪಂ. ಎ.ಇ.ಇ. ಎಂ.ಎಂ. ಫಯಾಜ್ ಅಹ್ಮದ್, ಬೆಳ್ಳಾರೆ ಪೋಲೀಸ್ ಉಪನಿರೀಕ್ಷಕ ಈರಯ್ಯ ದೂಂತೂರು, ಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್.ಎನ್. ಮನ್ಮಥ, ಬೆಳ್ಳಾರೆ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ರಾಮಕೃಷ್ಣ ಭಟ್ ಕುರುಂಬುಡೇಲು, ಅಮರ ಸುಳ್ಯ ಸಮರ ತಾಲೂಕು ಸಮಿತಿ ಅಧ್ಯಕ್ಷ ಚಂದ್ರಾ ಕೋಲ್ಚಾರ್, ಸುಬ್ರಹ್ಮಣ್ಯ ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷೆ ರಾಜೀವಿ ಆರ್. ರೈ, ಪ್ರಮುಖರಾದ ಕಾಮಧೇನು ಮಾಧವ ಗೌಡ, ಮುಗುಪ್ಪು ಕೂಸಪ್ಪ ಗೌಡ, ಬೆಳ್ಳಾರೆ ಗ್ರಾಮ ಗೌಡ ಸಂಘದ ಅಧ್ಯಕ್ಷ ಐತ್ತಪ್ಪ ಗೌಡ, ಸುಳ್ಯ ತಾಲೂಕು ಮಾಜಿ ಸೈನಿಕರ ಸಂಘದ ಅಧ್ಯಕ್ಷ ಜಯಕರ ಮಡ್ತಿಲ ಭಾಗವಹಿಸಿದ್ದರು. ಸವಿತಾ ಸಂದೇಶ್ ಆಶಯ ಗೀತೆ ಹಾಡಿದರು. ಬೆಳ್ಳಾರೆ ಕೆಪಿಎಸ್ ವಿದ್ಯಾರ್ಥಿಗಳು ನಾಡಗೀತೆ ಹಾಡಿದರು. ಕಾರ್ಯಕ್ರಮ ಸದಸ್ಯ ಸಂಚಾಲಕ ಡಾ.ಎನ್.ಎ. ಜ್ಞಾನೇಶ್ ಸ್ವಾಗತಿಸಿ, ಅಕಾಡೆಮಿ ಸದಸ್ಯೆ ಚಂದ್ರಾವತಿ ಬಡ್ಡಡ್ಕ ವಂದಿಸಿದರು. ಲತಾಶ್ರೀ ಸುಪ್ರೀತ್ ಮೋಂಟಡ್ಕ ನಿರ್ವಹಿಸಿದರು.

ಮೆರವಣಿಗೆ-ಪುಷ್ಪ ನಮನ

ಕಾರ್ಯಕ್ರಮ ಆರಂಭಕ್ಕೂ ಮೊದಲು ಬೆಳ್ಳಾರೆ ಅಂಬೇಡ್ಕರ್ ಭವನದ ಮುಂಭಾಗದಿಂದ ಬಂಗ್ಲೆಗುಡ್ಡೆ ತನಕ ಮೆರವಣಿಗೆ ನಡೆಯಿತು. ಬಳಿಕ ಮೆರವಣಿಗೆ ಬಂಗ್ಲೆಗುಡ್ಡೆಯಲ್ಲಿ ಆಗಮಿಸಿ ಸಮರವೀರ ಕೆದಂಬಾಡಿ ರಾಮಯ್ಯ ಗೌಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಕುಂಪಲ ಶ್ರೀ ಬಾಲಕೃಷ್ಣ ಮಂದಿರ 19ನೇ ವರ್ಷದ ಪ್ರತಿಷ್ಠಾ ಉತ್ಸವ



ಉಳ್ಳಾಲ: ಶ್ರೀರಾಮನ ಭಜನೆಯನ್ನು ನಿರಂತರವಾಗಿ ಭಜಿಸಿದ ಪರಿಣಾಮ ಸಾಮಾನ್ಯ ಉದ್ಯೋಗದಲ್ಲಿದ್ದ ನಾನು ಇಂದು ಉದ್ಯಮಿಯಾಗಲು ಸಾಧ್ಯವಾಗಿದೆ. ಮಾತ್ರವಲ್ಲದೆ ನನ್ನ ಉದ್ಯಮವು ಪ್ರಭು ಶ್ರೀರಾಮನ ಜನ್ಮಭೂಮಿ ಅಯೋಧ್ಯೆಗೂ ವ್ಯಾಪಿಸಿದೆ ಎಂದು ಬೆಂಗಳೂರಿನ ಉದ್ಯಮಿ ರಕ್ಷಿತ್ ಪೂಜಾರಿ ಕೋಟ ಹೇಳಿದರು.
ಕುಂಪಲ ಶ್ರೀ ಬಾಲಕೃಷ್ಣ ಮಂದಿರದ ಹತ್ತೊಂಬತ್ತನೇ ವರ್ಷದ ಪ್ರತಿಷ್ಠಾ ಮಹೋತ್ಸವದ ಪ್ರಯುಕ್ತ ಭಾನುವಾರ ಸಂಜೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.
ತೊಕ್ಕೊಟ್ಟು ಶ್ರೀನಿಧಿ ಜ್ಯುವೆಲ್ಲರ್ಸ್ ಮಾಲಕ ಗೋಪಾಲ್ ಆಚಾರ್ಯ ಸಭೆಯನ್ನು ಉದ್ಘಾಟಿಸಿದರು. ಕಂಪ್ಯೂಟರ್ ಸಾಯನ್ಸ್‌ನಲ್ಲಿ ಪಿಎಚ್ ಡಿ ಪದವಿಗಳಿಸಿದ ಸಂಶೋಧಕಿ ಪ್ರೊ.ಡಾ.ವಿದ್ಯಾ ಕುಮಾರಿ ಅವರನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು.
ಬಿಜೆಪಿ ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಅವಿನಾಶ್ ಸುವರ್ಣ, ಬಿಜೆಪಿ ಯುವ ಮೋರ್ಚದ ಜಿಲ್ಲಾ ಉಪಾಧ್ಯಕ್ಷ ನಿಶಾನ್ ಪೂಜಾರಿ, ಉದ್ಯಮಿಗಳಾದ ನಿಖಿಲ್ ಸುವರ್ಣ, ಪ್ರಕಾಶ್ ತೊಕ್ಕೊಟ್ಟು,ಮಟನ್ ರಾಜ,ರಾಘವೇಂದ್ರ ಬೆಂಗಳೂರು, ಬಾಲಕೃಷ್ಣ ಮಂದಿರದ ಪ್ರಧಾನ ಕಾರ್ಯದರ್ಶಿ ರವೀಂದ್ರ ಕುಂಪಲ, ಉಪಾಧ್ಯಕ್ಷ ಗಣೇಶ್ ಅಂಚನ್, ಮಹಿಳಾ ಸಮಿತಿ ಅಧ್ಯಕ್ಷರಾದ ಜಯಲಕ್ಷ್ಮೀ ಬಿ.ಜೆ. ಉಪಸ್ಥಿತರಿದ್ದರು. ಮಂದಿರದ ಅಧ್ಯಕ್ಷರಾದ ಸತೀಶ್ ಕುಂಪಲ ಸ್ವಾಗತಿಸಿದರು. ಸಂಘಟನಾ ಕಾರ್ಯದರ್ಶಿ ಪ್ರವೀಣ್ ಎಸ್.ಕುಂಪಲ ನಿರೂಪಿಸಿದರು. ಕೃಷ್ಣ ಪೊಣ್ಣೆತ್ತೋಡು ವಂದಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಬಾಲಕೃಷ್ಣ ಮಂದಿರದ ಮಹಿಳಾ ಸದಸ್ಯರಿಂದ 'ಸಿರಿ ನಾರಾಯಣ' ಎಂಬ ಪೌರಾಣಿಕ ನಾಟಕ ಪ್ರದರ್ಶನಗೊಂಡಿತು.

ಕಡಬ ಬಸ್ ನಿಲ್ದಾಣದಲ್ಲಿ ನೀರಿನ ವ್ಯವಸ್ಥೆ, ವಿಸ್ತೃತ ವಿಶ್ರಾಂತಿ ಕೊಠಡಿಯ ಉದ್ಘಾಟನೆ



ಕಡಬ: ಇಲ್ಲಿನ ಮುಖ್ಯ ಪೇಟೆಯಲ್ಲಿರುವ ಬಸ್ ತಂಗುದಾಣದಲ್ಲಿ ದಾನಿಗಳ ನೆರವಿನಿಂದಅಳವಡಿಸಲಾಗಿರುವ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಪ್ರಯಾಣಿಕರ ವಿಸ್ತೃತ ವಿಶ್ರಾಂತಿ ಕೊಠಡಿಯ ಉದ್ಘಾಟನ ಕಾರ್ಯಕ್ರಮವು ಮಂಗಳವಾರ ನೆರವೇರಿತು.
ಉದ್ಘಾಟನೆ ನೆರವೇರಿಸಿದ ಕಡಬ ಪಟ್ಟಣ ಪಂಚಾಯತ್ ಅಧ್ಯಕ್ಷೆ ತಮನ್ನಾ ಜಬೀನ್, ಸಾರ್ವಜನಿಕರ ಅನುಕೂಲತೆಗಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಪ್ರಯಾಣಿಕರ ವಿಸ್ತೃತ ವಿಶ್ರಾಂತಿ ಕೊಠಡಿಯನ್ನು ವ್ಯವಸ್ಥೆಗೊಳಿಸಲಾಗಿದೆ. ನಮ್ಮ ಕೋರಿಕೆಯ ಮೇರೆಗೆ ಕಡಬದ ಜೆಎಂಜೆ ಆಸ್ಪತ್ರೆಯ ಆಡಳಿತ ಮಂಡಳಿ ಕೊಡುಗೆಯಾಗಿ ನೀಡಿದ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಅಳವಡಿಸಿದೆ. ಇಬ್ಬರು ಸ್ಥಳೀಯ ವರ್ತಕರು ಬಸ್ ಪ್ರಯಾಣಿಕರಿಗೆ ಕುಳಿತುಕೊಳ್ಳುವ ಬೆಂಚುಗಳನ್ನು ಕೊಡುಗೆಯಾಗಿ ನೀಡಿ ಸಹಕರಿಸಿದ್ದಾರೆ. ಪಟ್ಟಣ ಪಂಚಾಯತ್ ವತಿಯಿಂದ ಬಸ್ ನಿಲ್ದಾಣಕ್ಕೆ ಸುಣ್ಣ ಬಣ್ಣ ಬಳಿದು ದುರಸ್ತಿ ನಡೆಸಲಾಗಿದೆ. ಹೊಸದಾಗಿ ನೀರಿನ ಟ್ಯಾಂಕ್ ಅಳವಡಿಸಲಾಗಿದೆ ಎಂದರು.
ಕೆಎಸ್ಆರ್ಟಿಸಿ ಸಂಚಾರ ನಿಯಂತ್ರಕ ಕುಶಾಲಪ್ಪ ಗೌಡ ಮಾತನಾಡಿದರು. ಪಟ್ಟಣ ಪಂಚಾಯತ್ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಎಂ. ಹನೀಫ್, ಉಪಾಧ್ಯಕ್ಷೆ ನೀಲಾವತಿ ಶಿವರಾಮ್, ಮುಖ್ಯಾಧಿಕಾರಿ ಲೀಲಾವತಿ ಇ., ಸದಸ್ಯರಾದ ದಯಾನಂದ ಪಿಜಕ್ಕಳ, ಕೃಷ್ಣಪ್ಪ ಬೈಲಂಗಡಿ, ರೋಹಿತ್ ಪಣೆಮಜಲು, ಅಕ್ಷತಾ ಮಣಿಮುಂಡ, ಗುಣವತಿ ರಘುರಾಮ, ಮೋಹನ, ಕೃಷ್ಣಪ್ಪ ನಾಯ್ಕ್, ಕುಸುಮ ಅಂಗಡಿಮನೆ, ಪ್ರಮುಖರಾದ ಸಯ್ಯದ್ ಇಕ್ಬಾಲ್, ಸತೀಶ್ ನಾಯ್ಕ್ ಮೇಲಿನಮನೆ ಮತ್ತಿತರರು ಇದ್ದರು. ಪಟ್ಟಣ ಪಂಚಾಯತ್ ಸಿಬಂದಿ ಹರೀಶ್ ಬೆದ್ರಾಜೆ ಸ್ವಾಗತಿಸಿ, ವಂದಿಸಿದರು.

ಕೈಗೊಂಡ ನಿರ್ಣಯಗಳಿಗೆ ಬೆಲೆಯಿಲ್ಲದಿದ್ದರೆ ಸಭೆ ಯಾಕೆ?



ವಿಟ್ಲ: ಪಟ್ಟಣ ಪಂಚಾಯತ್ ಮಾಸಿಕ ಸಭೆಯ ನಿರ್ಣಯಕ್ಕೆ ಸರಿಯಾದ ಬೆಲೆ ಸಿಗುತ್ತಿಲ್ಲ ಯಾಕೆ ಎಂದು ಸದಸ್ಯ ವಿ.ಕೆ.ಎಂ. ಅಶ್ರಫ್ ಪ್ರಶ್ನಿಸಿದರು.
ಪಟ್ಟಣ ಪಂಚಾಯತ್ ಅಧ್ಯಕ್ಷ ಕರುಣಾಕರ ನಾಯ್ತೊಟ್ಟು ಅಧ್ಯಕ್ಷತೆಯಲ್ಲಿ ಪಟ್ಟಣ ಪಂಚಾಯತ್ ಸಭಾಂಗಣದಲ್ಲಿ ನಡೆದ ಮಾಸಿಕ ಸಭೆಯಲ್ಲಿ, ಈ ಹಿಂದೆ ಕೈಗೊಳ್ಳಲಾಗಿರುವ ನಿರ್ಣಯಗಳ ಕುರಿತು ಸದಸ್ಯರು ಪ್ರಸ್ತಾವಿಸಿದರು. ಏಲಂ ಹಾಗೂ ತೆರಿಗೆ ವಿಚಾರದಲ್ಲಿ ಮುಂದಿನ ಸಭೆಯಲ್ಲಿ ತೀರ್ಮಾನ ಕೈಗೊಳ್ಳುವ ನಿರ್ಣಯ ಕೈಗೊಳ್ಳಲಾಗಿತ್ತು. ಈಗ ಸಂತೆ ನಡೆಸಿ ಕೇವಲ ರೂ. 200 ಹೆಚ್ಚಳವಾಗಿ ಪಂಚಾಯತ್‌ಗೆ ನಷ್ಟವಾಗಿದೆ. ಸದಸ್ಯರ ನಿರ್ಣಯದಂತೆ ಶೇ.10 ಹೆಚ್ಚು ಮಾಡಿ ಕ್ರಮ ಕೈಗೊಂಡಿದ್ದರೆ, ಪಂಚಾಯತ್‌ಗೆ ಲಾಭ ಆಗುತ್ತಿತ್ತು ಮತ್ತು ಸ್ಥಳೀಯರಿಗೆ ಆದ್ಯತೆ ಸಿಕ್ಕು ಜನರಿಗೂ ಸಹಾಯ ಆಗುತ್ತಿತ್ತು ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.
ಶ್ರೀಪಂಚಲಿಂಗೇಶ್ವರ ದೇವಸ್ಥಾನದ ಜಾತ್ರೆಯ ಸಂತೆ ವಿಚಾರದಲ್ಲಿ ಹೆಚ್ಚುವರಿಗೆ ಹಣ ಪಡೆದ ವಿಚಾರದಲ್ಲಿ ದೂರು ಬಂದಿದೆ. ಟೆಂಡರ್ ಪಡೆದವರಿಗೆ ಪಟ್ಟಣ ಪಂಚಾಯತ್‌ನಿಂದ ನೋಟೀಸ್ ನೀಡಿದರೂ ಹಾಜರಾಗದ ಕಾರಣ ಅಗತ್ಯ ಕಾನೂನಿನ ಕ್ರಮ ಆಗಬೇಕು. ಈ ಮೂಲಕ ಸಂತೆ ಅಂಗಡಿಯವರಿಗೆ ನ್ಯಾಯ ಒದಗಿಸುವ ಕಾರ್ಯ ಆಗಬೇಕು. ಅಂಗಡಿಯವರಿಂದ ದಾಖಲೆಗಳನ್ನು ಪಡೆದು ಪೊಲೀಸ್ ದೂರು ನೀಡಬೇಕು. ಮುಂದೆ ಗುತ್ತಿಗೆ ಹಾಕದಂತೆ ಆತನನ್ನು ಬ್ಲಾಕ್ ಲಿಸ್ಟ್‌ಗೆ ಹಾಕುವ ಕೆಲಸ ಆಗಬೇಕು ಎಂದು ಸದಸ್ಯರು ಆಗ್ರಹಿಸಿದರು.
ಟ್ಯಾಂಕ್ ಸ್ವಚ್ಛ ಮಾಡಲು ಬರುವವರು ಏಣಿ ಬೇಕು ಎಂಬ ಬೇಡಿಕೆ ಇಡುತ್ತಿದ್ದಾರೆ ನಾವೇನು ಮಾಡಬೇಕು ಎಂದು ಸದಸ್ಯರು ಪ್ರಶ್ನಿಸಿದರು. ಕಲ್ಲಕಟ್ಟದಲ್ಲಿ ತೋಡಿನಲ್ಲಿರುವ ಟ್ಯಾಂಕ್ ಇದುವರೆಗೆ ಸ್ವಚ್ಛ ಮಾಡಿಲ್ಲ ಎಂದು ಸದಸ್ಯ ಸಿ.ಎಚ್. ಜಯಂತ್ ಹೇಳಿದರು.
ಮುಖ್ಯಾಧಿಕಾರಿ ಕರುಣಾಕರ ವಿ., ಉಪಾಧ್ಯಕ್ಷೆ ಸಂಗೀತ ಪಾಣೆಮಜಲು, ಸ್ಥಾಯಿ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ ಕಿರಿಯ ಅಭಿಯಂತರ ಮನೋಜ್ ಕುಮಾರ್ ಉಪಸ್ಥಿತರಿದ್ದರು.

ಬೀದಿ ದೀಪ ಸರಿಯಿರಲಿ

ಟೆಂಡರ್ ಆದ ಮೇಲೆ ಎಲ್‌ಇಡಿ ಲೈಟಾ ಅಥವಾ ಟ್ಯಾಬ್ ಲೈಟಾ ಎಂದು ಕೇಳುವುದು ಸರಿಯಲ್ಲ, ಟೆಂಡರ್ ಮೊದಲು ಈ ಕುರಿತು ಷರತ್ತು ಹಾಕಬೇಕು ಎಂದು ಸದಸ್ಯ ರವಿಪ್ರಕಾಶ್ ಹೇಳಿದರು. ಟ್ಯಾಬ್ ಹಾಗೂ ಎಲ್ ಇಡಿ ನಡುವಿನ ವ್ಯತ್ಯಾಸ ಹಣವನ್ನು ನೋಡುವುದು ಉತ್ತಮ. ಟ್ಯೂಬ್ ಆದರೆ ಉತ್ತಮ. ಹಾಗೆಂದು ಅದು ಸಂಪೂರ್ಣ ಸೆಟ್ ಸರಿ ಇರಬೇಕು ಎಂದು ಅಬ್ದುಲ್ ರಹಿಮಾನ್ ಅಭಿಪ್ರಾಯ ವ್ಯಕ್ತಪಡಿಸಿದರು. ಎಲ್‌ಇಡಿ 100 ವ್ಯಾಟ್ ಆಗಿ ಎರಡು ವರ್ಷ ಗ್ಯಾರೆಂಟಿ ನೀಡುವುದಾದರೆ ಅದರಲ್ಲಿ ಬೆಳಕು ಹೆಚ್ಚು, ಅದೇ ಉತ್ತಮ ಎಂದು ಇಕ್ಬಾಲ್ ಹಾನೆಸ್ಟ್ ಹೇಳಿದರು.

ಬ್ಯಾಂಕ್ ಗ್ರಾಹಕಸ್ನೇಹಿ ರಮಾನಂದ ಆಚಾರ್ಯ ವಯೋನಿವೃತ್ತಿ, ಸನ್ಮಾನ



ಶಿರ್ವ: ಬ್ಯಾಂಕಿಂಗ್ ವೃತ್ತಿಯಲ್ಲಿ ಸುಮಾರು 40 ವರ್ಷಗಳ ಸೇವೆ ಜೊತೆ ಗ್ರಾಹಕ ಸ್ನೇಹಿಯಾಗಿದ್ದ ರಮಾನಂದ ಆಚಾರ್ಯ ಉಡುಪಿ ಮಂಗಳವಾರ ಬಂಟಕಲ್ಲು ಕರ್ನಾಟಕ ಬ್ಯಾಂಕ್ ಶಾಖೆಯಲ್ಲಿ ವಯೋನಿವೃತ್ತಿ ಸಂದರ್ಭ ಬ್ಯಾಂಕ್ ಸಿಬ್ಬಂದಿ, ಗ್ರಾಹಕರು, ವಿವಿಧ ಭಾಗದ ಮಾಜಿ ಸಹೋದ್ಯೋಗಿಗಳ ಸಮ್ಮುಖದಲ್ಲಿ ಉಡುಪಿ ವಲಯದ ಸಹಾಯಕ ಮಹಾ ಪ್ರಬಂಧಕ ರಮೇಶ್ ವೈದ್ಯ ಸನ್ಮಾನಿಸಿದರು. ನಿವೃತ್ತರ ಪತ್ನಿ ಅರ್ಚನಾ ಆಚಾರ್ಯ ವೇದಿಕೆಯಲ್ಲಿದ್ದರು. ನಿವೃತ್ತರ ಸೇವೆ ಬಗ್ಗೆ ಗ್ರಾಹಕರಾದ ಕೆ.ಆರ್. ಪಾಟ್ಕರ್, ಸ್ಯಾಮ್ಸನ್ ನೊರೋನ್ಹಾ, ಪುಂಡಲೀಕ ಮರಾಠೆ, ಸಹೋದ್ಯೋಗಿ ವಾದಿರಾಜ ಆಚಾರ್ಯ, ಉಡುಪಿ ಶಾಖಾಧಿಕಾರಿ ಸುಬ್ರಹ್ಮಣ್ಯ ಬಾರ್ವೆ ಮಾತನಾಡಿದರು. ವಿಘ್ನೇಶ್ವರ ಉಡುಪ ನಿರೂಪಿಸಿದರು. ದಿವ್ಯಾ ವಂದಿಸಿದರು.

ಕಾಪುವಿನಲ್ಲಿ 94 ಸಿ, 94 ಸಿಸಿ ಅಡಿ ಹಕ್ಕುಪತ್ರ, ಸೌಲಭ್ಯಗಳ ಹಸ್ತಾಂತರ



ಕಾಪು: ಕಾಪು ವಿಧಾನಸಭಾ ಕ್ಷೇತ್ರದ ಕಾಪು ತಾಲ್ಲೂಕು ವ್ಯಾಪ್ತಿಯ ಫಲಾನುಭವಿಗಳಿಗೆ 94, ಸಿ ಹಾಗೂ 94, ಸಿಸಿ ಅಡಿಯಲ್ಲಿ ಮಂಜೂರಾದ ಖಾಯಂ ನಿವೇಶನ ಹಕ್ಕುಪತ್ರವನ್ನು ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ತಮ್ಮ ಶಾಸಕರ ಕಚೇರಿಯಲ್ಲಿ ವಿತರಿಸಿದರು.
ಸುಮಾರು 20ಕ್ಕೂ ಅಧಿಕ ವರ್ಷಗಳಿಂದ ವಾಸವಾಗಿರುವ ಕಟಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಏಣಗುಡ್ಡೆ ನಿವಾಸಿ ಮಂಜುಳಾ ರಾಣಿ, ವಿಮಲಾ ಅಮೀನ್, ಮೂಡಬೆಟ್ಟು ಗ್ರಾಮದ ಇಂದಿರಾ ಆಚಾರ್ಯ, ಕುರ್ಕಾಲು ಗ್ರಾಮ ಪಂಚಾಯತ್ ವ್ಯಾಪ್ತಿಯ ಭವಿತಾ, ಪಾದೆಬೆಟ್ಟು ಗ್ರಾಮ ಪಂಚಾಯತ್ ವ್ಯಾಪ್ತಿಯ ಪಾರಿಜ ಸೇರಿದಂತೆ ಒಟ್ಟು 5 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಮಾಡಲಾಯಿತು.
ಉಪನಿರ್ದೇಶಕರು ಗ್ರಾಮಾಂತರ ಕೈಗಾರಿಕೆ ಜಿಲ್ಲಾ ಪಂಚಾಯತ್ ಉಡುಪಿ ವತಿಯಿಂದ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ ಸರಬರಾಜು ಯೋಜನೆಯಡಿ ಗ್ರಾಮೀಣ ಪ್ರದೇಶದ ವೃತ್ತಿನಿರತ ಕುಶಲಕರ್ಮಿಗಳಿಗೆ ಗರಿಷ್ಠ 8000 ವರೆಗೆ ಟೈಲರಿಂಗ್, ಮರಗೆಲಸ, ಗಾರೆಕೆಲಸ, ಎಲೆಕ್ಟ್ರೀಶಿಯನ್, ಬ್ಯೂಟಿಪಾರ್ಲರ್, ಕ್ಷೌರಿಕ ವೃತ್ತಿಯವರಿಗೆ ಸೇರಿದಂತೆ ಒಟ್ಟು 81 ಫಲಾನುಭವಿಗಳಿಗೆ ಉಚಿತ ಸುಧಾರಿತ ಉಪಕರಣಗಳನ್ನು ವಿತರಿಸಲಾಯಿತು.

ಉಡುಪಿ: 'ಮನ್ ಕೀ ಬಾತ್' ನೇರ ಪ್ರಸಾರದ ಸಾಮೂಹಿಕ ವೀಕ್ಷಣೆ



ಉಡುಪಿ: ಬಿಜೆಪಿ ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾದ ಸಂಯೋಜನೆಯಲ್ಲಿ ಮಾ.29ರಂದು ಉಡುಪಿ ಕಕ್ಕುಂಜೆಯ ಪಾಸ್ಟರಲ್ ಸೆಂಟರ್ 'ಅನುಗ್ರಹ'ದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ 132ನೇ 'ಮನ್ ಕೀ ಬಾತ್' ಕಾರ್ಯಕ್ರಮದ ನೇರ ಪ್ರಸಾರದ ಸಾಮೂಹಿಕ ವೀಕ್ಷಣೆಯು ಉಡುಪಿ ಜಿಲ್ಲಾ ಕೆಥೋಲಿಕ್ ಧರ್ಮ ಪ್ರಾಂತ್ಯದ ವಿವಿಧ ಧರ್ಮಗುರುಗಳ ಉಪಸ್ಥಿತಿಯಲ್ಲಿ ನೆರವೇರಿತು.
ಈ ಸಂದರ್ಭದಲ್ಲಿ ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಉಡುಪಿ-ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ಯಶ್ಪಾಲ್ ಎ. ಸುವರ್ಣ, ಕಿರಣ್ ಕುಮಾರ್ ಕೊಡ್ಗಿ, ಗುರುರಾಜ್ ಗಂಟಿಹೊಳೆ, ಸುರೇಶ್ ಶೆಟ್ಟಿ ಗುರ್ಮೆ, ಬಿಜೆಪಿ ಮಂಗಳೂರು ವಿಭಾಗ ಪ್ರಭಾರಿ ಭಾರತೀಶ್, ಬಿಜೆಪಿ ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾದ ಅಧ್ಯಕ್ಷ ರುಡಾಲ್ಫ್ ಡಿಸೋಜ, ರಾಜ್ಯ ಕಾರ್ಯದರ್ಶಿ ಜೆಸಲ್ ಡಿಸೋಜ, ಬಿಜೆಪಿ ಉಡುಪಿ ನಗರಾಧ್ಯಕ್ಷ ದಿನೇಶ್ ಅಮೀನ್, ಉಡುಪಿ ನಗರಸಭೆಯ ನಿಕಟಪೂರ್ವ ಅಧ್ಯಕ್ಷ ಪ್ರಭಾಕರ ಪೂಜಾರಿ, ಜಿಲ್ಲಾ ಕೆಥೋಲಿಕ್ ಸಭಾ ಅಧ್ಯಕ್ಷ ಮೆಲ್ವಿನ್ ಶಿರ್ವ, ನಿಕಟಪೂರ್ವ ಅಧ್ಯಕ್ಷ ರೊನಾಲ್ಡ್ ಡಿ. ಅಲ್ಮೇಡಾ ಉದ್ಯಾವರ, ಮಾಜಿ ಅಧ್ಯಕ್ಷ ಸಂತೋಷ್ ಕರ್ನೇಲಿಯೋ, ಲೆಸ್ಲಿ ಆರೋಜಾ ತೊಟ್ಟಂ, ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾ ಉಪಾಧ್ಯಕ್ಷರಾದ ಮೈಕಲ್ ಡಿಸೋಜ, ಜೆರಾಲ್ಡ್ ಸೂಡ, ಪ್ರಧಾನ ಕಾರ್ಯದರ್ಶಿಗಳಾದ ಅಪ್ಸರ್ ಉಚ್ಚಿಲ, ಶೇಖ್ ಆಸಿಫ್ ಕಟಪಾಡಿ, ಕೋಶಾಧಿಕಾರಿ ಗ್ಲೆನ್ ಮೋನಿಸ್, ಮೋರ್ಚಾದ ಮಾಜಿ ರಾಜ್ಯ ಕಾರ್ಯದರ್ಶಿ ಸಲೀಂ ಅಂಬಾಗಿಲು, ಮಾಜಿ ನಗರಸಭಾ ಸದಸ್ಯ ಬಾಲಕೃಷ್ಣ ಶೆಟ್ಟಿ, ಉಡುಪಿ ನಗರ ಪ್ರಧಾನ ಕಾರ್ಯದರ್ಶಿ ರಶ್ಮಿತಾ ಬಿ. ಶೆಟ್ಟಿ, ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾದ ಕಾರ್ಯಕಾರಿಣಿ ಸದಸ್ಯರಾದ ನವೀನ್ ಡಿಸೋಜ, ಅನಿಲ್ ಅಂಬಲಪಾಡಿ, ಜಸಿಂತಾ, ಜಾನ್ಸನ್, ಮೆಲ್ವಿನ್, ಮೋರ್ಚಾದ ಮಂಡಲ ಪದಾಧಿಕಾರಿಗಳು ಹಾಗೂ ಧರ್ಮ ಭಗಿನಿಯರ ಸಹಿತ 100ಕ್ಕೂ ಮಿಕ್ಕಿ ಅಲ್ಪಸಂಖ್ಯಾತ ಕುಟುಂಬಗಳ ಸದಸ್ಯರು ಉಪಸ್ಥಿತರಿದ್ದರು. 'ಮನ್ ಕೀ ಬಾತ್' ಜಿಲ್ಲಾ ಸಂಚಾಲಕ ಶಿವಕುಮಾರ್ ಅಂಬಲಪಾಡಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ದಡ್ಡಲಕಾಡು-ದೇವಿನಗರಶ್ರೀ ಜಗದಂಬಿಕಾ ಶ್ರೀ ಮಹಮ್ಮಾಯಿ ಗುಳಿಗ ಅಣ್ಣಪ್ಪ ಕ್ಷೇತ್ರದಲ್ಲಿ ಹೊರೆಕಾಣಿಕೆ ಮೆರವಣಿಗೆ

ಏ. 4ರವರೆಗೆ ನವೀಕರಣ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ, ಶ್ರೀ ಚಂಡಿಕಾಯಾಗ

ಬಂಟ್ವಾಳ: ತಾಲೂಕಿನ ಮೂಡನಡುಗೋಡು ಗ್ರಾಮದ ದಡ್ಡಲಕಾಡು-ದೇವಿನಗರ ಶ್ರೀ ಜಗದಂಬಿಕಾ ಶ್ರೀ ಮಹಮ್ಮಾಯಿ ಗುಳಿಗ ಅಣ್ಣಪ್ಪ ಕ್ಷೇತ್ರದ ನವೀಕರಣ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ, ಶ್ರೀ ಚಂಡಿಕಾಯಾಗ ಹಾಗೂ ಸಪರಿವಾರ ದೇವರ ಪ್ರತಿಷ್ಠಾ ಮಹೋತ್ಸವವು ಸೋಮವಾರ ಹೊರೆಕಾಣಿಕೆ ಮೆರವಣಿಗೆಯ ಮೂಲಕ ಚಾಲನೆ ನೀಡಲಾಗಿದ್ದು, ಏ. 4ರವರೆಗೆ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ನಡೆಯಲಿದೆ ಎಂದು ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಾಮದಾಸ್ ಬಂಟ್ವಾಳ ತಿಳಿಸಿದ್ದಾರೆ.
ಸೋಮವಾರ ಬಂಟ್ವಾಳ ಪ್ರೆಸ್‌ಕ್ಲಬ್‌ನಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಸ್ಥಳೀಯ ಗ್ರಾಮಗಳನ್ನೊಳಗೊಂಡು ನಿರ್ಮಾಣವಾಗಿದ್ದ ಮಂದಿರ ಈಗ ಕ್ಷೇತ್ರವಾಗಿ ಪರಿವರ್ತನೆಗೊಂಡು ದೇವರ ಬಿಂಬವನ್ನು ಆರಾಧಿಸಲಾಗುತ್ತಿದೆ. ಭಕ್ತರ ಇಷ್ಟಾರ್ಥವನ್ನು ನೆರವೇರಿಸುತ್ತಿದೆ. ಇಜ್ಜ ಶಿವಕ್ಷೇತ್ರದ ಶ್ರೀ ಸತ್ಯನಾರಾಯಣ ಭಟ್ ಶಿವ ಕ್ಷೇತ್ರ. ಇಜ್ಜ ಇವರ ನೇತೃತ್ವದಲ್ಲಿ ತಂತ್ರಿ ವೇದಮೂರ್ತಿ ಶ್ರೀ ವಿದ್ಯಾಶಂಕರ ಭಟ್ ಅವರ ಮಾರ್ಗದರ್ಶನದಲ್ಲಿ ವೈದಿಕ ವಿಧಿ-ವಿಧಾನಗಳು ನಡೆಯಲಿದೆ ಎಂದರು.
ಏ. 1ರಂದು ವಿವಿಧ ವೈದಿಕ ವಿಧಿ ವಿಧಾನಗಳು, ಸಂಜೆ ಸ್ಥಳೀಯ ಪ್ರತಿಭೆಗಳಿಂದ ಸಾಂಸ್ಕೃತಿಕ ಸಂಗಮ ಜರಗಲಿದೆ. ಏ.2ರಂದು ಶ್ರೀ ದೇವರ ಬಿಂಬ ಪುನರ್ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ ನೆರವೇರಲಿದೆ. ಬಳಿಕ ಬಿಜೆಪಿ ನಾಯಕಿ ಸುಲೋಚನ ಜಿ.ಕೆ. ಭಟ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸುಧರ್ಮ ಸಭೆಯಲ್ಲಿ ಬ್ರಹ್ಮಶ್ರೀ ಆನಂದಸಿದ್ಧಿ ಪೀಠಂನ ಡಾ.ಮಹರ್ಷಿ ಆನಂದ ಗುರೂಜಿ ಆರ್ಶೀವಚನ ನೀಡಲಿದ್ದಾರೆ.
ಶಾಸಕರು, ಸಂಸದರು ಮತ್ತಿತರರು ಹಲವಾರು ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಂಜೆ ತುಳು ನಾಟಕ ಪ್ರದರ್ಶನ ಗೊಳ್ಳಲಿದೆ. ಬ್ರಹ್ಮಕಲಶೋತ್ಸವದ ಪ್ರಯುಕ್ತ ಪ್ರತಿದಿನ ಅನ್ನಸಂತರ್ಪಣೆ ಇರಲಿದೆ. ಏ.3ರಂದು ಚಂಡಿಕಾ ಹವನ, ಪರಿವಾರ ದೈವಗಳಿಗೆ ಪರ್ವಾರಾಧನೆ,ಶ್ರೀ ಜಗದಂಬಿಕಾ ಸಾನಿಧ್ಯದಲ್ಲಿ ಸೀಯಾಳಾಭಿಷೇಕ, ರಾತ್ರಿ ಯಕ್ಷಗಾನ ಬಯಲಾಟ, ಏ.4ರಂದು ಮಾರಿ ಪೂಜಾ ಉತ್ಸವ ನಡೆಯಲಿದೆ ಎಂದು ವಿವರಿಸಿದರು.
ಸುದ್ದಿಗೋಷ್ಠಿಯಲ್ಲಿ ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಧರ್ಣಪ್ಪ ಪೂಜಾರಿ ರಾಮನಗರ, ಧಾರ್ಮಿಕ ಕಾರ್ಯಕ್ರಮ ಸಂಚಾಲಕ ದಾಮೋದರ ಜೆ.ಡಿ. ಇದ್ದರು.



ವೈಭವದ ಹೊರೆಕಾಣಿಕೆ ಮೆರವಣಿಗೆ

ಹೊರೆಕಾಣಿಕೆ ಮೆರವಣಿಗೆ ಸೋಮವಾರ ಸಂಜೆ ಬಂಟ್ವಾಳ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಆವರಣದಿಂದ ವೈಭವಪೂರ್ಣವಾದ ಹೊರೆಕಾಣಿಕೆ ಮೆರವಣಿಗೆ ನಡೆಯಿತು. ಬಂಟ್ವಾಳ ನಗರದ ಮೂಲಕ ಜಕ್ರಿಬೆಟ್ಟು ಆಗಿ ಶ್ರೀಕ್ಷೇತ್ರದಲ್ಲಿ ಸಂಪನ್ನಗೊಂಡಿತು. ಚೆಂಡೆ, ಕುಣಿತಭಜನೆ, ಬೊಂಬೆ ಕುಣಿತ, ವಾದ್ಯಗೋಷ್ಠಿಗಳು ಮೆರವಣಿಗೆಗೆ ವಿಶೇಷ ಮೆರಗು ನೀಡಿತು.

ಧಾರ್ಮಿಕ ಸಭೆ

ಮಂಗಳವಾರ ವಿವಿಧ ವೈದಿಕ ವಿಧಾನಗಳು ನಡೆಯಿತು. ಸಂಜೆ ಮಾಜಿ ಶಾಸಕ ಎ. ರುಕ್ಮಯ ಪೂಜಾರಿ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭಾ ಕಾರ್ಯ ನಡೆಯಿತು. ಮಾಜಿ ಸಚಿವರು, ಉದ್ಯಮಿಗಳು, ಧಾರ್ಮಿಕ ನೇತಾರರು ಸಮಾಜಿಕ ಕಾರ್ಯಕರ್ತರು ಅತಿಥಿಗಳಾಗಿ ಭಾಗವಹಿಸಿದ್ದರು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ನಾಟಕ ಪ್ರರ್ಶನ ನಡೆಯಿತು.

ಸುತ್ತಮುತ್ತ

ಬಂಟರ ಸಂಘ ಪ್ರಧಾನ ಕಾರ್ಯದರ್ಶಿಯಾಗಿ ರವೀಂದ್ರ ವಿ. ರೈ ಆಯ್ಕೆ

ಮಡಿಕೇರಿ: ಕೊಡಗು ಜಿಲ್ಲಾ ಬಂಟರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ರವೀಂದ್ರ ವಿ. ರೈ ಪುನರಾಯ್ಕೆಯಾಗಿದ್ದಾರೆ. ಸಂಘದ ಅಧ್ಯಕ್ಷ ಬಿ.ಡಿ. ಜಗದೀಶ್ ರೈ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೂತನ ಆಡಳಿತ ಮಂಡಳಿಗೆ ಪದಾಧಿಕಾರಿಗಳು ಹಾಗೂ ನಿರ್ದೇಶಕರನ್ನು ಆಯ್ಕೆ ಮಾಡಲಾಯಿತು. ಗೌರಧ್ಯಕ್ಷರಾಗಿ ಬಿ.ಬಿ. ಐತಪ್ಪ



ರೈ ಪುನರಾಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ರತ್ನಾಕರ ರೈ, ಸದಾಶಿವ ರೈ, ಲೀಲಾಧರ ರೈ, ಜನಾರ್ಧನ ಶೆಟ್ಟಿ ಮತ್ತು ಸದಾನಂದ ರೈ, ಖಜಾಂಚಿಯಾಗಿ ಪ್ರಮೋದ್ ಕುಮಾರ್ ರೈ, ಸಂಘಟನಾ ಕಾರ್ಯದರ್ಶಿಯಾಗಿ ಅಪ್ಪು ಬಾಲಕೃಷ್ಣ ರೈ, ಸಹಕಾರ್ಯದರ್ಶಿಗಳಾಗಿ ಬಿ.ಸಿ. ಹರೀಶ್ ರೈ ಮತ್ತು ಮನೋಜ್ ಶೆಟ್ಟಿ, ಸಹ ಖಜಾಂಚಿಯಾಗಿ ಜಗನ್ನಾಥ್ ರೈ ಮೂರ್ನಾಡು ಅವರನ್ನು ಆಯ್ಕೆ ಮಾಡಲಾಗಿದೆ. ಕ್ರೀಡಾ ಸಮಿತಿಯ ಅಧ್ಯಕ್ಷರಾಗಿ ಶರತ್ ಶೆಟ್ಟಿ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷರಾಗಿ ಪ್ರತಿಮಾ ಹರೀಶ್ ರೈ, ಸ್ವಚ್ಛತಾ ಆಂದೋಲನದ ಸಂಚಾಲಕರಾಗಿ ನಗರಸಭಾ ಸದಸ್ಯ ಅರುಣ್ ಶೆಟ್ಟಿ, ಮಾಧ್ಯಮ ಸಂಯೋಜಕರಾಗಿ ಹೇಮಂತ್ ಕುಮಾರ್ ಶೆಟ್ಟಿ, ಸಾಮಾಜಿಕ ಜಾಲತಾಣ ಸಂಯೋಜಕರಾಗಿ ಕಿಶೋರ್ ರೈ ಕತ್ತಲೆಕಾಡು, ಕಾನೂನು ಸಲಹೆಗಾರರಾಗಿ ಮಂಜುನಾಥ ಚೌಟ ಆಯ್ಕೆಯಾಗಿದ್ದಾರೆ. ಇದರೊಂದಿಗೆ ನಿರ್ದೇಶಕರುಗಳಾಗಿ 46 ಮಂದಿಯನ್ನು ಆಡಳಿತ ಮಂಡಳಿಗೆ ನೇಮಿಸಿಕೊಳ್ಳಲಾಗಿದೆ ಎಂದು ಬಿ.ಡಿ. ಜಗದೀಶ್ ರೈ ಮಾಹಿತಿ ನೀಡಿದ್ದಾರೆ. ಇದೇ ವೇಳೆ ಕೊಡಗು ಜಿಲ್ಲಾ ಬಂಟರ ಭವನ ಟ್ರಸ್ಟ್‌ನ ನೂತನ ಕಾರ್ಯದರ್ಶಿಯಾಗಿ ಬಾಲಕೃಷ್ಣ(ಅಪ್ಪು) ರೈ, ಖಜಾಂಚಿಯಾಗಿ ಗಿರೀಶ್ ರೈ ಆಯ್ಕೆಯಾಗಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಹೆಬ್ರಿ ಅಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಬಾಲಚಂದ್ರ ಮುದ್ರಾಡಿ ಆಯ್ಕೆ

ಹೆಬ್ರಿ: ಪತ್ರಕರ್ತ, ನಿವೃತ್ತ ಹಿರಿಯ ಆರೋಗ್ಯ ನಿರೀಕ್ಷಕ ಬಾಲಚಂದ್ರ ಮುದ್ರಾಡಿ ಇವರು ಅಲಯನ್ಸ್ ಕ್ಲಬ್ ಹೆಬ್ರಿ ಇದರ 2026-27 ನೇ ಸಾಲಿನ



ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಕ್ಲಬ್ ನ ಅಧ್ಯಕ್ಷರಾದ ಕಬ್ಬಿನಾಲೆ ರಾಮಚಂದ್ರ ಭಟ್ ಇವರ ಅಧ್ಯಕ್ಷತೆಯಲ್ಲಿ ಮಾ.28ರಂದು ನಡೆದ ಮಾಸಿಕ ಸಭೆಯಲ್ಲಿ ನೂತನ ಅಧ್ಯಕ್ಷರಾಗಿ ಬಾಲಚಂದ್ರ ಮುದ್ರಾಡಿ, ಕಾರ್ಯದರ್ಶಿಯಾಗಿ ಸುರೇಶ ನಾಯ್ಕ್, ಕೋಶಾಧಿಕಾರಿಯಾಗಿ ನ್ಯಾಯವಾದಿ ವರಂಗ ಸುರೇಶ ಪೂಜಾರಿ ಹಾಗೂ ಉಪಾಧ್ಯಕ್ಷರಾಗಿ ಕಬ್ಬಿನಾಲೆ ಶ್ರೀಧರ ಹೆಬ್ಬಾರ್, ಅಶೋಕ ಕುಮಾರ್ ಶೆಟ್ಟಿ ಮುದ್ರಾಡಿ, ನಿತ್ಯಾನಂದ ಭಟ್ ಹುತ್ತುರ್ಕೆ ಮತ್ತು ಇತರ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. 2026-27ನೇ ಸಾಲಿನ ಅಲಯನ್ಸ್ ಕ್ಲಬ್ ಹೆಬ್ರಿ ಸಿಟಿ ಇದರ ಅಧ್ಯಕ್ಷರಾಗಿ ಸುನೀತಾ ಹೆಬ್ಬಾರ್, ಕಾರ್ಯದರ್ಶಿಯಾಗಿ ರಮ್ಯಕಾಂತಿ, ಕೋಶಾಧಿಕಾರಿಯಾಗಿ ಅಮೃತ ಮುದ್ರಾಡಿ ಹಾಗೂ ಇತರ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ರಾಷ್ಟ್ರೀಯ ತುಳು ವಿಚಾರಗೋಷ್ಠಿ ಪ್ರಬಂಧಗಳಿಗೆ ಆಹ್ವಾನ

ಮುಲ್ಕಿ: ತುಳುನಾಡಿನ ತಾಯಿ ಮೂಲ ಸಂಸ್ಕೃತಿ, ಆಚಾರ-ವಿಚಾರ ಮತ್ತು ದೈವ ಪರಂಪರೆ ಆಧಾರವಾಗಿಟ್ಟುಕೊಂಡು ನಡೆಯುವ 'ಅಪ್ಪೆ ಬೇರ್ ದ ತುಳುನಾಡ್' ರಾಷ್ಟ್ರೀಯ ತುಳು ವಿಚಾರಗೋಷ್ಠಿ ಮೇ 24ಕ್ಕೆ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರದಲ್ಲಿ ನಡೆಯಲಿದೆ. ಈ ವಿಚಾರಗೋಷ್ಠಿಯ ಅಂಗವಾಗಿ ಸಂಶೋಧಕರು, ಲೇಖಕರು, ವಿದ್ಯಾರ್ಥಿಗಳು ಹಾಗೂ ತುಳು ಅಭಿಮಾನಿಗಳಿಗೆ ಪ್ರಬಂಧ ಮಂಡಿಸಲು ಅವಕಾಶ ಕಲ್ಪಿಸಲಾಗಿದೆ.

ವಿಷಯಕ್ಕೆ ಸಂಬಂಧಿಸಿದ ಪ್ರಬಂಧ ಮಾತೃಮೂಲ ಪದ್ಧತಿ ಸಂಬಂಧಪಟ್ಟ ಅಧ್ಯಯನ, ಅಳಿಯ ಸಂತಾನ ಪದ್ಧತಿ, ಜೀವನ ಪದ್ಧತಿ ಮತ್ತು ನಂಬಿಕೆಗಳು, ತುಳುನಾಡಿನ ಜನಪದ ಕಥೆಗಳಲ್ಲಿ ಮಾತೃ ಮೂಲ ಪದ್ಧತಿಗಳು, ಮಾತೃಮೂಲ ಪದ್ಧತಿ ಬಗ್ಗೆ ಪ್ರಬಂಧ ಮಂಡಿಸಬಹುದು. ಈ ಬಗ್ಗೆ ಮಾಹಿತಿಯನ್ನು ಆಸಕ್ತರು ಗೀತಾ ಗಣೇಶ್ ಪ್ರಧಾನ ಕಾರ್ಯದರ್ಶಿ, 'ಅಪ್ಪೆ ಬೇರ್ ದ ತುಳುನಾಡ್ ರಾಷ್ಟ್ರೀಯ ತುಳು ವಿಚಾರಗೋಷ್ಠಿ 2026, ಅಕ್ಕ ಸಂಜೀವಿನಿ ಮುಲ್ಕಿ - 574154, ತುಳುನಾಡು, ಸಂಪರ್ಕ ಸಂಖ್ಯೆ: 94831 04506 ಇವರಿಗೆ ಕಳುಹಿಸಿಕೊಡುವಂತೆ ಪ್ರಕಟಣೆ ಮೂಲಕ ತಿಳಿಸಲಾಗಿದೆ.

ಕಲಾಪೀಠ ಸಂಸ್ಥೆಯಿಂದ ವಿಶ್ವರಂಗ ಭೂಮಿ ದಿನಾಚರಣೆ

ಕೋಟ: ಇಲ್ಲಿನ ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರದಲ್ಲಿ ಕಲಾಪೀಠ ಕೋಟ ಸಂಸ್ಥೆ ನೇತೃತ್ವದಲ್ಲಿ ವಿಶ್ವ ರಂಗಭೂಮಿ ದಿನಾಚರಣೆಯ ಕಾರ್ಯಕ್ರಮ ಇತ್ತೀಚಿಗೆ ಜರಗಿತು.

ಪ್ರಜ್ಞಾನಮ್ ಟ್ರಸ್ಟ್‌ನ ಸಂಚಾಲಕ ಜಿ.ಪಿ. ಪ್ರಭಾಕರ ತುಮರಿ, ರಂಗಭೂಮಿ ದಿನಾಚರಣೆಯ ಬಗ್ಗೆ ಸಂದೇಶ ನೀಡಿದರು. ರಂಗ ನಿರ್ದೇಶಕ ರೊಹಿತ್ ಬೈಕಾಡಿ ಮಾತನಾಡಿದರು. ನಿವೃತ್ತ ಶಿಕ್ಷಕ ರಾಮಚಂದ್ರ ಐತಾಳ ರಂಗಗೀತೆಯನ್ನು ಹಾಡುವದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದೇ ಸಂದರ್ಭ ಹಿಮ್ಮೇಳದ ಕಲಾವಿದರಾದ ಉದಯ ಹೊಸಾಳ, ಗಣೇಶ ಶೆಣೈ, ಹಾಗೂ ವಾಗ್ವಿಲಾಸ ಭಟ್ಟ ಅವರನ್ನು ಗೌರವಿಸಲಾಯಿತು. ಕಲಾಪೀಠದ ಕಾರ್ಯದರ್ಶಿ ಕೆ. ನರಸಿಂಹ ತುಂಗ ಸ್ವಾಗತಿಸಿ, ಸಂಸ್ಥೆಯ ಸದಸ್ಯೆ ವೃಂದ ವಂದಿಸಿದರು. ಕಲಾಪೀಠದ ಸದಸ್ಯರಿಂದ 'ಸುಗ್ರೀವ ಸಖ್ಯ' ಎಂಬ ಪೌರಾಣಿಕ ಆಖ್ಯಾನ ಪ್ರದರ್ಶನಗೊಂಡಿತು.

ಶಾಸಕ ಅಶೋಕ್ ಕುಮಾರ್‌ರಿಂದ ಚಾಲನೆ | ಚಿಕಿತ್ಸೆಗೆ ಬರುವ ಬಡ ರೋಗಿಗಳಿಗೆ ಮತ್ತಷ್ಟು ಅನುಕೂಲ

ಪುತ್ತೂರು ಸರ್ಕಾರಿ ಆಸ್ಪತ್ರೆಗೆ 6 ಹೆಚ್ಚುವರಿ ಡಯಲಿಸಿಸ್ ಯಂತ್ರ

ಪುತ್ತೂರು: ಪುತ್ತೂರು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಹೆಚ್ಚುವರಿಯಾಗಿ 6 ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸಲಾಗಿದ್ದು, ಮಾ.30ರಂದು ಶಾಸಕ ಅಶೋಕ್ ಕುಮಾರ್ ರೈ ಚಾಲನೆ ನೀಡಿದರು.

ಶಾಸಕನಾಗುವ ಮೊದಲೇ ಡಯಾಲಿಸೀಸ್ ವ್ಯವಸ್ಥೆ ಬಗ್ಗೆ ನಾನು ಕಾಳಜಿ ವಹಿಸಿದ್ದೆ. ಡಯಾಲಿಸಿಸ್ ದೊರೆಯದೇ ಯಾರೂ ಕೂಡ ಬಲಿಯಾಗಬಾರದು ಎಂಬ ಉದ್ದೇಶದಿಂದ ಆರೋಗ್ಯ ಇಲಾಖೆಯ ಆಯುಕ್ತರು, ವೈದ್ಯರಲ್ಲಿ ಚರ್ಚಿಸಿ ತುರ್ತಾಗಿ 6 ಡಯಾಲಿಸೀಸ್ ಯಂತ್ರಗಳಿಗೆ ಇದೀಗ ಚಾಲನೆ ನೀಡಲಾಗುತ್ತಿದ್ದು, ಜನರ ಜೀವ ಉಳಿಸುವುದಕ್ಕಾಗಿ ಇಂದಿನಿಂದಲೇ ಕಾರ್ಯ ನಿರ್ವಹಿಸಲಿವೆ ಎಂದು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಸರ್ಕಾರಿ ಆಸ್ಪತ್ರೆಯಲ್ಲಿ 17 ಡಯಾಲಿಸೀಸ್ ಯಂತ್ರಗಳು ಈಗಾಗಲೇ ಕಾರ್ಯ ನಿರ್ವಹಿಸುತ್ತಿದ್ದು, 157 ಮಂದಿ ರೋಗಿಗಳು ಪ್ರಯೋಜನ ಪಡೆದು ಕೊಳ್ಳುತ್ತಿದ್ದಾರೆ. ರಾತ್ರಿ ಹಗಲು ಡಯಾಲಿಸೀಸ್ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. 48 ಮಂದಿ ವೈಟಿಂಗ್ ಲಿಸ್ಟ್‌ನಲ್ಲಿದ್ದಾರೆ. 6 ಯಂತ್ರಗಳು ಸೇರ್ಪಡೆಗೊಂಡಿದ್ದು



ಈಗ ಒಟ್ಟು 23 ಯಂತ್ರಗಳಾಗಿದೆ. ಇದರಿಂದ ವೈಟಿಂಗ್ ಲಿಸ್ಟ್‌ನಲ್ಲಿರುವ 48 ಜನರಿಗೂ ಉಚಿತ ಸೇವೆ ದೊರೆಯಲಿದೆ. ಖಾಸಗಿಯಾಗಿ ಡಯಾಲಿಸೀಸ್ ಮಾಡಿಸುವುದಾದರೆ ರೂ.1650 ನೀಡಬೇಕಾಗಿದ್ದು, ಸರಕಾರಿ ಆಸ್ಪತ್ರೆಯಲ್ಲಿ ಡಯಾಲಿಸೀಸ್ ಮಾಡಿಸುವ ರೋಗಿಗಳಿಗೆ ಸರ್ಕಾರವೇ ಒಂದು ಡಯಾಲಿಸೀಸ್‌ಗೆ ರೂ.1500 ನೀಡುತ್ತಿದೆ. ಇದು ಬಡವರಿಗೆ ಸರಕಾರ ನೀಡುವ ದೊಡ್ಡ ವರದಾನವಾಗಿದೆ ಎಂದರು.

ಹಿಂದಿನ ಸರ್ಕಾರದ ಅವಧಿಯಲ್ಲಿ ಡಯಾಲಿಸಿಸ್ ವ್ಯವಸ್ಥಿತವಾಗಿ ನಡೆಯುತ್ತಿರಲಿಲ್ಲ, ಒಂದು ಕಿಟ್‌ನಲ್ಲಿ 2-3 ಡಯಾಲಿಸೀಸ್ ಮಾಡಲಾಗುತ್ತಿತ್ತು. ಉತ್ತರ ಕರ್ನಾಟಕದವರಿಗೆ ಏಜೆನ್ಸಿ ನೀಡಲಾಗಿದ್ದು, ಅವರು ಯಾರ ಮಾತೂ ಕೇಳುತ್ತಿರಲಿಲ್ಲ, ನಮ್ಮ ಸರಕಾರ ಬಂದ ಬಳಿಕ ಹೊಸ ಏಜೆನ್ಸಿ ಮಾಡಿ ಒಂದು ಕಿಟ್‌ನಲ್ಲಿ 1 ಡಯಾಲಿಸಿಸ್ ಮಾತ್ರ ಮಾಡಲಾಗುತ್ತಿದೆ ಎಂದು ಹೇಳಿದ ಶಾಸಕರು, ಕಡಬದಲ್ಲಿ 3 ಯಂತ್ರ ಅಳವಡಿಸಲಾಗಿದ್ದು ಅಲ್ಲಿಂದ ಇಲ್ಲಿ ಬರಬೇಕಾಗಿದ್ದವರಿಗೆ ಇದರಿಂದ ಅನುಕೂಲವಾಗಲಿದೆ. ಅಲ್ಲದೆ, ಇಲ್ಲಿನ ಒತ್ತಡವೂ ಕಡಿಮೆಯಾಗಲಿದ್ದು, ರಾತ್ರಿ 10 ಗಂಟೆಯ ಒಳಗಡೆ ಸೇವೆ ನೀಡಲು ಪ್ರಯತ್ನಿಸಲಾಗುವುದು. ಹೆಚ್ಚುವರಿಯಾಗಿ ಯಂತ್ರ ಅಳವಡಿಸಲಾಗಿದ್ದು, ಡಯಾಲಿಸೀಸ್‌ಗೆ ರಾತ್ರಿ ಬರುತ್ತಿದ್ದವರಿಗೂ ಒಂದು ತಿಂಗಳಲ್ಲಿ ಪರಿಹಾರ ನೀಡಲಾಗುವುದು. ಸರಕಾರಿ ಆಸ್ಪತ್ರೆಯಲ್ಲಿ ಸಿಬ್ಬಂದಿ ನಗುಮೊಗದಿಂದ ಖಾಸಗಿ ಆಸ್ಪತ್ರೆಯ ಮಾದರಿಯಲ್ಲಿ ಸೇವೆ ನೀಡುತ್ತಿದ್ದಾರೆ ಎಂದು ಶಾಸಕರು ಹೇಳಿದರು.

ಸರ್ಕಾರಿ ಆಸ್ಪತ್ರೆಯ ರಕ್ಷಾ ಸಮಿತಿ ಸದಸ್ಯ ಅರುಣಾ ದಿನಕರ ರೈ, ಸಿದ್ದೀಕ್, ಆಡಳಿತ ವೈದ್ಯಾಧಿಕಾರಿ ಡಾ. ಯದುರಾಜ್, ಕೆಪಿಸಿಸಿ ಸಂಯೋಜಕ ಕಾವು ಹೇಮನಾಥ ಶೆಟ್ಟಿ, ಪಕ್ಷದ ಪ್ರಮುಖರಾದ ರವೀಂದ್ರ ರೈ ನೆಕ್ಕಿಲು, ಸಂತೋಷ್ ಭಂಡಾರಿ ಚಿಲ್ಮೆತ್ತಾರು, ಸನತ್ ರೈ, ಜಯಪ್ರಕಾಶ್ ಬದಿನಾರು, ಫಾರೂಕ್ ಬಾಯಬ್ಬೆ ಮತ್ತಿತರರು ಉಪಸ್ಥಿತರಿದ್ದರು.

> **ಪೈನ್ ಕಿಲ್ಲರ್ ಸೇವಿಸಬೇಡಿ**
> ಡಯಾಲಿಸೀಸ್‌ಗೆ ಬರುವವರಲ್ಲಿ ಬಹುತೇಕ ಮಂದಿ ಪೈನ್ ಕಿಲ್ಲರ್ ಮಾತ್ರೆ ತಿಂದು ಕಿಡ್ನಿ ಕಳೆದುಕೊಂಡವರು. ಪೈನ್ ಕಿಲ್ಲರ್ ಅತಿಯಾಗಿ ಸೇವಿಸುವುದರಿಂದ ಆರು ತಿಂಗಳಲ್ಲಿ ಕಿಡ್ನಿ ಹೋಗುತ್ತದೆ. ವೈದ್ಯರ ಸಲಹೆ ಇಲ್ಲದೆ ಯಾರೂ ಪೈನ್ ಕಿಲ್ಲರ್ ಅಥವಾ ಯಾವುದೇ ಮಾತ್ರೆ ತೆಗೆದುಕೊಳ್ಳಬಾರದು. ಈ ಬಗ್ಗೆ ಸರ್ಕಾರ ಅರಿವು ಮೂಡಿಸಬೇಕು. ವೈದ್ಯರ ಸಲಹೆ ಇಲ್ಲದೆ ಸ್ವಂತ ಇಚ್ಛೆಯಲ್ಲಿ ಔಷಧಿ ಪಡೆದು ಸೇವಿಸಬಾರದು.
> ● ಅಶೋಕ್ ಕುಮಾರ್ ರೈ, ಶಾಸಕ

ಜೈ ತುಳುನಾಡು ಬಂಟ್ವಾಳ ಎಗ್ಗೆಗೆ 'ಸಾಧನ ಪುರಸ್ಕಾರ', ಶಿಕ್ಷಕರಿಗೆ 'ಅಕ್ಷರ ಪುರಸ್ಕಾರ' ಪ್ರದಾನ

ಯುವವಾಹಿನಿ ಮಾಣಿ ಘಟಕ ಪದಾಧಿಕಾರಿಗಳ ಪದಗ್ರಹಣ

ಬಂಟ್ವಾಳ: ಯುವವಾಹಿನಿ ಮಾಣಿ ಘಟಕದ ಪದಗ್ರಹಣ ಸಮಾರಂಭ ಮಾಣಿ ಕೊಡಾಜೆಯ ನಕ್ಷತ್ರ ಆಡಿಟೋರಿಯಂನಲ್ಲಿ ಭಾನುವಾರ ನಡೆಯಿತು.

ಕಾರವಾರ ಜಿಲ್ಲೆಯ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಕುಮಾರಚಂದ್ರ ಕಾರ್ಯಕ್ರಮ ಉದ್ಘಾಟಿಸಿ,ದರು. ಯುವವಾಹಿನಿ ಮಾಣಿ ಘಟಕದ ಅಧ್ಯಕ್ಷ ಶಿವರಾಜ್ ಪಿ.ಆರ್.ಅಧ್ಯಕ್ಷತೆ ವಹಿಸಿದ್ದರು. ಯುವವಾಹಿನಿ ಕೇಂದ್ರ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು ಗಣೇಶ್ ಪೂಜಾರಿ ಕೊಡಾಜೆ ನೇತೃತ್ವದ ನೂತನ ಸಮಿತಿಗೆ ಪದಪ್ರದಾನ ನೆರವೇರಿಸಿದರು. ಕರ್ನಾಟಕ ಹೆಚ್ಚುವರಿ ಅಡ್ವೋಕೇಟ್ ಜನರಲ್ ತಾರನಾಥ ಪೂಜಾರಿ ಇರುವೈಲ್ ಮಾಣಿಕ್ಯ ವಿಶೇಷಾಂಕ ಬಿಡುಗಡೆಗೊಳಿಸಿದರು. ಕುದ್ರೋಳಿ ಗೋಕರ್ಣನಾಥ ಕ್ಷೇತ್ರ ಮಂಗಳೂರು ಕೋಶಾಧಿಕಾರಿ ಪದ್ಮರಾಜ್ ಆರ್ ಪೂಜಾರಿ, ಜೈ ತುಳುನಾಡು ಬಂಟ್ವಾಳ ಎಗ್ಗೆಗೆ ಯುವವಾಹಿನಿ ಮಾಣಿ ಘಟಕದ 'ಸಾಧನ ಪುರಸ್ಕಾರ' ನೀಡಿ ಶುಭ ಹಾರೈಸಿದರು.

ಲ್ಯಾಧಿಕಾರಿಗಳ ತಾಂತ್ರಿಕ ಸಹಾಯಕ ಪುಷ್ಪರಾಜ್ ಪೂಜಾರಿ ವಿದ್ಯಾರ್ಥಿ ವೇತನ ವಿತರರಿಸಿದರು. ಯುವ ವಾಹಿನಿ ಮಾಣಿ ಘಟಕದ ವೃತ್ತಿ ನಿರತ ಶಿಕ್ಷಕ ಸದಸ್ಯರಿಗೆ 'ಅಕ್ಷರ ಪುರಸ್ಕಾರ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕರ್ನಾಟಕ ಕಿಕ್ ಬಾಕ್ಸಿಂಗ್ ಸ್ಪೋರ್ಟ್ಸ್ ಅಸೋಸಿಯೇಷನ್ ರಾಜ್ಯಾಧ್ಯಕ್ಷ ಸತ್ಯಜಿತ್ ಸುರತ್ಕಲ್, ಮಂಗಳೂರು ಐ.ಎಂ.ಎ ಅಧ್ಯಕ್ಷ ಡಾ. ಸದಾನಂದ ಪೂಜಾರಿ, ವಕೀಲ ರಂಜಿತ್ ಪೂಜಾರಿ ಮೈರ, ಯುವವಾಹಿನಿ ಕೇಂದ್ರ ಸಮಿತಿಯ ಸಂಘಟನಾ ಕಾರ್ಯದರ್ಶಿ



ಸೋಮಸುಂದರ್ ಸಾಲಿಯಾನ್, ಮಾಣಿ ಘಟಕದ ಕಾರ್ಯದರ್ಶಿ ದೀಪಕ್ ಪೆರಾಜೆ ಇದ್ದರು. ಶ್ರೇಯ ಸಿಂಧು ಸೃಷ್ಟಿ ಪ್ರಾರ್ಥಿಸಿ, ಸಚಿನ್ ಪೆರಾಜೆ ಸ್ವಾಗತಿಸಿ, ದೀಪಕ್ ಪೆರಾಜೆ ವರದಿ ವಾಚಿಸಿದರು, ನಾಗೇಶ್ ಕೊಂಕಣಪದವು ನೂತನ ಸಮಿತಿಯ ಪಟ್ಟಿ ವಾಚಿಸಿದರು. ವಿಶ್ವನಾಥ ಊರ್ದಿಲ ವಂದಿಸಿದರು. ರಾಜೇಶ್ ಬಲ್ಯ, ರೇಣುಕಾ ಕಣಿಯೂರು ನಿರೂಪಿಸಿದರು.

ನೂತನ ಸಮಿತಿ

ಅಧ್ಯಕ್ಷರಾಗಿ ಗಣೇಶ್ ಪೂಜಾರಿ ಕೊಡಾಜೆ ಪ್ರಥಮ ಉಪಾಧ್ಯಕ್ಷರಾಗಿ ಸುಜಿತ್ ಅಂಚನ್ ಮಾಣಿ, 2ನೇ ಉಪಾಧ್ಯಕ್ಷರಾಗಿ ಸತೀಶ್ ಕೊಪ್ಪರಿಗೆ, ಕಾರ್ಯದರ್ಶಿಯಾಗಿ ವಿಶ್ವನಾಥ ಉರ್ದಿಲ, ಜತೆ ಕಾರ್ಯದರ್ಶಿಯಾಗಿ ಶಶಿಪ್ರಭಾ ಮಿತ್ತೂರು, ಕೋಶಾಧಿಕಾರಿ ತ್ರಿವೇಣಿ ರಮೇಶ್ ಮುಜಲ, ಸಾಂಸ್ಕೃತಿಕ ನಿರ್ದೇಶಕರಾಗಿ ಕೃಪಾನ್ ಪುತ್ತೂರು, ನಾರಾಯಣ ಗುರು ತತ್ವ ನಿರ್ದೇಶಕರಾಗಿ ಶ್ರೀಧರ್ ಮುಜಲ, ವ್ಯಕ್ತಿತ್ವ ವಿಕಸನ ನಿರ್ದೇಶಕರಾಗಿ ಸತೀಶ್ ಮುರುವ, ಸಾಹಿತ್ಯ ಮತ್ತು ಕಲೆ ನಿರ್ದೇಶಕರಾಗಿ ರಾಜೇಶ್ ಕೋಟ್ಯಾನ್, ಕ್ರೀಡಾ ಕಾರ್ಯದರ್ಶಿ ಸಂದೇಶ್ ಕಡೇಶ್ವಾಲ್ಯ, ಆರೋಗ್ಯ ನಿರ್ದೇಶಕರಾಗಿ ರತಿ ಸುರ್ಲಾಜೆ, ಉದ್ಯೋಗ ಮತ್ತು ಭವಿಷ್ಯ ನಿರ್ಮಾಣ ನಿರ್ದೇಶಕರಾಗಿ ಕೇಶವ ಬರಿಮಾರ್, ಸಮಾಜ ಸೇವಾ ನಿರ್ದೇಶಕರಾಗಿ ಸುರೇಶ್ ಬಾಕಿಲ,ಪ್ರಚಾರ ನಿರ್ದೇಶಕ ಚರಣ್ ಜೆ. ಅನಂತಾಡಿ, ಮಹಿಳಾ ನಿರ್ದೇಶಕ ಪುಷ್ಪಶ್ರೀ ನಾಗೇಶ್, ವಿದ್ಯಾರ್ಥಿ ಸಂಘಟನೆ ನಿರ್ದೇಶಕರಾಗಿ ಯಶಸ್ವಿನಿ, ಶ್ರೇಯ, ಭವಿಷ್ಯ ಬಾಕಿಲ,ಸಂಘಟನಾ ಕಾರ್ಯದರ್ಶಿ ಅನಂತಾಡಿಗೆ ಸೀತಾಲಕ್ಷ್ಮಿ, ಸುಜೀತ್ ಬಾಕಿಲ, ಮಾಣಿಗೆ ಸ್ಮಿತಾ ಹಳೀರ, ಗಂಗಾಧರ್ ಮಾಣಿ ಬರಿಮಾರ್‌ಗೆ ಸಾಯಿ ಪ್ರಣಾಮ್, ಭರತ್ ಕೇವ, ರಾಮಣ್ಣ ನೆಟ್ಲಾ ಮೂಡ್ನೂರುಗೆ ಪ್ರಸಾದ್ ಮಿತ್ತಕೋಡಿ, ಮೋಹನ್ ಮುಜಲ, ಪೆರಾಜೆಗೆ ಲೋಹಿತ್ ಮಡಲ, ಸುಕೇಶ್ ಬಡೇಕೋಡಿ ಕೆದಿಲಕ್ಕೆ ಬಾಲಕೃಷ್ಣ ಕೆರೆಕೋಡಿ, ನಿತಿನ್ ಅಂಗರಾಜೆ, ಇಡ್ಕಿದುಗೆ ನವೀನ್ ಸೂರ್ಯ, ರೇಖಾ ಇಡ್ಕಿದು, ಬಿಳಿಯೂರುಗೆ ವಿಕ್ರಮ್ ಬಿಳಿಯೂರು, ಚೇತನ್ ಮಲ್ಲಡ್ಕ, ಪೆರ್ನೆಗೆ ಅಮಿತಾ ಪೆರ್ನೆ, ಶುಭ ಪೆರ್ನೆ, ಕಡೇಶ್ವಾಲ್ಯಕ್ಕೆ ಯಶೋಧ, ಶಿವಾನಿ, ಸಲಹೆಗಾರರಾಗಿ ಲೋಕನಾಥ್ ತಿಮರಾಜೆ ಆಯ್ಕೆಯಾಗಿದ್ದಾರೆ.

ಸ್ವಚ್ಛ ಮನೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ರಮೇಶ್ ಶೇಣವ ಸಲಹೆ

ಪ್ರಕೃತಿಯೊಂದಿಗಿನ ಒಡನಾಟದಿಂದ ಆರೋಗ್ಯ

ಕೊಣಾಜೆ: ರಾಷ್ಟ್ರೀಯ ಸ್ವಚ್ಛತಾ ಅಭಿಯಾನ ಸ್ವಚ್ಛ ಪರಿಸರ - ಸ್ವಚ್ಛಮನೆ ಕಾರ್ಯಕ್ರಮದ ಅಂಗವಾಗಿ ಮುಡಿಪು ಅಪ್ನಾದೇಶ್ ಸ್ವಚ್ಛತಾ ಬಳಗ ಜನಶಿಕ್ಷಣ ಟ್ರಸ್ಟ್ ವತಿಯಿಂದ ಕಣಂತೂರು ಪುಷ್ಪ -ಕೇಶವರ ಮನೆಗೆ ಸ್ವಚ್ಛ ಮನೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಮುಡಿಪು ಜನಶಿಕ್ಷಣ ಟ್ರಸ್ಟ್‌ನ ಸರ್ವೋದಯ ಸಭಾಂಗಣದಲ್ಲಿ ಮಂಗಳವಾರ ನಡೆಯಿತು.

ಅಪ್ನಾ ದೇಶ್ ಸ್ವಚ್ಛತಾ ಬಳಗದ ಮುಖಂಡ ರಮೇಶ್ ಶೇಣವ ಪ್ರಶಸ್ತಿ ವಿತರಿಸಿದರು. ಬಳಿಕ ಮಾತನಾಡಿದ ಅವರು ಮನೆಯ ಸುತ್ತ ಹಸಿರು ಪರಿಸರ,ಪ್ರಾಣಿ ಪಕ್ಷಿಗಳ ಒಡನಾಟದ ಹವ್ಯಾಸ ನಮ್ಮ ದೈಹಿಕ ಮಾನಸಿಕ ಆರೋಗ್ಯವನ್ನು ಹೆಚ್ಚಿಸುತ್ತದೆ.ಈ ನಿಟ್ಟಿನಲ್ಲಿ ಸ್ವಚ್ಛ ಮನೆ ಪ್ರಶಸ್ತಿ ಇತರರಿಗೆ ಪ್ರೇರಣೆಯಾಗಲಿ ಎಂದರು.

ಸ್ವಚ್ಛ ಪರಿಸರದ ಜೊತೆಗಿನ ಬದುಕು ನಮಗೆ ಮಾನಸಿಕ ನೆಮ್ಮದಿಯನ್ನು ನೀಡಿದೆ. ಮನೆ ಸುತ್ತ ಸಾಕಷ್ಟು ಹೂ, ಹಣ್ಣಿನ ಗಿಡಗಳು ಇರುವ ಕಾರಣ ವಿವಿಧ ಜಾತಿಯ ಪಕ್ಷಿಗಳು ನಿರಂತರ ಭೇಟಿ ನೀಡುತ್ತವೆ. ಗಿಡಗಳನ್ನು ಬೆಳೆಸುವುದು ಅದರ ಪಾಲನೆಯಲ್ಲಿ ನಾವಿಬ್ಬರು ತೊಡಗಿಕೊಳ್ಳುವ ಚಟುವಟಿಕೆಯಲ್ಲಿ ನಮಗೆ ಒಂದು ರೀತಿಯ ಮಾನಸಿಕ ತೃಪ್ತಿ ಇದೆ. ನಮಗೆ ಬೇಕಾದ ತರಕಾರಿ ಸೊಪ್ಪು ನಾವೇ ಬೆಳೆಸುತ್ತೇವೆ, ಸಾವಯವ ಗೊಬ್ಬರ ಬಳಸುತ್ತೇವೆ, ಸ್ವಚ್ಛ ಪರಿಸರ



ನಮ್ಮ ಬದುಕಿನ ಭಾಗವಾಗಿದೆ ಎಂದು ಪ್ರಶಸ್ತಿ ಸ್ವೀಕರಿಸಿದ ಪುಷ್ಪ ಹಾಗೂ ಕೇಶವ ದಂಪತಿ ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿ ಕರ್ನಾಟಕ ರಾಜ್ಯ ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ, ತುಳು ಸಾಹಿತಿ ಚಂದ್ರಹಾಸ ಕಣಂತೂರು ಶುಭ ಹಾರೈಸಿದರು. ದ.ಕ. ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನಶೆಟ್ಟಿ ಸ್ವಾಗತಿಸಿ, ದ.ಕ. ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪ ರಾಜ್ ಬಿ.ಎನ್, ಮಂಗಳೂರು ಆಕಾಶವಾಣಿಯ ನಿವೃತ್ತ ಉದ್ಯೋಗಿ ಶ್ಯಾಮ್ ಭಟ್, ಅಪ್ನಾದೇಶ್ ಸ್ವಚ್ಛತಾ ಬಳಗದ ಮುಖಂಡ ಇಸ್ಮಾಯಿಲ್ ಕಣಂತೂರು ಮೊದಲಾದವರು ಇದ್ದರು. ಜನಶಿಕ್ಷಣ ಟ್ರಸ್ಟ್‌ನ ನಿರ್ದೇಶಕ ಕೃಷ್ಣ ಮೂಲ್ಯ ನಿರೂಪಿಸಿದರು.

> ಜಿಲ್ಲೆಯಲ್ಲಿ ಪ್ರಥಮವಾಗಿ ಪುಷ್ಪ- ಕೇಶವ ಅವರ ಮನೆಯನ್ನು ಸ್ವಚ್ಛ ಮನೆಯೆಂದು ಗುರುತಿಸಿ ಗೌರವಿಸಲಾಗಿದೆ. ಈ ಅಭಿಯಾನ ಮುಂದುವರಿಯಲಿದೆ. ಸ್ವಚ್ಛ ಮನೆ ಸ್ವಚ್ಛ ಮನಸ್ಸು, ಸ್ವಚ್ಛ ಪರಿಸರ ಜನರ ಮೂಲಕ ವ್ಯಾಪಿಸಬೇಕು, ಪರಿಸರ ಸ್ನೇಹಿ ಬದುಕು ನಮ್ಮದಾಗಬೇಕು.
> ● ಶೀನಶೆಟ್ಟಿ

ಹಿಂದೂ ಯುವಸೇನೆ ಕೆರೆಬೈಲ್ ಕೊರಗಜ್ಜ ಶಾಖೆಯ ಬೆಳ್ಳಿಹಬ್ಬ ಸಂಭ್ರಮ



ಉಳ್ಳಾಲ: ಹಿಂದೂ ಯುವಸೇನೆ ಕೆರೆಬೈಲ್ ಕೊರಗಜ್ಜ ಶಾಖೆಯ 25ನೇ ವಾರ್ಷಿಕೋತ್ಸವದ ಬೆಳ್ಳಿಹಬ್ಬ ಹಾಗೂ ಬಿಸು ಪರ್ಬದ ಪ್ರಯುಕ್ತ ಕೆರೆಬೈಲಿನ ನಾಗರಕ್ತೇಶ್ವರಿ ಸಾನಿಧ್ಯದ ಬಳಿಯ ಮೈದಾನದಲ್ಲಿ ವಿವಿಧ ಆಟೋಟ ಸ್ಪರ್ಧೆಗಳು ನಡೆಯಿತು.

ಪತಂಜಲಿ ಯೋಗ ಶಿಕ್ಷಣ ಸಮಿತಿ, ಕರ್ನಾಟಕ ನೇತ್ರಾವತಿ ವಲಯದ ಸಂಯೋಜಕ ಜಯರಾಮ್ ಚೆಂಬುಗುಡ್ಡೆ ಆಟೋಟ ಸ್ಪರ್ಧೆ ಉದ್ಘಾಟಿಸಿದರು. ಮಂಡಳಿಯ ಗೌರವಾಧ್ಯಕ್ಷ ಭಾಸ್ಕರ ಚಂದ್ರ ಶೆಟ್ಟಿ, ಅಧ್ಯಕ್ಷ ಯಶೋಧರ ಚೌಟ, ಸಂಘಟನಾ ಕಾರ್ಯದರ್ಶಿ ನವೀನ್ ಚಂದ್ರ ಎಕ್ಕೂರು, ಶ್ರೀ ಕ್ಷೇತ್ರ ಧ.ಗ್ರಾ. ಯೋ. ಸೇವಾ ಪ್ರತಿನಿಧಿ ಅನುಸೂಯ, ಧರ್ಮ ಸಾಕ್ಷಿ ಒಕ್ಕೂಟದ ಅರುಣ್, ಕೆರೆಬೈಲ್ ಕೊರಗ ತನಿಯ ಸೇವಾ ಸಮಿತಿ ಕೋಶಾಧಿಕಾರಿ ರಾಜ ಮೆಸ್ಕಾಂ, ಶಾಖೆಯ ಅಧ್ಯಕ್ಷ ನಾರಾಯಣ ಬಿ. ಹಾಗೂ ಗೌರವಾಧ್ಯಕ್ಷ ಲೋಕೇಶ್ ಶೆಟ್ಟಿ ಇದ್ದರು. ಮಕ್ಕಳು, ಮಹಿಳೆಯರು ಹಾಗೂ ಪುರುಷರಿಗಾಗಿ ವಿವಿಧ ಕ್ರೀಡಾ ಸ್ಪರ್ಧೆಗಳು ನಡೆಯಿತು. ಮಹಿಳೆಯರಿಗಾಗಿ ಬೀಡಿ ಕಟ್ಟುವ ಸ್ಪರ್ಧೆ ವಿಶೇಷ ಆಕರ್ಷಣೆಯಾಗಿತ್ತು. ದಿನೇಶ್ ಶೆಟ್ಟಿ ಚೆಂಬುಗುಡ್ಡೆ ನಿರೂಪಿಸಿದರು.

> ಏ.4ರಂದು ಬೃಹತ್ ರಕ್ತದಾನ ಶಿಬಿರ, ಏ.6ರಿಂದ 12ರ ವರೆಗೆ ಸಂಧ್ಯಾ ಭಜನೆ, ಏ.13ರಂದು ಸಾಂಸ್ಕೃತಿಕ ಕಾರ್ಯಕ್ರಮ, ಆಶ್ಲೇಷ ಬಲಿ ನಡೆಯಲಿದೆ. ಏ.14ಕ್ಕೆ ಕುಣಿತ ಭಜನೆ, ಧಾರ್ಮಿಕ ಸಭಾ ಕಾರ್ಯಕ್ರಮ ಮತ್ತು 'ಶಿವಧೂತೆ ಗುಳಿಗೆ' ತುಳು ಪೌರಾಣಿಕ ನಾಟಕ ಪ್ರದರ್ಶನ ನಡೆಯಲಿದೆ.
> ● ದಿನೇಶ್ ಶೆಟ್ಟಿ ಚೆಂಬುಗುಡ್ಡೆ

ತ್ಯಾಜ್ಯ ಎಸೆಯುವ ಸ್ಥಳದಲ್ಲಿ ದಂಡ ವಿಧಿಸುವ ಎಚ್ಚರಿಕೆ ಬ್ಯಾನರ್ ಅಳವಡಿಕೆ!



ಮುಲ್ಕಿ: ನಗರ ಪಂಚಾಯತ್ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66ರ ಕಾರ್ನಾಡ್ ಬೈಪಾಸ್ ಬಳಿ ಕಳೆದ ಕೆಲವು ತಿಂಗಳಿನಿಂದ ಕೆಲ ಕಿಡಿಗೇಡಿಗಳು ತ್ಯಾಜ್ಯ ಎಸೆಯುತ್ತಿದ್ದು, ಪರಿಸರ ದುರ್ವಾಸನೆಯುಕ್ತ ವಾತಾವರಣ ಸೃಷ್ಟಿಯಾಗಿತ್ತು. ಮುಲ್ಕಿ ನ.ಪಂ. ಈ ಬಗ್ಗೆ ಅನೇಕ ಬಾರಿ ತ್ಯಾಜ್ಯವನ್ನು ತೆರವುಗೊಳಿಸಿದರೂ ಮತ್ತೆ ದುಷ್ಕರ್ಮಿಗಳು ತ್ಯಾಜ್ಯ ಎಸೆಯುವುದು ಮಾಮೂಲಿಯಾಗಿತ್ತು.

ಇದೀಗ ಮುಲ್ಕಿ ನಗರ ಪಂಚಾಯತ್ ಮುಖ್ಯಾಧಿಕಾರಿಗಳ ಸೂಚನೆ ಮೇರೆಗೆ ಸ್ಥಳದಲ್ಲಿ ಬ್ಯಾನರ್ ಅಳವಡಿಸಲಾಗಿದ್ದು ಬ್ಯಾನರ್‌ನಲ್ಲಿ ದಂಡ ವಿಧಿಸುವ ಎಚ್ಚರಿಕೆ ನೀಡಲಾಗಿದೆ. ರಾಷ್ಟ್ರೀಯ ಹೆದ್ದಾರಿ ಕಾರ್ನಾಡ್ ಬೈಪಾಸ್‌ನಿಂದ ಕೋಲ್ನಾಡು ವರೆಗೆ ಹೆದ್ದಾರಿ ಬದಿವರೆಗೆ ತ್ಯಾಜ್ಯದ ರಾಶಿ ಕಂಡು ಬರುತ್ತಿದ್ದು ಕೆಲ ದ್ವಿಚಕ್ರ ವಾಹನ ಸವಾರರು, ಕಾರಿನಲ್ಲಿ ಹೋಗುವರು ಎಲ್ಲೆಲ್ಲಿಂದ ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲದಲ್ಲಿ ಎಸೆದು ಹೋಗುತ್ತಿರುವುದು ಕಂಡು ಬರುತ್ತಿದ್ದು, ಸಂಬಂಧಪಟ್ಟ ಇಲಾಖೆಗಳಿಗೆ ಇದನ್ನು ನಿಯಂತ್ರಿಸಲು ಆಗುತ್ತಿಲ್ಲ, ಅದೇ ರೀತಿ ಉಡುಪಿಯಿಂದ ಕೇರಳಕ್ಕೆ ಹೋಗುವ ಮೀನಿನ ಲಾರಿಗಳು ಮೀನಿನ ನೀರನ್ನು ಕೂಡ ಇದೇ ಪರಿಸರದಲ್ಲಿ ಹೆದ್ದಾರಿ ಬದಿ ಬಿಡುತ್ತಿದ್ದು ದುರ್ವಾಸನೆ ಬೀರುತ್ತಿದೆ.

ಸಿಸಿ ಕ್ಯಾಮರಾ ಅಳವಡಿಸಲು ಆಗ್ರಹ

ಕಾರ್ನಾಡ್ ಬೈಪಾಸ್‌ನಿಂದ ಕೊಲ್ನಾಡು ವರೆಗೆ ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವುದನ್ನು ತಪ್ಪಿಸಲು ಸ್ಥಳದಲ್ಲಿ ಸಿಸಿ ಕ್ಯಾಮರಾ ಅಳವಡಿಸಬೇಕಾದ ಅಗತ್ಯವಿದೆ ಎಂದು ಸ್ಥಳೀಯರು ಪ್ರತಿಪಾದಿಸಿದ್ದಾರೆ. ಕಳೆದ ವರ್ಷಗಳ ಹಿಂದೆ ಗುಂಡಾಲು ಗುತ್ತು ಬಳಿ ಸ್ಥಳೀಯ ಮನೆಯವರು ಹೆದ್ದಾರಿ ಬದಿ ಸಿಸಿ ಕ್ಯಾಮರಾ ಅಳವಡಿಸಿ, ಹೆದ್ದಾರಿ ಬದಿ ತ್ಯಾಜ್ಯ ಬಿಸಾಡುವವರನ್ನು ಪತ್ತೆ ಹಚ್ಚಿ ಎಚ್ಚರಿಕೆ ನೀಡಿದ್ದರು. ಆ ಬಳಿಕ ತ್ಯಾಜ್ಯ ಬಿಸಾಡುವವರ ಸಂಖ್ಯೆ ಸ್ವಲ್ಪಮಟ್ಟಿಗೆ ಕಡಿಮೆಯಾಗಿತ್ತು.

ಗೊನ್ಝಾಗ ಶಾಲೆ: ಹಳೆ ವಿದ್ಯಾರ್ಥಿಗಳ ಸಮಾಗಮ, ಸಾಧಕರಿಗೆ ಪ್ರಶಸ್ತಿ ಪ್ರದಾನ



ಮಂಗಳೂರು: ಸಂತ ಅಲೋಶಿಯಸ್ ಗೊನ್ಝಾಗ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದ ಸಮಾಗಮ ಕಾರ್ಯಕ್ರಮ ಇತ್ತೀಚೆಗೆ ಶಾಲಾ ಸಭಾಂಗಣದಲ್ಲಿ ನಡೆಯಿತು.

'ರಿವೈಂಡ್ ಎಂಡ್ ರಿ ಯುನೈಟ್' ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈಸಂದರ್ಭ ಮಾತನಾಡಿದ ಸಂತ ಅಲೋಶಿಯಸ್ ಕಾಲೇಜು ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಅನಿಲ್ ಕುಮಾರ್ ಜೆ, ಹಳೆಯ ವಿದ್ಯಾರ್ಥಿಗಳ ಸಮಾಗಮದಿಂದಾಗಿ ಹಳೆಯ ನೆನಪುಗಳನ್ನು ಮರು ನೆನಪಿಸಿಕೊಳ್ಳಲು ಒಂದು ಸದವಕಾಶವಾಗಿದೆ ಎಂದರು. ಅತಿಥಿಯಾಗಿ ಆಗಮಿಸಿದ ಡಚ್ ಕಾರ್ನರ್‌ನ ಸಹ-ಸಂಸ್ಥಾಪಕ ಮತ್ತು ಮೊದಲ ಬ್ಯಾಚ್‌ನ ಹೆಮ್ಮೆಯ ಹಳೆ ವಿದ್ಯಾರ್ಥಿ ಅಬ್ದುಲ್ ರಹಿಮಾನ್ ಅಯಾನ್ ಅವರು ತಮ್ಮ ಶಿಕ್ಷಕರಿಗೆ ಕೃತಜ್ಞತೆ ಸಲ್ಲಿಸಿದರು.

ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗಳನ್ನು ಗುರುತಿಸಿ ವಿಶಿಷ್ಟ ಸಾಧಕರಾದ ಆನ್ಯಾ ಡಿನೈಸ್ ಅರಾಹ್ನ, ಅನ್ವಿತಾ, ರತನ್ ನೊರೋನ್ಹ, ಅಮಿತ್ ಕುಮಾರ್ ಚೌಧರಿ, ಗೀತಿಕಾ ಗಂಗೂಲಿ ಮತ್ತು ಸಾತ್ವಿಕ ನಾಯಕ್ ಸುಜೀರ್ ಅವರಿಗೆ ಶ್ರೇಷ್ಠ ಗೊನ್ಝಾಗೈಟ್ ಹಳೆಯ ವಿದ್ಯಾರ್ಥಿಗಳ ಪ್ರಶಸ್ತಿಯನ್ನು ನೀಡಲಾಯಿತು. ಸಂಸ್ಥೆಯ ಪ್ರಾಂಶುಪಾಲ ಫಾ. ರೋಹನ್ ಡಿ'ಅಲ್ಮೇಡಾ ಎಸ್‌ಜೆ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು.

ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ವಂ.ಫಾ. ಮೆಲ್ವಿನ್ ಜೋಸೆಫ್ ಪಿಂಟೊ ಎಸ್.ಜೆ ಶುಭ ಹಾರೈಸಿದರು.

ಹಳೆ ವಿದ್ಯಾರ್ಥಿ ಸಂಘದ ನೂತನ ಅಧ್ಯಕ್ಷ ಮೊಹಮ್ಮದ್ ಇಹ್ಸಾನ್ ಶಹೀಂ, ಕಾರ್ಯದರ್ಶಿಯಾಗಿ ಅಬ್ದುಲ್ ರಹಿಮಾನ್ ಅಯಾನ್, ಕೋಶಾಧಿಕಾರಿಯಾಗಿ ಆಲ್ವಿನ್ ಲೂಯಿಸ್, ಇನ್‌ಸ್ಟಾಗ್ರಾಂ ಎಡ್ಮಿನ್ ಆಗಿ ವೆರಿನಾ ಸ್ವೀಡಲ್ ಆಯ್ಕೆಯಾದರು. ದೀಪಾ ಕರ್ಕಡ ಸ್ವಾಗತಿಸಿ, ಅಕ್ವಿನಾ ರೆಬೆಲ್ಲೊ ವಂದಿಸಿದರು. ಧೀರಜ್ ಲೋಬೊ ನಿರೂಪಿಸಿದರು.

ಮಂಗಳೂರು ವಿವಿಯಲ್ಲಿ ಕಲಾವಿದರ ಯಕ್ಷಪಯಣದ ಸ್ವಗತ, ಯಕ್ಷಾಯಣ-ದಾಖಲೀಕರಣ' ಸರಣಿ - 10ರ ಕಾರ್ಯಕ್ರಮ

ಪ್ರೇಕ್ಷಕರ ಸೆಳೆಯುವುದೇ ಕಲಾವಿದನ ಮೊದಲ ಆದ್ಯತೆಯಾಗಲಿ: ಪ್ರೊ. ಸಾಮಗ

ಕೊಣಾಜೆ: ಯಕ್ಷಗಾನ ಜನರ ನಡುವೆ ಸಂಭವಿಸುವ ಪುರಾಣಲೋಕ. ಗಾನ, ಕುಣಿತ, ಅಭಿನಯ, ವೇಷ ವೈಭವದೊಂದಿಗೆ ಬೌದ್ಧಿಕ ಜಿಜ್ಞಾಸೆಗೂ ಮಹತ್ವವಿದೆ. ಕತೆ ಹೇಳುವುದಲ್ಲ, ಬದಲಾಗಿ ಪ್ರಸಂಗವನ್ನು ವಿಶ್ಲೇಷಿಸುವ, ವ್ಯಾಖ್ಯಾನಿಸುವ ಮೂಲಕ ಹೊಸ ಅರ್ಥ ಸಾಧ್ಯತೆಗಳನ್ನು ವಾಚಿಕದಲ್ಲಿ ತರುವುದು ಮುಖ್ಯ. ಯಕ್ಷಗಾನದಲ್ಲಿ ಆಖ್ಯಾನಕ್ಕಿಂತ ವ್ಯಾಖ್ಯಾನ ಮುಖ್ಯ ಎಂದು ಯಕ್ಷಗಾನ ವಿದ್ವಾಂಸ, ಕಲಾವಿದ ಪ್ರೊ. ಎಂ.ಎಲ್ ಸಾಮಗ ಹೇಳಿದರು.

ಅವರು ಮಂಗಳವಾರ ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ ಇದರ ವತಿಯಿಂದ ಕಲಾವಿದರ ಯಕ್ಷಪಯಣದ ಸ್ವಗತ' ಯಕ್ಷಾಯಣ-ದಾಖಲೀಕರಣ' ಸರಣಿ -



10ರ ಕಾರ್ಯಕ್ರಮದಲ್ಲಿ ತಮ್ಮ ಅನುಭವವನ್ನು ಹಂಚಿಕೊಂಡರು.

ಜಾಗತಿಕ ರಂಗಭೂಮಿಯಲ್ಲಿ ಯಕ್ಷಗಾನ ಗಟ್ಟಿಯಾಗಿ ನಿಲ್ಲಬೇಕಾದರೆ ಯಕ್ಷಗಾನಕ್ಕೆ ಶೈಕ್ಷಣಿಕ ನೆಲೆಗಟ್ಟು ಕೂಡಾ ಅಗತ್ಯವಾಗಿ ದೊರಕಬೇಕಿದೆ. ಯಕ್ಷಗಾನವನ್ನು ಮುಕ್ತ ಮನಸ್ಸಿನಿಂದ ನೋಡುವ ಮನೋಭಾವ ನಮ್ಮದಾಗಬೇಕು. ತನ್ನ ನೈಪುಣ್ಯತೆಯಿಂದ ಪ್ರೇಕ್ಷಕನ್ನು ಸೆಳೆಯುವುದೇ ಕಲಾವಿದನ ಮೊದಲ ಆದ್ಯತೆಯಾಗಬೇಕು ಎಂದು ಹೇಳಿದರು.

ದೊಡ್ಡ ತಂದೆ ದೊಡ್ಡ ಸಾಮಗರಿಂದಾಗಿ ಯಕ್ಷಗಾನದ ಆಸಕ್ತಿ ಬೆಳೆಯಿತು. ಜೊತೆಗೆ ಕಲಾವಿದರು ನನ್ನನ್ನು ಗೌರವದಿಂದ ಕಾಣ್ತಾ ಇದ್ದರು. ಕಡತೋಕ ಅವರ ಪದ್ಯಕ್ಕೆ ವೇಷ ಮಾಡಿದ್ದೇನೆ, ಶಂಭು ಹೆಗಡೆ, ಮಹಾಬಲಹೆಗಡೆ, ಕೋಳ್ಯೂರು ರಾಮಚಂದ್ರರಾವ್ ಮೊದಲಾದ ಹಿರಿಯ ಕಲಾವಿದರ ಜೊತೆಯೂ ವೇಷ ಮಾಡಿದ ಸಂತೃಪ್ತಿ ಇದೆ ಎಂದರು.

ಮಂಗಳೂರು ವಿವಿಯ ವಿಶ್ರಾಂತ ಕುಲಸಚಿವ ಕೆ. ರಾಜು ಮೊಗವೀರ ಭಾಗವಹಿಸಿ ಮಾತನಾಡಿದರು.

ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಧನಂಜಯ ಕುಂಬ್ಳೆ ಅವರು ಮಾತನಾಡಿ, ಯಕ್ಷಗಾನದ ಅಧ್ಯಯನ ಕೇಂದ್ರದ ಸರಣಿ ಕಾರ್ಯಕ್ರಮದ ರೂಪದಲ್ಲಿ ಹತ್ತು ಜನ ಕಲಾವಿದರ ದಾಖಲೀಕರಣವನ್ನು ಒಂದು ಹಂತದಲ್ಲಿ ಮಾಡಲಾಗಿದ್ದು, ಮಾತುಗಳನ್ನು ಬರಹ ರೂಪಕ್ಕಿಳಿಸಿ ಕೃತಿಯ ರಚನೆಯ ಕಾರ್ಯ ಪ್ರಗತಿಯಲ್ಲಿದೆ ಎಂದರು. ಕಾರ್ಯಕ್ರಮದಲ್ಲಿ ಹಿರಿಯ ಯಕ್ಷಗಾನ ಅರ್ಥಧಾರಿ ಸುಣ್ಣಂಬಳ ಈಶ್ವರ ಭಟ್, ಯಕ್ಷಗಾನ ಅಧ್ಯಯನ ಕೇಂದ್ರದ ಡಾ.ಸತೀಶ್ ಕೊಣಾಜೆ, ಸ್ವಾತಿ ರಾವ್ ಮೊದಲಾದವರು ಉಪಸ್ಥಿತರಿದ್ದರು. ಸಾಯಿಸುಮ ನಾವಡ ನಿರೂಪಿಸಿದರು.

> ಯಕ್ಷಗಾನ ಸರ್ವಾಂಗೀಣ ಕಲೆಯನ್ನು ಮುಂದಿನ ಪೀಳಿಗೆಗೂ ಸಂಪ್ರದಾಯಬದ್ಧವಾಗಿ ದಾಟಿಸುವ ನಿಟ್ಟಿನಲ್ಲಿ ಯಕ್ಷಗಾನ ಕಲಾವಿದರ ದಾಖಲೀಕರಣ ಕಾರ್ಯಕ್ರಮ ಅತ್ಯಂತ ಮಹತ್ವವಾದುದು.
> ● ಕೆ. ರಾಜು ಮೊಗವೀರ

ಸುತ್ತಮುತ್ತ

ಸಿ-ವಿಜಿಲ್ ನಿಯಂತ್ರಣ ಕೊಠಡಿಯಲ್ಲಿ ಇದುವರೆಗೆ 740 ದೂರು ದಾಖಲು

ಕಾಸರಗೋಡು: ಜಿಲ್ಲೆಯ ಕಲೆಕ್ಟರೇಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿ-ವಿಜಿಲ್ ನಿಯಂತ್ರಣ ಕೊಠಡಿಯು 2026ರ ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಇದುವರೆಗೆ (ಮಂಗಳವಾರ ತನಕ) 740 ದೂರುಗಳ ಸ್ವೀಕರಿಸಿದೆ. ಸ್ವೀಕರಿಸಿದ ಎಲ್ಲಾ 740 ದೂರುಗಳನ್ನು ಪರಿಹರಿಸ ಲಾಗಿದೆ. ಹೆಚ್ಚಿನ ದೂರುಗಳನ್ನು ಸ್ವಯಂಚಾಲಿತವಾಗಿ ತೆಗೆದುಕೊಳ್ಳಲಾಗಿದೆ. ಮಾದರಿ ನೀತಿ ಸಂಹಿತೆ ಉಲ್ಲಂಘನೆ – ಚುನಾವಣಾ ವೆಚ್ಚಗಳಿಗೆ ಸಂಬಂಧಿಸಿದ ದೂರುಗಳನ್ನು ಸಿ-ವಿಜಿಲ್ ನಿಯಂತ್ರಣ ಕೊಠಡಿ ನಿರ್ವಹಿಸುತ್ತಿದೆ. ಚುನಾವಣೆಗೆ ಸಂಬಂಧಿಸಿದಂತೆ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಸ್ಥಾಪಿಸಲಾದ 30 ಕ್ಯಾಮರಾಗಳ ದೃಶ್ಯಗಳೊಂದಿಗೆ ಸಿ-ವಿಜಿಲ್ ನಿಯಂತ್ರಣ ಕೊಠಡಿ ಕಾರ್ಯಾಚರಿಸುತ್ತಿದೆ. ಈ ನಿಯಂತ್ರಣ ಕೊಠಡಿಯ ಉಸ್ತುವಾರಿಯನ್ನು ಎಡಿಎಂ (ಹೆಚ್ಚುವರಿ ಜಿಲ್ಲಾ ಮೆಜಿಸ್ಟ್ರೇಟ್) ಕೆ.ವಿ.ಶ್ರುತಿ ವಹಿಸಿಕೊಂಡಿದ್ದಾರೆ. ತಾಂತ್ರಿಕ ಮೇಲ್ವಿಚಾರಣೆಗೆ ಜಿಲ್ಲಾ ಮಾಹಿತಿ ಅಧಿಕಾರಿ ಕೆ.ಲೀನಾ ಜವಾಬ್ದಾರರಾಗಿದ್ದಾರೆ. ಸಿ-ವಿಜಿಲ್ ನಿಯಂತ್ರಣ ಕೊಠಡಿಯಲ್ಲಿ ಸ್ವೀಕರಿಸಿದ ದೂರುಗಳ ವೆಚ್ಚವನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನ ವಿಶೇಷ ಅಧಿಕಾರಿ ವಿ.ಚಂದ್ರನ್ ವಹಿಸಿದ್ದಾರೆ ಮತ್ತು ನಿಯಂತ್ರಣ ಕೊಠಡಿಯಲ್ಲಿ ದೂರು ಪರಿಹಾರ ನೋಡಲ್ ಅಧಿಕಾರಿಯಾಗಿ ಕಲೆಕ್ಟರೇಟ್ ಸೂಟ್ ವಿಭಾಗದ ಹಿರಿಯ ಸೂಪರಿಂಟೆಂಡೆಂಟ್ ವಿ.ಶ್ರೀಕುಮಾರ್ ಹೊಣೆಗಾರಿಕೆ ವಹಿಸಿದ್ದಾರೆ. ಸಾರ್ವಜನಿಕರು ಸಿ-ವಿಜಿಲ್ ಅಪ್ಲಿಕೇಶನ್ ಅಥವಾ ಫೋನ್ ಮೂಲಕ ದೂರುಗಳ ವರದಿ ಮಾಡಬಹುದು. ಯಾವುದೇ ದೂರುಗಳಿದ್ದಲ್ಲಿ 049942 92650, 04994292651, 04994292652 ಕರೆ ಮಾಡಬಹುದು.

ಚುನಾವಣಾ ಅಧಿಕಾರಿಗಳಿಗೆ ತರಬೇತಿ: ಎರಡನೇ ಹಂತ ಪ್ರಗತಿ

ಕಾಸರಗೋಡು: ಜಿಲ್ಲೆಯಲ್ಲಿ ಚುನಾವಣಾ ಚಟುವಟಿಕೆಗಳ ಭಾಗವಾಗಿ ಮತಗಟ್ಟೆ ಅಧಿಕಾರಿಗಳು ಮತ್ತು ಇತರ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು ಭರದಿಂದ ಸಾಗುತ್ತಿವೆ. ಸೆಕ್ಟರ್ ಅಧಿಕಾರಿಗಳ ತರಬೇತಿ ಮತ್ತು ಸೂಕ್ಷ್ಮ ವೀಕ್ಷಕರಿಗೆ ವಿಶೇಷ ತರಗತಿಗಳು ಪೂರ್ಣಗೊಂಡಿವೆ. ಸೆಕ್ಟರ್ ಅಧಿಕಾರಿಗಳ ತರಬೇತಿಯನ್ನು ನಾಯನ್ಮಾರಮೂಲೆ ಟಿಐಎಚ್‌ಎಸ್‌ಎಸ್‌ನಲ್ಲಿ ನಡೆಸಲಾಯಿತು. ಮತಗಟ್ಟೆ ಅಧಿಕಾರಿಗಳಿಗೆ ಎರಡನೇ ಹಂತದ ತರಬೇತಿಯ ಭಾಗವಾಗಿ ತರಗತಿಗಳು ಏ.1 ಮತ್ತು 4 ರಂದು ಮುಂದುವರಿಯಲಿವೆ.

ವಿವಿಧ ಕ್ಷೇತ್ರಗಳ ಅಧಿಕಾರಿಗಳಿಗೆ ಪ್ರತ್ಯೇಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮಂಜೇಶ್ವರ ಮತ್ತು ಕಾಸರಗೋಡು ಕ್ಷೇತ್ರಗಳ ಮತಗಟ್ಟೆ ಅಧಿಕಾರಿಗಳಿಗೆ ಕಾಸರಗೋಡು ಸರ್ಕಾರಿ ಕಾಲೇಜಿನಲ್ಲಿ ತರಬೇತಿ ನೀಡಲಾಗುತ್ತಿದೆ. ಉದುಮ ಕ್ಷೇತ್ರದವರಿಗೆ ನಾಯನ್ಮಾರಮೂಲೆ ಟಿಐಎಚ್‌ಎಸ್‌ಎಸ್‌ನಲ್ಲಿ, ಕಾಞಂಗಾಡು ಕ್ಷೇತ್ರದವರಿಗೆ ಕಾಞಂಗಾಡು ಎಸ್ ಎನ್ ಪಾಲಿಟೆಕ್ನಿಕ್‌ನಲ್ಲಿ ತರಬೇತಿ ನೀಡಲಾಗುವುದು. ತೃಕ್ಕರೀಪ್ಪುರ ಕ್ಷೇತ್ರದವರಿಗೆ ತೃಕ್ಕರೀಪ್ಪುರ ಇ.ಕೆ. ನಾಯನಾರ್ ಸ್ಮಾರಕ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ತರಬೇತಿ ಒದಗಿಸಲು ನಿರ್ಧರಿಸಲಾಗಿದೆ. ತರಬೇತಿ ದಿನಗಳಲ್ಲಿ ಎರಡು ಹಂತಗಳಲ್ಲಿ ತರಗತಿ ಆಯೋಜಿಸಲಾಗಿದೆ.

ಮೊದಲ ಹಂತ ಬೆಳಗ್ಗೆ 9.30 ರಿಂದ ಮಧ್ಯಾಹ್ನ 1ರ ವರೆಗೆ ಮತ್ತು ಎರಡನೇ ಹಂತ ಮಧ್ಯಾಹ್ನ 1.30 ರಿಂದ ಸಂಜೆ 5ರ ವರೆಗೆ. ಎರಡನೇ ಹಂತದ ತರಬೇತಿಗೆ ಹಾಜರಾಗಲು ಸಾಧ್ಯವಾಗದವರಿಗೆ ಏ.5 ರಿಂದ 7ರ ವರೆಗೆ ವಿಶೇಷ ತರಬೇತಿ ಲಭ್ಯವಿರುತ್ತದೆ. ಮತಗಟ್ಟೆ ಅಧಿಕಾರಿಗಳಿಗೆ ಮೂರನೇ ಹಂತದ ತರಬೇತಿ ಮತ್ತು ಮೈಕ್ರೋ ವೀಕ್ಷಕರಿಗೆ ಉಪಹಾರ ತರಬೇತಿ ಏ.8 ರಂದು ಬೆಳಗ್ಗೆ 9 ಗಂಟೆಗೆ ಪ್ರಾರಂಭವಾಗಲಿದೆ. ಮತ ಎಣಿಕೆ ಕರ್ತವ್ಯಕ್ಕೆ ನಿಯೋಜಿಸಲಾದ ಅಧಿಕಾರಿ ಗಳಿಗೆ ತರಬೇತಿ ಏ.22 ರಿಂದ 24ರ ವರೆಗೆ ನಡೆಯಲಿದೆ. ಮತದಾನ ಪ್ರಕ್ರಿಯೆಯನ್ನು ದೋಷರಹಿತವಾಗಿ ಪೂರ್ಣಗೊಳಿಸಲು ಎಲ್ಲಾ ಅಧಿಕಾರಿಗಳು ನಿಗದಿತ ತರಬೇತಿ ತರಗತಿಗಳಲ್ಲಿ ಸಮಯಕ್ಕೆ ಸರಿಯಾಗಿ ಹಾಜರಿ ರಬೇಕು ಎಂದು ತರಬೇತಿ ನೋಡಲ್ ಅಧಿಕಾರಿ ತಿಳಿಸಿದ್ದಾರೆ.

ಆಯಾ ಕ್ಷೇತ್ರದ ಪಿವಿಸಿ ಕೇಂದ್ರಗಳಲ್ಲಿ ಮತ ಚಲಾವಣೆಗೆ ಅವಕಾಶ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಫಾರ್ಮ್ 12ಡಿ ಸಲ್ಲಿಸಿದ ಅಗತ್ಯ ಸೇವೆಗಳ ವರ್ಗದಲ್ಲಿರುವವರು ಮಾ.31 ರಿಂದ ಏ.6ರ ವರೆಗೆ ಆಯಾ ಕ್ಷೇತ್ರಗಳಲ್ಲಿನ ಪಿವಿಸಿ ಕೇಂದ್ರಗಳಲ್ಲಿ ಮತ ಚಲಾಯಿಸಬಹುದು. ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಮಂಜೇಶ್ವರ ಕ್ಷೇತ್ರಕ್ಕೆ ಸಂಬಂಧಿಸಿದ ಅಂಚೆ ಮತದಾನ ಕೇಂದ್ರ (ಪಿವಿಸಿ) ಮತ್ತು ಮತದಾರರ ಸೌಲಭ್ಯ ಕೇಂದ್ರ (ವಿಎಫ್‌ಸಿ) ಗಳನ್ನು ಕಾಸರಗೋಡು ಸರ್ಕಾರಿ ಕಾಲೇಜಿನಲ್ಲಿ ಸ್ಥಾಪಿಸಲಾಗಿದೆ. ಕಾಸರಗೋಡು ವಿಧಾನಸಭಾ ಕ್ಷೇತ್ರದ ಅಂಚೆ ಮತದಾನ ಕೇಂದ್ರ ಮತ್ತು ಮತದಾರರ ಸೌಲಭ್ಯ ಕೇಂದ್ರವನ್ನು ಕಾಸರಗೋಡು ಸರ್ಕಾರಿ ಕಾಲೇಜಿನಲ್ಲಿ ಸ್ಥಾಪಿಸಲಾಗಿದೆ.

ಉದುಮ ಕ್ಷೇತ್ರದಲ್ಲಿ ಅಂಚೆ ಮತದಾನ ಕೇಂದ್ರ ಮತ್ತು ಮತದಾರರ ಸೌಲಭ್ಯ ಕೇಂದ್ರವನ್ನು ಟಿಐಎಚ್‌ಎಸ್‌ಎಸ್ ನಾಯನ್ಮಾರಮೂಲೆಯಲ್ಲಿ ಸ್ಥಾಪಿಸಲಾಗಿದೆ. ಕಾಞಂಗಾಡು ವಿಧಾನಸಭಾ ಕ್ಷೇತ್ರದ ಅಂಚೆ ಮತದಾನ ಕೇಂದ್ರವನ್ನು ಹೊಸದುರ್ಗ ಸರ್ಕಾರಿ ಪ್ರೌಢಶಾಲೆಯಲ್ಲಿ ಮತ್ತು ಮತದಾರರಿಗೆ ಅನುಕೂಲವಾಗುವ ಕೇಂದ್ರವನ್ನು ಕಾಞಂಗಾಡು ಸ್ವಾಮಿ ನಿತ್ಯಾನಂದ ಪಾಲಿಟೆಕ್ನಿಕ್‌ನಲ್ಲಿ ಸ್ಥಾಪಿಸಲಾಗಿದೆ. ತೃಕ್ಕರೀಪ್ಪುರ ಕ್ಷೇತ್ರದಲ್ಲಿ ಅಂಚೆ ಮತದಾನ ಕೇಂದ್ರ , ಮತದಾರರ ಸೌಲಭ್ಯ ಕೇಂದ್ರ ವನ್ನು ತೃಕ್ಕರೀಪ್ಪುರ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಸ್ಥಾಪಿಸಲಾಗಿದೆ. 2ನೇ ಹಂತದ ತರಬೇತಿ ನಡೆಯುತ್ತಿರುವ ಕೇಂದ್ರಗಳಲ್ಲಿಯೇ ಸೌಲಭ್ಯ ಕೇಂದ್ರಗಳು ಸಹ ಕಾರ್ಯನಿರ್ವಹಿಸಲಿವೆ ಎಂದು ಡೀಸಿ ಮಾಹಿತಿ ನೀಡಿದ್ದಾರೆ.

ವಿಧಾನ ಸಭಾ ಚುನಾವಣೆ | ಮನೆಯಿಂದಲೇ ಮತದಾನ ಪ್ರಕ್ರಿಯೆ ಚುರುಕು

ಯುವ ಮತದಾರರಿಗೆ ಸ್ಫೂರ್ತಿಯಾದ ಎಂಕಪ್ಪ ನಾಯ್ಕ್!

ಕಾಸರಗೋಡು: ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆಯ ವ್ಯವಸ್ಥೆಗಳು ಭರದಿಂದ ಸಾಗುತ್ತಿದ್ದು, ಅದರಂತೆ ವೃದ್ಧಾಪ್ಯರಿಗೆ ಮತ್ತು ದಿವ್ಯಾಂಗರಿಗೆ ಮನೆಯಿಂದಲೇ ಮತದಾನ ಪ್ರಕ್ರಿಯೆಯು ಚುರುಕಿನಿಂದ ಮುಂದುವರಿಯುತ್ತಿದೆ. ಈ ನಿಟ್ಟಿನಲ್ಲಿ ವೃದ್ಧಾಪ್ಯದ ಹೊರತಾಗಿಯೂ ಕಾಸರಗೋಡು ಜಿಲ್ಲೆಯ ಅತ್ಯಂತ ಹಿರಿಯ ಮತದಾರರು ಪ್ರಜಾಪ್ರಭುತ್ವದ ಬಗ್ಗೆ ತಮ್ಮ ಉತ್ಸಾಹವನ್ನು ಕಳೆದುಕೊಂಡಿಲ್ಲ. 106 ವರ್ಷದ ಎಂಕಪ್ಪ ನಾಯ್ಕ್ ಅವರು ಮಂಗಳವಾರ ಮನೆಯಲ್ಲೇ ತಮ್ಮ ಮತ ಚಲಾಯಿಸಿ, ಸಂಭ್ರಮಪಟ್ಟರು.



- ಭರದಿಂದ ಸಾಗುತ್ತಿವೆ ವಿಧಾನಸಭಾ ಚುನಾವಣೆ ವ್ಯವಸ್ಥೆ
- ವೃದ್ಧಾಪ್ಯರಿಗೆ ಮತ್ತು ದಿವ್ಯಾಂಗರಿಗೆ ಮನೆಯಿಂದಲೇ ಮತದಾನ ಪ್ರಕ್ರಿಯೆ
- 106 ವರ್ಷದ ಎಂಕಪ್ಪ ನಾಯ್ಕ್‌ರಿಂದ ಮತದಾನ ಉತ್ಸಾಹ

ಮತದಾನದ ಉತ್ಸಾಹ ಕಡಿಮೆಯಾಗಿಲ್ಲ

ಎಂಕಪ್ಪ ನಾಯ್ಕ್ ಅವರು ಕಾಞಂಗಾಡು ವಿಧಾನಸಭಾ ಕ್ಷೇತ್ರದ ಪನತ್ತಡಿ ಗ್ರಾಮದ ಮತಗಟ್ಟೆ ಸಂಖ್ಯೆ 121ರಲ್ಲಿ ಮತದಾರರಾಗಿದ್ದಾರೆ. ಅವರು ಹಿಂದಿನ ಎಲ್ಲಾ ಚುನಾವಣೆಗಳಲ್ಲಿ ನಿರಂತರವಾಗಿ ಮತ ಚಲಾಯಿಸಿದ್ದರು. ವಯಸ್ಸಿನೊಂದಿಗೆ ಬರುವ ಹಲವು ಸವಾಲುಗಳ ಹೊರತಾಗಿಯೂ ಮತದಾನದ ಉತ್ಸಾಹ ಅವರಲ್ಲಿ ಕಡಿಮೆಯಾಗಿಲ್ಲ. ಈ ಬಾರಿ ತಮ್ಮ ಮಕ್ಕಳೊಂದಿಗೆ ಸ್ವಂತ ಮನೆಯಿಂದಲೇ ಮತ ಚಲಾಯಿಸಲು ಸಾಧ್ಯವಾಗುತ್ತಿರುವುದಕ್ಕೆ ಎಂಕಪ್ಪ ನಾಯ್ಕ್ ಅವರು ಸಂತೋಷ ವ್ಯಕ್ತಪಡಿಸಿದ್ದಾರೆ.

ಕಾಞಂಗಾಡು ಆರ್‌ಡಿಒ ಮನೋಜ್, ವೆಳ್ಳರಿಕುಂಡು ತಹಶೀಲ್ದಾರ್ ಶೆರ್ಲಿ ರಾಜಪ್ಪನ್, ಮತಗಟ್ಟೆ ಅಧಿಕಾರಿಗಳಾದ ಬಿಜು ಮಂತ್ರವಾಡಿ, ಶ್ರೀಕಾಂತ್, ಮೈಕ್ರೋ ಒಬ್ಸರ್ವರ್ ಪ್ರತಿಮಾ, ಗ್ರಾಮಾಧಿಕಾರಿ ಎಸ್.ಅನಿಲ್‌ಕುಮಾರ್, ಬಿಎಲ್‌ಒ ಎಸ್.ಎಂ. ಪ್ರಸೀತಾ ಮೊದಲಾದವರು ಎಂಕಪ್ಪ ನಾಯ್ಕ್ ಅವರ ಮನೆಗೆ ಆಗಮಿಸಿ ಮತದಾನಕ್ಕೆ ವ್ಯವಸ್ಥೆಯನ್ನು ಮಾಡಿದರು.

ಮನೆಯಲ್ಲೇ ಮತದಾನ: ಇಲ್ಲಿಯವರೆಗೆ 1501 ಜನರಿಂದ ಮತ ಚಲಾವಣೆ

ವಿಧಾನಸಭಾ ಚುನಾವಣೆಗೆ ಸಂಬಂಧಿಸಿ 85 ವರ್ಷ ಮೇಲ್ಪಟ್ಟ 698 ಮಂದಿ ಮತದಾರರು ಮತ್ತು 803 ಮಂದಿ ದಿವ್ಯಾಂಗ ವಲಯದ ಮತದಾರರು ಮನೆಯಲ್ಲಿಯೇ ಮತ ಚಲಾಯಿಸಿದ್ದಾರೆ. ಇಲ್ಲಿಯ ವರೆಗೆ (ಮಾ.31ರಂದು ಸಂಜೆ 6.30ರ ತನಕ) 1501 ಜನರು ಮನೆಯಲ್ಲೇ ಮತ ಚಲಾಯಿಸಿ ಸೇವೆಯಡಿ ಮತದಾನಗೈದು ದಾಖಲೆಗೆ ಕಾರಣರಾದರು.

ಮತಗಟ್ಟೆ ಅಧಿಕಾರಿಗಳು ಮನೆಗಳಿಗೆ ಭೇಟಿ ನೀಡಿ ಮತಗಳನ್ನು ನೋಂದಾಯಿಸುತ್ತಾರೆ. ಇಬ್ಬರು ಮತಗಟ್ಟೆ ಅಧಿಕಾರಿಗಳು, ಮೈಕ್ರೋ ವೀಕ್ಷಕ, ವಿಡಿಯೋಗ್ರಾಫರ್, ಪೊಲೀಸ್ ಅಧಿಕಾರಿ ಮತ್ತು ಬೂತ್ ಮಟ್ಟದ ಅಧಿಕಾರಿ ಒಳಗೊಂಡ ತಂಡವು ಮನೆಯಲ್ಲಿಯೇ ಮತದಾನ ಚಟುವಟಿಕೆಗಳ ಭಾಗವಾಗಿ ಮನೆಗಳಿಗೆ ಭೇಟಿ ನೀಡಲಿದೆ. ರ್‍ಯಾಂಡಮೈಸೇಷನ್ ಪ್ರಕ್ರಿಯೆ ಮೂಲಕ ಮತಗಟ್ಟೆ ಅಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಇದಕ್ಕಾಗಿ ಕಾಞಂಗಾಡು– ತೃಕ್ಕರೀಪ್ಪುರಕ್ಕೆ ತಲಾ 30, ಉದುಮಕ್ಕೆ 28 ಮತ್ತು ಕಾಸರಗೋಡು ಮತ್ತು ಮಂಜೇಶ್ವರ ಕ್ಷೇತ್ರಗಳಿಗೆ ತಲಾ 17 ಮತಗಟ್ಟೆಗಳನ್ನು ನಿಯೋಜಿಸಲಾಗಿದೆ. ಜಿಲ್ಲೆಯಲ್ಲಿ 85 ವರ್ಷ ಮೇಲ್ಪಟ್ಟ 3281 ಜನರು – ದಿವ್ಯಾಂಗ ವಲಯದ 3529 ಜನರಿಗೆ ಮನೆಯಲ್ಲಿಯೇ ಮತ ಚಲಾಯಿಸಲು ಅವಕಾಶ ನೀಡಲಾಗಿದೆ.

ಮಂಜೇಶ್ವರದಲ್ಲಿ 85 ವರ್ಷ ಮೇಲ್ಪಟ್ಟ 99 ಜನರು ಮತ್ತು 158 ದಿವ್ಯಾಂಗರು ಸೇರಿದಂತೆ 257 ಮತದಾರರು , ಕಾಸರಗೋಡಿನಲ್ಲಿ 85 ವರ್ಷ ಮೇಲ್ಪಟ್ಟ 90 ಜನರು ಮತ್ತು 135 ದಿವ್ಯಾಂಗರು ಸಹಿತ 225 ಮತದಾರರು , ಉದುಮದಲ್ಲಿ 85 ವರ್ಷ ಮೇಲ್ಪಟ್ಟ 100 ಜನರು ಮತ್ತು 175 ದಿವ್ಯಾಂಗರು ಸೇರಿದಂತೆ 275 ಮಂದಿ ಮತದಾರರು , ಕಾಞಂಗಾಡಿನಲ್ಲಿ 85 ವರ್ಷ ಮೇಲ್ಪಟ್ಟ 315 ಜನರು, 242 ದಿವ್ಯಾಂಗರು ಸೇರಿದಂತೆ 557 ಮತದಾರರು , ತೃಕ್ಕರೀಪ್ಪುರದಲ್ಲಿ 85 ವರ್ಷ ಮೇಲ್ಪಟ್ಟ 94 ಜನರು ಮತ್ತು 93 ದಿವ್ಯಾಂಗರು ಸಹಿತ 187 ಮತದಾರರು ಮನೆಯಲ್ಲಿಯೇ ಮತ ಚಲಾಯಿಸಿದರು.

ಕಾಸರಗೋಡು ಕನ್ನಡ ಗ್ರಾಮದಲ್ಲಿ ಚುಟುಕು ಸಾಹಿತ್ಯೋತ್ಸವ, ಚುಟುಕು ಗೋಷ್ಠಿ ಉದ್ಘಾಟನೆ



ಕಾಸರಗೋಡು: ಸಾಹಿತ್ಯ ಪ್ರಕಾರಗಳಲ್ಲಿ ಇತ್ತೀಚಿನ ದಿನಗಳಲ್ಲಿ ಓದುಗರು ಅತೀ ಹೆಚ್ಚು ಇಷ್ಟಪಡುವ ಪ್ರಕಾರವೆಂದರೆ ಅದು ಚುಟುಕು ಅಥವಾ ಹನಿಗವನವಾಗಿದೆ. ಕಳೆದ ನಲುವತ್ತು ವರ್ಷಗಳಿಂದ ಚುಟುಕು ಸಾಹಿತ್ಯ ಪರಿಷತ್ತು ಚುಟುಕು ಕವಿಗಳನ್ನು ಬೆಳೆಸುವಲ್ಲಿ ಬಹಳಷ್ಟು ಶ್ರಮವಹಿಸಿದೆ ಎಂದು ದ.ಕ. ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹರೀಶ್ ಸುಲಾಯ ಒಡ್ಡಂಬೆಟ್ಟು ಹೇಳಿದ್ದಾರೆ.

ಕಾಸರಗೋಡು ಚುಸಾಪನಿಂದ ಅಧ್ಯಕ್ಷ ಶಿವರಾಮ ಕಾಸರಗೋಡು ನೇತೃತ್ವ ಕನ್ನಡ ಗ್ರಾಮದಲ್ಲಿ ನಡೆದ ಚುಟುಕು ಸಾಹಿತ್ಯೋತ್ಸವ ಮತ್ತು ಚುಟುಕು ಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.

ಜೀವನ ಪಾಠಗಳ ನೀಡುತ್ತವೆ

ನಮ್ಮ ಜೀವನದಲ್ಲಿ ಚುಟುಕುಗಳಿಗೆ ಮಹತ್ವ ತುಂಬಾ ಇದೆ. ಏಕೆಂದರೆ ಚುಟುಕುಗಳು ನಮ್ಮ ಚಿಂತನೆಗೆ ಹೊಸ ದಾರಿ ತೋರಿಸುತ್ತವೆ. ಕೆಲವೊಮ್ಮೆ ನಗಿಸುವುದರ ಮೂಲಕ, ಕೆಲವೊಮ್ಮೆ ಗಂಭೀರವಾಗಿ ಆಲೋಚಿಸುವಂತೆ ಮಾಡುವುದರ ಮೂಲಕ ಜೀವನ ಪಾಠಗಳ ನೀಡುತ್ತವೆ ಎಂದರು.

ಕಾರ್ಯಕ್ರಮಕ್ಕೆ ಡಾ.ವೆಂಕಟ್ರಮಣ ಹೊಳ್ಳ ದೀಪ ಬೆಳಗಿಸಿ ಚಾಲನೆ ನೀಡಿದರು.

ರಾಧಾಕೃಷ್ಣ ಕೆ. ಉಳಿಯತ್ತಡ್ಕ ದಿಕ್ಸೂಚಿ ಭಾಷಣ ಮಾಡಿದರು. ಖ್ಯಾತ ವ್ಯಂಗ್ಯಚಿತ್ರಕಾರ ವೆಂಕಟ ಭಟ್ ಎಡನೀರು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ಕಾಸರಗೋಡು ಗಡಿನಾಡು ಸಾಹಿತ್ಯ ಪರಿಷತ್ತು ಘಟಕದ ಸಂಘಟನಾ ಕಾರ್ಯದರ್ಶಿ ವಿಶಾಲಾಕ್ಷ ಪುತ್ರಕಳ, ಸಂಕೀರ್ತನೆಕಾರ ಜಯಾನಂದ ಕುಮಾರ್ ಹೊಸದುರ್ಗ, ಧಾರವಾಡದ ಸಂಜೀವ ತುಮಕನಾಳ, ದಿವ್ಯಾ ಗಟ್ಟಿ, ಡಾ.ವಾಣಿಶ್ರೀ ಕಾಸರಗೋಡು ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವಿರಾಜ್ ಅಡೂರು ಕಾರ್ಯಕ್ರಮ ನಿರೂಪಿಸಿದರು.

ವಿವಿಧ ಕ್ಷೇತ್ರಗಳ ಇಲೆಕ್ಟ್ರಾನಿಕ್ ಮತಯಂತ್ರಗಳ ರ್‍ಯಾಂಡಮೈಸೇಷನ್‌ನ 2ನೇ ಹಂತ ಪೂರ್ಣ



ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಇಲೆಕ್ಟ್ರಾನಿಕ್ ಮತಯಂತ್ರಗಳ ರ್‍ಯಾಂಡಮೈಸೇಷನ್ ಪ್ರಕ್ರಿಯೆ 2ನೇ ಹಂತ ಪೂರ್ಣಗೊಂಡಿದೆ.

ಕಾಸರಗೋಡು ಜಿಲ್ಲೆಯ ಚುನಾವಣಾ ಸಾಮಾನ್ಯ ವೀಕ್ಷಕರಾದ ವಿಜಯ್ ಬಾಲಕೃಷ್ಣ ವಾಘ್ಮಾರೆ ಮತ್ತು ಜ್ಞಾನೇಶ್ವರ್ ಕೊಂಡಿ ಬಹುಕಿಲಾರಿ ಸಮ್ಮುಖದಲ್ಲಿ ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನೇತೃತ್ವದಲ್ಲಿ ಕಲೆಕ್ಟರೇಟ್‌ನ ಮಿನಿ ಕಾನ್ಫರೆನ್ಸ್ ಹಾಲ್‌ನಲ್ಲಿ ಮಂಗಳವಾರ ರ್‍ಯಾಂಡಮೈಸೇಷನ್ ಪ್ರಕ್ರಿಯೆ ನಡೆಸಲಾಯಿತು.

ಮಂಜೇಶ್ವರ ಕ್ಷೇತ್ರದ 230 ಮತಗಟ್ಟೆಗಳ 230 ಇಲೆಕ್ಟ್ರಾನಿಕ್ ಮತಯಂತ್ರಗಳು, ಕಾಸರಗೋಡು ಕ್ಷೇತ್ರದ 219 ಮತಗಟ್ಟೆಗಳ 219 ಇಲೆಕ್ಟ್ರಾನಿಕ್ ಮತಯಂತ್ರಗಳು ಮತ್ತು ಉದುಮ ಕ್ಷೇತ್ರದ 238 ಮತಗಟ್ಟೆಗಳ 238 ಇಲೆಕ್ಟ್ರಾನಿಕ್ ಮತಯಂತ್ರಗಳನ್ನು ರ್‍ಯಾಂಡಮೈಸೇಷನ್‌ಗೆ ಒಳಪಡಿಸಲಾಯಿತು. ಕಾಞಂಗಾಡು ಕ್ಷೇತ್ರದ 239 ಮತಗಟ್ಟೆಗಳಿಗೆ 238 ಇಲೆಕ್ಟ್ರಾನಿಕ್ ಮತಯಂತ್ರಗಳನ್ನು ಮತ್ತು ತೃಕ್ಕರೀಪ್ಪುರ ಕ್ಷೇತ್ರದ 220 ಮತಗಟ್ಟೆಗಳಿಗೆ 220 ಇಲೆಕ್ಟ್ರಾನಿಕ್ ಮತಗಟ್ಟೆಗಳ ಹಂಚಿಕೆ ಮಾಡಲಾಗಿದೆ. ಮುಖ್ಯ ಚುನಾವಣಾಧಿಕಾರಿಗಳ ಸೂಚನೆಯಂತೆ ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಸೇರಿದಂತೆ ಹೆಚ್ಚುವರಿ ಇಲೆಕ್ಟ್ರಾನಿಕ್ ಮತಗಟ್ಟೆಗಳಿಗೆ ಶೇ.20ರಷ್ಟು ಮೀಸಲು ಹಂಚಿಕೆ ಮಾಡಲಾಗಿದೆ. ವಿವಿಪ್ಯಾಟ್ ಯಂತ್ರಗಳ ವಿಭಾಗದಲ್ಲಿ ಶೇ.30 ರಷ್ಟು ಹೆಚ್ಚುವರಿಯಾಗಿ ಒದಗಿಸಲಾಗಿದೆ.

ವಿವಿಧ ಕ್ಷೇತ್ರಗಳಲ್ಲಿನ ಯಾವುದೇ ಮತಗಟ್ಟೆಯಲ್ಲಿ ಇವಿಎಂ ಯಂತ್ರಗಳು ನಿಷ್ಕ್ರಿಯವಾಗಿದ್ದರೆ ಅಥವಾ ಅಸಮರ್ಪಕವಾಗಿ ಕಾರ್ಯನಿರ್ವಹಿಸಿದರೆ ಚುನಾವಣಾ ಅಧಿ ಕಾರಿಗಳು ಮೀಸಲು ಇರಿಸಲಾಗಿರುವ ಹೆಚ್ಚುವರಿ ಇವಿಎಂ ಯಂತ್ರಗಳು ಮತ್ತು ವಿವಿಪ್ಯಾಟ್ ಲಭ್ಯವಾಗುವಂತೆ ಮಾಡುತ್ತಾರೆ. ಪ್ರತಿ ಬೂತ್‌ನಲ್ಲಿರುವ ಇವಿಎಂಗಳಲ್ಲಿ ಇರಿಸಬೇಕಾದ ಅಭ್ಯರ್ಥಿಗಳ ಫೋಟೋಗಳು ಮತ್ತು ಚಿಹ್ನೆಗಳ ಹೊಂದಿರುವ ಜಿಲ್ಲಾ ಖಜಾನೆಯಲ್ಲಿ ಇರಿಸಲಾದ ಮತಪತ್ರ ಇವಿಎಂ ಕಾರ್ಯಾರಂಭದ ದಿನ ಬೆಳಗ್ಗೆ ವಿವಿಧ ಕ್ಷೇತ್ರಗಳ ಚುನಾವಣಾ ಅಧಿಕಾರಿಗಳು ಸಂಗ್ರಹಿಸುತ್ತಾರೆ.

ಚುನಾವಣಾ ಉಪ ಕಲೆಕ್ಟರ್ ಎ.ಎನ್. ಗೋಪಕುಮಾರ್, ಸ್ಥಳೀಯಾಡಳಿತ ಇಲಾಖೆ ಜಂಟಿ ನಿರ್ದೇಶಕ ಜೇಸನ್ ಮ್ಯಾಥ್ಯೂ, ಎಲ್ಲಾ ಐದು ಕ್ಷೇತ್ರಗಳ ಚುನಾವಣಾ ಅಧಿಕಾರಿಗಳು, ಜಿಲ್ಲಾ ಇನ್‌ಫಾರ್ಮೇಟಿಕ್ ಅಧಿಕಾರಿ ಕೆ.ಲೀನಾ ಮತ್ತು ಕಲೆಕ್ಟರೇಟ್ ಚುನಾವಣಾ ಇಲಾಖೆ ಜೂನಿಯರ್ ಸೂಪರಿಂಟೆಂಡೆಂಟ್ ಎ. ರಾಜೀವನ್ ಭಾಗವಹಿಸಿದ್ದರು.

ನಾಳೆ ಇವಿಎಂಗಳ ಕಾರ್ಯಾರಂಭ

ವಿಧಾನಸಭಾ ಕ್ಷೇತ್ರಗಳಲ್ಲಿ ಇವಿಎಂಗಳ ಕಾರ್ಯಾರಂಭ ಏ.2ರಂದು ನಡೆಯಲಿದೆ. ಬೆಳಿಗ್ಗೆ 9 ಗಂಟೆಗೆ ಪ್ರಕ್ರಿಯೆ ಆರಂಭಗೊಳ್ಳಲಿದೆ. ಪಾಸ್‌ಗಳನ್ನು ನೀಡುವುದು ಸೇರಿದಂತೆ ಕಾರ್ಯವಿಧಾನಗಳನ್ನು ಪೂರ್ಣಗೊಳಿಸಬೇಕಾಗಿರುವುದರಿಂದ ನೌಕರರು, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮತ್ತು ಅಭ್ಯರ್ಥಿಗಳು ಬೆಳಿಗ್ಗೆ 8 ಗಂಟೆಯೊಳಗೆ ತಲುಪಬೇಕು.

● **ಅರ್ಜುನ್ ಪಾಂಡ್ಯನ್, ಡೀಸಿ**

ಆಲಂಕೂಡ್ಲು ದೇವಳ ಪರಿವಾರ ದೇವರ ಗುಡಿಗಳಿಗೆ ಶಿಲಾನ್ಯಾಸ



ಬದಿಯಡ್ಕ: ಆಲಂಕೂಡ್ಲು ಶ್ರೀ ಮಹಾಲಿಂಗೇಶ್ವರ ದೇವಾಲಯದ ಪರಿವಾರ ಸಾನ್ನಿಧ್ಯಗಳಾದ ಶ್ರೀ ದುರ್ಗಾ ದೇವಿಯ ಗುಡಿ ಹಾಗೂ ಶ್ರೀ ಶಾಸ್ತಾವು ಗಣಪತಿ ದೇವರ ಗುಡಿಗಳಿಗೆ ಶಿಲಾನ್ಯಾಸ ನಡೆಯಿತು.

ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ದಿವ್ಯ ಸಾನ್ನಿಧ್ಯ ವಹಿಸಿ ಶಿಲಾನ್ಯಾಸ ನೆರವೇರಿಸಿದರು. ಇದೇ ವೇಳೆ ಆಶೀರ್ವಚನ ನೀಡಿದ ಅವರು, ಧಾರ್ಮಿಕ ಕ್ಷೇತ್ರಗಳ ಜೀರ್ಣೋದ್ಧಾರ ಕಾರ್ಯಗಳಲ್ಲಿ ಭಕ್ತ ಮಹಾಜನರು ಪರಸ್ಪರ ಕೈ ಜೋಡಿಸಿ ತನು ಮನ ಧನಗಳಿಂದ ಸಹಕರಿಸಬೇಕು ಎಂದರು.

ಈ ಸಂದರ್ಭ ಚೆಂಗಳ ಗ್ರಾ. ಪಂ.ಅಧ್ಯಕ್ಷ ವಸಂತ ಅಜಕ್ಕೋಡು, ಉದ್ಯಮಿ ಶಿವಶಂಕರ ನೆಕ್ರಾಜೆ, ಧಾರ್ಮಿಕ ಮುಂದಾಳುಗಳಾದ ಗೋಪಾಲಕೃಷ್ಣ ಪೈ ಬದಿಯಡ್ಕ, ಮಧುಸೂದನ ಆಯರ್ ಮಂಗಳೂರು, ಕ್ಷೇತ್ರದ ಅನುವಂಶಿಕ ಮೊಕ್ತೇಸರ ಪಿ.ಎಸ್. ಪುಣಿಂಚತ್ತಾಯ, ದೇವಸ್ಥಾನ ಸಮಿತಿಯ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಬಳಿಕ ಜೀರ್ಣೋದ್ಧಾರ ಕಾರ್ಯದ ಅಂಗವಾಗಿ ಸುತ್ತು ಗೋಪುರದ ಹೆಂಚು ತೆಗೆಯುವ ಕಾರ್ಯ ಹಮ್ಮಿಕೊಳ್ಳಲಾಯಿತು.



ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರು ಮಂಗಳವಾರ ಕಾಸರಗೋಡು ರೈಲು ನಿಲ್ದಾಣ ಪರಿಸರದಲ್ಲಿ ಮತಯಾಚಿಸಿದರು.

ಏ.4-6: ಬಂಗ್ರಮಂಜೇಶ್ವರ ಶ್ರೀ ಕಾಳಿಕಾ ಪರಮೇಶ್ವರೀ ದೇವಳದಲ್ಲಿ ಪ್ರತಿಷ್ಠಾ ಸಂಭ್ರಮ

ಮಂಜೇಶ್ವರ: ಹೊಸಂಗಡಿ ಬಂಗ್ರ ಮಂಜೇಶ್ವರ ಶ್ರೀ ಕಾಳಿಕಾ ಪರಮೇಶ್ವರೀ ದೇವಸ್ಥಾನದಲ್ಲಿ ವರ್ಷಾವಧಿ ಪ್ರತಿಷ್ಠಾ ಮಹೋತ್ಸವ ಏ.4ರಿಂದ 6ರ ವರೆಗೆ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ನಡೆಯಲಿದೆ.



ಆ ಪ್ರಯುಕ್ತ ಏ.4ರಂದು ಸಂಜೆ ವೈದಿಕ ಕಾರ್ಯಕ್ರಮದ ಅಂಗವಾಗಿ ದೇವತಾ ಪ್ರಾರ್ಥನೆ, ತೋರಣ ಪ್ರತಿಷ್ಠೆ, ತಂತ್ರಿವರಣ, ಋತ್ವಿಕ್‌ವರಣ, ಗುರುಗಣಪತಿ ಪೂಜೆ, ಪುಣ್ಯಾಹ, ನಾಂದಿ, ನವಗ್ರಹ, ಶ್ರೀ ವಾಸ್ತು ರಕ್ಷೋಘ್ನ, ಶಾಂತಿ, ಕೌತುಕ ಅಂಕುರಾರ್ಪಣೆ, ಸಂಜೆ 6ಕ್ಕೆ ದೀಪಾರಾಧನೆ, 6.30ಕ್ಕೆ ರಂಗಸ್ಥಳದಲ್ಲಿ ಚೌಕಿ ಪೂಜೆ, ರಾತ್ರಿ 7ಗಂಟೆಗೆ ಬಡಗು ತಿಟ್ಟಿನ ಪ್ರಸಿದ್ಧ ಮೇಳ ಶ್ರೀ ಮಹಿಷಮರ್ದಿನಿ ದಶಾವತಾರ ಯಕ್ಷಗಾನ ಮಂಡಳಿ ಶ್ರೀ ಕ್ಷೇತ್ರ ನೀಲಾವರ ಇವರಿಂದ ನೀಲಾವರ ಕಲ್ಲುರ್ಟಿ 'ಕಲ್ಕುಡ ಮಹಾತ್ಮೆ ' ಎಂಬ ಕಾಲಮಿತಿ ಯಕ್ಷಗಾನ ಬಯಲಾಟ, ಮಹಾಪೂಜೆ, ಅನ್ನಸಂತರ್ಪಣೆ ಜರಗಲಿದೆ.

108 ಸೀಯಾಳಾಭಿಷೇಕ

ಏ.5ರಂದು ಬೆಳಗ್ಗೆ ಶ್ರೀ ಮಾತೆಗೆ ಪಂಚಾಮೃತ ಸಹಿತ 108 ಸೀಯಾಳ ಅಭಿಷೇಕ, ಕಲಾತತ್ವ ಪ್ರಧಾನ ಹೋಮಾದಿಗಳು, ಪೂರ್ಣಾಹುತಿ, ಕುಂಭಾಭಿಷೇಕ, ಅಲಂಕಾರ, ಮಹಾಪೂಜೆ, ಪಲ್ಲಪೂಜೆ, 10.30ಕ್ಕೆ ಜಗದ್ಗುರು ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮಿಯವರಿಗೆ ಪೂರ್ಣಕುಂಭ ಸ್ವಾಗತ, ಶ್ರೀ ಗುರುಪಾದ ಪೂಜೆ, ಆಶೀರ್ವಚನ ನಡೆಯಲಿದೆ. ಈ ವೇಳೆ ಕ್ಷೇತ್ರದ ಮಾಜಿ ಅಧ್ಯಕ್ಷ ಪೋಳ್ಯ ಎಂ.ಉಮೇಶ ಆಚಾರ್ಯ ಪರ್ವುಂಜ ಪುತ್ತೂರು ಅವರಿಗೆ ಗೌರವಾರ್ಪಣೆ, ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ, ಅನ್ನಸಂತರ್ಪಣೆ, ಅಪರಾಹ್ನ 3 ರಿಂದ ಪೂರ್ಣಿಮಾ ಗಣೇಶ್ ಆಚಾರ್ಯ ಉಜಿರೆ ಮತ್ತು ಬಳಗದವರಿಂದ ಭಕ್ತಿಗೀತೆ ಗಾಯನ, ರಾತ್ರಿ 7.30ಕ್ಕೆ ರಂಗಪೂಜೆ, ಗುಳಿಗ ದೈವಕ್ಕೆ ತಂಬಿಲ, ಪಲ್ಲಕ್ಕಿ ಉತ್ಸವ, ಶ್ರೀ ಆದಿಕ್ಷೇತ್ರಕ್ಕೆ ಭೇಟಿ, ಅಷ್ಟಾವಧಾನ, ಅವಕೃತ (ಓಕುಳಿ), ಶ್ರೀ ದೇವರ ಆಲಯ ಪ್ರವೇಶ, ಬ್ರಹ್ಮಾರ್ಪಣೆ, ಫಲ ಮಂತ್ರಾಕ್ಷತೆ ನೆರವೇರಲಿದೆ.

ಏ.6ರಂದು ಸಂಪ್ರೋಕ್ಷಣೆ

ಏ.6ರಂದು ಬೆಳಗ್ಗೆ ಸಂಪ್ರೋಕ್ಷಣೆ ನಡೆಯಲಿರುವುದಾಗಿ ಶ್ರೀ ಕ್ಷೇತ್ರದ ಆಡಳಿತ ಸಮಿತಿ ಅಧ್ಯಕ್ಷ ಬಿ.ಎಂ.ಯದುನಂದನ ಆಚಾರ್ಯ ಕಡಂಬಾರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕನಿಲ ಶ್ರೀ ಭಗವತಿ ಕ್ಷೇತ್ರದ ಬ್ರಹ್ಮಕಲಶದ ಆಮಂತ್ರಣ ಪತ್ರಿಕೆಯನ್ನು ಖ್ಯಾತ ಉದ್ಯಮಿ ಹಾಗೂ ಅಸ್ತ ಗ್ರೂಪಿನ ಮಾಲಕ ಲಂಚುಲಾಲ್ ಬಿಡುಗಡೆಗೊಳಿಸಿದರು. ಶ್ರೀ ಕ್ಷೇತ್ರದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಪದ್ಮನಾಭ ಕಡಪ್ಪರ, ಪ್ರಧಾನ ಕಾರ್ಯದರ್ಶಿ ವಕೀಲ ನವೀನ್‌ರಾಜ್ ಕೆ.ಜೆ., ಕೋಶಾಧಿಕಾರಿ ಲಕ್ಷ್ಮಣ ಸಾಲಿಯಾನ್, ಶ್ರೀ ಕ್ಷೇತ್ರದ ಅಧ್ಯಕ್ಷ ವಿಶ್ವನಾಥ ಕುದುರು, ಪ್ರಧಾನ ಕಾರ್ಯದರ್ಶಿ ದೇವದಾಸ್ ವರ್ಕಾಡಿ, ಕೋಶಾಧಿಕಾರಿ ವಿಜಯ ಕನಿಲ ಹಾಗೂ ಕ್ಷೇತ್ರದ ಆಚಾರಪಟ್ಟವರು ಹಾಗೂ ಗುರಿಕ್ಕಾರರು ಉಪಸ್ಥಿತರಿದ್ದರು.

ಅಧಿಕಾರಿಗಳಿಗೆ ಅಂಚೆ ಮತದಾನ ಕೇಂದ್ರ ಸಿದ್ಧ: ಏ.2ರ ವರೆಗೆ ಅರ್ಜಿಗಳ ಸ್ವೀಕಾರ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಚುನಾವಣಾ ಕರ್ತವ್ಯದಲ್ಲಿರುವ ಅಧಿಕಾರಿಗಳು ಮತ್ತು ಉದ್ಯೋಗಿಗಳಿಗೆ ಅಂಚೆ ಮತದಾನ ವ್ಯವಸ್ಥೆ ಪೂರ್ಣಗೊಂಡಿದೆ ಎಂದು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾ ಅಧಿಕಾರಿ ಅರ್ಜುನ್ ಪಾಂಡ್ಯನ್ ತಿಳಿಸಿದ್ದಾರೆ.

ಮತದಾರರ ಸೌಲಭ್ಯ ಕೇಂದ್ರಗಳು (ವಿಎಫ್‌ಸಿ)– ಅಂಚೆ ಮತದಾನ ಕೇಂದ್ರಗಳ (ಪಿವಿಸಿ) ಕಾರ್ಯ ನಿರ್ವಹಣೆ ಬಗ್ಗೆ ಅಧಿಕಾರಿಗಳು ನಿರ್ದಿಷ್ಟ ಸೂಚನೆ ನೀಡಿದ್ದಾರೆ. ಚುನಾವಣಾ ಕರ್ತವ್ಯದಲ್ಲಿರುವ ನೌಕರರು ಏ.2ರೊಳಗೆ ಅಂಚೆ ಮತದಾನಕ್ಕೆ ಅರ್ಜಿಗಳನ್ನು ಸಲ್ಲಿಸಬೇಕು. ಅಂಚೆ ಮೂಲಕ ಕರ್ತವ್ಯದಲ್ಲಿರುವ ನೌಕರರಿಗೆ ಮತಪತ್ರಗಳು ಲಭ್ಯವಿರುವುದಿಲ್ಲ, ಅವರು ಗೊತ್ತುಪಡಿಸಿದ ಮತದಾರರ ಸೌಲಭ್ಯ ಕೇಂದ್ರಗಳ ಮೂಲಕ ಮತ ಚಲಾಯಿಸಬಹುದು. ತರಬೇತಿ ಕೇಂದ್ರಗಳಲ್ಲಿ ನಮೂನೆ 12ರ ಮೂಲಕ ಅಂಚೆ ಮತದಾನಕ್ಕೆ ಅರ್ಜಿ ಸಲ್ಲಿಸಬಹುದು.

ಮೈಕ್ರೋ ವೀಕ್ಷಕರು ಸೇರಿದಂತೆ ಮತಗಟ್ಟೆ ಅಧಿಕಾರಿಗಳು ಏ.1 ರಿಂದ 7ರ ವರೆಗೆ ತಮ್ಮ ವಿಧಾನಸಭಾ ಕ್ಷೇತ್ರಗಳಲ್ಲಿನ ಸೌಲಭ್ಯ ಕೇಂದ್ರಗಳಲ್ಲಿ ಮತ ಚಲಾಯಿಸಬಹುದು. ಪೊಲೀಸ್, ವಿಡಿಯೋಗ್ರಫಿ ತಂಡ, ಆರ್‌ಒ ಸಿಬ್ಬಂದಿಯಂತಹ ಮತಗಟ್ಟೆ ಅಧಿಕಾರಿಗಳಲ್ಲದವರಿಗಾಗಿ ಕಲೆಕ್ಟರೇಟ್‌ನಲ್ಲಿರುವ ಅಕ್ಷರ ಗ್ರಂಥಾಲಯದಲ್ಲಿ ಗೊತ್ತುಪಡಿಸಿದ ವಿಎಫ್‌ಸಿಗಳನ್ನು ಸ್ಥಾಪಿಸಲಾಗಿದೆ. ಅವರು ಏ.1 ರಿಂದ 6ರ ವರೆಗೆ ಈ ಕೇಂದ್ರದಲ್ಲಿ ಮತ ಚಲಾಯಿಸಬಹುದು.

ಮಧೂರು ಶ್ರೀ ಕಾಳಿಕಾಂಬಾ ಮಠದ ಆಡಳಿತ ಸಮಿತಿ ಸಭೆ: ಪದಾಧಿಕಾರಿಗಳ ನೇಮಕ

ಕಾಸರಗೋಡು: ಮಧೂರು ಶ್ರೀ ಕಾಳಿಕಾಂಬಾ ಮಠದ ಆಡಳಿತ ಸಮಿತಿ 2026 – 2029ನೇ ಸಾಲಿನ ನೂತನ ಅಧ್ಯಕ್ಷರಾಗಿ ಎಂ.ಪುರುಷೋತ್ತಮ ಆಚಾರ್ಯ ಕಂಬಾರು ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.





ಮಠದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮುಂದಿನ 3 ವರ್ಷಗಳ ಅವಧಿಗೆ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ಕೆ.ಪ್ರಭಾಕರ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಯುವಕ ಸಂಘದ ಅಧ್ಯಕ್ಷ ಮಹೇಶ್ ಆಚಾರ್ಯ ಮಧೂರು, ಮಹಿಳಾ ಸಂಘದ ಅಧ್ಯಕ್ಷ ಪುಷ್ಪಲತಾ ಪಿ.ಆಚಾರ್ಯ ನೆಕ್ರಾಜೆ , ಯೋಗೇಂದ್ರ ಆಚಾರ್ಯ ಪರಕ್ಕಿಲ, ವರಪ್ರಸಾದ್ ಆಚಾರ್ಯ , ಕೆ.ಜಗದೀಶ ಆಚಾರ್ಯ ಕಂಬಾರು ಉಪಸ್ಥಿತರಿದ್ದರು.

ಅಧ್ಯಕ್ಷರಾಗಿ ಪುರುಷೋತ್ತಮ ಆಚಾರ್ಯ ಕಂಬಾರು, ಉಪಾಧ್ಯಕ್ಷರಾಗಿ ಕೆ.ಜಗದೀಶ ಆಚಾರ್ಯ ಕಂಬಾರು, ಪುರುಷೋತ್ತಮ ಆಚಾರ್ಯ ನೆಕ್ರಾಜೆ, ಜನಾರ್ದನ ಆಚಾರ್ಯ ಬಜಕೂಡ್ಲು , ಸತೀಶ ಆಚಾರ್ಯ ಸೋಂಕಾಲು, ಪ್ರಧಾನ ಕಾರ್ಯದರ್ಶಿ ಯಾಗಿ ಎ. ನಿರಂಜನ ಆಚಾರ್ಯ ಮನ್ನಿಪ್ಪಾಡಿ, ಕಾರ್ಯದರ್ಶಿಯಾಗಿ ದೇವದಾಸ ಆಚಾರ್ಯ ದೇಶಮಂಗಲ, ತುಕಾರಾಮ ಆಚಾರ್ಯ ಕೆರೆಮನೆ, ಶೀತಲ್ ಆಚಾರ್ಯ ಕಾಸರಗೋಡು, ಲವ ಆಚಾರ್ಯ ಕೊಲ್ಲಂಗಾನ, ಕೋಶಾಧಿಕಾರಿಯಾಗಿ ಸುಂದರ ಆಚಾರ್ಯ ಬದಿಯಡ್ಕ, ಆಂತರಿಕ ಲೆಕ್ಕ ಪರಿಶೋಧಕರಾಗಿ ಸಚಿನ್ ಆಚಾರ್ಯ ಬೋವಿಕ್ಕಾನ, ಭರತ್ ಆರ್. ಆಚಾರ್ಯ ಕಾಸರಗೋಡು, ಅರುಣ್‌ರಾಜ್ ಆಚಾರ್ಯ ಮಧೂರು , ಬಾಲರಾಜ್ ಆಚಾರ್ಯ ಮಧೂರು.

ಸಲಹಾ ಸಮಿತಿಗೆ ನೇಮಕ

ಸಲಹಾ ಸಮಿತಿ ಅಧ್ಯಕ್ಷರಾಗಿ ವೈ.ಧರ್ಮೇಂದ್ರ ಆಚಾರ್ಯ ಮಧೂರು, ಸಂಚಾಲಕರಾಗಿ ಕೆ.ಪ್ರಭಾಕರ ಆಚಾರ್ಯ ಕೋಟೆಕಾರು ಆಯ್ಕೆಯಾಗಿದ್ದಾರೆ. ಸಮಿತಿ ಸದಸ್ಯರಾಗಿ ಎನ್.ಪರಮೇಶ್ವರ ಆಚಾರ್ಯ ನೀರ್ಚಾಲು, ಜ್ಯೋತಿಷಿ ಜನಾರ್ದನ ಆಚಾರ್ಯ ಮವ್ವಾರು, ಪಿ.ಜನಾರ್ದನ ಆಚಾರ್ಯ ಕೊಲ್ಯ, ತಾರಾನಾಥ ಆಚಾರ್ಯ ಮಧೂರು, ಭವಾನಿ ಶಂಕರ ಆಚಾರ್ಯ ಮೂಲ್ಕಿ , ಚಂದ್ರಶೇಖರ ಆಚಾರ್ಯ ಬೋವಿಕ್ಕಾನ ನೇಮಕಗೊಂಡಿದ್ದಾರೆ.

ಕಾರ್ಯಕಾರಿ ಸಮಿತಿ ಸದಸ್ಯರು

ಮುರಳೀಧರ ಆಚಾರ್ಯ ಗುಡ್ಡೆಮನೆ (ಪುತ್ತೂರು), ಪಿ. ಮಧುಸೂದನ ಆಚಾರ್ಯ ಕಾಸರಗೋಡು, ನಾಗೇಶ ಆಚಾರ್ಯ ಪುತ್ತಿಗೆ, ನಾರಾಯಣ ಆಚಾರ್ಯ ಕಂಬಾರು, ಬಾಲಕೃಷ್ಣ ಆಚಾರ್ಯ ಪುತ್ತಿಗೆ, ವೆಂಕಟ್ರಮಣ ಆಚಾರ್ಯ ಮೀಪುಗುರಿ, ರಾಜೇಶ್ ಆಚಾರ್ಯ ಮನ್ನಿಪ್ಪಾಡಿ, ವರಪ್ರಸಾದ್ ಆಚಾರ್ಯ ಕಂಬಾರು, ಮೌನೇಶ್ ಆಚಾರ್ಯ ಜೆ.ಪಿ.ನಗರ, ಕಾರ್ತಿಕ್ ಆಚಾರ್ಯ ನೀರ್ಚಾಲು, ಹರ್ಷ ಆಚಾರ್ಯ ಮಧೂರು, ಲೋಹಿತ್ ಆಚಾರ್ಯ ಮಧೂರು , ಲೋಕೇಶ್ ಎಂ.ಬಿ.ಆಚಾರ್ಯ ಕಂಬಾರು ಅವರನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಆರಿಸಲಾಯಿತು.

23 ಪ್ರಾಂತ್ಯಗಳ ಪ್ರಮುಖರ ಆಯ್ಕೆ

ಮಠದ ವ್ಯಾಪ್ತಿಗೆ ಒಳಪಡುವ 23 ಪ್ರಾಂತ್ಯಗಳ ಪ್ರಮುಖರನ್ನಾಗಿ ನೇಮಿಸಲಾಯಿತು. ತಿಲಕೇಶ ಆಚಾರ್ಯ (ಮಧೂರು), ಯೋಗೀಶ್ ಆಚಾರ್ಯ (ಕೂಡ್ಲು), ಸುಧೀಶ್ ಆಚಾರ್ಯ (ಕಾಸರಗೋಡು), ರಘುರಾಮ ಆಚಾರ್ಯ (ಕಂಬಾರು), ಜ್ಞಾನೇಶ ಆಚಾರ್ಯ (ನೀರ್ಚಾಲು), ಸುರೇಶ್ ಆಚಾರ್ಯ ನೆಕ್ರಾಜೆ (ಬದಿಯಡ್ಕ), ಶಿವಪ್ರಸಾದ್ ಆಚಾರ್ಯ (ಮವ್ವಾರು), ಬಾಲಸುಬ್ರಹ್ಮಣ್ಯ ಆಚಾರ್ಯ (ಪುತ್ತಿಗೆ), ಯಾದವ ಆಚಾರ್ಯ (ಮಾಯಿಪ್ಪಾಡಿ), ನಾಗೇಶ ಆಚಾರ್ಯ (ಸೀತಾಂಗೋಳಿ), ಸೋಮನಾಥ ಆಚಾರ್ಯ (ಕುಂಬಳೆ), ನವೀನ್‌ಚಂದ್ರ ಆಚಾರ್ಯ (ಮಂಗಲ್ಪಾಡಿ), ಗೋಪಾಲಕೃಷ್ಣ ಆಚಾರ್ಯ ದುರ್ಗಿಪಳ್ಳ (ಮಂಜೇಶ್ವರ), ಸೋಮಶೇಖರ ಆಚಾರ್ಯ (ಕೋಟೆಕಾರು), ಪ್ರಶಾಂತ್ ಆಚಾರ್ಯ (ಮಂಗಳೂರು), ಜಗದೀಶ ಆಚಾರ್ಯ ಕೋಟೂರು (ಬೋವಿಕ್ಕಾನ), ಉದಯ ಆಚಾರ್ಯ (ಮುಳ್ಳೇರಿಯ), ಮಂಜುನಾಥ ಆಚಾರ್ಯ (ಪೆರುವಾಯಿ), ಜನಾರ್ದನ ಆಚಾರ್ಯ (ಪಾಣಾಜೆ), ಯೋಗೀಶ್ ಆಚಾರ್ಯ ಮೊಟ್ಟೆತ್ತಡ್ಕ (ಪುತ್ತೂರು), ಕಿರಣ್ ಆಚಾರ್ಯ ಮೂರೂರು (ಸುಳ್ಯ), ಸೋಮನಾಥ ಆಚಾರ್ಯ (ಪೆರ್ಲ), ದಿನೇಶ್ ಆಚಾರ್ಯ (ಅಡೂರು) ಅವರನ್ನು ನೇಮಿಸಲಾಯಿತು.

ಸುತ್ತಮುತ್ತ

ಹೆಜಮಾಡಿಯಲ್ಲಿ ಶ್ರೀ ಸತ್ಯನಾರಾಯಣ ಪೂಜೆ ನಾಳೆ

ಪಡುಬಿದ್ರಿ: ಹೆಜಮಾಡಿ ಮಾರುತಿ ರಸ್ತೆಯ ಶ್ರೀ ವೀರಮಾರುತಿ ದೇವಸ್ಥಾನದಲ್ಲಿ ಏ.2ರಂದು ವೇದಮೂರ್ತಿ ಹರಿದಾಸ್ ಭಟ್ ನೇತೃತ್ವದಲ್ಲಿ ಶ್ರೀ ಹನುಮಜ್ಜಯಂತಿ ಅಂಗವಾಗಿ ಶ್ರೀ ಸತ್ಯನಾರಾಯಣ ಪೂಜೆ, ಮಹಾ ಅನ್ನಸಂತರ್ಪಣೆ ಮತ್ತು ಭಜನಾ ಕಾರ್ಯಕ್ರಮ ನಡೆಯಲಿದೆ.

ಏ.2ರಂದು ಬೆಳಿಗ್ಗೆ 7 ಗಂಟೆಗೆ ರಕ್ತೇಶ್ವರಿ ನಾಗಬ್ರಹ್ಮ ಸನ್ನಿಧಿಯಲ್ಲಿ ಪಂಚಾಮೃತ ಸೇವೆ, ಸಾಮೂಹಿಕ ಪ್ರಾರ್ಥನೆ, ಬೆಳಿಗ್ಗೆ 8.30 ಗಂಟೆಯಿಂದ ಗಣಪತಿ ಹೋಮ, 9 ಗಂಟೆಯಿಂದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, 1 ಗಂಟೆಯಿಂದ ಮಹಾ ಅನ್ನಸಂತರ್ಪಣೆ, ಸಂಜೆ 7 ಗಂಟೆಯಿಂದ ಹನುಮಜ್ಜಯಂತಿ ಅಂಗವಾಗಿ ವಿಶೇಷ ಪೂಜೆ, ಸಂಜೆ 7.30 ಗಂಟೆಯಿಂದ ಸಭಾ ಕಾರ್ಯಕ್ರಮ, ಜೀರ್ಣೋದ್ಧಾರದ ಮನವಿ ಪತ್ರ ಬಿಡುಗಡೆ ನಡೆಯಲಿದೆ. ಏ.22ರಂದು ಪ್ರತಿಷ್ಠಾ ವರ್ಧಂತ್ಯುತ್ಸವ ಅಂಗವಾಗಿ ಸಂಜೆ 6 ಗಂಟೆಗೆ ಶ್ರೀ ವೀರಮಾರುತಿ ದೇವರಿಗೆ ವಿಶೇಷ ಪೂಜೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ತರಬೇತಿ ವಿಭಾಗದ ನಿರ್ದೇಶಕರಾಗಿ ಹುಸೇನ್ ಹೈಕಾಡಿ ನೇಮಕ

ಕುಂದಾಪುರ: ಸೀನಿಯರ್ ಚೇಂಬರ್ ಇಂಟರ್ ನ್ಯಾಷನಲ್‌ನ ಅಂತಾರಾಷ್ಟ್ರೀಯ ತರಬೇತಿ ವಿಭಾಗದ ನೂತನ ನಿರ್ದೇಶಕರಾಗಿ ಹುಸೇನ್ ಹೈಕಾಡಿ



ನೇಮಕ ಗೊಂಡಿದ್ದಾರೆ. ಇತ್ತೀಚಿಗೆ ಬೆಂಗಳೂರಿನಲ್ಲಿ ಜರುಗಿದ ಸಂಸ್ಥೆಯ 25ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಅಂತಾರಾಷ್ಟ್ರೀಯ ಅಧ್ಯಕ್ಷರಾಗಿ ಚುನಾಯಿತರಾದ ಕೇರಳದ ವಾಸುದೇವನ್ ಅವರು ಅಂತಾರಾಷ್ಟ್ರೀಯ ತರಬೇತಿ ವಿಭಾಗದ ನಿರ್ದೇಶಕರಾಗಿ ಹುಸೇನ್ ಹೈಕಾಡಿ ಅವರನ್ನು ಆಯ್ಕೆ ಮಾಡಿದರು. ಜೆಸಿಐ ಕುಂದಾಪುರ ಸಿಟಿ ಸ್ಥಾಪಕ ಅಧ್ಯಕ್ಷರಾಗಿರುವ ಇವರು ಲಯನ್ಸ್ ಕ್ಲಬ್ ಕುಂದಾಪುರ ವೆಯಿಟ್ ಜೋನ್ ಇದರ 2026–27ನೇ ಸಾಲಿನ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಕುತ್ಯಾರು: ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಕ್ಕೆ ಆಯ್ಕೆ

ಶಿರ್ವ: ಶಿರ್ವ ಸಮೀಪದ ಕುತ್ಯಾರು ಹಾಲು





ಉತ್ಪಾದಕರ ಮಹಿಳಾ ಸಹಕಾರಿ ಸಂಘದ ಐದು ವರ್ಷಗಳಿಗೆ ಬಿಜೆಪಿ ಬೆಂಬಲಿತ, ಸಹಕಾರ ಭಾರತಿಯ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ನೂತನ ಅಧ್ಯಕ್ಷರಾಗಿ ಆಗ್ನೇಸ್ ಬೆನೆಡಿಕ್ಟ್ ಮತಾಯಸ್, ಉಪಾಧ್ಯಕ್ಷರಾಗಿ ಸರೋಜಿನಿ ಭಂಡಾರಿ ಅವಿರೋಧವಾಗಿ ಆಯ್ಕೆಯಾದರು. ನಿರ್ದೇಶಕರಾಗಿ ಪದ್ಮಾವತಿ ಪೂಜಾರ್ತಿ, ವನಜಾ ಶೆಟ್ಟಿ, ಗೀತಾ, ಬೀನಾ ಕೆ. ಕೋಟ್ಯಾನ್, ಲಲಿತಾ ಮೂಲ್ಯ, ಪ್ರಮೀಳಾ ಜಿ.ಆಚಾರ್ಯ, ಗೀತಾ ಬಿ.ದೇವಾಡಿಗ, ಮಾಲತಿ ಮತ್ತು ಜ್ಯೋತಿ ಆಯ್ಕೆಯಾದರು. ಸಹಕಾರಿ ಇಲಾಖೆಯ ಅಧಿಕಾರಿಯಾಗಿರುವ ಕೆ.ಆರ್. ರೋಹಿತ್ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು. ಸಂಘದ ಕಾರ್ಯದರ್ಶಿ ಭವಾನಿ ಮತ್ತು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ಮೊದಲನೇ ಪುಟದಿಂದ

ಸಿಗದೇ ಭದ್ರತೆ?

ಈ ಹಿಂದೆ ನಮ್ಮ ಹಿರಿಯರು ಶ್ರೀಲಂಕಾ ಪುನರ್ ವಸತಿದಾರರಾಗಿ ತಮಿಳುನಾಡಿಗೆ ಆಗಮಿಸಿ, ಅಲ್ಲಿಂದ ಸುಳ್ಯ ವಿಭಾಗಕ್ಕೆ 924 ಕುಟುಂಬಗಳು ಆಗಮಿಸಿದ್ದವು. ಆ ಬಳಿಕ ಒಪ್ಪಂದದ ಪ್ರಕಾರವೇ ಎಲ್ಲವೂ ನಡೆದಿದ್ದು ಕಾಲ ಕ್ರಮೇಣ ಮೂಲಭೂತ ಈ ಕುಟುಂಬಗಳು ಸೌಕರ್ಯಗಳಿಂದ ವಂಚಿತರಾಗುತ್ತಿದೆ. ಇದೀಗ ರಸ್ತೆ ಹಾಗೂ ನೀರು ಸ್ಥಳೀಯ ಆಡಳಿತ ನೀಡುತ್ತಿದ್ದು ಸುಮಾರು 30 ವರ್ಷಗಳಿಂದ ಮನೆಗಳ ದುರಸ್ತಿ ಕಾರ್ಯವನ್ನು ಕೆಎಫ್‌ಡಿಸಿ ಮಾಡದೇ ಬಹುತೇಕ ಎಲ್ಲಾ ಕಾಲೋನಿಗಳು ಕುಸಿದು ಬೀಳುವ ಹಂತದಲ್ಲಿದೆ. ಕೆಲವೊಮ್ಮೆ ಒಂದೆರಡು ಮನೆಗಳ ದುರಸ್ತಿ ಕಾರ್ಯವನ್ನು ನಿಗಮ ಮಾಡುತ್ತಿದೆ ಎಂದು ಮುಖಂಡ ಶಿವಕುಮಾರ್ ಕಂದಡ್ಕ ತಿಳಿಸಿದ್ದಾರೆ.

ಮುಖ್ಯಮಂತ್ರಿಗೆ ಮನವಿ ನೀಡಿದರೂ ಪ್ರಯೋಜನ ಇಲ್ಲ | ಬೇಸಿಗೆಯ ಮಳೆಗೇ ಸೋರುತ್ತಿದೆ ಕಟ್ಟಡ

ಟಾರ್ಪಲ್ ಹೊದ್ದು ನಿಂತಿದೆ ಅಜೆಕಾರಿನ ಆರೋಗ್ಯ ಕೇಂದ್ರ

■ ಗಣೇಶ್ ನಾಯಕ್, ಸಾಣೂರು



ಸಂಗಮ ವಿಶೇಷ

ಕಾರ್ಕಳ: ಗ್ರಾಮೀಣರಿಗೆ ಸ್ಥಳೀಯವಾಗಿ ಔಷಧೋಪಚಾರಗಳು ಸಿಗಬೇಕೆಂಬ ಉದ್ದೇಶದಿಂದ ಸರ್ಕಾರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆದಿದೆ. ಆದರೆ ಮೂಲ ಸೌಲಭ್ಯಗಳ ಕೊರತೆಯಿಂದ ಈ ಕೇಂದ್ರಗಳಲ್ಲಿ ಜನರಿಗೆ ಉತ್ತಮ ಚಿಕಿತ್ಸೆ ದೊರೆಯುತ್ತಿಲ್ಲ. ಇದಕ್ಕೆ ಉದಾಹರಣೆ ತಾಲೂಕಿನ ಅಜೆಕಾರು ಪ್ರಾಥಮಿಕ ಆರೋಗ್ಯ ಕೇಂದ್ರವು ಈಗ ದುಸ್ಥಿತಿಯಲ್ಲಿದ್ದು, ಅಕಾಲಿಕ ಮಳೆ ಪರಿಣಾಮ ರೋಗಿಗಳು, ಸಿಬ್ಬಂದಿ ಭಾರೀ ಸಂಕಷ್ಟವನ್ನು ಎದುರಿಸುತ್ತಿದ್ದಾರೆ.

ಶಿಥಿಲ ಕಟ್ಟಡ

1960ರ ದಶಕದಲ್ಲಿ ನಿರ್ಮಾಣಗೊಂಡ ಈ ಹಳೆಯ ಕಟ್ಟಡ ಜೀರ್ಣಾವಸ್ಥೆಗೆ ತಲುಪಿದ್ದು, ಮುಂದಿನ ಮಳೆಗಾಲ ಎದುರಿಸಲು ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸಿದೆ. ಇತ್ತೀಚಿನ ಬೇಸಿಗೆ ಮಳೆಯಲ್ಲೇ ಆಸ್ಪತ್ರೆಯ ಮೇಲ್ಛಾವಣಿಯಿಂದ ನೀರು ಸೋರಿಕೆಯಾಗುತ್ತಿದ್ದು, ಒಳಭಾಗವೇ ನೀರಿನಿಂದ ತುಂಬಿ ಹೋಗುತ್ತಿದೆ. ಮಳೆ ನೀರು ಒಳನುಗ್ಗದಂತೆ ತಾತ್ಕಾಲಿಕವಾಗಿ ತರಪಾಲು ಹಾಕಿ ಸೇವೆ ನೀಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಡ್‌ಗಳು, ಲಕ್ಷಾಂತರ ರೂಪಾಯಿ ಮೌಲ್ಯದ ಶೀತೋಪಕರಣಗಳು ಹಾಗೂ ಚಿಕಿತ್ಸಾ ಉಪಕರಣಗಳು ನೀರಲ್ಲಿ ಒದ್ದೆಯಾಗುತ್ತಿದ್ದು, ರೋಗಿಗಳ ಚಿಕಿತ್ಸೆಗೆ ತೊಂದರೆ ಉಂಟಾಗಿದೆ.

ನಿತ್ಯ 400ಕ್ಕೂ ಹೆಚ್ಚು ರೋಗಿಗಳು

ಈ ಆರೋಗ್ಯ ಕೇಂದ್ರಕ್ಕೆ ಪ್ರತಿದಿನ 400ಕ್ಕೂ ಹೆಚ್ಚು ರೋಗಿಗಳು ಭೇಟಿ ನೀಡುತ್ತಾರೆ. ಹಿರ್ಗಾನ, ಹೆರ್ಮುಂಡೆ, ಶಿರ್ಲಾಲು, ಕೆರುವಾಶೆ, ಕಡ್ತಲ ಸೇರಿದಂತೆ ಸುತ್ತಮುತ್ತಲಿನ ಅನೇಕ ಗ್ರಾಮಗಳ ಜನರು ಈ ಆಸ್ಪತ್ರೆಗೆ ಅವಲಂಬಿತರಾಗಿದ್ದಾರೆ.

ಮಳೆಗಾಲದ ಭೀತಿ ತೀವ್ರ

ಅಕಾಲಿಕ ಮಳೆಯಲ್ಲೇ ಇಂತಹ ಸ್ಥಿತಿ ನಿರ್ಮಾಣವಾಗಿರುವುದರಿಂದ, ಮುಂದಿನ ಭಾರಿ ಮಳೆಗಾಲದಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವ ಆತಂಕ ವ್ಯಕ್ತವಾಗಿದೆ. ಮೇಲ್ಛಾವಣಿಯ ಹೆಂಚುಗಳು ಹಾಗೂ ಸಲಾಖೆಗಳು ಹಾಳಾಗಿ ಕುಸಿಯುವ ಹಂತಕ್ಕೆ ತಲುಪಿದ್ದು, ಯಾವಾಗ ಬೇಕಾದರೂ ಕೆಳಗೆ ಬೀಳುವ ಅಪಾಯವಿದೆ. ಭಾರೀ ಗಾಳಿ-ಮಳೆಯ ವೇಳೆ ನೀರು ಸೋರಿಕೆಯಿಂದ ವಿದ್ಯುತ್ ಉಪಕರಣಗಳಿಗೂ ಅಪಾಯ ಉಂಟಾಗುವ ಸಾಧ್ಯತೆ ಇದೆ. ಔಷಧಿಗಳು ಹಾಗೂ ಇತರ ಸಾಮಗ್ರಿಗಳನ್ನು ಸುರಕ್ಷಿತವಾಗಿ ಸಂಗ್ರಹಿಸಲು ಸೂಕ್ತ ವ್ಯವಸ್ಥೆಗಳಿಲ್ಲದಿರುವುದು ಮತ್ತೊಂದು ಸಮಸ್ಯೆಯಾಗಿದೆ.

ತಾತ್ಕಾಲಿಕ ತರಪಾಲು ವ್ಯವಸ್ಥೆ

ಸ್ಥಳೀಯ ಗ್ರಾಮ ಪಂಚಾಯತ್ ತಾತ್ಕಾಲಿಕವಾಗಿ ತರಪಾಲು ವ್ಯವಸ್ಥೆ ಕಲ್ಪಿಸಿ ಸ್ವಲ್ಪ ಮಟ್ಟಿನ ನೆರವು ಒದಗಿಸಿದೆ.

ಉತ್ತಮ ವೈದ್ಯಕೀಯ ಸೇವೆ ನೀಡಲು ಕ್ರಮ ಅಗತ್ಯ

ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಅವರು ಕಾರ್ಕಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ 'ಹೊಸದಿಗಂತ'ದಲ್ಲಿ ಕಾರ್ಕಳ ತಾಲೂಕಿನ 'ಸಮಗ್ರ ಅಭಿವೃದ್ಧಿಗೆ ಸಿಗುವುದೇ 'ಹೊಸ ಯೋಜನೆ'ಗಳ ಗ್ಯಾರಂಟಿ?.. ಇಂದು ಸಿಎಂ ಮೇಲಿದೆ ನಿರೀಕ್ಷೆಗಳ ನೋಟ' ವರದಿಯಲ್ಲಿ 'ಆರೋಗ್ಯ ಕೇಂದ್ರ ಕಟ್ಟಡ ಅನಿವಾರ್ಯ' ಉಪಶೀರ್ಷಿಕೆಯಲ್ಲಿ ತಾಲೂಕಿನ ಅಜೆಕಾರು ಆರೋಗ್ಯ ಕೇಂದ್ರದ ಕಟ್ಟಡವು ಶಿಥಿಲ ಅವಸ್ಥೆಯಲ್ಲಿದ್ದು, ಶೀಘ್ರದಲ್ಲಿ ನೂತನ ಕಟ್ಟಡ ನಿರ್ಮಾಣವಾಗಬೇಕಿದೆ ಎಂದು ಪ್ರಸ್ತಾಪ ಮಾಡಲಾಗಿತ್ತು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಸ್ಪಂದನೆ ದೊರೆತಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮುಂದಿನ ದಿನದಲ್ಲಾದರೂ ಸರಕಾರ, ಜನ ಪ್ರತಿನಿಧಿಗಳು



ಹೊಸದಿಗಂತ

ಕಾರ್ಕಳ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಸಿಗುವುದೇ 'ಹೊಸ ಯೋಜನೆ'ಗಳ ಗ್ಯಾರಂಟಿ?

ಇಂದು ಸಿಎಂ ಮೇಲಿದೆ ನಿರೀಕ್ಷೆಗಳ ನೋಟ

ಇತ್ತಕಡೆ ಗಮನಹರಿಸಿ ಹೊಸ ಕಟ್ಟಡ ನಿರ್ಮಿಸಿ ಈ ಭಾಗದ ಜನರಿಗೆ ಉತ್ತಮ ವೈದ್ಯಕೀಯ ಸೇವೆ ಸಿಗುವಂತೆ ಕ್ರಮ ಕೈಗೊಳ್ಳುವುದು ಅಗತ್ಯವಿದೆ.

ಪಲಿಮಾರು | ದ.ಕ., ಉಡುಪಿ ಜಿಲ್ಲೆಗಳ ಆಹ್ವಾನಿತ ತಂಡಗಳ ಭಜನಾ ಸ್ಪರ್ಧೆ

ಧ್ಯಾನ್ ಅಕಾಡೆಮಿ ಪ್ರಥಮ, ಕುಳಾಯಿ ದ್ವಿತೀಯ

ಪಡುಬಿದ್ರಿ: ಸಂಗೀತ, ಭಜನೆಯು ಮನಸ್ಸಿನ ಏಕಾಗ್ರತೆಗೆ ಸಹಕಾರಿಯಾಗಿದೆ. 50 ವರ್ಷಗಳ ಕಾಲ ನಡೆದ ಭಜನೆಯ ಫಲವಾಗಿಯೇ ಅಯೋಧ್ಯೆಯಲ್ಲಿ ಶ್ರೀ ರಾಮನ ಭವ್ಯ ಮಂದಿರ ನಿರ್ಮಾಣವಾಯಿತು ಎಂದು ಪಲಿಮಾರು ಮಠದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟರು.

ಅವರು ಪಲಿಮಾರು ಭುವನೇಂದ್ರ ತೀರ್ಥ ಸಭಾಭವನದಲ್ಲಿ ಪಲಿಮಾರು ಸಪ್ತಸ್ವರ ಕಲಾಕೇಂದ್ರದ 12ನೇ ವಾರ್ಷಿಕೋತ್ಸವ ಪ್ರಯುಕ್ತ ಆಯೋಜಿಸಿದ್ದ ಅವಿಭಜಿತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಆಹ್ವಾನಿತ ತಂಡಗಳ ಭಜನಾ ಸ್ಪರ್ಧೆ ಬಹುಮಾನ ವಿತರಣೆ ಸಮಾರಂಭದಲ್ಲಿ ಆಶೀರ್ವಚನ ನೀಡಿದರು.

ಭಗವಂತನಿಗೆ ಖುಷಿ ನೀಡುತ್ತದೆ

ಪಲಿಮಾರು ಮಠದ ಕಿರಿಯ ಯತಿಗಳಾದ ಶ್ರೀ ವಿದ್ಯಾರಾಜೇಶ್ವರ ತೀರ್ಥ ಶ್ರೀಪಾದರು ಆಶೀರ್ವಚನ ನೀಡಿ, ಸಂಗೀತ ಭಗವಂತನಿಗೆ ಖುಷಿ ಕೊಡುವ ವಿಚಾರವಾಗಿದೆ ಎಂದರು.

ಈ ಸಂದಭದಲ್ಲಿ ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ನಿಕಟಪೂರ್ವ ಶಾಸಕ ಲಾಲಾಜಿ ಆರ್ ಮೆಂಡನ್, ಅದಾನಿ ಗ್ರೂಪ್ ಕಾರ್ಯ ನಿರ್ವಾಹಕ ನಿರ್ದೇಶಕ ಕಿಶೋರ್ ಆಳ್ವ, ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಪ್ರಧಾನ ಅರ್ಚಕ ಶ್ರೀನಿವಾಸ್ ಉಡುಪ, ಗುತ್ತಿನಾರ್ ಕೃಷ್ಣ ಶೆಟ್ಟಿ, ಡಾ. ಪ್ರಕಾಶ್ ನಂಬಿಯಾರ್, ಪಲಿಮಾರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷೆ ಗಾಯತ್ರಿ ಡಿ ಪ್ರಭು ಉಪಸ್ಥಿತರಿದ್ದರು.



ಸನ್ಮಾನ, ಗೌರವಾರ್ಪಣೆ

ಸಂಗೀತ ಕ್ಷೇತ್ರದ ಹಿರಿಯರಾದ ಗುರುಗಳಾದ ಎಂ. ನಾರಾಯಣ, ಪಿ.ರಾಘವ ಭಂಡಾರಿ ಅವರನ್ನು ಅಭಿನಂದಿಸಲಾಯಿತು. ಕೇಂದ್ರದ ಗುರುಗಳು ಹಾಗೂ ಕಾರ್ಯಕ್ರಮಕ್ಕೆ ಸಹಕರಿಸಿದವರನ್ನು ಗೌರವಿಸಲಾಯಿತು.

ಸಪ್ತಸ್ವರ ಕಲಾ ಕೇಂದ್ರ ಅಧ್ಯಕ್ಷ ಸಂದೀಪ್ ಪಲಿಮಾರು ಪ್ರಸ್ತಾವನೆಗೈದರು. ಪಿಲಾರು ಸುಧಾಕರ್ ಶೆಣೈ ಸ್ವಾಗತಿಸಿದರು. ಕೆ. ವಿ. ರಮಣ್ ಕಾರ್ಯಕ್ರಮ ನಿರೂಪಿಸಿದರು.

ಭಜನಾ ಸ್ಪರ್ಧಾ ವಿಜೇತರು

ಭಜನಾ ಸ್ಪರ್ಧೆಯಲ್ಲಿ ಮಂಗಳೂರಿನ ಧ್ಯಾನ್ ಸಂಗೀತ ಅಕಾಡೆಮಿ (ಪ್ರಥಮ), ಕುಳಾಯಿ ಕಾಳಿಕಾಂಬಾ ಭಜನಾ ಮಂಡಳಿ (ದ್ವಿತೀಯ), ಉಚ್ಚಿಲ ಮಹಾಲಕ್ಷ್ಮೀ ತಂಡದ ನಿಕಿತ್ ಸುವರ್ಣ ಉತ್ತಮ ತಬಲವಾದಕ, ಕುಳಾಯಿ ಕಾಳಿಕಾಂಬಾ ತಂಡ ವಿಜಯ ಆಚಾರ್ಯ ಉತ್ತಮ ಹಾರ್ಮೋನಿಯಂ ವಾದಕ ಹಾಗೂ ಉಚ್ಚಿಲ ಮಹಾಲಕ್ಷ್ಮೀ ಭಜನಾ ಮಂಡಳಿಯ ಅರುಣಾ ರಾವ್ ಉತ್ತಮ ಹಾಡುಗಾರ್ತಿ ವೈಯಕ್ತಿಕ ಬಹುಮಾನ ಪಡೆದರು.

ಹರಿಖಂಡಿಗೆಯಲ್ಲಿ ಶ್ರೀವಿಶ್ವಕರ್ಮ ಸಮುದಾಯ ಭವನ ಲೋಕಾರ್ಪಣೆ

ಹರಿಖಂಡಿಗೆ ಸಂಘ ಎಲ್ಲರಿಗೂ ಮಾದರಿಯಾಗಿದೆ

ಹೆಬ್ರಿ: ಹರಿಖಂಡಿಗೆ ಸಂಘದ ಕಾರ್ಯ ಎಲ್ಲರಿಗೂ ಮಾದರಿಯಾಗಿದೆ. ಸಂಘದ ಸ್ಥಾಪನೆಯಿಂದ ಹಲವರು ಸಂಘವನ್ನು ಮುನ್ನಡೆಸಿ ಭದ್ರಗೊಳಿಸಿದ್ದಾರೆ ಎಂದು ಹಾಸನ ಅರೆಮಾದನ ಹಳ್ಳಿಯ ಶ್ರೀ ವಿಶ್ವಕರ್ಮ ಜಗದ್ಗುರು ಪೀಠದ ಶ್ರೀ ಶಿವಸುಜ್ಞಾನ ತೀರ್ಥ ಮಹಾಸ್ವಾಮೀಜಿ ಹೇಳಿದರು.

ಅವರು ಸೋಮವಾರ ಉಡುಪಿ ತಾಲ್ಲೂಕು 41ನೇ ಶೀರೂರು ಗ್ರಾಮದ ಹರಿಖಂಡಿಗೆ ಶ್ರೀ ವಿಶ್ವಕರ್ಮ ಸಮಾಜಸೇವಾ ಸಂಘದ ವತಿಯಿಂದ ನಿಮಿಸಿದ ಸುಸಜ್ಜಿತವಾದ ಶ್ರೀ ವಿಶ್ವಕರ್ಮ ಸಮುದಾಯ ಭವನದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಕಟಪಾಡಿ ಪಡುಕುತ್ಯಾರು ಶ್ರೀಮತ್ ಆನೆಗುಂದಿ ಮಹಾಸಂಸ್ಥಾನ ಸರಸ್ವತಿ ಪೀಠದ ಶ್ರೀ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮೀಜಿ ಶ್ರೀವಿಶ್ವಕರ್ಮ ಸಮುದಾಯ ಭವನವನ್ನು ಲೋಕಾರ್ಪಣೆಗೊಳಿಸಿ ಸಂಘವು ಹೊಸ ಚೈತನ್ಯದೊಂದಿಗೆ ಇನ್ನಷ್ಟು ಪ್ರಗತಿ ಕಾಣಿಸಿ, ಅಡುಗೆಕೋಣೆ ಸಹಿತ ಇನ್ನಷ್ಟು ಅವಶ್ಯದ ಕೆಲಸಗಳು ಶೀಘ್ರವಾಗಿ ನೆರವೇರಲಿ ಎಂದರು.

ಹರಿಖಂಡಿಗೆ ಶ್ರೀ ವಿಶ್ವಕರ್ಮ ಸಮಾಜಸೇವಾ ಸಂಘದ ಅಧ್ಯಕ್ಷ ಕೆ.ವಿ. ರಮೇಶ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಸಂಘದ ಸ್ಥಳದಾನ ಮಾಡಿದ ವಾಸು ಆಚಾರ್ಯ 41ನೇ ಶೀರೂರು, ಸಂಘದ ಸ್ಥಾಪಕಾಧ್ಯಕ್ಷರ ಪತ್ನಿ ಗುಲಾಬಿ ಆಚಾರ್ಯ ಸಾಂತ್ಯಾರು, ಗ್ರಾಮ ಮೊಕ್ತೇಸರ ಜನಾರ್ದನ ಆಚಾರ್ಯ ಹರಿಖಂಡಿಗೆ, ಗೌರವ ಸಲಹೆಗಾರ ಎಸ್.ಕೃಷ್ಣ ಆಚಾರ್ಯ ಸಾಂತ್ಯಾರು, ಹಿರಿಯ ಸದಸ್ಯ ಜನಾರ್ಧನ ಆಚಾರ್ಯ ಹರಿಖಂಡಿಗೆ, ದಾನಿಗಳನ್ನು, ಸಹಕರಿಸಿದ ಹಲವರನ್ನು ಗೌರವಿಸಲಾಯಿತು. ಕಾಪು ಶಾಸಕ ಗುರ್ಮೆ ಸುರೇಶ ಶೆಟ್ಟಿ, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್ ಮಾತನಾಡಿ ಶುಭ ಹಾರೈಸಿದರು. ಸ್ವರ್ಣ ಉದ್ಯಮಿ ಹೆಬ್ರಿ ರಮೇಶ ಆಚಾರ್ಯ, ಕಾರ್ಕಳ ನೆಕ್ಲಾಜೆ ಶ್ರೀ ಕಾಳಿಕಾಂಬ ದೇವಸ್ಥಾನದ ಆಡಳಿತ ಮೊಕ್ತೇಸರ ಶಿಲ್ಪಿ ರಾಮಚಂದ್ರ ಆಚಾರ್ಯ ಅತ್ತೂರು, ಮಾಜಿ ಆಡಳಿತ ಮೊಕ್ತೇಸರ ರತ್ನಾಕರ ಆಚಾರ್ಯ ಕಟ್ಟೇಮಾರ್, ಉದ್ಯಮಿ ದಯಾನಂದ ಆಚಾರ್ಯ ಕೆಳಾರ್ಕಳಬೆಟ್ಟು ಉಡುಪಿ, ಕಟಪಾಡಿ ಶ್ರೀ ಕಾಳಿಕಾಂಬ ವಿಶ್ವಕರ್ಮೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ಕೆ.ಮುರಹರಿ ಆಚಾರ್ಯ, ಸಾಂತ್ಯಾರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅರ್ಚಕ ಮಾಧವ ಉಪಾಧ್ಯಾಯ, ಬೈರಂಪಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಪ್ರಸಾದ ಮಲ್ಯ, ಜಿಯಾನಂದ ಹೆಗ್ಡೆ ಪಿಡಬ್ಲ್ಯೂಡಿ ಗುತ್ತಿಗೆದಾರ ಸತೀಶ ಶೆಟ್ಟಿ ಕುತ್ಯಾರುಬೀಡು, ಪ್ರವೀಣ್ ಪೂಜಾರಿ, ಉದ್ಯಮಿ ಶ್ರೀಧರ ಕೆ ಶೆಟ್ಟಿ ಕುತ್ಯಾರುಬೀಡು, ಭಯರಂಪಳ್ಳಿ ಶ್ರಮಿಕ ತರುಣರ ತಂಡದ ಸಂಸ್ಥಾಪಕ ಡಾ.ಸಂತೋಷ ಕುಮಾರ್, ಎಸ್ ಕೆಜಿ ಕೋಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಉಪೇಂದ್ರ ಆಚಾರ್ಯ ಪೆರ್ಡೂರು ಮತ್ತಿತರರು ಉಪಸ್ಥಿತರಿದ್ದರು. ಶಿಕ್ಷಕ ವಿದ್ವಾನ್ ಹರೀಶ್ಚಂದ್ರ ಆಚಾರ್ಯ ಸಾಂತ್ಯಾರು ಮತ್ತು ಕೀರ್ತಿ ಆಚಾರ್ಯ ಪಕ್ಕಾಲು ನಿರೂಪಿಸಿದರು. ಸುರೇಂದ್ರ ಆಚಾರ್ಯ ಸ್ವಾಗತಿಸಿದರು.



ಸೇವಾಸಂಗಮ ನಿವೇದಿತಾ ಶಿಶು ಮಂದಿರದಲ್ಲಿ ಪಾಲಕರ ಮಿಲನ



ಕುಂದಾಪುರ: ಇಂದಿನ ದಿನಗಳಲ್ಲಿ ಶಿಕ್ಷಣ ವ್ಯಾಪಾರೀಕರಣವಾಗುತ್ತಿದ್ದು, ಮಕ್ಕಳಿಗೆ ಬಾಲ್ಯದಲ್ಲಿ ದೊರೆಯಬೇಕಾದ ಶಿಕ್ಷಣ ಸಿಗುತ್ತಿಲ್ಲ. ಈ ಕಾರಣದಿಂದ ಮಕ್ಕಳು ದಾರಿ ತಪ್ಪುತ್ತಿದ್ದು, ದುಶ್ಚಟ, ಭ್ರಷ್ಟಾಚಾರ, ಭಯೋತ್ಪಾದನೆ ಮೊದಲಾದ ಚಟುವಟಿಕೆಗಳತ್ತ ಗಮನ ಹರಿಸುತ್ತಿದ್ದಾರೆ. ಮಕ್ಕಳ ಮೂಲಕ ಮನೆ ಮಂದಿಗೆ ಶಿಕ್ಷಣ ದೊರೆತು ಮನೆ, ಕೇರಿ, ಊರು ಬೆಳಗಬೇಕೆಂಬ ಉದ್ದೇಶದಿಂದ ಶಿಶು ಮಂದಿರಗಳಲ್ಲಿ ಮಕ್ಕಳಿಗೆ ನಮ್ಮ ಸಂಸ್ಕೃತಿ, ಸಂಸ್ಕಾರ, ಆಚಾರ ವಿಚಾರಗಳನ್ನು ತಿಳಿಸುವ ಶಿಕ್ಷಣ ನೀಡಲಾಗುತ್ತಿದೆ ಎಂದು ಕುಂದಾಪುರ ಸೇವಾ ಸಂಗಮ ಟ್ರಸ್ಟ್‌ನ ಕಾರ್ಯ ನಿರ್ವಾಹಕ ವಿಶ್ವಸ್ಥ ಸುಬ್ರಹ್ಮಣ್ಯ ಹೊಳ್ಳ ಹೇಳಿದರು.

ಗಂಗೊಳ್ಳಿಯ ಸೇವಾ ಸಂಗಮ ನಿವೇದಿತಾ ಶಿಶು ಮಂದಿರದಲ್ಲಿ ಮಂಗಳವಾರ 2025-26ನೇ ಸಾಲಿನ ಪಾಲಕರ ಮಿಲನ ಕಾರ್ಯಕ್ರಮದಲ್ಲಿ ಪೋಷಕರೊಂದಿಗೆ ಸಂವಾದದಲ್ಲಿ ಮಾತನಾಡಿದರು.

ಗಂಗೊಳ್ಳಿಯ ಸೇವಾ ಸಂಗಮ ನಿವೇದಿತಾ ಶಿಶು ಮಂದಿರ ಅಧ್ಯಕ್ಷ ಬಿ.ರಾಘವೇಂದ್ರ ಪೈ ಅಧ್ಯಕ್ಷತೆ ವಹಿಸಿದ್ದರು. ಸೇವಾ ಸಂಗಮ ಟ್ರಸ್ಟ್‌ನ ವಿಶ್ವಸ್ಥ ಕಾರ್ಯದರ್ಶಿ ಚಂದ್ರಿಕಾ ಧನ್ಯ, ವಿಶ್ವಸ್ಥರಾದ ಕಲ್ಪನಾ ಭಾಸ್ಕರ, ಶಿಶು ಮಂದಿರದ ಕಾರ್ಯದರ್ಶಿ ಅಶ್ವಿತಾ ಜಿ.ಪೈ, ಸದಸ್ಯರಾದ ಸವಿತಾ ಯು. ದೇವಾಡಿಗ, ಬಿ. ಲಕ್ಷ್ಮೀಕಾಂತ ಮಡಿವಾಳ, ಭಾಸ್ಕರ ಎಚ್.ಜಿ., ವಿಜಯಶ್ರೀ ವಿ.ಆಚಾರ್ಯ, ವಸಂತಿ ಎನ್.ಖಾರ್ವಿ, ಮಾತಾಜಿ ಪ್ರೇಮಾ, ಸಹಾಯಕಿ ನಾಗರತ್ನ ಇದ್ದರು. ಸಹಶಿಕ್ಷಕಿ ಸವಿತಾ ಆಚಾರ್ಯ ಸ್ವಾಗತಿಸಿದರು. ಸಂಚಾಲಕ ಡಾ.ಕಾಶೀನಾಥ ಪೈ ಪ್ರಸ್ತಾವಿಕ ಮಾತುಗಳನ್ನಾಡಿದರು. ದಿವ್ಯಶ್ರೀ ಖಾರ್ವಿ ವಂದಿಸಿದರು.

ಏ. 2ರಿಂದ 5ರ ವರೆಗೆ ಆನಗಳ್ಳಿಯಲ್ಲಿ ಗೆಳೆಯರ ಬಳಗದ 'ನಮ್ಮೂರ್ ಹಬ್ಬ'

ಕುಂದಾಪುರ : ಗೆಳೆಯರ ಬಳಗ ಆನಗಳ್ಳಿ, ಟೀಂ ನಮ್ಮೂರ್ ಹಬ್ಬ 2026 ಆನಗಳ್ಳಿ ನೇತೃತ್ವದಲ್ಲಿ ನಮ್ಮೂರ್ ಹಬ್ಬ 2026 ಏ. 2ರಿಂದ 5ರ ತನಕ ಆನಗಳ್ಳಿಯಲ್ಲಿ ನಡೆಯಲಿದೆ. ಪ್ರತಿಭಾ ಹಬ್ಬ, ನಗೆ ಹಬ್ಬ, ಸಂಗೀತ ಹಬ್ಬ, ಪ್ರಶಸ್ತಿ ಪ್ರದಾನ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿವೆ ಎಂದು ಆನಗಳ್ಳಿ ಗೆಳೆಯರ ಬಳಗದ ನಾಗರಾಜ ಹೇಳಿದರು.

ಅವರು ಕುಂದಾಪುರ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಏ.2ರಂದು ಸಂಜೆ 4.30ಕ್ಕೆ ಆನಗಳ್ಳಿ ದತ್ತಾತ್ರಮದಿಂದ ಗೆಳೆಯರ ಬಳಗ ಕಲಾ ಮಂದಿರದ ತನಕ ಕರಾವಳಿ ಸಾಂಸ್ಕೃತಿಕ ಪ್ರತಿಬಿಂಬದ ಪುರಮೆರವಣಿಗೆ ನಡೆಯಲಿದೆ. ಏ.3ರಂದು ಸಂಜೆ 6ಕ್ಕೆ ಉದ್ಘಾಟನೆ ನಡೆಯಲಿದೆ. ಸ್ಥಳೀಯ ಪ್ರತಿಭೆಗಳಿಂದ ಪ್ರತಿಭಾ ಪ್ರದರ್ಶನ, ಸಂಜೆ 7ರಿಂದ ಸಭೆ ನಡೆಯಲಿದೆ. ಅಧ್ಯಕ್ಷತೆಯನ್ನು ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ವಹಿಸಲಿದ್ದಾರೆ. ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಉದ್ಘಾಟಿಸಲಿದ್ದಾರೆ. ಕರಾವಳಿ ಮಣ್ಣಿನ ಮಗ ಪುರಸ್ಕಾರವನ್ನು ಕೀರ್ತಿಶೇಷ ದಿ.ಅಪ್ಪಣ್ಣ ಹೆಗ್ಡೆ ಅವರಿಗೆ ಮರಣೋತ್ತರವಾಗಿ ಪ್ರದಾನ ಮಾಡಲಾಗುವುದು. ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಪ್ರತಿಭಾ ಹಬ್ಬದಲ್ಲಿ ಎಂಐಟಿ ಮೂಡ್ಲಕಟ್ಟೆ, ಬಿ.ಬಿ.ಹೆಗ್ಡೆ, ಜನತಾ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದರು.

ಏ.4ರಂದು ಸಂಜೆ 6ಕ್ಕೆ ಗೆಳೆಯರ ಬಳಗದ 39ನೇ ವರ್ಷದ ವಾರ್ಷಿಕೋತ್ಸವ ನಡೆಯಲಿದೆ. ಸಂಜೆ 6ರಿಂದ ಸ್ಥಳೀಯ ಪ್ರತಿಭೆಗಳಿಂದ ಪ್ರತಿಭಾ ಪ್ರದರ್ಶನ, 7ಕ್ಕೆ ಸಭೆ, ಸನ್ಮಾನ ನೆರವೇರಲಿದೆ. ಪ್ರಸಿದ್ಧ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ಇವರಿಂದ ಸಂಗೀತ ಹಬ್ಬ ನೆರವೇರಲಿದೆ. ಕಾರ್ಯಕ್ರಮವನ್ನು ಸಚಿವ ಮಂಕಾಳ ಎಸ್. ವೈದ್ಯ ಉದ್ಘಾಟಿಸಲಿದ್ದಾರೆ. ಗೆಳೆಯರ ಬಳಗದ ಅಧ್ಯಕ್ಷ ಶರತ್ ಕಾಂಚನ್ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ ಪ್ರವರ್ತಕರಾದ ನಾಡೋಜ ಡಾ.ಜಿ.ಶಂಕರ್‌ಗೆ ಕರಾವಳಿ ಮಣ್ಣಿನ ಮಗ ಬಿರುದು ಪ್ರದಾನ ಮಾಡಲಾಗುವುದು ಎಂದರು.

ಏ.5 ಸಂಜೆ 6ಕ್ಕೆ ಸ್ಥಳೀಯ ಪ್ರತಿಭೆಗಳಿಂದ ಪ್ರತಿಭಾ ಪ್ರದರ್ಶನ, ಸಂಜೆ 7ರಿಂದ ಸಭೆ, ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಕರುನಾಡ ಟ್ಯಾಲೆಂಟ್ ಎನ್ನುವ ವಿಶಿಷ್ಟ ಕಾರ್ಯಕ್ರಮ ನಡೆಯಲಿದೆ. ಗಜಪುರ ದೇವಸ್ಥಾನದ ಪ್ರಧಾನ ಅರ್ಚಕ ವೇ.ಮೂ. ಡಾ.ಚೆನ್ನಕೇಶವ ಭಟ್ ಉದ್ಘಾಟಿಸಲಿದ್ದಾರೆ ಎಂದರು. ಅಧ್ಯಕ್ಷ ಶರತ್ ಆನಗಳ್ಳಿ, ಪ್ರಶಾಂತ್, ಸುಮಿತ್ ಉಪಸ್ಥಿತರಿದ್ದರು.

ಕುಂಜಾಲು ಸ್ಟ್ರೈಕರ್ಸ್‌ಗೆ ಮಟಪಾಡಿ ಕ್ರಿಕೆಟ್ ಪ್ರೀಮಿಯರ್ ಲೀಗ್ ಪ್ರಶಸ್ತಿ



ಬ್ರಹ್ಮಾವರ: ಫ್ರೆಂಡ್ಸ್ ಮಟಪಾಡಿ ಯೂತ್ ಕ್ಲಬ್ ವತಿಯಿಂದ ಮಟಪಾಡಿ ಪ್ರೀಮಿಯರ್ ಲೀಗ್ ಬ್ರಹ್ಮಾವರ ಗಾಂಧಿ ಮೈದಾನದಲ್ಲಿ ಜರುಗಿತು.

ಕುಂಜಾಲು ಸ್ಟ್ರೈಕರ್ಸ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದು, ಫ್ರೆಂಡ್ಸ್ ಮಟಪಾಡಿ ರನ್ನರ್ಸ್ ಆಗಿ ಮೂಡಿ ಬಂದಿತು. ಫೈನಲ್ ಪಂದ್ಯ ಶ್ರೇಷ್ಠರಾಗಿ ರಂಜಿತ್ ಕುಂಜಾಲು ಸ್ಟ್ರೈಕರ್ಸ್, ಸರಣಿ ಶ್ರೇಷ್ಠರಾಗಿ ಪ್ರದೀಪ್ ಶೆಟ್ಟಿ ಫ್ರೆಂಡ್ಸ್ ಮಟಪಾಡಿ, ಉತ್ತಮ ದಾಂಡಿಗರಾಗಿ ವಿಶಾಲ್ ನಾಯಕ್ ಫ್ರೆಂಡ್ಸ್, ಉತ್ತಮ ಎಸೆತಗಾರರಾಗಿ ಗುರುರಾಜ್ ಕುಂಜಾಲು ಸ್ಟ್ರೈಕರ್ಸ್, ಉತ್ತಮ ಕ್ಷೇತ್ರ ರಕ್ಷಕರಾಗಿ ರಾಘವೇಂದ್ರ ಫ್ರೆಂಡ್ಸ್ ಮಟಪಾಡಿ ಬಹುಮಾನ ಗಳಿಸಿದರು. ನಾಯಕ್ ಫ್ರೆಂಡ್ಸ್ ಮಟಪಾಡಿ ಮತ್ತು ನಂದಿ ಫ್ರೆಂಡ್ಸ್ ಮಟಪಾಡಿ ಸೆಮಿಫೈನಲ್ ತಂಡಗಳಾಗಿ ಮೂಡಿ ಬಂದವು. ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ಚಂಡಿಕಾ ದುರ್ಗಾಪರಮೇಶ್ವರೀ ದೇವಸ್ಥಾನ ಮುಖ್ಯ ಅರ್ಚಕ ಸುಬ್ರಹ್ಮಣ್ಯ ಉಂಗ್ರಪಳ್ಳಿ, ಸ್ಟಾಲಿನ್ ಸಿಕ್ವೇರಾ, ಅಬ್ದುಲ್ ಲತೀಫ್ ಇದ್ದರು. ಸಮಾರೋಪ ಸಮಾರಂಭದಲ್ಲಿ ನಂದಿಕೇಶ್ವರ ಯಕ್ಷಗಾನ ಕಲಾಮಂಡಳಿ ಗೌರವಾಧ್ಯಕ್ಷ ಚಂದ್ರಶೇಖರ ಕಲ್ಕೂರ, ಬ್ರಹ್ಮಾವರ ರೋಟರಿ ಅಧ್ಯಕ್ಷ ಚಂದ್ರಶೇಖರ ನಾಯರಿ, ಮಟಪಾಡಿ ಶಾಲಾಭಿವೃದ್ಧಿ ಟ್ರಸ್ಟಿನ ಅಧ್ಯಕ್ಷ ವಿಶ್ವನಾಥ ಶೆಟ್ಟಿ, ತಾ.ಪಂ. ಮಾಜಿ ಸದಸ್ಯೆ ಉಷಾ ಕೃಷ್ಣ ಪೂಜಾರಿ, ಉದ್ಯಮಿ ಅಲ್ತಾಫ್ ಅಹಮ್ಮದ್, ಯುವ ಉದ್ಯಮಿ ಮಿಥುನ್ ಅಮೀನ್, ಉದಯ್ ಚಿರಾಗ್, ಜಿಲ್ಲಾ ಭೂಮಾಪಕರ ಸಂಘದ ಅಧ್ಯಕ್ಷ ವಿಜಯ್ ನಾಯಕ್, ಕ್ಲಬ್ಬಿನ ಗೌರವ ಸಲಹೆಗಾರ ಶರೋನ್ ಸಿಕ್ವೇರಾ, ಕ್ಲಬ್ಬಿನ ಅಧ್ಯಕ್ಷ ಚೇತನ್ ಪೂಜಾರಿ, ಜೊಯ್ಸನ್ ಬಾಂಜ್, ಚೇತನ್ ಆಚಾರ್ಯ, ಕ್ರೀಡಾ ಅಂಕುಶ್ ನಾಯಕ್ ಇದ್ದರು. ಶರೋನ್, ಅಂಕುಶ್ ಸ್ವಾಗತಿಸಿ ಚೇತನ್ ಆಚಾರ್ಯ, ಸುಬ್ರಹ್ಮಣ್ಯ ವಂದಿಸಿದರು. ಶರತ್, ಸುಬ್ರಹ್ಮಣ್ಯ ಆಚಾರ್ಯ ನಿರೂಪಿಸಿದರು.

ಏ.4ರವರೆಗೆ ಮಣೂರು ಶ್ರೀ ಮಹಾಲಿಂಗೇಶ್ವರ ದೇಗುಲದಲ್ಲಿ ಉತ್ಸವ

ಜಾತ್ರೆಯ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ

ಕೋಟ: ಇಲ್ಲಿನ ಮಣೂರು ಮಹಾಲಿಂಗೇಶ್ವರ ಹಾಗೂ ಹೇರಂಬ ಮಹಾಗಣಪತಿ ದೇವಸ್ಥಾನ ಇದರ ವಾರ್ಷಿಕ ಜಾತ್ರೋತ್ಸವದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಮಾ.30ರಿಂದ ಏ. 4ರ ವರೆಗೆ ನಡೆಯುವ ಜಾತ್ರೋತ್ಸವದ ವೈಭವವನ್ನು ಬೆಂಗಳೂರು ಉದ್ಯಮಿ ಸೀತಾರಾಮ ಹೊಳ್ಳ ದೀಪ ಪ್ರಜ್ವಲಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ದೇಗುಲದ ಆಡಳಿತ ಮಂಡಳಿಯ ಅಧ್ಯಕ್ಷ ಸತೀಶ್ ಎಚ್. ಕುಂದರ್, ದೇಗುಲದ ಟ್ರಸ್ಟಿ ಅಶೋಕ್ ಶೆಟ್ಟಿ ಕೊಯ್ಕೂರು, ಸ್ಥಳೀಯ ಉದ್ಯಮಿ ನವೀನ್ ಶೆಟ್ಟಿ ನಡುಬೆಟ್ಟು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಗೋಪಾಲಕೃಷ್ಣ ಮಯ್ಯ ನಿರೂಪಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಛಾಯಾ ತರಂಗಿಣಿ ಸಂಗೀತ ಶಾಲೆ ಇವರಿಂದ ಛಾಯಾ ತರಂಗಿಣಿ ಕಲಾಮಂಜರಿ, ಸ್ನೇಹಕೂಟ ಮಣೂರು ಇವರಿಂದ ಹಬ್ಬದೊಳಗೊಂದು ಹಬ್ಬ ಮತ್ತು ಯಕ್ಷಗುರು ಸೀತಾರಾಮ ಶೆಟ್ಟಿ ಕೊಯ್ಕೂರು ಇವರ ನಿರ್ದೇಶನದಲ್ಲಿ ಮಣೂರು ಮಹಾಲಿಂಗೇಶ್ವರ ಯಕ್ಷಗಾನಮಂಡಳಿಯ ಬಾಲ ಯಕ್ಷಕಲಾವಿದರಿಂದ ಚಕ್ರವರ್ತಿ ಬಲಿ ಎಂಬ ಯಕ್ಷಪ್ರದರ್ಶನಗೊಂಡಿತು.



ನೀರಿನ ಸಂರಕ್ಷಣೆ ಮತ್ತು ಜಲ ಸಂಪನ್ಮೂಲಗಳ ಸದೃಢ ಬಳಕೆ ಜಾಗೃತಿ ಉದ್ದೇಶ

ಶಿರ್ವದಲ್ಲಿ ವಿದ್ಯಾರ್ಥಿಗಳ ಬೀದಿ ನಾಟಕ ಪ್ರದರ್ಶನ

ಶಿರ್ವ: ಬಂಟಕಲ್ಲು ಇಂಜಿನಿಯರಿಂಗ್ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ, ಸಾಂಸ್ಕೃತಿಕ ಘಟಕ ಮತ್ತು ಸಿವಿಲ್ ಇಂಜಿನಿಯರಿಂಗ್ ವಿಭಾಗವು ಜಂಟಿಯಾಗಿ 'ನೀರಿನ ಸಂರಕ್ಷಣೆ ಮತ್ತು ಜಲ ಸಂಪನ್ಮೂಲಗಳ ಸದೃಢ ಬಳಕೆ' ಎಂಬ ವಿಷಯದ ಕುರಿತು ಸಂಸ್ಥೆಯ ವಿದ್ಯಾರ್ಥಿಗಳು ಶಿರ್ವ ಬಸ್ ನಿಲ್ದಾಣದ ಬಳಿ ಬೀದಿ ನಾಟಕ ಪ್ರದರ್ಶನ ನಡೆಸಿದರು.

ಈ ಬೀದಿ ನಾಟಕದ ಮೂಲಕ ವಿದ್ಯಾರ್ಥಿಗಳು ನೀರಿನ ಸಂರಕ್ಷಣೆ ಮತ್ತು ಜಲ ಸಂಪನ್ಮೂಲಗಳ ಸದೃಢ ಬಳಕೆಯ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ವಿದ್ಯಾರ್ಥಿಗಳು ತಮ್ಮ ಭಾವಪೂರ್ಣ ಅಭಿನಯದ ಮೂಲಕ ನೈಜ ಜೀವನದಲ್ಲಿ ನೀರಿನ ವ್ಯರ್ಥ ಬಳಕೆಯಿಂದ ಉಂಟಾಗುವ ಪರಿಣಾಮದ ಬಗ್ಗೆ ಮತ್ತು ಅಮೂಲ್ಯವಾದ ಪ್ರಕೃತಿ ಸಂಪನ್ಮೂಲದ ಬಳಕೆಯ ಬಗ್ಗೆ ಸಾರ್ವಜನಿಕರಿಗೆ ಮನಮುಟ್ಟುವಂತೆ ತಿಳಿಸಿದರು.

